
# ಹಿಮಾಚಲವನ್ನಾಳಿದ ಕರ್ನಾಟ ಸೇನರು

ಇಂಗ್ಲೀಷ್ ಮೂಲ:
ಡಾ. ಡಿ.ಬಿ. ಚಕ್ರವರ್ತಿ

ಅನುವಾದ:
ಪ್ರೊ. ಸದಾನಂದ ಕನವಳ್ಳಿ




ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ

ಹೊರನಾಡ ಕನ್ನಡಸಂಸ್ಕೃತಿ ಮಾಲೆ – ೩

# ಹಿಮಾಚಲವನ್ನಾಳಿದ ಕರ್ನಾಟ ಸೇನರು

ಮೂಲ ಇಂಗ್ಲಿಷ್

ಡಾ॥ ಡಿ.ಬಿ. ಚಕ್ರವರ್ತಿ

ಕನ್ನಡಾನುವಾದ

ಪ್ರೊ. ಸದಾನಂದ ಕನವಳ್ಳಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

**HIMACHALAVANNALIDA KARNATA SENARU**

*Original*

**Dr. B. Chakravarty**

Translated into Kannada

**Prof. Sadananda Kanavalli**

Savi Jaladarshinipura

Dharwad - 580 003

*Publisher*

**N. Thippeswamy**

Administrative Officer

Kannada Pustaka Pradhikara

Kannada Book Authority

Chamarajapet, Bangalore - 560 018

© : **Reserved**

First Impression : 2004

ISBN No. 81-7713-167-2

Pages : xxii + 114

**Price : 50/-**

*DTP*

**Suma Sampagaon**

Jaladarshinipura, Dharwad - 580 003

*Printed at :*

**Sathyasri Printers Pvt. Ltd.,**

164, 5th Main, Chamarajapet

Bangalore - 560 018. **Phone : 26525736**

# ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ ಬೆಳೆಸುವ ತುಂಬು ಹಂಬಲ ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ ಇದು. ಈ ನಿಧಿಯ ರಕ್ಷಣೆ ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದಿಗೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ ಗ್ರಾಮಾಂತರಗಳಿಗೂ ತಾಲ್ಲೂಕು ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ,

ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ ಕನ್ನಡ ಪುಸ್ತಕ ಪ್ರಾಧಿಕಾರ ಎಂಬ ಮಾತಿಗೆ ಬೆಲೆ ಬರುತ್ತದೆ. ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು.

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು. ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. ಜ್ಞಾನದ ಬಲದಿಂದ ಅಜ್ಞಾನದಿಂದ ಕೇಡು ಎಂದು ಬಸವಣ್ಣನವರು ಹೇಳಿದ್ದುಂಟು. ಇದು ಆಧುನಿಕ ಜ್ಞಾನಕ್ಕೂ ಅನ್ವಯಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಾವು ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ಇದ್ದೇವೆ. ಒಂದುಕಡೆ ಇಪ್ಪತ್ತನೆಯ ಶತಮಾನವು ಸಾಹಿತ್ಯಿಕವಾಗಿ ಸಮೃದ್ಧವಾದ ಕಾಲವೇನೋ ನಿಜ.. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ. ಸಾಹಿತ್ಯಿಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೆ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ. ಅನೇಕ ತಳವರ್ಗದ ಜನಸ್ತೋಮಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಇಂದು ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಿಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೩೦ರಲ್ಲಿ ಅತ್ಯುತ್ತಮ ತಾಂತ್ರಿಕಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ನಮಗೆ ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನಕೌಶಲ್ಯ, ಜ್ಞಾನ ಸಂಪತ್ತನ್ನು ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇದಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದು, ಬರುವ ಕಾಲವು ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೊ ತಿಳಿಯುವ ಕ್ಷೋಭ್ಯದಲ್ಲಿ ಮುಳುಗಬೇಕಾಗುತ್ತದೆ. ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ಹೊರನಾಡ ಕನ್ನಡ ಸಂಸ್ಕೃತಿ ಮಾಲೆ ಈಚೆಗೆ ಪ್ರಾರಂಭಿಸಿರುವ ಹೊಸ ಮಾಲೆಯಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಕನ್ನಡ ಸಂಸ್ಕೃತಿಯ ಮೂಲ ನೆಲೆಗಳ ವ್ಯಾಸಂಗ ಹಾಗೂ ಕನ್ನಡದ ಜತೆ ಅದು

ಪಡೆದ ಸಂಬಂಧಗಳನ್ನು ಕುರಿತ ಮಹತ್ವದ ಗ್ರಂಥಗಳು ಈ ಮಾಲೆಯಲ್ಲಿ ಪ್ರಕಟವಾಗುತ್ತವೆ. ಈ ಮೂಲಕ ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳಲು ಸಾಧ್ಯವಾಗುತ್ತದೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ.

ಡಾ. ಬಿ. ಚಕ್ರವರ್ತಿ ಅವರ The Sens of Himachal ಒಂದು ವಿಶಿಷ್ಟ ಕೃತಿಯಾಗಿದೆ. ಡಾ. ಬಿ. ಚಕ್ರವರ್ತಿ ಅವರು ಪ್ರಾಚೀನ ಇತಿಹಾಸ ಹಾಗೂ ಆಧುನಿಕ ಇತಿಹಾಸ ಎರಡನ್ನೂ ಬಲ್ಲವರು. ಅವರ ಕೃತಿಯನ್ನು ನಮ್ಮ ನಡುವಿನ ಚಿಂತನಶೀಲ ಅನುವಾದಕರಾದ ಪ್ರೊ. ಸದಾನಂದ ಕನವಳ್ಳಿಯವರು ಅನುವಾದಿಸಿದ್ದಾರೆ. ಅವರು ಅನುವಾದದಲ್ಲಿ ಹೆಸರು ಮಾಡಿದವರು. ಚಾರಿತ್ರಿಕ ವಿಷಯವನ್ನುಳ್ಳ ಈ ಬಗೆಯ ಅನುವಾದದಲ್ಲಿ ಅವರು ಸಿದ್ಧಹಸ್ತರೆನಿಸಿದ್ದಾರೆ. ಕನ್ನಡ ಪ್ರಾಧಿಕಾರವು ಬಹು ಹೆಮ್ಮೆಯಿಂದ ಈ ಇಬ್ಬರು ವಿದ್ವಾಂಸರನ್ನು ಅಭಿನಂದಿಸುತ್ತದೆ.

*ಹಿಮಾಚಲವನ್ನಾಳಿದ ಕರ್ನಾಟ ಸೇನರು* ಪುಸ್ತಕವು ಕ್ರಿ.ಶ. ೧೩ ಮತ್ತು ೧೪ನೆಯ ಶತಮಾನಗಳ ಮಧ್ಯೆ ಕರ್ನಾಟರು ಮುನ್ನೂರು ವರ್ಷ ಆಳಿದ ಹಿಮಾಚಲದ ರಾಜಕೀಯ, ಆಡಳಿತಾತ್ಮಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಪ್ರಮುಖ ಲಕ್ಷಣಗಳಿಗೆ ಪ್ರಾಶಸ್ತ್ಯ ನೀಡುತ್ತದೆ. ಈ ಕಾಲಘಟ್ಟವು ಹಿಮಾಚಲದ ಇತಿಹಾಸವನ್ನು ರೂಪಿಸಿತೆಂದು ಪರಿಗಣಿಸಲಾಗಿದೆ. ಏಕೆಂದರೆ, ತಮ್ಮ ಹಿಂದಿನ ಕಾಲಘಟ್ಟದ ಜನಕರಂತೆಯೆ ಕರ್ನಾಟರೂ ಹಿಮಾಚಲವನ್ನು ಭಾರತದ, ವಿಶೇಷತಃ ಉತ್ತರ ಭಾರತದ ಭಿತ್ತಿಯ ಮೇಲೆ ತಂದವರು. ಇದು ಕರ್ನಾಟರನ್ನು ಕುರಿತು ಪ್ರತ್ಯೇಕ ಬರೆದ ಪ್ರಥಮ ಗ್ರಂಥವಾಗಿದ್ದು ಆ ರಾಜವಂಶದ ಸರಿಸುಮಾರು ಎಲ್ಲ ಅಂಶಗಳನ್ನು ಸವಿವರವಾಗಿ ಈ ಕೃತಿಯು ಚಿತ್ರಿಸುತ್ತದೆ.

ಇದು ಹಿಮಾಚಲದ ರಾಜವಂಶೀಯ ಇತಿಹಾಸದ ಪಥದರ್ಶಕ ಪ್ರಯತ್ನ. ಹಾಗಾಗಿ, ಅಗಾಧ ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಪ್ರದೇಶವನ್ನು ನೋಡುವ ಕಿಡಕಿಯಾಗಿದೆ. ಕನ್ನಡಿಗರೆಲ್ಲರೂ ಈ ಗ್ರಂಥವನ್ನು ಆಗತ್ಯವಾಗಿ ಓದಲೆಂದು ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಸಿದ್ಧಿಸಿದೆ. ಈ ಕೃತಿಯ ಅನುವಾದಕ್ಕೆ ಒಪ್ಪಿಗೆ ಕೊಟ್ಟ ಡಾ. ಬಿ. ಚಕ್ರವರ್ತಿ ಅವರಿಗೂ ಅತ್ಯಂತ ಕುಶಲತೆಯಿಂದ ಅನುವಾದಿಸಿದ ಪ್ರೊ. ಸದಾನಂದ ಕನವಳ್ಳಿ ಅವರಿಗೂ ಈ ಕೃತಿ ಪ್ರಾಧಿಕಾರದ ಮೂಲಕ ಪ್ರಕಟಗೊಳ್ಳಬೇಕೆಂದು ಸೂಚಿಸಿದ ಡಾ. ಎಂ. ಎಂ. ಕಲಬುರ್ಗಿ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಪ್ರಾಧಿಕಾರದ ಸದಸ್ಯ ಮಿತ್ರರು ನನ್ನೊಡನೆ ಇದ್ದಾರೆ. ಹೀಗಾಗಿ ಒಳ್ಳೆಯ ಪ್ರಕಟಣೆಗಳು ಬರಲು ಸಾಧ್ಯವಾಗಿದೆ. ಡಿ.ಟಿ.ಪಿ. ಮಾಡಿಕೊಟ್ಟ ಸುಮಾ ಸಂಪಗಾಂವೆ ಹಾಗೂ ಮುದ್ರಿಸಿದ ಮಿತ್ರರಿಗೂ ವಂದನೆಗಳು ಸಲ್ಲುತ್ತವೆ. ನಾಡ ಜನ ಈ ಕೃತಿಯನ್ನು ಆದರದಿಂದ ಬರಮಾಡಿಕೊಳ್ಳುವರೆಂಬ ವಿಶ್ವಾಸ ನನ್ನದು.

## ಮುಮ್ಮಾತು

ನಮ್ಮ ದೇಶದ ಅರಸು ಮನೆತನಗಳ ಹುಟ್ಟು ಮತ್ತು ಇತಿಹಾಸಗಳನ್ನು ಕೂಲಂಕುಷವಾಗಿ ಪರೀಕ್ಷಿಸಿದರೆ ಯಾ ವಿಶ್ಲೇಷಿಸಿದರೆ ಅವರು ಭಾರತದ ಬೇರೆ ಬೇರೆ ಮೂಲೆಗಳಿಗೆ ತಮ್ಮ ಪ್ರಭುತ್ವ ವಿಸ್ತರಿಸಿದ್ದು ಕಂಡುಬರುವುದು. ತಮ್ಮ ನೆರೆಹೊರೆಯವರ ಆಕ್ರಮಣ ಇಲ್ಲವೆ ವಿದೇಶಿಯರ ದಾಳಿಯಿಂದಾಗಿ ಅವರು ದೇಶದ ಇನ್ನೊಂದು ಪ್ರದೇಶಕ್ಕೆ ಹೋಗಿ ನೆಲೆಸಿ ತಮ್ಮ ಮೊದಲಿನ ಸಂಸ್ಕೃತಿ ಮತ್ತು ಪರಂಪರೆಯನ್ನು ತಮ್ಮ ನವ ಪ್ರಜೆಗಳಲ್ಲಿ ಬಿತ್ತಿದರು. ತಾವೂ ಪ್ರತಿಸ್ಪಂದಿಸಿ, ತಮ್ಮ ನೂತನ ನೆಲೆಗಳ ಜನರ ಕೆಲವು ಸಾಂಸ್ಕೃತಿಕ ಲಕ್ಷಣಗಳನ್ನು ಮೈಗೂಡಿಸಿಕೊಂಡರು.

ರಾಮಾಯಣದ ರಘುವಂಶಜರು, ಮಹಾಭಾರತದ ಕುರುವಂಶಜರು ಮತ್ತು ಕಾಶ್ಮೀರದ ನಾಗ ರಾಜವಂಶಜರನ್ನು ಕಲ್ಹಣನ ರಾಜತರಂಗಿಣಿ ಉಲ್ಲೇಖಿಸುತ್ತದೆ. ಪ್ರಸರಣದ ಮೂಲಕ ಒಂದು ಸಂಕೀರ್ಣ ಸಂಸ್ಕೃತಿಯ ವಿಕಸನಕ್ಕೆ ವಿವಿಧ ಜನಾಂಗಗಳು ಕೊಡುಗೆ ನೀಡಿರುವುದು ಇದರಿಂದ ಪುಷ್ಟಿಗೊಳ್ಳುವುದು. ಅಂತೆಯೆ, ಪ್ರಾಕ್ತನ ವಸ್ತುಗಳು, ವಿಚಾರ ವಿನಿಮಯ, ಜನಾಂಗ ಸಂಕರ ಹಾಗೂ ಬೇರೆ ಬೇರೆ ರಾಜವಂಶ ಮತ್ತು ರಾಜವಂಶಗಳ ಮಧ್ಯೆ ಏರ್ಪಟ್ಟ ವಿವಾಹ ಸಂಬಂಧ ಇವು ಸಂಸ್ಕೃತಿ ವಿಕಸನಕ್ಕೆ ಸಹಕಾರಿಯಾದುದಕ್ಕೆ ಪುಷ್ಟಿ ಒದಗಿಸುತ್ತವೆ.

ರವೀಂದ್ರನಾಥ ಟಾಗೋರ ಹೇಳುತ್ತಾರೆ: "ಆರ್ಯರು, ಅನಾರ್ಯರು, ದ್ರಾವಿಡರು, ಚೀನರು, ಶಕರು, ಪಠಾಣರು ಮತ್ತು ಮೊಗಲರು ಮುಂತಾದ ಜನಾಂಗಗಳ ಒಗ್ಗೂಡುವಿಕೆ ಮತ್ತು ಸಂಸ್ಕೃತಿಯ ಸ್ವಾಂಗೀಕರಣದಿಂದ ಸಂಕೀರ್ಣ ಭಾರತದೇಶ ನಿರ್ಮಾಣಗೊಂಡಿದೆ".

ನಿಜಕ್ಕೂ, ಸಂಸ್ಕೃತಿಯ ಪ್ರಸರಣ ಮತ್ತು ವಿನಿಮಯಗಳು ವಿವಿಧ ಜನಾಂಗಗಳ ನಡುವಣ ಸಂಪರ್ಕವನ್ನು ಅವಲಂಬಿಸಿವೆ. ಜನಾಂಗಗಳ ಸಂಯೋಗ ಒಂದು ಶ್ರೀಮಂತ ಹಾಗೂ ಸಂಕೀರ್ಣ ಸಂಸ್ಕೃತಿಗೆ ಎಡೆಮಾಡುತ್ತದೆ. ಅದುವೇ ಭವ್ಯ ಭಾರತೀಯ ಪರಂಪರೆ.

ಕೆಲವೊಮ್ಮೆ ಗಡಿನಾಡಿನ ಚಿಕ್ಕ ಚಿಕ್ಕ ರಾಜರು ದೂರದೂರದ ನಾಡಿಗೆ ವಲಸೆ ಬಂದ ಮೇಲೂ ನಿಜವಾದ ರಾಜಗುಣಗಳನ್ನು ಮೆರೆಯುತ್ತ, ಪ್ರಜೆಗಳಿಗೆ ತಮ್ಮ ಪ್ರೀತಿ ವಿಶ್ವಾಸಗಳನ್ನು

ತೋರುತ್ತ, ತಮ್ಮ ಉತ್ತಮ ಸಂಸ್ಕೃತಿಯನ್ನು ಧಾರೆಯೆರೆಯುತ್ತ ಬಂದುದು ಭಾರತದ ಇತಿಹಾಸದಲ್ಲಿ ಕಂಡುಬರುವ ಸಂಗತಿ.

ಬಲ್ಲಾಳಸೇನನು ಬ್ರಾಹ್ಮಣರಲ್ಲಿ 'ಕೌಲೀನ್ಯ' ಪದ್ಧತಿಯನ್ನು ಜಾರಿಗೆ ತಂದವನೆಂದು ಬಂಗಾಲದ ಸಾಮಾನ್ಯ ಓದುಗರು ಬಗೆಯುವರು. ಹಾಗೆಯೆ, ಲಕ್ಷ್ಮಣಸೇನನನ್ನು ಬಖ್ತಿಯಾರ ಖಿಲ್ಜಿಯು ನದಿಯಾ ನಗರದ ಮೇಲೆ ಮಾಡಿದ ಅನಿರೀಕ್ಷಿತ ದಾಳಿಯಿಂದ ಪದಚ್ಯುತಗೊಂಡ ಕೊನೆಯ ಸ್ವತಂತ್ರ ಹಿಂದೂ ರಾಜನೆಂದು ತಪ್ಪು ತಿಳಿಯಲಾಗಿದೆ. ಏಕೆಂದರೆ, ರೂಪಸೇನ ಮೊದಲಾದ ಲಕ್ಷ್ಮಣಸೇನನ ವಂಶಜರು ಪಂಜಾಬಕ್ಕೆ ಹೋಗಿ ರೂಪನಗರ (ಈಗಿನ ರೋಪರ) ರಾಜ್ಯವನ್ನು ಸ್ಥಾಪಿಸಿದುದು ಬಂಗಾಲಿ ಓದುಗರಿಗೆ ತಿಳಿದಿಲ್ಲ. ರೂಪಸೇನನ ಮಗ ಬೀರಸೇನನ ಬಗೆಗೆ ಅವರಿಗೆ ಏನೂ ಗೊತ್ತಿಲ್ಲ. ಮುಸ್ಲಿಮರೊಂದಿಗಿನ ಯುದ್ಧದಲ್ಲಿ ರೂಪನಗರ ಪತನಗೊಂಡು ರೂಪಸೇನನು ಮಡಿದ ತರುವಾಯ ಬೀರಸೇನನು ಹಿಮಾಚಲ ಪ್ರದೇಶದ ಸುಕೇತಕ್ಕೆ ಸರಿದನು. ಬೀರಸೇನನು ಅನೇಕ ರಾಜರನ್ನು ಸೋಲಿಸಿ ಪ್ರಬಲ ಸೇನ ಸಾಮ್ರಾಜ್ಯವನ್ನು ಕಟ್ಟಿದನು. ಅದು ಭಾರತದ ಸ್ವಾತಂತ್ರ್ಯಾನಂತರ ಭಾರತೀಯ ಒಕ್ಕೂಟದಲ್ಲಿ ವಿಲೀನಗೊಂಡಿತು. ಬೀರಸೇನ ಮತ್ತು ಅವನ ವಂಶಜರು ವೀರೋಚಿತ ಮತ್ತು ದಿವ್ಯ ಸಾಧನೆಗೈದು ಸುಕೇತ ಮತ್ತು ಮಾಂಡಿಗಳಲ್ಲಿ ಪ್ರಬಲ ಸೇನ ಸಾಮ್ರಾಜ್ಯವನ್ನು ಕಟ್ಟಿದರು. ಮತ್ತು ಅವರ ಇಂದಿನ ವಂಶಜರಾದ ಮಹಾಮಹಿಮ ರಾಜಾ ಅಶೋಕಪಾಲಸೇನ ಮತ್ತು ಟಿಕ್ಕಾ ಉಮೇಶ್ವರಸಿಂಗ್‌ನು ಮಾಂಡಿಯ ಸೇನ ಅರಸರು ಕಟ್ಟಿದ ಅರಮನೆಯಲ್ಲಿಯೇ ವಾಸಿಸುತ್ತಿರುವುದು ಬಹಳಷ್ಟು ಬಂಗಾಲಿಗಳಿಗೆ ಆಶ್ಚರ್ಯದ ಸಂಗತಿ.

ಹಿಮಾಚಲ ಪ್ರದೇಶದ ಜನರಿಗೆ ಬೀರಸೇನನ ವೀರೋಚಿತ ಭವ್ಯ ಸಾಧನೆಗಳು ಹೆಚ್ಚೂ ಕಡಿಮೆ ಪರಿಚಿತವಿವೆ. ಆದರೆ, ದಕ್ಷಿಣದಿಂದ (ಕರ್ನಾಟಕದಿಂದ) ವಲಸೆ ಬಂದ ಮೇಲೆ ಬೀರಸೇನನ ಪೂರ್ವಜರು ಬಂಗಾಲವನ್ನು ಆಳಿದುದಾಗಲಿ, ದಕ್ಷಿಣ ಭಾರತದ ಸಾಂಸ್ಕೃತಿಕ ಅಂಶಗಳ ಕೊಡುಗೆಯಿಂದ ಬಂಗಾಲದ ಸಂಸ್ಕೃತಿ ಶ್ರೀಮಂತಗೊಂಡು ಅಖಿಲ ಭಾರತೀಯ ಸಂಕೀರ್ಣ ಸಂಸ್ಕೃತಿಯಾಗಿ ಮಾರ್ಪಟ್ಟಿತೆಂಬುದಾಗಲಿ ಅಷ್ಟೊಂದು ಪರಿಚಿತವಿಲ್ಲ.

ಸೇನವಂಶದ ಇತಿಹಾಸವು ರಾಜರ ಜನನಗಳು, ಮರಣಗಳು, ವಿವಾಹಗಳು, ಯುದ್ಧಗಳು, ವಿಜಯಗಳು, ಸೋಲುಗಳ ವಿವರಗಳಿಂದ ಪರಿಪ್ಲುತವಾಗಿದೆ. ಅಷ್ಟೇ ಅಲ್ಲ, ಬಂಗಾಲದ ರಾಜರೊಂದಿಗೆ ಬಂದ ಪಂಡಿತರು, ಆಸ್ಥಾನಕವಿಗಳು, ಜ್ಯೋತಿಷಿಗಳು, ವೈದ್ಯರು, ವಾಸ್ತುಶಿಲ್ಪಿಗಳು, ವಿಜ್ಞಾನಿಗಳು, ತಂತ್ರಜ್ಞರು ಮತ್ತು ವ್ಯಾಪಾರಿಗಳ ಖಚಿತ ವೃತ್ತಾಂತವೂ ಆಗಿದೆ. ಬಂಗಾಲದ ಸೇನರು ಉತ್ತರ ಮತ್ತು ಪಶ್ಚಿಮ ಭಾರತಕ್ಕೆ ವಲಸೆ ಬಂದಾಗ ಮೇಲ್ಕಾಣಿಸಿದ ಎಲ್ಲರೂ ವಿವಿಧ ಜ್ಞಾನಕ್ಷೇತ್ರಗಳಲ್ಲಿ ಅಸಾಮಾನ್ಯ ಪಾಂಡಿತ್ಯವನ್ನು ಅನ್ವಯಗೊಳಿಸುವಲ್ಲಿ ಕುಶಲರಾಗಿದ್ದರು. ಸಾಹಿತ್ಯಿಕ, ಆಧ್ಯಾತ್ಮಿಕ, ಕಲಾತ್ಮಕ ಪಾಂಡಿತ್ಯ ಮತ್ತು ಸುಂದರ ಲಿಪಿಗಾರರ ಕಲಾವಿದರ ಕಟ್ಟಡ ನಿರ್ಮಾಣಗಾರರ ವಾಸ್ತುಶಿಲ್ಪಿಗಳ ಮತ್ತು ಬಂಗಾಲದ ಬಿಂಬ ನಿರ್ಮಿತಿಗಾರರ ವಾಸ್ತುಶಿಲ್ಪೀಯ, ವೈಜ್ಞಾನಿಕ ಮತ್ತು ತಾಂತ್ರಿಕ ನೈಪುಣ್ಯ ಆಗಾಧವಾದುದಾಗಿತ್ತು. ಹಿಮಾಚಲಪ್ರದೇಶದ ಮನೆಗಳಲ್ಲಿ ಮತ್ತು ದೇವಾಲಯಗಳಲ್ಲಿ ಲಭ್ಯವಿರುವ ಹಸ್ತಪ್ರತಿಗಳು, ಶಾಸನಗಳು, ಪ್ರತಿಮೆಗಳು ಮತ್ತು ಮೂರ್ತಿ ನಿರ್ಮಾಪಕರು ಇದೆಲ್ಲ ವೃತ್ತಾಂತದ ಸ್ಪಷ್ಟ ಚಿತ್ರಣ ನೀಡುವವು. ಹಿಮಾಚಲಪ್ರದೇಶದ

ಮೂಲನಿವಾಸಿಗಳ ಜೀವನದ ರೀತಿನೀತಿಗಳು, ಧಾರ್ಮಿಕ ಆಚರಣೆಗಳು, ಸಮಾಜೋ-ಆರ್ಥಿಕ ಆಚರಣೆಗಳು, ಪೂರ್ವನಂಬಿಕೆಗಳು, ಜೀವನಶೈಲಿ ಮತ್ತು ಕಾಲಿಕಾ ಮುಂತಾದ ಮಾತೃದೇವತೆಗಳ ಆರಾಧನೆಯ ತಾಂತ್ರಿಕ ವ್ರತಗಳ ಮೈಗೂಡಿಕೆ ಇವೆಲ್ಲದರ ವಿವರಣೆ ಪ್ರಸಕ್ತ ಪುಸ್ತಕದಲ್ಲಿ ಅಡಕಗೊಂಡಿವೆ.

ಅಸ್ತಿತ್ವದಲ್ಲಿರುವ ಬೇರೆ ಬೇರೆ ಸಂಸ್ಕೃತಿಗಳ ಪರಸ್ಪರ ಬೆರೆಯುವಿಕೆಯನ್ನು ಈ ಗ್ರಂಥ ವಿವಿಧ ಪರಿಪ್ರೇಕ್ಷ್ಯಗಳಲ್ಲಿ ಎತ್ತಿತೋರಿಸಿದೆ.

ಸೇನ ಅರಸರ ಮೂಲ ಸಾಂಸ್ಕೃತಿಕ ಬಳುವಳಿ ದಕ್ಷಿಣ ಭಾರತದ ಕರ್ನಾಟಕದಿಂದ ತಂದುದೆಂದು ಈಗಾಗಲೇ ಹೇಳಿದೆ. ಅಲ್ಲಿಂದ ಸೇನ ಅರಸರು ಬಂಗಾಲಕ್ಕೆ ವಲಸೆ ಹೋದರು. ಅಲ್ಲಿ ಅವರ ಮೂಲ ಸಂಸ್ಕೃತಿಯು ಬಂಗಾಲದ ಪ್ರಚಲಿತ ಸಂಸ್ಕೃತಿಯೊಂದಿಗೆ ಬೆರೆಯಿತು. ಉತ್ತರದಿಂದ ದಕ್ಷಿಣಕ್ಕೆ ಮತ್ತು ಪೂರ್ವದಿಂದ ಪಶ್ಚಿಮಕ್ಕೆ ಮತ್ತು ತದ್ವಿರುದ್ಧ ದಿಸೆಯಲ್ಲಿ ಸೇನರಂಥ ಅರಸು ಮನೆತನಗಳು ಕೈಗೊಂಡ ಚಲನೆಗಳು ಭಾರತೀಯ ಇತಿಹಾಸದ ಸುವರ್ಣ ಅಧ್ಯಾಯಗಳನ್ನು ರಚಿಸುವಲ್ಲಿ ವಸ್ತುತಃ ಮಹತ್ವದವುಗಳಾಗಿವೆ. ಭಾರತೀಯ ಇತಿಹಾಸವು ಭಾರತದ ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣದ ಜನತೆಯ ಶ್ರೀಮಂತ ಮತ್ತು ವಿವಿಧ ಸಂಸ್ಕೃತಿಗಳಿಂದ ನಿರ್ಮಿತವಾಗಿದೆ.

ಬಂಗಾಲದಲ್ಲಿ ಸೇನ ಅರಸರ ಆಳ್ವಿಕೆಯ ಕಾಲದಲ್ಲಿ ವಿವಿಧ ಜ್ಞಾನಕ್ಷೇತ್ರಗಳಲ್ಲಿ ಮತ್ತು ವಿದ್ವತ್ತಿನಲ್ಲಿ ಬಹುಶ್ರುತರಾಗಿದ್ದ ಅನೇಕ ವಿಖ್ಯಾತ ಪಂಡಿತರು ಆಸ್ಥಾನವನ್ನು ಅಲಂಕರಿಸಿದ್ದರು.

ಭಾರತದ ಇತರ ರಾಜ್ಯಗಳು **ಯಾಜ್ಞವಲ್ಕ್ಯ** ರಚಿಸಿದ ಮಿತಾಕ್ಷರ ಎಂಬ ನೀತಿಸಂಹಿತೆಯನ್ನು ಅನುಸರಿಸುತ್ತಿದ್ದಾಗ ಬಂಗಾಲದ ಪಂಡಿತರು ಸೇನ ಆಸ್ಥಾನದಲ್ಲಿ ಇದ್ದ ಮಹಾಮಹೋಪಾಧ್ಯಾಯ ಜೀಮೂತವಾಹನ ರಚಿಸಿದ ಬೇರೊಂದು ನೀತಿಸಂಹಿತೆಯನ್ನು ಸೂತ್ರೀಕರಿಸಿದರು. ಅದಲ್ಲದೆ, ಅವನು **ವ್ಯವಹಾರ ಮಾತೃಕ, ಕಾಲವಿವೇಕ** ಮುಂತಾದ ಇತರ ಗ್ರಂಥಗಳನ್ನು ರಚಿಸಿದನು. ಬಲ್ಲಾಳಸೇನನ ಧರ್ಮಗುರು ಅನಿರುದ್ಧಭಟ್ಟನು **ಹರಲತಾ** ಮತ್ತು **ಪಿತೃದಾಯಿತಾ** ಗ್ರಂಥಗಳ ಕರ್ತೃವಾಗಿದ್ದನು. ಸ್ವತಃ ಬಲ್ಲಾಳಸೇನನು ಸ್ಮೃತಿ ಕುರಿತು **ದಾನಸಾಗರ** ಮತ್ತು ವಿಜ್ಞಾನ, ತಂತ್ರಜ್ಞಾನ ಕುರಿತು **ಅದ್ಭುತಸಾಗರ** ಮೊದಲಾದ ಗ್ರಂಥಗಳನ್ನು ರಚಿಸಿದನು. ಇವೆರಡು ಗ್ರಂಥಗಳು ಇಂದಿಗೂ ಲಭ್ಯವಿವೆ. ಅವನ ಇನ್ನೆರಡು ಗ್ರಂಥಗಳಾದ **ಆಚಾರಸಾಗರ** ಮತ್ತು **ಪ್ರತಿಷ್ಠಾಸಾಗರ** ಬಂಗಾಲದಲ್ಲಿ ಕಾಣಸಿಗುವುದಿಲ್ಲ. ಮುಂದೊಂದು ದಿನ, ಈಗ ಹೆಸರು ಮಾತ್ರ ತಿಳಿದಿರುವ ಹಾಗೂ ಹಸ್ತಪ್ರತಿ ಲಭ್ಯವಿರದ ಈ ಗ್ರಂಥಗಳಲ್ಲಿ ಕೆಲವು ಗಳು ಹಿಮಾಚಲ ರಾಜ್ಯದ ಸೇನ ಅರಸರ ಗ್ರಂಥಸಂಗ್ರಹದಲ್ಲಿ ದೊರೆಯುವ ಸಾಧ್ಯತೆಗಳಿವೆ. ಬಲ್ಲಾಳಸೇನನ ಧರ್ಮಗುರು ಹಲಾಯುಧನು **ಬ್ರಾಹ್ಮಣ ಸರ್ವಸ್ವ, ಮೀಮಾಂಸ ಸರ್ವಸ್ವ** ಮತ್ತು **ಪಂಡಿತ ಸರ್ವಸ್ವ** ಮುಂತಾದ ಗ್ರಂಥಗಳ ಕರ್ತೃವಾಗಿದ್ದನು. ಬಲ್ಲಾಳಸೇನನ ಒಡ್ಡೋಲಗದಲ್ಲಿದ್ದ ಐವರು ಪಂಡಿತರೆಂದರೆ ಸರಸ, ಧೋಯಿ, ಗೋವರ್ಧನಾಚಾರ್ಯ, ಉಮಾಪತಿಧರ ಮತ್ತು ಜಯದೇವ. ಅವರನ್ನು ಬಲ್ಲಾಳಸೇನನ ಆಸ್ಥಾನದ ಪಂಚರತ್ನಗಳೆಂದು ಕರೆಯಲಾಗುತ್ತಿತ್ತು. ಆ ಯುಗದ ಅತ್ಯಮೂಲ್ಯವಾದ ಗ್ರಂಥಗಳೆಂದರೆ ಸರ್ದೇವನ **ಸದುಕ್ತಿಕರ್ಣಾಮೃತ, ಧೋಯಿಯ ಪವನದೂತಮ್**, ಉಮಾಪತಿಧರನ **ಚಂದ್ರಚೂಡಚರಿತಮ್**, ದೇವಪಾದನ **ಸ್ತುತಿ**, ಮಧ್ಯನಗರದ ಶಾಸನ, ಗೋವರ್ಧನಾಚಾರ್ಯನ **ಆರ್ಯ ಸಪ್ತಶತಿ** ಮತ್ತು

ಜಯದೇವನ ಗೀತಗೋವಿಂದ, ಬ್ರಾಹ್ಮಣಸರ್ವಸ್ವವನ್ನು ಬಿಟ್ಟರೆ ಹಲಾಯುಧನು ರಚಿಸಿದ ಗ್ರಂಥಗಳು ಬಂಗಾಲದಲ್ಲಿ ದೊರೆಯುವುದಿಲ್ಲ. ಹಲಾಯುಧನ ಸೋದರನಾದ ಪಶುಪತಿಯು ಮನಶಾಸ್ತ್ರ ಕುರಿತ ಪಾಕಯಂತ್ರ ಎಂಬ ಗ್ರಂಥವನ್ನು ರಚಿಸಿದನು. ಇವುಗಳಲ್ಲದೆ ಬಂಗಾಲದ ಪಂಡಿತರು ಆಯುರ್ವೇದ, ಜ್ಯೋತಿಷ್ಯ ಮತ್ತು ತಂತ್ರ ಕುರಿತ ಗ್ರಂಥಗಳನ್ನು ರಚಿಸಿ, ಅವುಗಳನ್ನು ಸೇನರ ಆಸ್ಥಾನದಲ್ಲಿ ವಾಚಿಸುತ್ತಿದ್ದರು ಮತ್ತು ಬೋಧಿಸುತ್ತಿದ್ದರು.

ಲಕ್ಷ್ಮಣಸೇನನ ಮೊಮ್ಮಗನಾದ ಸೂರಸೇನ ಅರಸನನ್ನು ಹಿಂಬಾಲಿಸಿ ಬಂಗಾಲದ ಅನೇಕ ಪಂಡಿತರು ವಲಸೆ ಹೋದರು. ಅವರು ಹೆಚ್ಚಾಗಿ ವೈದ್ಯರು, ಜ್ಯೋತಿಷಿಗಳು, ತಾಂತ್ರಿಕರು ಮತ್ತು ಪುರೋಹಿತರಾಗಿದ್ದರು. ಸೂರಸೇನನು ಮೊದಲು ಪ್ರಯಾಗ ಅರ್ಥಾತ್ ಅಲಹಾಬಾದಿನಲ್ಲಿ ನೆಲೆಯೂರಿದನು. ಅವನ ಮಗ ರೂಪಸೇನನು ಇವೆಲ್ಲ ಮನೆತನಗಳೊಂದಿಗೆ ಪ್ರಯಾಗದಿಂದ ರೋಪಡಕ್ಕೆ ವಲಸೆ ಹೋದನು. ರೂಪಸೇನನ ಮಗ ಬೀರಸೇನನು ಪುನಃ ಪಂಜಾಬದ ರೋಪಡದಿಂದ ವಲಸೆ ಹೋದನು. ಈ ಮನೆತನಗಳು ಬೀರಸೇನನೊಂದಿಗೆ ಹಿಮಾಚಲ ಪ್ರದೇಶದ ಸುಕೇತಕ್ಕೆ ಕ್ರಿ.ಶ. ಸುಮಾರು ೧೨೩೩ರಲ್ಲಿ ಬಂದವು. ಹಿಮಾಚಲ ಪ್ರದೇಶದ ಇಂದಿನ ನಿವಾಸಿಗಳು ಹೆಚ್ಚಾಗಿ ಸೇನ ಅರಸರನ್ನು ಅನುಸರಿಸಿ ಬಂದವರ ವಂಶಜರೆಂಬುದು ಸುಸ್ಪಷ್ಟವಿದೆ.

ಬಂಗಾಲದ ಸೇನ ಅರಸರು ವಲಸೆಹೋದ ವಾದವನ್ನು ಕನಿಂಗ್ಹಮ್ ಒಪ್ಪುವುದಿಲ್ಲ. ಹದಿಮೂರನೆಯ ಶತಮಾನದಲ್ಲಿ ಬೀರಸೇನನು ಹಿಮಾಚಲಪ್ರದೇಶದ ಸುಕೇತದಲ್ಲಿ ಸೇನರಾಜ್ಯವನ್ನು ಸ್ಥಾಪಿಸಿದ ದಿನಾಂಕವನ್ನು ಕನಿಂಗ್ಹಮ್ ಒಪ್ಪುವುದಿಲ್ಲ. ಕ್ರಿ.ಶ.೮ನೆಯ ಶತಮಾನದಲ್ಲಿ ಸೇನರಾಜ್ಯ ಸ್ಥಾಪನೆಗೊಂಡಿತು ಮತ್ತು ಸೇನರು ಸ್ಪಿತಿಯಿಂದ ಬಂದವರು ಎಂಬುದು ಅವನ ಅಭಿಪ್ರಾಯ. ಅವನ ನಿರ್ಣಯವು ನಿರ್ಮಾಂದ ಗ್ರಾಮದ ಪರಶುರಾಮ ದೇವಾಲಯದಲ್ಲಿ ದೊರೆತ ತಾಮ್ರಪಟಿ ಶಾಸನವನ್ನು ಆಧರಿಸಿದೆ. ಸ್ಪಿತಿಯಲ್ಲಿ ಸೇನ ಅರಸರು ಆಳುತ್ತಿದ್ದರೆಂದು ಆ ತಾಮ್ರಪಟದಲ್ಲಿ ದಾಖಲಾಗಿದೆ. ಸ್ಪಿತಿಯ ಅರಸ ವರುಣಸೇನನ ಮಗ ಸಂಜಯಸೇನ, ಇವನ ಮೊಮ್ಮಗ ರವಿಸೇನ, ಇವನ ಮಗ ರಾಜಾಸಮುದ್ರಸೇನ ಆ ತಾಮ್ರಪಟವನ್ನು ದತ್ತಿ ನೀಡಿದವನು ಎಂದು ಅದರಲ್ಲಿ ಹೇಳಲಾಗಿದೆ. ಆ ತಾಮ್ರಪಟ ಕ್ರಿ.ಶ. ೭ನೆಯ ಶತಮಾನಕ್ಕೆ ಸೇರಿದುದೆಂಬುದು ಶಾಸನ-ಪಂಡಿತರ ಅಭಿಮತ. ಬಂಗಾಲದ ಅರಸ ಲಕ್ಷ್ಮಣಸೇನನ ಉತ್ತರಾಧಿಕಾರಿ ಸಮುದ್ರಸೇನನೂ ನಿರ್ಮಾಂದದ ಅರಸ ಸಮುದ್ರಸೇನನೂ ಒಬ್ಬನೇ ಎಂದು ಕನಿಂಗ್ಹಮ್ ತೀರ್ಮಾನಿಸಿದನು. ಆದರೆ ಅವರಿಬ್ಬರ ತಂದೆ, ಅಜ್ಜ, ಮುತ್ತಜ್ಜರು ಬೇರೆ ಬೇರೆ ಇದ್ದಾರೆ. ಹಿಮಾಚಲದಲ್ಲಿ ಸೇನ ರಾಜ್ಯದ ಸ್ಥಾಪನೆಯ ಕಾಲವನ್ನು ನಿರ್ಧರಿಸುವಲ್ಲಿ ಕನಿಂಗ್ಹಮ್ ಬಹುಶಃ ಆ ತಪ್ಪು ಮಾಡಿದ. ಡಾ. ಹಚ್ಚಿನ್ಸನ್ ಕೂಡ ಕನಿಂಗ್ಹಮ್‌ನ ಅಭಿಪ್ರಾಯವನ್ನು ಬೆಂಬಲಿಸಿದ. ಆದರೆ, ಆ ಹಿಸ್ಟರಿ ಆಫ್ ಮಾಂಡಿ ಸ್ಟೇಟ್ ಗ್ರಂಥದ ಕರ್ತೃ ಪ್ರೊ. ಮನಮೋಹನ ಸಿಂಗ್‌ನ ಅಭಿಪ್ರಾಯದಲ್ಲಿ ಮಾಂಡಿಯ ಸೇನರು ಬಂಗಾಲದ ಅರಸ ಲಕ್ಷ್ಮಣಸೇನನ ವಂಶಜರು. ಈಗ ಸದ್ಯ ಸುಕೇತದಲ್ಲಿ ಬಂಗಾಲಿ ಲಿಪಿಯಲ್ಲಿ ರಚಿಸಿದ ಹಲವಾರು ಸಂಸ್ಕೃತ ಹಸ್ತಪ್ರತಿಗಳು ದೊರಕಿರುವುದರಿಂದ ಸೇನರಾಜ್ಯದ ಸ್ಥಾಪನೆಯ ಕಾಲದ ಬಗೆಗಿನ ವಾದವಿವಾದವು ಬಗೆಹರಿದಿದೆ. ಈ ಹಸ್ತಪ್ರತಿಗಳು ಸೇನರಾಜ್ಯದ ಆಸ್ಥಾನಿಕರಾಗಿದ್ದವರ ವಂಶಜರ ಮನೆಗಳಲ್ಲಿ ದೊರೆತಿವೆ. ಈ ಹಸ್ತಪ್ರತಿಗಳ ಮೂಲ ಕರ್ತೃಗಳು ಮತ್ತು ಒಡೆಯರು ಬಂಗಾಲದ

ನಿವಾಸಿಗಳೆಂಬುದನ್ನು ಇಂಥ ಪ್ರಮಾಣಗಳು ಸೂಚಿಸುತ್ತವೆ. ಅವರು ಸೇನ ಅರಸರೊಂದಿಗೆ ಬಂಗಾಲದ ಹಿಮಾಚಲ ಪ್ರದೇಶಕ್ಕೆ ವಲಸೆ ಹೋದರೆಂದು ತೋರುತ್ತದೆ. ಈ ಗ್ರಂಥಗಳನ್ನು ಚಂದ್ರಮಣಿ ಕಶ್ಯಪನು ಸ್ಥಾಪಿಸಿದ ಹಿಮಾಚಲ ಲೋಕಸಂಸ್ಕೃತಿ ಸಂಸ್ಥಾನದ ಗ್ರಂಥಾಲಯದಲ್ಲಿ ಸಂರಕ್ಷಿಸಿಡಲಾಗಿದೆ.

ಹಿಮಾಚಲಪ್ರದೇಶಕ್ಕೆ ವಲಸೆ ಬಂದನಂತರ ಸೇನ ಅರಸರನ್ನು ಹಿಂಬಾಲಿಸಿ ಬಂದ ಬಂಗಾಲದ ಜನರು ಕ್ರಮೇಣ ಹಿಮಾಚಲಪ್ರದೇಶದ ಸ್ಥಳೀಯ ಕುಟುಂಬಗಳಲ್ಲಿ ಮದುವೆಯಾಗತೊಡಗಿದರು. ಅವರ ಹೆಂಡಂದಿರ ಮಾತೃಭಾಷೆ ಹಿಂದಿಯಿದ್ದುದರಿಂದ ಅವರ ಮಕ್ಕಳು ಹಿಂದಿಯನ್ನು ಮಾತೃಭಾಷೆಯನ್ನಾಗಿ ಕಲಿಯುತ್ತ ಕಾಲಕ್ರಮೇಣ ಬಂಗಾಲಿ ಭಾಷೆಯೊಂದಿಗಿನ ನಿಕಟ ಪರಿಚಯವನ್ನು ಕಳೆದುಕೊಂಡರು. ಬಂಗಾಲಿಯನ್ನು ಅವರ ತಂದೆಗಳು ಮಾತ್ರ ಮಾತಾಡುತ್ತಿದ್ದರು. ಬಹುಶಃ ಅದೂ ವಿರಳ ಸಂದರ್ಭಗಳಲ್ಲಿ ಮಾತ್ರ. ತತ್ಪರಿಣಾಮವಾಗಿ, ವಲಸೆ ಬಂದ ಬಂಗಾಲಿ ಜನರ ತರುವಾಯದ ಪೀಳಿಗೆಯವರು ಬರಬರುತ್ತ ದೇವನಾಗರಿ ಲಿಪಿಯನ್ನು ಮತ್ತು ಮಾತೃಭಾಷೆಯಾಗಿ ಹಿಂದಿಯನ್ನು ಸ್ವೀಕರಿಸಿದರು. ಕಾಲ ಉರುಳಿದಂತೆ ಅವರು ತಮ್ಮ ಮೂಲ ಮಾತೃಭಾಷೆಯಾದ ಬಂಗಾಲಿಯನ್ನು ಮರೆಯತೊಡಗಿದರು. ಹಾಗಾಗಿ, ಹಿಮಾಚಲಪ್ರದೇಶದ ರಾಜಪುರೋಹಿತರು, ಜ್ಯೋತಿಷಿಗಳು ಮತ್ತು ವೈದ್ಯರ ಮನೆಗಳಲ್ಲಿ ವೈದ್ಯಕೀಯ, ಜ್ಯೋತಿಷ್ಯ ಮತ್ತು ತಂತ್ರ ಮೊದಲಾದವುಗಳ ಬಗೆಗೆ ಬಂಗಾಲಿಯಲ್ಲಿ ಬರೆದ ಹಲವು ಗ್ರಂಥಗಳು ದೊರೆತುದು ಸ್ವಾಭಾವಿಕ. ಅವರು ತಮ್ಮ ಹಸ್ತಪ್ರತಿಗಳು ಮತ್ತು ಧರ್ಮಗ್ರಂಥಗಳ ಭಂಡಾರದೊಂದಿಗೆ ಹಿಂದೊಮ್ಮೆ ಬಂಗಾಲದಿಂದ ವಲಸೆ ಬಂದವರಾಗಿದ್ದರು. ಈ ಹಸ್ತಪ್ರತಿಗಳ ಭಾಷೆ ಸಂಸ್ಕೃತವಾಗಿದ್ದರೂ ಬಂಗಾಲಿ ಲಿಪಿಯಲ್ಲಿ ಬರೆಯಲಾಗಿದ್ದು ಅವು ಅಂಥ ಪಂಡಿತರ ಮನೆಗಳಲ್ಲಿ ದೊರೆತುದು ಅನಿರೀಕ್ಷಿತವೇನಲ್ಲ. ಬಂಗಾಲದಿಂದ ವಲಸೆ ಬಂದ ಕೆಲವು ಕುಟುಂಬಗಳು ಬಂಗಾಲಿ ಲಿಪಿಯಲ್ಲಿ ರಚಿತವಾದ, ತಮಗೆ ಅರ್ಥವಾಗದ ಕೆಲವು ಗ್ರಂಥಗಳನ್ನು ಬಿಸಾಕಿದರೆಂದು ೧೯೬೦ರಲ್ಲಿ ವರದಿಸಲಾಗಿದೆ. ಅವರು ಅವುಗಳನ್ನು ನಿರರ್ಥಕವೆಂದು ಬಗೆದು ಇನ್ನು ಅವನ್ನು ಸಂರಕ್ಷಿಸಿಡುವುದಕ್ಕೆ ಕಾರಣವಿಲ್ಲ ಎಂದು ಭಾವಿಸಿದರು. ಆ ಕ್ಷಣದಲ್ಲಿ ರೇವತಿರಮಣ ಶರ್ಮ ಎಂಬ ಸದ್ಗೃಹಸ್ಥನೊಬ್ಬ ಆ ಅಮೂಲ್ಯ ಗ್ರಂಥಗಳನ್ನು ನಾಶಮಾಡಬಾರದೆಂದು ಅವರ ಮನವೊಲಿಸಿ, ಆ ಗ್ರಂಥಗಳನ್ನು ಸ್ಥಳೀಯ ವಿಜಯ ಹೈಸ್ಕೂಲಿನ ನಿವೃತ್ತ ಶಿಕ್ಷಕರಾಗಿದ್ದ ಚಂದ್ರಮಣಿ ಕಶ್ಯಪನಿಗೆ ಒಪ್ಪಿಸಿದನು. ಮಾಂಡಿ ಮತ್ತು ಸುಂದರನಗರದ ಹಳೆಯ ಕುಟುಂಬಗಳು ಬಿಸಾಕಿದ ಇಂಥ ಹಸ್ತಪ್ರತಿಗಳು ಮತ್ತು ಗ್ರಂಥಗಳನ್ನು ಚಂದ್ರಮಣಿ ಕಶ್ಯಪನು ಸಂಗ್ರಹಿಸಿಡುತ್ತಿದ್ದನು. ೧೯೫೮ ಮತ್ತು ೧೯೬೦ ರ ಮಧ್ಯೆ ಅವನು ಇಂಥ ಅನೇಕ ಪ್ರಾಚೀನ ಗ್ರಂಥಗಳು ಮತ್ತು ಹಸ್ತಪ್ರತಿಗಳನ್ನು ಸಂಗ್ರಹಿಸಲು ಶಕ್ತನಾದನು. ಅವನ ಸಂಗ್ರಹದಲ್ಲಿ ತಾಡೋಲೆ ಮತ್ತು ಭೂರ್ಜಪರ್ಣದ ಮೇಲೆ ಬಂಗಾಲಿ ಲಿಪಿಯಲ್ಲಿ ಬರೆದ ಕೆಲವು, ದೇವನಾಗರಿ ಲಿಪಿಯಲ್ಲಿ ಬರೆದ ಇನ್ನೂ ಕೆಲವು ಹಸ್ತಪ್ರತಿಗಳಿವೆ. ಆದರೆ, ಅವುಗಳ ಭಾಷೆ ಸಂಸ್ಕೃತ ಇಲ್ಲವೆ ಮಂಡಿಯಾಲಿ.

ಚಂದ್ರಮಣಿ ಕಶ್ಯಪನು "ಹಿಮಾಚಲ ಲೋಕಸಂಸ್ಕೃತಿ ಸಂಸ್ಥಾನ" ಎಂಬ ಹೆಸರಿನ ಸಂಘವನ್ನು ನೋಂದಾಯಿಸಿದನು. ಒಂದು ಸಂಕೀರ್ಣ ಸಂಸ್ಕೃತಿಯ ವಿಕಾಸ ವ ಇತಿಹಾಸದ ಮೇಲೆ

ಬೆಳಕು ಚೆಲ್ಲುವ ಹಿಮಾಚಲ ಕುರಿತ ಗ್ರಂಥಗಳು, ಶಾಸನಫಲಕಗಳಿಗಾಗಿ ಒಂದು ಸಂಸ್ಥೆಯನ್ನು ಹುಟ್ಟುಹಾಕುವುದೆ ಅದರ ಉದ್ದೇಶವಾಗಿತ್ತು. ಅವನು ಸಂಗ್ರಹಿಸಿದ ಪ್ರಾಕ್ತನ ವಸ್ತುಗಳು, ಹಸ್ತಪ್ರತಿಗಳು ಮತ್ತು ದಸ್ತಾವೇಜುಗಳನ್ನು ಪ್ರದರ್ಶಿಸಲು ಮಾಂಡಿ ಅರಮನೆಯಲ್ಲೊಂದು ಕೋಣೆಯನ್ನು ಚಂದ್ರಮಣಿಗೆ ಕೊಡಲಾಗಿದೆ. ಆದರೆ, ದುರದೃಷ್ಟವಶಾತ್ ಭಿನ್ನ ವಿಭಿನ್ನ ಕಾಗದದ ಮೇಲೆ ಬರೆಯಲಾಗಿರುವ ಈ ಪ್ರಾಚೀನ, ಸವಕಲಾದ, ಮುಟ್ಟಿದರೆ ಮುರಿದುಬೀಳುವ ಹಸ್ತಪ್ರತಿಗಳನ್ನು ವೈಜ್ಞಾನಿಕವಾಗಿ ಜೋಡಿಸಿಡಲು ಸಾಧ್ಯವಾಗಿಲ್ಲ. ಲ್ಯಾಮಿನೇಶನ್ ಮತ್ತು ಮೈಕ್ರೊಫಿಲ್ಮೀಕರಣ ಇಲ್ಲವೆ ಫೋಟೊಕಾಪೀಕರಣದಂಥ ಇನ್ನಿತರ ವೈಜ್ಞಾನಿಕ ವಿಧಾನಗಳಿಂದ ಈ ಅಮೂಲ್ಯ ದಾಖಲೆಗಳನ್ನು ಸಂರಕ್ಷಿಸಿಡದಿದ್ದರೆ ಸಂಶೋಧಕರು ಅವುಗಳಿಗೆ ಎರವಾಗುವರು. ಟುಲೊಟ್ ಕಾಗದದ ಮೇಲೆ ಬರೆಯಲಾಗಿರುವ ದುರ್ಗಾಪೂಜಾ ತಂತ್ರಮ್‌ದಂಥ ಪ್ರಾಚೀನ ಹಸ್ತಪ್ರತಿಗಳ ಕೆಲವು ನಮೂನೆಗಳನ್ನು ಮತ್ತು ವೈದ್ಯ ಕಲ್ಪತರುವನ್ನು ಪ್ರಸಕ್ತ ಗ್ರಂಥದ ಅನುಬಂಧಗಳಲ್ಲಿ ಮುದ್ರಿಸಲಾಗಿದೆ. ಇಂಥ ಅನೇಕ ಗ್ರಂಥಗಳನ್ನು ಚಂದ್ರಮಣಿ ಕಶ್ಯಪನ ಸಂಗ್ರಹದಿಂದ ಪಡೆಯಬಹುದು. ಈ ದುರ್ಲಭ ವಸ್ತುಗಳ ಸಂರಕ್ಷಣೆಗಾಗಿ ಅನೇಕ ನಿಯೋಗಗಳಿಂದ, ಸರಕಾರಿ ಇಲಾಖೆಗಳಿಂದ ಅನುದಾನಕ್ಕಾಗಿ ಅವನು ಅರಿಕೆ ಮಾಡಿಕೊಳ್ಳುತ್ತಲೇ ಇದ್ದಾನೆ. ಅವುಗಳ ಸಂರಕ್ಷಣೆಗಾಗಿ ಅಗತ್ಯ ನೆರವು ಕೋರಿ ಅವನು ಸಪ್ಟೆಂಬರ ೩, ೧೯೯೩ರಂದು ಏಶಿಯಾಟಿಕ್ ಸೊಸೈಟಿಯ ಸಂಪಾದಕರಿಗೆ ಪತ್ರವನ್ನು ಬರೆದ. ಆದರೆ, ಉತ್ತರ ಮಾತ್ರ ಬರಲಿಲ್ಲ. ಸರಕಾರಿ ಅನುದಾನ ಪಡೆಯಬೇಕಿದ್ದರೆ ಸಂಸ್ಥೆಯನ್ನು ನೋಂದಾಯಿಸಬೇಕೆಂಬ ಪತ್ರವಷ್ಟೇ ಸಂಸ್ಕೃತಿ ಇಲಾಖೆಯಿಂದ ಬಂತು. ಸಂಸ್ಥೆ ನೋಂದಣಿಯಾಗಿ ಹಲವು ವರ್ಷಗಳೇ ಉರುಳಿರುವುದಾದರೂ ಕಶ್ಯಪನಿಗೆ ಇದುವರೆಗೆ ಯಾವುದೇ ಅನುದಾನ ಒದಗಿಲ್ಲ. ಪ್ರಸಕ್ತ ಪುಸ್ತಕದ ಕೊನೆಯಲ್ಲಿ ಕಶ್ಯಪ ಬರೆದ, ಅವನ ಪರವಾಗಿ ಈ ಲೇಖಕ ಬರೆದ ಪತ್ರಗಳನ್ನು ಮುದ್ರಿಸಲಾಗಿದೆ.

ಚಂದ್ರಮಣಿ ಕಶ್ಯಪ ನಿವೃತ್ತ ಹೆಡ್‌ಮಾಸ್ತರ. ೭೦ ಮೀರಿದ ವಯಸ್ಸು. ತನಗಿಂತ ಎಷ್ಟೋ ಪ್ರಾಚೀನವಾದ ಹಸ್ತಪ್ರತಿಗಳನ್ನು ಸಂರಕ್ಷಿಸಲೋಸುಗ ಅವನು ಕಾದಿದ್ದಾನೆ. ಅವನ ಆಸೆ ಎಂದಾದರೂ ಈಡೇರೀತೆ?

**ಮಾನವೀಯ ಮೌಲ್ಯಗಳ ಸಾಕ್ಷಾತ್ಕರಣ :**

ವಿಷ್ಣುಶರ್ಮನು ಪಂಚತಂತ್ರದ ವೀರವರನ ಕತೆಯಲ್ಲಿ ಕರ್ತವ್ಯಪಾಲಕ ಸರ್ಕಾರಿ ಸೇವಕನ ಉದಾಹರಣೆ ನೀಡಿರುವನು. ರಾಷ್ಟ್ರಕ್ಕಾಗಿ ಸರಕಾರಿ ಸೇವಕನೊಬ್ಬನು ಸ್ವಾರ್ಥತ್ಯಾಗದ ಮೂಲಕ ಮೆರೆದ ಆದರ್ಶವನ್ನು ವಿಷ್ಣುಶರ್ಮನು ಮುಂದಿಟ್ಟಿರುವನು. ಇದು ಪ್ರಾಯಶಃ ಪಂಚತಂತ್ರದ ಒಂದು ಕತೆಯಾಗಿದ್ದೀತು. ಆದರೆ, ನ್ಯಾಯಯುತ ಮತ್ತು ಸಮರ್ಥನೀಯ ಉದ್ದೇಶಕ್ಕಾಗಿ ಬಂಗಾಲದ ಆಸ್ಥಾನದಲ್ಲಿ ಮಂತ್ರಿಗಳ ನಿಸ್ವಾರ್ಥ ಹಾಗೂ ನಿರ್ಭಯ ದಿವ್ಯ ಆದರ್ಶವೊಂದು ಜರುಗಿತು. ರಾಜಾ ಲಕ್ಷ್ಮಣಸೇನನ ಒಡ್ಡೋಲಗದಲ್ಲಿ ಆಸ್ಥಾನಿಕನಾಗಿದ್ದ ಗೋವಿಂದಾಚಾರ್ಯನು ಅದನ್ನು ಹೇಳಿರುವನು. ಆ ಅಮಾತ್ಯನು ಹೆದರದೆ ಅರಸನು ನ್ಯಾಯೋಲ್ಲಂಘನೆ ಮಾಡುವುದನ್ನು ತಪ್ಪಿಸಲು

ಪ್ರಯತ್ನಿಸಿದನು. ಪ್ರಾಚೀನ ಪಂಡಿತರ ಧರ್ಮಗ್ರಂಥಗಳು ವಿಧಿಸಿದ ನೀತಿಮಾರ್ಗವನ್ನು ಅನುಸರಿಸಬೇಕೆಂದು ಅರಸನನ್ನು ಒತ್ತಾಯಿಸಿದನು.

ನೀತಿನಿಯಮಗಳಿಗೆ ಕ್ಯಾರೆ ಅನ್ನದ ಸ್ವಾರ್ಥಿ ಮತ್ತು ದುರಾಸೆಯ ಸರಕಾರಿ ಸೇವಕರಿಗೆ ಈ ಉದಾಹರಣೆ ನೀತಿಪಾಠವೊಂದನ್ನು ಬೋಧಿಸುತ್ತದೆ. ಇಂಥ ನಿಸ್ವಾರ್ಥ ಮನೋಧರ್ಮ ನಿಜಕ್ಕೂ ದೇಶವನ್ನು ನೈತಿಕ ವಿನಾಶದಿಂದ ಸಂರಕ್ಷಿಸುತ್ತದೆ.

ಪ್ರಸಕ್ತ ಪುಸ್ತಕದ ಕೆಲ ಭಾಗಗಳು ತಿರಿಷ ದಿನಪತ್ರಿಕೆಯಲ್ಲಿ (ಸಂಚಿಕೆ ೨, ೨೫ ಬೈಸಾಖಿ, ೧೪೦೧ನೆಯ ವರ್ಷ) ಪ್ರಕಟಗೊಂಡಿವೆ. ಮೇಲಾಗಿ, ಅದನ್ನು ಅಖಿಲ ಭಾರತ ಇತಿಹಾಸ ಅಧಿವೇಶನ ಮತ್ತು ಅಂತಾರಾಷ್ಟ್ರೀಯ ಸಂಸ್ಕೃತ ಅಧಿವೇಶನಗಳಲ್ಲಿ ಚರ್ಚಿಸಲಾಗಿದೆ.

೧೪೦೦ನೆಯ ವರ್ಷದ ಆರಂಭದಲ್ಲಿ ತಿರಿಷ ಪತ್ರಿಕೆಯ ಸಂಪಾದಕಿ ಕೆಲವು ಲೇಖನಗಳನ್ನು ಕೊಡುವಂತೆ ಪ್ರಸಕ್ತ ಲೇಖಕನನ್ನು ಕೇಳಿಕೊಂಡಳು. ಹಿಮಾಚಲಪ್ರದೇಶ ರಾಜ್ಯದಲ್ಲಿ ದೊರೆತ ಬಂಗಾಲಿ ಹಸ್ತಪ್ರತಿಗಳ ಸಂರಕ್ಷಣೆ ಕುರಿತ ಲೇಖನವೊಂದನ್ನು ಕೊಟ್ಟಾಗ ಅವಳು ಸಮಾಜದ ಗಣ್ಯರಿಗೆ ಆ ವಿಷಯವನ್ನು ತಕ್ಷಣ ಪ್ರಸಾರಿಸುವ ಆತುರ ತೋರಿದಳು. ಇಂಥ ಅತಿ ಮಹತ್ವದ ಐತಿಹಾಸಿಕ ಮಾಹಿತಿಯನ್ನು ತುರ್ತಾಗಿ ಪ್ರಸಾರಿಸುವ ಜರೂರು ಇರುತ್ತದೆ. ತಿರಿಷ ಪತ್ರಿಕೆಯ ಸಂಪಾದಕಿ ಆ ಲೇಖನವನ್ನು ಪ್ರಕಟಿಸುವುದಾಗಿಯೂ ಹಿಮಾಚಲಪ್ರದೇಶ ರಾಜ್ಯದಲ್ಲಿ ದರಕಾರವಿಲ್ಲದೆ ಬಿದ್ದಿರುವ ಬಂಗಾಲದ ಐತಿಹಾಸಿಕ ಆಸ್ತಿಗಳ ಸಂರಕ್ಷಣೆಗಾಗಿ ತನ್ನ ಪತ್ರಿಕೆಯ ಮೂಲಕ ಒಂದು ಚಳುವಳಿಯನ್ನು ಆರಂಭಿಸುವುದಾಗಿಯೂ ಭರವಸೆಯಿತ್ತಳು. ಈ ಲೇಖಕನು ಈಗಾಗಲೇ ಪ್ರಕಟಣೆಗಾಗಿ ಒಪ್ಪಿಸಿದ್ದ ಹಸ್ತಪ್ರತಿಯ ಒಂದು ಭಾಗವನ್ನು ತಿರಿಷದ ಸಂಪಾದಕಿಗೆ ನೀಡುವಂತೆ ತನ್ನ ಪ್ರಕಾಶಕನನ್ನು ಕೇಳಿಕೊಂಡನು. ಹಾಗೂ ಬಂಗಾಲಿ ಲಿಪಿಯಲ್ಲಿ ಬರೆಯಲಾಗಿದ್ದ ಎರಡು ಸಂಸ್ಕೃತ ಹಸ್ತಪ್ರತಿಗಳ ಯಥಾಪ್ರತಿಗಳನ್ನು ನೀಡಲೂ ಕೇಳಿಕೊಂಡನು. ತಿರಿಷ ಪತ್ರಿಕೆಯ ಸಂಪಾದಕಿ ಸಂತೋಷದಿಂದ ಅದನ್ನು ತೆಗೆದುಕೊಂಡಳು. ಆದರೆ, ದುರದೃಷ್ಟವಶಾತ್ ಏನೂ ಕಾರಣವಿಲ್ಲದೆ ಆ ಲೇಖನದ ಪ್ರಕಟಣೆಯನ್ನು ತಡಮಾಡಿದಳು. ತರುವಾಯದಲ್ಲಿ ೧೪೦೦ನೆಯ ವರ್ಷದಲ್ಲಿ ಹಸ್ತಪ್ರತಿಯ ಭಾಗವೊಂದನ್ನು ಎಂಥ ಕೆಟ್ಟ ರೂಪದಲ್ಲಿ ಪ್ರಕಟಿಸಿದಳೆಂದರೆ ಆ ಗ್ರಂಥದ ವಿಷಯವಸ್ತುವನ್ನು ಸ್ಪಷ್ಟವಾಗಿ ಗ್ರಹಿಸಲು ಸಾಧ್ಯವಾಗಲಿಲ್ಲ. ಬಂಗಾಲಿ ಲಿಪಿಯಲ್ಲಿ ಬರೆಯಲಾಗಿದ್ದ ಸಂಸ್ಕೃತ ಹಸ್ತಪ್ರತಿಯ ಪುಟಗಳ ಯಥಾಪ್ರತಿಯನ್ನೂ ಪ್ರಕಟಿಸಲಿಲ್ಲ. ಹೀಗಾಗಿ, ಆ ಲೇಖನದ ಪ್ರಕಟಣೆಯ ಮೂಲ ಉದ್ದೇಶ ವಿಫಲವಾಯಿತು.

ಬೇಸರಗೊಂಡು ಪ್ರಸಕ್ತ ಲೇಖಕನು ಆ ಹಸ್ತಪ್ರತಿಗಳನ್ನು ಮತ್ತು ಯಥಾಪ್ರತಿಗಳನ್ನು ಹಿಂತಿರುಗಿಸುವಂತೆ ಸಂಪಾದಕಿಯನ್ನು ವಿನಂತಿಸಿದನು. ಆದರೆ, ದುರಾದೃಷ್ಟವೆಂದರೆ, ಪ್ರತಿ ಸಲವೂ ಆಕೆ ನುಣುಚಿಕೊಂಡಳು. ಭವಿಷ್ಯದಲ್ಲೊಮ್ಮೆ ಆಸಕ್ತ ಸಂಶೋಧಕರು ಈ ನಿಗೂಢ ವಿಲಂಬದ ಬಗೆಗೆ ಶೋಧ ಕ್ರಮ ಕೈಗೊಳ್ಳಬಹುದು.

ಪ್ರಸಕ್ತ ಗ್ರಂಥಕರ್ತನು ಈಗ ನಿವೃತ್ತನಾಗಿರುವನು. ಅವನು ಕ್ರಿ.ಶ. ೧೯೯೧ರವರೆಗೆ ೧೩ ವರ್ಷ ಮಾನವ ಸಂಪನ್ಮೂಲ ಸಚಿವಾಲಯದ ಪ್ರಾದೇಶಿಕ ಸಲಹೆಗಾರನಾಗಿ ದುಡಿದನು. ಡಿಸೆಂಬರ

೧೯೬೨ರಲ್ಲಿ ಕೇಂದ್ರ ಆಡಳಿತ ಮಂಡಳಿ ಆಜ್ಞೆ ಹೊರಡಿಸಿದರೂ ಇಲಾಖಾಧಿಕಾರಿಗಳು ಪ್ರಸಕ್ತ ಗ್ರಂಥಕರ್ತನ ನಿವೃತ್ತಿವೇತನ ಮತ್ತು ಇತರ ಸೌಲಭ್ಯಗಳನ್ನು ಬಿಡುಗಡೆ ಮಾಡಲಿಲ್ಲ. ತತ್ಪರಿಣಾಮವಾಗಿ, ಅವನ ಸೃಜನ ಪ್ರತಿಭೆ ಕಂಸನ ಕ್ರೂರ ಸೆರೆಮನೆದಲ್ಲೆಂಬಂತೆ ಬಂಧಿತವಾಯಿತು. ಕಂಸನ ಸೆರೆಮನೆಯಲ್ಲಿ ಒಂದಾದ ಮೇಲೊಂದರಂತೆ ದೇವಕಿಯ ಕೂಸುಗಳು ಕೊಲ್ಲಲ್ಪಟ್ಟಂತೆ, ರಾಷ್ಟ್ರಗಳ ನಡುವಣ ಉತ್ತಮ ತಿಳುವಳಿಕೆಯ ಬೆಳವಣಿಗೆಗಾಗಿ ಸಂಯಮ ಮತ್ತು ಸೌಹಾರ್ದ ವರ್ಧನೆಗಾಗಿ ಬರೆದ ಗ್ರಂಥಗಳ ಹಸ್ತಪ್ರತಿಗಳು ಅಕಾಲಿಕ ಮರಣವನ್ನಪ್ಪಿದವು. ಪ್ರಸಕ್ತ ಹಸ್ತಪ್ರತಿಗಳು ಶ್ರೀಕೃಷ್ಣನಂತೆ ಕಂಸನ ಸೆರೆಮನೆ ಗೋಡೆಗಳನ್ನು ಒಡೆದವಾದರೂ ಪುನಃ ಪುನಃ ಅವು ಪೂತನಿಯ ಕಟಿಮುಷ್ಟಿಯಲ್ಲಿ ಸಿಲುಕಿದವು.

ಕುಮಾರಿ ಮೋನಿಷಾ ಸಿನ್ಹಾಳ ಪ್ರಾಮಾಣಿಕ ಪ್ರಯತ್ನಗಳಿಂದಾಗಿ ಅಂತೂ ಕೊನೆಗೆ ಪ್ರಸಕ್ತ ಪುಸ್ತಕ ಬೆಳಕು ಕಂಡಿತು. ಅವಳು ಅದನ್ನು ಸಂಪಾದಿಸಿದ್ದಲ್ಲದೆ ದೀಪಂಕರ ಚಕ್ರವರ್ತಿ ಅವರೊಡಗೂಡಿ ಸೂಚಿಯನ್ನು ಸಿದ್ಧಪಡಿಸಿದಳು. ಮುದ್ರಣ ಪ್ರಕ್ರಿಯೆಯಲ್ಲಿ ದೀಪಂಕರರು ಡಿ.ಟಿ.ಪಿ. ಕೇಂದ್ರ, ಮುದ್ರಣಾಲಯಗಳೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡು ಗ್ರಂಥದ ಪ್ರಕಟಣೆಯ ಮೇಲ್ವಿಚಾರಣೆ ವಹಿಸಿಕೊಂಡರು. ಡಿ.ಟಿ.ಪಿ. ಮಾಡಿದ ದಿಬ್ಯೇಂದು ನಂದಿ ಅವರಿಗೆ ಅಭಿನಂದನೆಗಳು.

ನನ್ನ ಯೋಜನೆಯನ್ನು ಪೂರ್ತಿಗೊಳಿಸುವಲ್ಲಿ ನಿಹಾರ ರಂಜನ ರೇ, ಪ್ರೊ. ಮನಮೋಹನ ಮತ್ತು ನನ್ನ ಗೌರವಾನ್ವಿತ ಪೂರ್ವಸೂರಿಗಳ ಕೃತಿಗಳು ಬಲು ಸಹಾಯಕವಾಗಿವೆ. ಅವರಿಗೆ ನನ್ನ ಕೃತಜ್ಞತೆಗಳು. ಸ್ಥಾನಿಕ ಪಂಡಿತರನ್ನು ಅದರಲ್ಲೂ ಕುಂವರ ಕಾಶ್ಮೀರ ಸಿಂಗ್‌ರನ್ನು ಪರಿಚಯಿಸಿದ ರಾಜಾ ಅಶೋಕ ಪಾಲ ಸೇನರಿಗೆ ಕೃತಜ್ಞತೆಗಳು. ವಂಶಾವಳಿಯೊಂದನ್ನು ಅದೇ ವಂಶದ ಇನ್ನೋರ್ವ ಅರಸ ಸಂತ್‌ಸಿಂಗ್‌ನು ಮಂಡಿಯಾಲಿ ಭಾಷೆಯಲ್ಲಿ ಬರೆದ ಸೇನ ಅರಸರ ಕಾಲಾನುಕ್ರಮಣಿಕೆಯನ್ನೂ ನನಗೆ ಕುಂವರ ಕಾಶ್ಮೀರ ಸಿಂಗ್ ಒದಗಿಸಿದರು.

ಹಿಮಾಚಲ ಲೋಕ ಸಂಸ್ಕೃತಿ ಸಂಸ್ಥಾನದ ಚಂದ್ರಮಣಿ ಕಶ್ಯಪರಿಗೆ ನಾನು ಋಣಿ. ಅವರು ವರ್ಗೀಕರಣಕ್ಕೋಸುಗ ನನಗೆ ಒದಗಿಸಿದ ಕೆಲವು ಪ್ರಾಚೀನ ಹಸ್ತಪ್ರತಿಗಳ ಭಾಷೆ ಸಂಸ್ಕೃತವಾಗಿದ್ದರೂ ಅವನ್ನು ಬಂಗಾಲಿ ಲಿಪಿಯಲ್ಲಿ ಬರೆಯಲಾಗಿತ್ತು. ಹಿಮಾಚಲಪ್ರದೇಶದ ಸೇನ ವಂಶವು ಬಂಗಾಲದೊಂದಿಗೆ ಹೊಂದಿದ್ದ ಸಂಬಂಧಕ್ಕೆ ಖಚಿತ ಪ್ರಮಾಣವೆಂದು ಅವನ್ನು ಉಲ್ಲೇಖಿಸಿರುವೆ.

ಕನ್ನಡ ಭಾಷೆಯಲ್ಲಿ ಕರ್ನಾಟಕ ಸರಕಾರದ ಪ್ರಕಟಣೆಯಾದ **ಕರ್ನಾಟಕ ಪರಂಪರೆ, ಸಂಪುಟ ೧** ರಲ್ಲಿ ಪ್ರಕಟವಾದ ತಮ್ಮ ಲೇಖನದ ಪ್ರತಿಯನ್ನು ನೀಡಿದ ಡಾ. ಸೂರ್ಯನಾಥ ಕಾಮತರಿಗೆ ಕೃತಜ್ಞತೆಗಳು. ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ಸ್ನಾತಕೋತ್ತರ ವಿಭಾಗದ ಡಾ. ಮೀರಾ ಚಕ್ರವರ್ತಿ ಅವರು ಡಾ. ಕಾಮತ ಅವರ ಲೇಖನವನ್ನು ಅನುವಾದಿಸಿ ಕೊಟ್ಟುದಕ್ಕೆ ಧನ್ಯವಾದಗಳು. ಅದನ್ನು ಇಲ್ಲಿ ಮರುಪ್ರಕಟಿಸಲಾಗಿದೆ.

ಮಾಂಡಿಯ ಪ್ರಸಿದ್ಧ ಪಂಡಿತ ಡಾ. ಮಂತ್ರಿಣಿ ಪ್ರಸಾದ ಅವರು ವಿಶ್ವ ಸಂಸ್ಕೃತ ಸಮ್ಮೇಳನದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನನ್ನೊಟ್ಟಿಗೆ ಇದ್ದಾಗ ಹಸ್ತಪ್ರತಿಗಳ ಬಹುಭಾಗವನ್ನು ಪರಿಶೀಲಿಸಿದ್ದಕ್ಕೆ ಧನ್ಯವಾದಗಳು. ಅವರು ನನ್ನ ಈ ಕೆಲಸವನ್ನು ಮೆಚ್ಚಿಕೊಂಡು ಪ್ರೋತ್ಸಾಹ

ನೀಡಿದರು. ಮೂಲತಃ ಧರ್ಮಶಾಲಾದವರಿದ್ದು ಕೋಲ್ಕತಾದಲ್ಲಿ ವಾಸವಾಗಿರುವ ಎಚ್.ಎಂ.ಕೆ. ಪುರಿ ಅವರಿಗೆ ಕೃತಜ್ಞತೆಗಳು. ಅವರ ಸಹಾಯದಿಂದ ನಾನು ಮಾಂಡಿಯಿಂದ ತಂದಿದ್ದ ಸಂತ್‌ಸಿಂಗ್‌ನು ಮಂಡಿಯಾಲಿ ಭಾಷೆಯಲ್ಲಿ ರಚಿಸಿದ್ದ ವಂಶಾವಳಿಯನ್ನು ಓದಿದೆ. ಅವರು ಹಿಮಾಚಲಪ್ರದೇಶದ ಮೇಲೆ ನನ್ನ ಸಂಶೋಧನೆಯಲ್ಲೂ ಸಾಮಾನ್ಯತಃ ಸಹಾಯ, ಮಾರ್ಗದರ್ಶನ ನೀಡಿದರು.

ತನ್ನನ್ನು ಆಧುನಿಕ ಶೈಲಿಯ ವ್ಯವಸ್ಥಾಪಕನೆಂದು ಪರಿಚಯಿಸಿಕೊಂಡ ಟಿಕ್ಕಾ ಉಮೇಶ್ವರ ಸಿಂಗ್‌ರೊಂದಿಗಿನ ಭೇಟಿ ಬಹಳ ಸಂತೋಷ ನೀಡಿತು. ಅವರು ಸೇನ ಅರಸ ಮನೆತನದ ಯುವಕ. ಪುಣೆಯಲ್ಲಿ ವಾಣಿಜ್ಯ ವಿಷಯದಲ್ಲಿ ಸ್ನಾತಕೋತ್ತರ ಅಭ್ಯಾಸ ಪೂರ್ಣಗೊಳಿಸಿ ತಮ್ಮ ಮನೆತನದ ಭೂಮಿಕಾಣಿ ಮತ್ತು ವ್ಯಾಪಾರ ವಹಿವಾಟುಗಳನ್ನು ನೋಡಿಕೊಳ್ಳಲು ಮಾಂಡಿಗೆ ವಾಪಸಾಗಿದ್ದರು. ಆದರೆ, ಪ್ರಕಾಂಡ ಪಂಡಿತರಾಗಿದ್ದ ಬಲ್ಲಾಳಸೇನ ಮತ್ತು ಲಕ್ಷ್ಮಣಸೇನರ ವಂಶಜನಾದ ಈ ಯುವ ಅರಸ ಪಾಶ್ಚಿಮಾತ್ಯ ಅರ್ಥದಲ್ಲಿ ಆಧುನಿಕ ಶೈಲಿಯ ವ್ಯವಸ್ಥಾಪಕನಿಗಿಂತ ಮಿಗಿಲು. ಅವರಿಗೆ ಮನುಷ್ಯರೆಂದರೆ ಪ್ರಚೋದನೆ-ಪ್ರತಿಕ್ರಿಯೆಗಳ ಕಂತೆ; ಆನ್ವಯಿಕ ನರವೈಜ್ಞಾನಿಕ ಪುಸ್ತಕದಲ್ಲಿಯಂತೆ ವ್ಯಾಖ್ಯಾನಿಸಬಹುದಾದವರು. ಭಾರತೀಯ ಪರಿಕಲ್ಪನೆಗಳಾದ ಧ್ಯಾನ ಮತ್ತು ಯೋಗ, 'ಹರಗ್ಯೆ' ವಿಧಾನದ ಜಪಾನಿ ನಿರ್ವಹಣೆ ಕಲೆ ಮತ್ತು 'ರೈಕಿ' ರೋಗನಿದಾನ ಕಲೆಗಳಲ್ಲಿ ಆಳವಾಗಿ ಮುಳುಗಿದವರು ಟಿಕ್ಕಾ. ಅನುಭವ ಪಡೆಯಲೋಸುಗ ಪುಣೆಯಲ್ಲಿ ಕಟ್ಟಡ ನಿರ್ಮಾಣದ ನಿವೇಶನ ಮತ್ತು ಯೋಜನೆಗಳ ಮೇಲ್ವಿಚಾರಣೆ ಮಾಡುವಾಗ ವಸತಿಗೃಹಗಳ ವಿನ್ಯಾಸ ಮತ್ತು ದೃಷ್ಟಿಕೋನವಾದ ವಾಸ್ತುವಿದ್ಯೆಯಲ್ಲಿ ಆಸಕ್ತಿ ಮತ್ತು ತಿಳುವಳಿಕೆ ಬೆಳೆಸಿಕೊಂಡವರು. ನನ್ನ ಕಾರ್ಯದಲ್ಲಿ ಮಾಂಡಿಯ ವಲಯ ಆಯುಕ್ತರಾಗಿದ್ದ ಎಸ್. ರಾಯ್ ಅವರೊಂದಿಗೆ ಚರ್ಚಿಸಿ ಒಂದಿಷ್ಟು ಭರವಸೆ ಮತ್ತು ಸಹಯೋಗದ ಪ್ರಸ್ತಾವನೆ ಪಡೆದೆ. ವಿಶೇಷತಃ ವಿವಿಧ ವಂಶಾವಳಿಗಳು, ದೇವಾಲಯಗಳು, ಶಾಸನಗಳು ಮತ್ತಿತರ ಮೂಲಗಳಿಂದ ದೊರೆತ ದಿನಾಂಕಗಳನ್ನು ಸರಿಪಡಿಸುವಲ್ಲಿ. ಅದಕ್ಕಾಗಿ ಅವರಿಗೆ ನಾನು ಕೃತಜ್ಞ.

ವರ್ಣಚಿತ್ರಗಳು ಮತ್ತು ಉತ್ಕೃಷ್ಟ ಮುಖಪುಟ ಮುದ್ರಿಸಿದ ಎಸ್.ಕೆ.ಗೋಸೇನ್ ಆ್ಯಂಡ ಕಂಪನಿ ಪ್ರೈವೇಟ್ ಲಿಮಿಟೆಡ್‌ಗೆ, ವಿಶೇಷತಃ ಆಶಿಮ್ ಗಂಗೂಲಿ ಅವರಿಗೆ ಮತ್ತು ಮುಖಪುಟದ ಮೇಲಿನ ಸುವರ್ಣ ಅಚ್ಚೊತ್ತಿಗಾಗಿ ಲಾರೆನ್ಸ್ ಆ್ಯಂಡ ಪ್ರಿಂಟರ್ಸ್‌ನ ಬಿಸ್ವಮಯ್ ಮುಖರ್ಜಿ ಅವರಿಗೆ ಕೃತಜ್ಞತೆಗಳು.

ಭಾರತ ಸರಕಾರದ ಮಾನವ ಸಂಪನ್ಮೂಲ ಸಚಿವಾಲಯದ ಸಂಸ್ಕೃತಿ ಇಲಾಖೆಗೆ ಧನ್ಯವಾದಗಳು. ಅವರ ಸಕಾಲಿಕ ಅನುದಾನ ಪ್ರಸಕ್ತ ಪುಸ್ತಕದ ಪ್ರಕಟಣೆಯನ್ನು ಸಾಧ್ಯಗೊಳಿಸಿದೆ.

ಕೋಲ್ಕತಾ: ವಿಜಯ ದಶಮಿ
ಅಕ್ಟೋಬರ ೨೦, ೧೯೯೬ ಬಲರಾಮ ಚಕ್ರವರ್ತಿ

## ಅನುವಾದಕನ ನುಡಿ

ಇತ್ತೀಚಿನ ದಿನಮಾನಗಳಲ್ಲಿ ಭಾಷಾಂತರ ಒಂದು ಮಹತ್ವದ ಸಾಹಿತ್ಯಪ್ರಕಾರವಾಗಿ ಬೆಳೆಯುತ್ತಿದೆ. ಭಾಷಾಂತರ ಎರಡು ಭಾಷೆಗಳ ನಡುವಣ ಕೊಡುಕೊಳೆ. ಎರಡು ಸಂಸ್ಕೃತಿಗಳ ನಡುವಣ ಕೊಡುಕೊಳೆ ಕೂಡ. ಕೀರ್ತಿನಾಥ ಕುರ್ತಕೋಟಿ ಅವರ ಮಾತಿನಲ್ಲಿ ಹೇಳುವುದಾದರೆ, ಭಾಷಾಂತರ ಒಂದು ಮನೆತನದ ಹೆಣ್ಣುಮಗಳನ್ನು ಇನ್ನೊಂದು ಪ್ರದೇಶ ಯಾ ದೇಶದ ಮನೆತನಕ್ಕೆ ಮದುವೆ ಮಾಡಿಕೊಟ್ಟಂತೆ. ಅವಳು ತನ್ನ ತವರು ಮನೆಯ ಸಂಸ್ಕೃತಿಯನ್ನು ಗಂಡನ ಮನೆಯ ಸಂಸ್ಕೃತಿಯೊಂದಿಗೆ ಹಂಚಿಕೊಂಡಂತೆ.

ಪ್ರಗತಿಶೀಲ, ಪರಿವರ್ತನಶೀಲ ಜಗತ್ತಿನಲ್ಲಿ ಭಾಷಾಂತರದ ಮಹತ್ವ ಅಷ್ಟಿಷ್ಟಲ್ಲ. *ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ* (ಉದಾತ್ತ ವಿಚಾರಗಳು ವಿಶ್ವದ ಎಲ್ಲಿಂದಲೂ ಬರಲಿ) ಎಂಬುದು ಭಾರತೀಯ ಆದರ್ಶ. ನಮ್ಮಲ್ಲಿಲ್ಲದುದನ್ನು ಆಮದು ಮಾಡಿಕೊಳ್ಳಲು ಭಾಷಾಂತರವೇ ಮಾಧ್ಯಮ. ಹೊಸಗಾಳಿ, ಬೆಳಕಿಗೆ ಆದುವೆ ಕನಕನ ಕಿಂಡಿ. ಇಂಗ್ಲಿಷು ಅಷ್ಟೊಂದು ಸಮೃದ್ಧ ಭಾಷೆಯಾಗಿ ಬೆಳೆಯಲು ಅದು ಏನೆಲ್ಲ ಭಾಷೆಗಳಿಂದ ಎರವಲು ಪಡೆದಿರುವುದೆ ಕಾರಣ. ಕನ್ನಡವೂ ಅದಕ್ಕಾಗಿ ಬಾಗಿಲು ತೆರೆದು ನಿಂತಿದೆ. ಕನ್ನಡದಲ್ಲೂ ಅನುವಾದ ಸಾಹಿತ್ಯ ಹುಲುಸಾಗಿ ಬೆಳೆಯುತ್ತಿದೆ.

ಮೂಲ ಕೃತಿ ಸೃಷ್ಟಿ.ಅನುವಾದ ಪುನರ್‌ಸೃಷ್ಟಿ ಯಾ ಅನುಸೃಷ್ಟಿ. ಅನುಸೃಷ್ಟಿ ಎನ್ನುವುದೆ ಲೇಸು. ಏಕೆಂದರೆ, ಪುನರ್‌ಸೃಷ್ಟಿ ಎಂದಾಕ್ಷಣ ವಿಶ್ವಾಮಿತ್ರನ ತ್ರಿಶಂಕು ಸ್ವರ್ಗ ಕಣ್ಣೆದುರು ನಿಲ್ಲುತ್ತದೆ. ಭಾಷಾಂತರವು ಉದ್ದಿಷ್ಟ ಭಾಷೆಯಲ್ಲೂ ಸಲ್ಲಬೇಕು. ಅಂದಾಗಲೆ ಅದು ಸಾರ್ಥಕ.

ಡಾ.ಎಂ.ಎಂ. ಕಲಬುರ್ಗಿ ಅವರ ಪ್ರೀತಿಯ ಒತ್ತಾಸೆ ಕಾರಣವಾಗಿ ೨೦೦೨ರಲ್ಲಿ Mithila Under The Karnatas ಕೃತಿಯನ್ನು ಮಿಥಿಲೆಯನ್ನಾಳಿದ ಕರ್ನಾಟರು ಎಂದು ಕನ್ನಡದಲ್ಲಿ ಅನುವಾದಿಸಿದೆ. ಅದನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊರನಾಡ ಕನ್ನಡ ಸಂಸ್ಕೃತಿ ಮಾಲೆ ಆರಂಭಿಸಿ ಮೊದಲ ಪುಷ್ಪವಾಗಿ ಪ್ರಕಟಿಸಿತು. ಒಂದೇ ಪುಷ್ಪದಿಂದ ಮಾಲೆಯಾಗದು. ಅದಕ್ಕಿನ್ನೊಂದು ಪುಷ್ಪ

ಸೇರಿಸುವ ಪ್ರಯತ್ನ The Sens of Himachal ಕೃತಿಯ ಹಿಮಾಚಲವನ್ನಾಳಿದ ಕರ್ನಾಟ ಸೇನರು ಎಂಬ ಕನ್ನಡಾನುವಾದ. ಸೇನರು ಕರ್ನಾಟಕ ಮೂಲದವರಾಗಿದ್ದು ದೂರದ ಬಂಗಾಲ, ಹಿಮಾಚಲಪ್ರದೇಶ, ಪಂಜಾಬಗಳನ್ನಾಳಿದ ಸಾಹಸಿಗರು. ಈ ಬಗೆಗಿನ ಇನ್ನಷ್ಟು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸುವಾಸೆ.

ಹಿಮಾಚಲವನ್ನಾಳಿದ ಸೇನರು ಕೂಡ ಸನ್ಮಿತ್ರ ಡಾ.ಎಂ.ಎಂ. ಕಲಬುರ್ಗಿ ಅವರ ಆಗ್ರಹದ ಫಲ. ಅವರು ಪುಣೆಗೆ ಮಗನಲ್ಲಿಗೆ ಹೋದಾಗ ಅಲ್ಲಿಯ ಗ್ರಂಥಾಲಯಗಳಲ್ಲಿ ಜಾಲಾಡಿ ಡಾ.ಬಿ. ಚಕ್ರವರ್ತಿ ಬರೆದ The Sens of Himachal ವನ್ನು ಜೆರಾಕ್ಸ್ ಮಾಡಿಸಿಕೊಂಡು ಬಂದು ನನ್ನ ಮುಂದೆ ಇಟ್ಟು "ಇದನ್ನೂ ಅನುವಾದ ಮಾಡಿರಿ" ಅಂದರು. ಹೊರನಾಡ ಕನ್ನಡ ಸಂಸ್ಕೃತಿ ಮಾಲೆಯಲ್ಲಿ ಸಾಧ್ಯವಿದ್ದಷ್ಟು ಪುಸ್ತಕಗಳು ಬರಬೇಕು, ಅದೆಲ್ಲ ಕನ್ನಡದ ಕೆಲಸ ಎನ್ನುವುದು ಡಾ. ಕಲಬುರ್ಗಿ ಅವರ ಸದಾಶಯ. ಕನ್ನಡ ಪುಸ್ತಕ ಪ್ರಾಧಿಕಾರವೂ ಆ ಸದಾಶಯಕ್ಕೆ ಸ್ಪಂದಿಸುತ್ತಿರುವುದು ತುಂಬಾ ಸಂತೋಷ, ಹೆಮ್ಮೆ.

ತಮ್ಮ The Sens of Himachal ಕೃತಿಯನ್ನು ಕನ್ನಡಕ್ಕೆ ಅನುವಾದಿಸಲು ಅನುಮತಿಸಿದ ಡಾ. ಬಿ. ಚಕ್ರವರ್ತಿ ಅವರಿಗೆ, ಬೆಂಬತ್ತಿ ನನ್ನಿಂದ ಅನುವಾದ ಮಾಡಿಸಿದ ಡಾ.ಎಂ.ಎಂ. ಕಲಬುರ್ಗಿ ಅವರಿಗೆ, ಹೊರತಂದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಕೃತಜ್ಞತೆಗಳು.

ಸವಿ
ಜಲದರ್ಶಿನಿಪುರ
ಧಾರವಾಡ ೫೮೦೦೦೩.

ಸದಾನಂದ ಕನವಳ್ಳಿ

# ಪರಿವಿಡಿ


| | |
|---|---|
| ◈ ಅಕ್ಷರಸೂರ್ಯನಿಗೆ ನಮನ | I |
| ◈ ಮುಮ್ಮಾತು | IV |
| ◈ ಅನುವಾದಕನ ನುಡಿ | XIII |
| ◈ ಪೀಠಿಕೆ | ೧ |
| ೧. ಕರ್ನಾಟಕದ ಸೇನವರರು | ೮ |
| ೨. ಬಂಗಾಲದ ಸೇನರು | ೧೭ |
| ೩. ಹಿಮಾಚಲಪ್ರದೇಶದ ಸೇನರು | ೨೫ |
| ೪. ಸೇನಾ ಕಾಲಾವಧಿಯಲ್ಲಿ ಹಿಮಾಚಲಪ್ರದೇಶದ ದೇವತೆಗಳು | ೪೭ |
| ೫. ಕಾಳಿಕಾ ದೇವತೆಯ ಮೂಲ ಪ್ರತಿಮಾಶಾಸ್ತ್ರ ಮತ್ತು ಹಿಮಾಚಲಪ್ರದೇಶದಲ್ಲಿ ಪ್ರಸರಣ | ೫೪ |
| ◈ ಉಪಸಂಹಾರ | ೬೬ |


## ಅನುಬಂಧಗಳು


| | |
|---|---|
| ಅನುಬಂಧ 'ಅ' | ೬೯ |
| ಅನುಬಂಧ 'ಬ' | ೭೪ |
| ಅನುಬಂಧ 'ಕ' | ೭೬ |
| ಅನುಬಂಧ 'ಡ' | ೮೧ |
| ಅನುಬಂಧ 'ಇ' | ೮೭ |
| ಅನುಬಂಧ 'ಫ' | ೯೦ |
| ಅನುಬಂಧ 'ಗ' | ೯೯ |
| ◈ Letter to Secretory, Asiatic Society | ೧೦೬ |
| ◈ ಸೇನವರರು | ೧೦೯ |
| ◈ ಗ್ರಂಥ ಋಣ | ೧೧೧ |

# ಹಿಮಾಚಲವನ್ನಾಳಿದ
# ಕರ್ನಾಟ ಸೇನರು

# ಪೀಠಿಕೆ

ಭಾರತದಲ್ಲಿ ರಾಜವಂಶಗಳ ಮತ್ತು ಅವುಗಳ ರಾಜರ ಚರಿತ್ರೆಕಾರರು ಸಾಮಾನ್ಯವಾಗಿ ಅವರು ಮಹಾಭಾರತ ಯುದ್ಧದಲ್ಲಿ ಪಾಲ್ಗೊಂಡಿದ್ದನ್ನು ಉಲ್ಲೇಖಿಸುವರು. ಆ ಮಹಾಯುದ್ಧದಲ್ಲಿ ಅವರ ಸಾಧನೆಗಳು ಅವರನ್ನು ಭಾರತೀಯರೆಂದು ಹಾಗೂ ಕ್ಷಾತ್ರಧರ್ಮ ಪರಿಪಾಲಕ ಕ್ಷತ್ರಿಯರೆಂದು ಅನನ್ಯೀಕರಿಸುತ್ತವೆ. ತಮ್ಮ ಪ್ರಾಣಗಳನ್ನು ತಮ್ಮ ರಾಜನಿಗಾಗಿ ಮತ್ತು ದೇಶಕ್ಕಾಗಿ ತ್ಯಾಗಮಾಡುವುದು ಮತ್ತು ಧರ್ಮರಾಜ್ಯ ಸ್ಥಾಪಿಸುವುದು ಕ್ಷಾತ್ರಧರ್ಮದ ವೌಲ್ಯಗಳಲ್ಲೊಂದಾಗಿತ್ತು. ಧರ್ಮರಾಜ್ಯವೆಂದರೆ ವರ್ಣಾಶ್ರಮ ಪಾಲನೆಯೇ ಆಗಿತ್ತು.

### ಗ್ರೀಕ ರಾಜವಂಶಗಳನ್ನು ಗುರುತಿಸುವ ಗ್ರಂಥಗಳಾಗಿ ಈಲಿಯಡ್ ಮತ್ತು ಒಡಿಸ್ಸಿ

ಗ್ರೀಸದಲ್ಲೂ ಇಂಥದೇ ಪದ್ಧತಿಯಿತ್ತು. ರಾಜರ ಭವ್ಯತೆ ಮತ್ತು ಅನನ್ಯತೆಯನ್ನು ಸ್ಥಾಪಿಸಲೋಸುಗ ಅವರು ಟ್ರಾಯ್ ಯುದ್ಧದಲ್ಲಿ ಪಾಲ್ಗೊಂಡುದನ್ನೂ ಸಾದೃಶ ಧರ್ಮರಾಜ್ಯ ಸ್ಥಾಪಿಸಲೋಸುಗ ಆ

ಯುದ್ಧದಲ್ಲಿ ಅವರು ಗೈದ ಸಾಧನೆಯನ್ನೂ ಉಲ್ಲೇಖಿಸುತ್ತಾರೆ. ಹೀಗೆ ಟ್ರೋಜನ್ ಯುದ್ಧದಲ್ಲಿ ಅವರು ಮೆರೆದ ಧೈರ್ಯ ಸಾಹಸಗಳು ಒಟ್ಟುಗೂಡಿ ಗ್ರೀಸದ ಪ್ರಾಚೀನ ಅರಸರ ಮತ್ತು ರಾಜವಂಶಗಳ ಸರ್ವಸಾಮಾನ್ಯ ಗ್ರೀಕ ಪರಂಪರೆಯನ್ನು ನಿರ್ಮಿಸಿವೆ. ಇದೆಲ್ಲವೂ ಗ್ರೀಕ ಜನರನ್ನು ಒಂದು ಜನಾಂಗವಾಗಿ, ರಾಷ್ಟ್ರವಾಗಿ ಒಗ್ಗೂಡಿಸಿದೆ. ಅಂತೆಯೆ, ಮಹಾಭಾರತದಲ್ಲಿ ಭಾರತೀಯ ರಾಜವಂಶಗಳ ಪ್ರಾಚೀನ ಅರಸರು ಮತ್ತು ವೀರಯೋಧರ ಉಲ್ಲೇಖ ಮತ್ತು ಕುರುಕ್ಷೇತ್ರ ಯುದ್ಧದಲ್ಲಿ ಅವರು ಮೆರೆದ ಕ್ಷಾತ್ರಮೌಲ್ಯಗಳು ಹಾಗೂ ಶೌರ್ಯದ ಉಲ್ಲೇಖಗಳಿಂದಾಗಿ ಭಾರತದ ರಾಜವಂಶಗಳ ಭಾರತೀಯ ಪರಂಪರೆಗೆ ಒಂದು ದಿವ್ಯತೆ ಪ್ರಾಪ್ತವಾಗಿದೆ. ಹಾಗೆಯೆ, ಭಾರತೀಯ ಜನಾಂಗ ಒಂದು ರಾಷ್ಟ್ರವಾಗಿ ಬೆಸೆದಿದೆ.

## ಮಹಾಭಾರತದಲ್ಲಿ ದಾಖಲೆಗೊಂಡುದು ಭಾರತೀಯ ರಾಜವಂಶಗಳಿಗೆ ಅನನ್ಯತೆ ಮತ್ತು ಘನತೆ ಒದಗಿಸಿದೆ

ಸಂಸ್ಕೃತ ಚರಿತ್ರೆಕಾರರು ಉತ್ತರ ಮತ್ತು ದಕ್ಷಿಣ ಭಾರತಗಳೆರಡರಲ್ಲೂ ಭಾರತೀಯ ರಾಜರು ಮತ್ತು ಅವರ ರಾಜವಂಶಗಳ ಅನನ್ಯತೆ, ಕುಲ ಮತ್ತು ಸಾಮಾಜಿಕ ಅಂತಸ್ತನ್ನು ಬಣ್ಣಿಸಲು ಮಹಾಭಾರತವನ್ನು ಪುನರಪಿ ಪ್ರಸ್ತಾಪಿಸುವುದು ಕಂಡುಬರುತ್ತದೆ. ಉದಾಹರಣೆಗೆ, ಕಾಂಚಿ ಪಲ್ಲವ ವಂಶದವನೂ ಕ್ರಿ.ಶ. ೯ನೆಯ ಶತಮಾನದ ವೇಲುರ್ಪಾಲಾಯಮ್ ತಾಮ್ರಪಟ ಶಾಸನದ ಬರಹಗಾರನೂ ಆಗಿರುವ ನಂದಿವರ್ಮನ್ ಅರಸನು ಕಾಂಚಿ ಪಲ್ಲವರನ್ನು ಮಹಾಭಾರತದ ವೀರನಾದ ಅಶ್ವತ್ಥಾಮನ ವಂಶಜರೆಂದು ಪರಿಚಯಿಸುವನು. ಕಲ್ಹಣನ ರಾಜತರಂಗಿಣಿಯು ಕಾಶ್ಮೀರದ ಅರಸರು, ಜನರು, ಸಂಪ್ರದಾಯಗಳು, ನಂಬಿಕೆಗಳು ಮತ್ತು ಧರ್ಮ ಇತ್ಯಾದಿಗಳನ್ನು ವಿವರಿಸುತ್ತದೆ. ಅದಕ್ಕೂ ಎಷ್ಟೋ ಪೂರ್ವದಲ್ಲಿ ಕಾಶ್ಮೀರದವನೇ ಆದ ನಾಗ ಋಷಿ ನೀಲನು ತನ್ನ ನೀಲಮತಪುರಾಣದಲ್ಲಿ ಈ ಪ್ರಶ್ನೆ ಎತ್ತಿರುವನು: ಮಹಾಭಾರತ ಯುದ್ಧದಲ್ಲಿ ಕಾಶ್ಮೀರಿ ಅರಸರ ಸಾಧನೆಗಳನ್ನು ಏಕೆ ಉಲ್ಲೇಖಿಸಿಲ್ಲ? ನೀಲಮತಪುರಾಣದ ಆರಂಭದಲ್ಲಿ ಈ ಐತಿಹಾಸಿಕ ಅರಿವಿನ ಅನ್ವೇಷಕನಾದ ಪಾಂಡುನೃಪ ಜನಮೇಜಯನು ಪುರಾಣದ ನಿರೂಪಕನಾದ ವೈಶಂಪಾಯನ ಋಷಿಯನ್ನು ಕೇಳುವುದಿಂತು: "ಮಹಾಭಾರತ ಯುದ್ಧದಲ್ಲಿ ಭಾರತದ ಎಲ್ಲೆಡೆಗಳಿಂದ ಬಂದ ಅರಸರು ಪಾಂಡವ ಪಕ್ಷದಲ್ಲಾಗಲಿ ಕೌರವ ಪಕ್ಷದಲ್ಲಾಗಲಿ ನಿಂತು ಕಾದಿರುವಾಗ ಆ ಯುದ್ಧದಲ್ಲಿ ಯಾವುದೇ ಪಕ್ಷದ ಪರವಾಗಿ ಪಾಲ್ಗೊಳ್ಳಲು ಕಾಶ್ಮೀರಿ ಅರಸರು ವಿಫಲರಾದುದೇಕೆ?"

ಮಹಾಭಾರತ ಸಂಗ್ರಾಮೇ ನಾನಾದೇಶ್ಯಾ ನರಾಧಿಪಾಃ
ಮಹಾಶೂರಃ ಸಮಾಯಾತಾಃ ಪಿತ್ರ್ಯಣಾಮೇ ಮಹಾತ್ಮನಾಮ್
ಕಥಮ್ ಕಾಶ್ಮೀರಿಕೋ ರಾಜಾ ನಾಯಾತಸ್ತತ್ರ ಕೀರ್ತಯ
ಪಾಂಡವೈರ್ಧಾರ್ತರಾಷ್ಟ್ರೈಶ್ಚ ಕಾ ನ ವೃತಃ ಸ ಕಥಮ್ ನೃಪಃ

ವೈಶಂಪಾಯನ ಉತ್ತರಿಸಿದ್ದು ಹೀಗೆ: ಮಹಾಭಾರತ ಯುದ್ಧಕ್ಕಿಂತ ಕೆಲವು ವರ್ಷ ಪೂರ್ವದಲ್ಲಿ ಕಾಶ್ಮೀರದ ಅರಸ ಗೋನಂದನು ಮಿತ್ರನೂ ತನ್ನ ಪಕ್ಷದವನೂ ಆಗಿದ್ದ ಜರಾಸಂಧನಿಗೆ ಯಾದವರ ವಿರುದ್ಧ ಯುದ್ಧದಲ್ಲಿ ಬೆಂಬಲ ನೀಡಲೋಸುಗ ಮಥುರೆಗೆ ಸಾಗಿದನು. ಗೋನಂದನು

ಕಾದುತ್ತ ಮಡಿದನು. ನಂತರ ಕಾಶ್ಮೀರದ ಸಿಂಹಾಸನವೇರಿದ ಅವನ ಮಗ ದಾಮೋದರನು ತನ್ನ ತಂದೆಯ ಮರಣದ ಸೇಡು ತೀರಿಸಿಕೊಳ್ಳಬಯಸಿದನು. ಅಷ್ಟರಲ್ಲಿ ಯಾದವ ದೊರೆ ಕೃಷ್ಣನು ಸ್ವಯಂವರದಲ್ಲಿ ಪಾಲ್ಗೊಳ್ಳಲು ಗಾಂಧಾರದೇಶಕ್ಕೆ ಆಗಮಿಸಿರುವನೆಂದು ತಿಳಿಯಿತು. ದಾಮೋದರನು ಅಲ್ಲಿಯೇ ಯಾದವರನ್ನು ಮುತ್ತಿಗೆ ಹಾಕಿ ಅವರ ಮೇಲೆ ಆಕ್ರಮಣ ಮಾಡಿದನು. ಆದರೆ, ಕೃಷ್ಣನಿಂದ ಹತನಾದುದರಿಂದ ಸೇಡು ತೀರಿಸಿಕೊಳ್ಳುವ ಬಯಕೆ ಈಡೇರದೆ ಉಳಿಯಿತು. ಕೃಷ್ಣನಿಗೆ ದಾಮೋದರ ಅಥವಾ ಅವನ ವಂಶದ ಬಗೆಗೆ ದ್ವೇಷವಿರಲಿಲ್ಲ. ತನ್ನ ವಿರುದ್ಧ ವೈರತ್ವದಲ್ಲಿ ಸಮಕಾಲೀನ ಕಾಶ್ಮೀರಿ ಅರಸರು ಹತರಾದರೂ ಕಾಶ್ಮೀರದ ನಾಗವಂಶ ಕೊನೆಗೊಳ್ಳಬೇಕೆಂದು ಕೃಷ್ಣ ಬಯಸಲಿಲ್ಲ. ಬದಲಾಗಿ, ಆ ವಂಶವು ಕಾಶ್ಮೀರದ ನಾಗಜನಾಂಗವನ್ನು ಆಳಬೇಕೆಂದು ಅಪೇಕ್ಷಿಸಿದನು. ಭಾರತದ ಭೂ ರಾಜಕಾರಣದಲ್ಲಿ ಕಾಶ್ಮೀರಕ್ಕೆ ಮಹತ್ವದ ಸ್ಥಾನವಿರುವುದನ್ನು ಮಹಾಯುಕ್ತಿಗಾರನಾದ ಕೃಷ್ಣನು ಮನಗಂಡಿದ್ದನು. ಕಾಶ್ಮೀರದ ಅಸ್ಥಿರತೆ ಒಟ್ಟು ಭಾರತದ ಐಕ್ಯತೆ ಮತ್ತು ಸ್ಥಿರತೆಗೆ ಮಾರಕವೆಂಬುದನ್ನೂ ಅರಿತಿದ್ದ. ಹಾಗಾಗಿ, ಅವನು ಸ್ವತಃ ಕಾಶ್ಮೀರಕ್ಕೆ ಬಂದು ಅರಸ ದಾಮೋದರನ ವಿಧವಾ ರಾಣಿ ಯಶೋಮತಿಗೆ ಪಟ್ಟಗಟ್ಟಿದನು. ಕಾಶ್ಮೀರ ಸಿಂಹಾಸನದ ವಾರಸುದಾರನನ್ನು ತನ್ನ ಗರ್ಭದಲ್ಲಿ ಧರಿಸಿದ್ದ ಅವಳು ಮುಂದೆ ದಾಮೋದರನ ಮರಣೋತ್ತರ ಪುತ್ರನಿಗೆ ಜನ್ಮವಿತ್ತಳು. ಅವನು ಬಾಲಗೋನಂದ ಎಂಬ ಹೆಸರು ಧರಿಸಿ ಕಾಶ್ಮೀರವನ್ನು ಆಳಿದನು. ಮಹಾಭಾರತ ಯುದ್ಧಕಾಲಕ್ಕೆ ಬಾಲಗೋವಿಂದನು ಅಲ್ಪವಯಿಯಾಗಿದ್ದುದರಿಂದ ಪಾಂಡವರಾಗಲಿ ಕೌರವರಾಗಲಿ ತಮ್ಮ ಪರ ಕಾದಾಡಲು ಅವನನ್ನು ಆಮಂತ್ರಿಸಲಿಲ್ಲ.

ಮಹಾಭಾರತದ ವೀರರೊಂದಿಗೆ ಕಳಚಿದ ಕೊಂಡಿಯ ಐತಿಹ್ಯವನ್ನು ಮೇಲ್ಕಾಣಿಸಿದ ಪುರಾಣ ಉಲ್ಲೇಖಿಸುತ್ತದೆ. ಅದರ ಜಾಡಿನಲ್ಲಿಯೇ ಹಿಮಾಚಲಪ್ರದೇಶದಲ್ಲಿ ದೊರೆತ ಸೇನವಂಶಾವಳಿಯೂ ಮಹಾಭಾರತ ಯುದ್ಧವನ್ನು ಉಲ್ಲೇಖಿಸುತ್ತ ಸೇನವಂಶದ ೧೭೧ ಅರಸರು ಮಹಾಭಾರತ ಯುದ್ಧಕಾಲದಿಂದ ಕ್ರಿ.ಶ.೧೨೩೩ರಲ್ಲಿ ಬೀರಸೇನನು ಹಿಮಾಚಲಪ್ರದೇಶದ ಸುಕೇತದಲ್ಲಿ ಸೇನರಾಜ್ಯ ಸ್ಥಾಪಿಸುವವರೆಗೆ ಕರ್ನಾಟಕ, ಬಂಗಾಲ ಮತ್ತು ಪಂಜಾಬ ಮುಂತಾದ ಭಾರತದ ಬೇರೆ ಬೇರೆ ಭಾಗಗಳಲ್ಲಿ ಆಳಿದ್ದರೆಂದು ಹೇಳುತ್ತದೆ.

## ಮಹಾಭಾರತ ಯುದ್ಧದ ಕಾಲ

ಶಕ ಕಾಲದಲ್ಲಿ ರಚಿಸಲಾದ ಮೈಸೂರಿನ ಐಹೊಳೆ ಶಾಸನವು ತನ್ನನ್ನು ಮಹಾಭಾರತ ಯುದ್ಧದ ೩೭೩೫ ವರ್ಷ ತರುವಾಯ ಬರೆಯಲಾಗಿದೆಯೆಂದು ಉಲ್ಲೇಖಿಸುತ್ತದೆ. ಈ ಶಾಸನವು ಕುರುಕ್ಷೇತ್ರದಲ್ಲಿ ಮಹಾಭಾರತ ಯುದ್ಧ ಜರುಗಿದ್ದು ಕ್ರಿ.ಪೂ.೩೧೦೨ ಎಂದು ಸ್ಥಾಪಿಸುತ್ತದೆ. ಹೀಗೆ, ಮಹಾಭಾರತ ಯುದ್ಧ ಮತ್ತು ರಾಜಾ ಬೀರಸೇನನಿಂದ ಸುಕೇತದಲ್ಲಿ ಸೇನವಂಶದ ಸ್ಥಾಪನೆ ಇವುಗಳ ನಡುವಣ ಕಾಲಾವಧಿ ೩೧೦೨ + ೧೨೩೩ = ೪೩೩೫ ವರ್ಷಗಳು. ಬೀರಸೇನನ ಪೂರ್ವದಲ್ಲಿದ್ದ ಅರಸರು ಪಂಜಾಬದ ರೂಪನಗರ (ರೋಪರ), ಬಂಗಾಲ ಮತ್ತು ಕರ್ನಾಟಕಗಳಲ್ಲಿ ಆಳಿದ್ದು ತಿಳಿದಿದೆ. ಆದರೆ, ಅವರ ಸವಿವರ ಇತಿಹಾಸ - ಅದರಲ್ಲೂ ಕರ್ನಾಟಕದಲ್ಲಿ ಆಳಿದವರದು- ಹರಕುಮುರುಕಾಗಿದೆ ಮತ್ತು ಬಹುಮಟ್ಟಿಗೆ ಅಪರಿಚಿತವಿದೆ. ಕರ್ನಾಟಕದಲ್ಲಿ ಲಭ್ಯವಿರುವ ಯಾವುದೇ

ದಾಖಲೆಗಳು ಮತ್ತು ಶಾಸನಗಳ ಸಹಾಯದಿಂದ ಅವರ ಆಳ್ವಿಕೆಯ ಕಾಲಾವಧಿಗಳನ್ನು ಸರಿಯಾಗಿ ಅಧ್ಯಯನ, ಸಂಶೋಧನ ಮಾಡುವ ಅಗತ್ಯವುಂಟು. ಸೇನವಂಶದ ಅರಸರು ಸಾಮಾನ್ಯವಾಗಿ ಧಾರ್ಮಿಕ ಸ್ವಭಾವದವರು. ಬಿಜಯಸೇನ ಮತ್ತು ಬೀರಸೇನರಂಥ ಹಲವರು ಯುದ್ಧದಲ್ಲಿ ಧೈರ್ಯಶಾಲಿ ದಂಡನಾಯಕರಾಗಿದ್ದರು. ಬಲ್ಲಾಳಸೇನ ಮತ್ತು ಲಕ್ಷ್ಮಣಸೇನರಂಥ ಇನ್ನೂ ಕೆಲವರು ಸಾಮಾಜಿಕ ಸಂಘಟಕರು, ತೀಕ್ಷ್ಣ ನ್ಯಾಯಶಾಸ್ತ್ರ ಸಂಹಿತೆಗಾರರು ಮತ್ತು ಪ್ರಖ್ಯಾತ ಗ್ರಂಥಕರ್ತರಾಗಿದ್ದರು. ಸಾಹಿತ್ಯ, ವೈದ್ಯಕೀಯ, ತತ್ವಜ್ಞಾನ, ಧರ್ಮ, ಖಗೋಳವಿಜ್ಞಾನ, ಜ್ಯೋತಿಷ್ಯಶಾಸ್ತ್ರ ಕ್ಷೇತ್ರಗಳಲ್ಲಿ ಪ್ರತಿಭಾನ್ವಿತರಿಗೆ ಅವರು ರಾಜಾಶ್ರಯ ನೀಡಿದರು.

**ಬಂಗಾಲ ಅಧ್ಯಾಯವು ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಸಂಕ್ರಮಣಗಳ ಹೆಗ್ಗುರುತಾಗಿದೆ.**

ಸೇನವಂಶದ ಬಂಗಾಲ ಅಧ್ಯಾಯವು ಸಾಮಂತಸೇನ ಮತ್ತು ಅವನ ಮಗ ಹೇಮಂತಸೇನ ಕುರಿತಂತೆ ಅತ್ಯಲ್ಪ ಮಾಹಿತಿ ಒದಗಿಸುತ್ತದೆ. ಬಿಜಯಸೇನ(ಸು.೧೦೯೫-೧೧೫೮), ಬಲ್ಲಾಳಸೇನ(ಸು.೧೧೫೮-೧೧೭೯), ಮತ್ತು ಲಕ್ಷ್ಮಣಸೇನರ(ಸು.೧೧೭೯-೧೨೦೬) ಆಳ್ವಿಕೆಯ ಅವಧಿಗಳಲ್ಲಿಯ ಘಟನೆ, ಸಾಧನೆಗಳ ಅರಿವು ನಮಗಿದೆ. ಆದರೂ ಸಹ, ಬಂಗಾಲದಲ್ಲಿ ಸೇನ ಕಾಲಾವಧಿಯ ಬಗೆಗೆ ಇನ್ನಷ್ಟು ಸಂಶೋಧನೆಗೆ ಸದಾ ಅವಕಾಶವಿದೆ.

ಕ್ರಿ.ಶ.೧೨೩೩ರ ಮುಂದೆ ಬೀರಸೇನ ಮತ್ತು ಅವನ ವಂಶಜರು ಹಿಮಾಚಲ ಪ್ರದೇಶವನ್ನು ಆಳಿದಂದಿನಿಂದ ಅವರ ಇತಿಹಾಸ ಹೆಚ್ಚೂಕಡಿಮೆ ಸ್ಪಷ್ಟವಿದೆ. ರಾಜಧನ ರದ್ದುಗೊಂಡ ನಂತರವೂ ಸೇನ ಅರಸರ ವಂಶಜರು ತಮ್ಮ ಸೇನವಂಶದ ಸರ್ವಸಮಾನ ಪರಂಪರೆಯನ್ನು ಇನ್ನೂ ಕಾಪಾಡಿಕೊಂಡು ಬರುತ್ತಿದ್ದಾರೆ. ಬಂಗಾಲಿ ಲಿಪಿಯಲ್ಲಿ ಬರೆದಿರುವ ಕೆಲವು ಸಂಸ್ಕೃತ ಹಸ್ತಪ್ರತಿಗಳನ್ನು ಅರಮನೆಯ ಕೊಠಡಿಯಲ್ಲಿ "ಹಿಮಾಚಲ ಲೋಕಸಂಸ್ಕೃತಿ ಸಂಸ್ಥಾನ" ದ ಸುಪರ್ದಿಯಲ್ಲಿ ಸಂರಕ್ಷಿಸಿಡಲಾಗಿದೆ. ಸೇನ ಕಾಲಾವಧಿಯಲ್ಲಿ ಬಂಗಾಲಿ ಧರ್ಮ ಮತ್ತು ಸಂಸ್ಕೃತಿಗಳ ಪ್ರಾಧಾನ್ಯತೆ ತಾಂತ್ರಿಕ ಬೌದ್ಧತ್ವದಿಂದ ಹಿಂದುತ್ವಕ್ಕೆ ಹೊರಳಿತು. ಬಂಗಾಲದ ಕಡಲ ವ್ಯಾಪಾರ ಅವನತಿ ಹೊಂದಿತು. ಅಂತಿಮವಾಗಿ, ಮುಸ್ಲಿಮ ವಿಜೇತರು ರಾಜಕೀಯ ಅಧಿಕಾರ ಮತ್ತು ಕಡಲ ವ್ಯಾಪಾರವನ್ನೂ ತಮ್ಮ ಕೈಯಲ್ಲಿ ಹಿಡಿದುಕೊಂಡರು. ಈ ಸಂಕ್ರಮಣವನ್ನು ಅರ್ಥಮಾಡಿಕೊಳ್ಳಲು ಈ ಕಾಲಘಟ್ಟದ ಚರಿತ್ರೆ ಮತ್ತು ಆಗ ರಚಿತಗೊಂಡ ಹಸ್ತಪ್ರತಿಗಳ ಅಧ್ಯಯನದ ಅಗತ್ಯವಿದೆ.

ಭಾರತದ ಇತರ ಅನೇಕ ರಾಜ್ಯಗಳು ಉತ್ತರಾಧಿಕಾರತ್ವ ಇತ್ಯಾದಿ ನಿರ್ಧರಿಸಲು ಯಾಜ್ಞವಲ್ಕ್ಯನ ಸ್ಮೃತಿನಿಯಮಗಳನ್ನು ಪಾಲಿಸುತ್ತಿದ್ದರು. ಆದರೆ, ಸೇನ ಅರಸರ ಸಭಾಪಂಡಿತನಾದ ಮಹಾಮಹೋಪಾಧ್ಯಾಯ ಜೀಮೂತವಾಹನನು ದಾಯಭಾಗ ಎಂಬ ವಿಶಿಷ್ಟ ಸ್ಮೃತಿಗ್ರಂಥವನ್ನು ರಚಿಸಿದನು. ಅದು ಹನ್ನೆರಡನೆಯ ಶತಮಾನದ ಅಂದಿನ ಬಂಗಾಲಿ ಸಮಾಜಕ್ಕೆ ಸ್ಮೃತಿನಿಯಮಗಳನ್ನು ಪ್ರಸ್ತುತವಾಗಿಸಿತು. ವ್ಯವಹಾರ ಮಾತೃಕಾ, ಕಾಲವಿವೇಕ ಜೀಮೂತವಾಹನನ ಇತರ ಗ್ರಂಥಗಳು. ಮಹಾಮಹೋಪಾಧ್ಯಾಯ ಅನಿರುದ್ಧ ಭಟ್ಟನು ಅರಸ ಬಲ್ಲಾಳಸೇನನ ಗುರುವಾಗಿದ್ದನು. ಮತ್ತು ಧರ್ಮಾಧ್ಯಕ್ಷನಾಗಿ ನಿಯುಕ್ತಗೊಂಡನು. ಅವನು ಹರಲತಾ ಮತ್ತು ಪಿತೃದಯಿತಾ ಗ್ರಂಥಗಳನ್ನು ರಚಿಸಿದನು. ಸ್ವತಃ ಅರಸ ಬಲ್ಲಾಳಸೇನನು ಹಲವಾರು ಸ್ಮೃತಿಗ್ರಂಥಗಳನ್ನು ರಚಿಸಿದನು. ಅವುಗಳಲ್ಲಿ

ದಾನಸಾಗರ ಮತ್ತು ಅದ್ಭುತಸಾಗರ ಬಂಗಾಲದಲ್ಲಿ ಲಭ್ಯವಿವೆ. ಆದರೆ, ಆಚಾರಸಾಗರ ಮತ್ತು ಪ್ರತಿಷ್ಠಾಸಾಗರ ಎಂಬ ಗ್ರಂಥಗಳು ಬಂಗಾಲದಲ್ಲಿ ಇದುವರೆಗೂ ದೊರೆತಿಲ್ಲ. ಹಾಗೆಯೆ, ಮಹಾಪಂಡಿತ ಹಲಾಯುಧನು ರಚಿಸಿದ ಬ್ರಾಹ್ಮಣಸರ್ವಸ್ವ ಮಾತ್ರ ಲಭ್ಯವಿದೆ. ಮೀಮಾಂಸಸರ್ವಸ್ವದಂಥ ಅವನ ಇತರ ಗ್ರಂಥಗಳು ಇನ್ನೂ ದೊರಕಬೇಕಿದೆ. ಇತ್ತೀಚೆಗಾದರೊ, ಬಂಗಾಲಿ ಲಿಪಿಯಲ್ಲಿ ಬರೆದ ಕೆಲವು ಸಂಸ್ಕೃತ ಹಸ್ತಪ್ರತಿಗಳು ಪಂಡಿತರ ಮತ್ತು ಆಸ್ಥಾನಿಕರ ವಂಶಜರ ಮನೆಗಳಲ್ಲಿ ದೊರೆತಿವೆ. ಅವರು ಸೇನ ಅರಸರನ್ನು ಬಂಗಾಲದಿಂದ ಹಿಮಾಚಲಪ್ರದೇಶಕ್ಕೆ ಹಿಂಬಾಲಿಸಿದವರು. ಆ ಗ್ರಂಥಗಳು ಬಂಗಾಲದಲ್ಲಿ ರಚಿತವಾದಂತಿದ್ದು ಬಂಗಾಲಿ ಪಂಡಿತರ ಮತ್ತು ಆಸ್ಥಾನಿಕರ ವಂಶಜರ ಬಳುವಳಿಗೆ ಬಂದವು. ಅವರು ಸೇನ ಅರಸ ಬೀರಸೇನನೊಂದಿಗೆ ಹಿಮಾಚಲಪ್ರದೇಶಕ್ಕೆ ಬಂದರು. ಬಂಗಾಲದಲ್ಲಿ ದೊರೆಯದ ಮತ್ತು ಕಳೆದುಹೋದಂತಿರುವ ಗ್ರಂಥಗಳು ಹಿಮಾಚಲಪ್ರದೇಶದಲ್ಲಿ ಇಂಥ ಕೆಲವು ಖಾಸಗಿ ಸಂಗ್ರಹದಲ್ಲಿ ಕಂಡುಬರುವ ಸಾಧ್ಯತೆಯಿದೆ.

**ಬಂಗಾಲಿ ಲಿಪಿಯಲ್ಲಿನ ಸಂಸ್ಕೃತ ಹಸ್ತಪ್ರತಿಗಳ ಶೋಧವು ಅನನ್ಯತೆಯ ಪ್ರಶ್ನೆ ಬಿಡಿಸುತ್ತದೆ.**

ಬಂಗಾಲಿ ಲಿಪಿಯಲ್ಲಿ ಬರೆದ ಸಂಸ್ಕೃತ ಹಸ್ತಪ್ರತಿಗಳ ಶೋಧವು ಮಾಂಡಿಯ (ಸುಕೇತ) ಸೇನ ಅರಸರ ಅನನ್ಯತೆ ಕುರಿತಂತೆ ಕನಿಂಗ್ಹಮ್ ಮತ್ತು ಪ್ರೊ.ಮನಮೋಹನ ಅವರ ಮಧ್ಯೆ ಇರುವ ವಾದವಿವಾದಕ್ಕೆ ತೆರೆ ಎಳೆಯುತ್ತದೆ. ಹಿಮಾಚಲಪ್ರದೇಶದ ಸೇನರು ಬಂಗಾಲದ ಲಕ್ಷ್ಮಣಸೇನನ ವಂಶಜರೆಂಬುದನ್ನು ಮತ್ತು ಬೀರಸೇನನು ಸುಕೇತದಲ್ಲಿ ಕ್ರಿ.ಶ. ೧೨೩೩ರ ಸುಮಾರಿಗೆ ಸೇನ ರಾಜವಂಶವನ್ನು ಸ್ಥಾಪಿಸಿದನೆಂಬುದನ್ನು ಕನಿಂಗ್ಹಮ್ ಒಪ್ಪಿರಲಿಲ್ಲ. ಹಿಮಾಚಲಪ್ರದೇಶದಲ್ಲಿ ಸೇನ ರಾಜ್ಯ ಕ್ರಿ.ಶ. ೮ನೆಯ ಶತಮಾನದಲ್ಲಿ ಸ್ಥಾಪಿತಗೊಂಡಿತೆಂಬುದು ಅವನ ಅಭಿಮತ. ಅವನ ನಿರ್ಣಯವು ನಿರ್ಮಾಂಡದಲ್ಲಿರುವ ಪರಶುರಾಮ ದೇವಾಲಯದ ತಾಮ್ರಪಟ ಶಾಸನದ ಮೇಲೆ ಆಧಾರಿತವಾಗಿದೆ. ಸೇನ ಅಡ್ಡಹೆಸರಿನ ಕೆಲವು ರಾಜರು ಸ್ಪಿತಿಯಲ್ಲಿ ಆಳುತ್ತಿದ್ದರೆಂದು ಆ ತಾಮ್ರಪಟಶಾಸನ ತೋರ್ಪಡಿಸುತ್ತದೆ. ಈ ದತ್ತಿಯ ದಾನಿಯು ರಾಜಾ ಸಮುದ್ರಸೇನನೆಂದು ಅದು ಹೇಳುತ್ತದೆ. ಸಮುದ್ರಸೇನನು ರಾಜಾ ರವಿಸೇನನ ಮಗ, ಸಂಜಯಸೇನನ ಮೊಮ್ಮಗ ಮತ್ತು ವರ್ಣಸೇನನ ಮರಿಮಗ.

ಅದರ ಶೈಲಿಯನ್ನು ನೋಡಿದರೆ ನಿರ್ಮಾಂಡ ಶಾಸನ ಕ್ರಿ.ಶ. ೭ನೆಯ ಶತಮಾನಕ್ಕೆ ಸೇರಿದ್ದೆಂದು ಪಂಡಿತರು ಅಭಿಪ್ರಾಯಪಡುವರು. ನಿರ್ಮಾಂಡ ಶಾಸನದ ಸಮುದ್ರಸೇನನನ್ನು ಲಕ್ಷ್ಮಣಸೇನನ ಉತ್ತರಾಧಿಕಾರಿಯಾದ ಸಮುದ್ರಸೇನನಿಂದ ಪ್ರತ್ಯೇಕಿಸುವ ಸಮಸ್ಯೆ ಕನಿಂಗ್ಹಮ್‌ನಿಗೆ ಎದುರಾಯಿತು. ಆದರೆ, ಈ ಇಬ್ಬರೂ ಸಮುದ್ರಸೇನರ ತಂದೆಯರ, ಅಜ್ಜ, ಮುತ್ತಜ್ಜರ ಹೆಸರುಗಳು ಬೇರೆ ಬೇರೆಯಾಗಿವೆ.ಈ ಗೋಜಲಿನಿಂದಾಗಿ, ಸೇನ ರಾಜವಂಶ ಕ್ರಿ.ಶ. ೮ನೆಯ ಶತಮಾನದಲ್ಲಿ ಸ್ಪಿತಿಯಲ್ಲಿ ಜನ್ಮತಾಳಿತೆಂದು ಕನಿಂಗ್ಹಮ್ ಅಭಿಪ್ರಾಯಕ್ಕೆ ಬಂದ. ಸುಕೇತದ ರಾಜವಂಶವನ್ನು ಲಕ್ಷ್ಮಣಸೇನನ ವಂಶಜರು ಸ್ಥಾಪಿಸಿದರೆಂಬುದನ್ನು ಮತ್ತು ಆವರು ಬಂಗಾಲದ ಮೇಲೆ ಜರುಗಿದ ಮುಸ್ಲಿಮ ಆಕ್ರಮಣದ ನಂತರ ಕ್ರಿ.ಶ. ೧೨೦೦ ರ ಸುಮಾರಿಗೆ ತಮ್ಮ ಅನೇಕ ಪ್ರತಿಭಾವಂತರೊಂದಿಗೆ

ಬಂಗಾಲದಿಂದ ಬಿಹಾರ, ಉತ್ತರಪ್ರದೇಶ ಮತ್ತು ಪಂಜಾಬಗಳಿಗೆ ವಲಸೆ ಹೋದರೆಂಬುದನ್ನು ಬಂಗಾಲಿ ಲಿಪಿಯಲ್ಲಿರುವ ಸಂಸ್ಕೃತ ಹಸ್ತಪ್ರತಿಗಳ ಶೋಧವು ನಿರ್ಣಾಯಕವಾಗಿ ಸಿದ್ಧಪಡಿಸುತ್ತದೆ. ಈ ಪಂಡಿತರು ತಮ್ಮೊಂದಿಗೆ ಹಿಮಾಚಲಪ್ರದೇಶಕ್ಕೆ ಪೂರ್ವಭಾರತದ - ವಿಶೇಷತಃ ಬಂಗಾಲ, ಕರ್ನಾಟಕಗಳ - ಸಾಮಾನ್ಯ ಸಂಸ್ಕೃತ ಸ್ವತ್ತನ್ನು ಒಯ್ದರು. ಅದರಲ್ಲಿ ಕೆಲವನ್ನು "ಹಿಮಾಚಲ ಲೋಕಸಂಸ್ಕೃತಿ ಸಂಸ್ಥಾನ"ದ ವಸ್ತು ಸಂಗ್ರಹಾಲಯದಲ್ಲಿ ಸಂಸ್ಕೃತ ಹಸ್ತಪ್ರತಿಗಳೊಂದಿಗೆ ಸಂರಕ್ಷಿಸಿಡಲಾಗಿದೆ. ಆ ಹಸ್ತಪ್ರತಿಗಳಲ್ಲಿ ರಾಜವಂಶಾವಳಿಗಳಲ್ಲದೆ ಸಂಸ್ಕೃತ ಭಾಷೆಯಲ್ಲಿ ವೈದ್ಯಕೀಯ, ಜ್ಯೋತಿಷ್ಯ, ಪೂಜಾವಿಧಿ ಮತ್ತು ಇತರ ದೈನಂದಿನ ಸಾರ್ವಜನಿಕ ಜೀವನಾವಶ್ಯಕತೆಗಳ ಮೇಲೆ ಬರೆದ ಗ್ರಂಥಗಳಿವೆ. ಅವನ್ನು ಬಂಗಾಲಿ ಮತ್ತು ದೇವನಾಗರಿ ಲಿಪಿಯಲ್ಲಿ ರಚಿಸಲಾಗಿದೆ.

ಆದರೆ, ಬಂಗಾಲ ಸೇನ ರಾಜವಂಶದ ಬೀರಸೇನನು ಸುಕೇತದಲ್ಲಿ ಸ್ಥಾಪಿಸಿದ ಸೇನವಂಶಕ್ಕಿಂತ ಸುಮಾರು ಐದುನೂರು ವರ್ಷ ಪೂರ್ವದಲ್ಲಿ ಸ್ಪಿತಿಯಲ್ಲಿ ಆಳಿದ ಇನ್ನೊಂದು ಸೇನವಂಶ ಇದ್ದಿರಬಹುದು. ನಿರ್ಮಾಂಡದ ತಾಮ್ರಪಟ ಶಾಸನದಲ್ಲಿ ಉಲ್ಲೇಖಿತರಾಗಿರುವ ಸೇನರದು ಬಂಗಾಲದ ಸೇನರಿಗಿಂತ ಸಂಪೂರ್ಣ ಭಿನ್ನವಾದ ವಂಶವೆ? ಅಥವಾ ಸೇನರು ಮೂಲತಃ ಸ್ಪಿತಿಯಿಂದ ಬಂದವರಾಗಿದ್ದು ಮಹಾಭಾರತ ಕಾಲದಲ್ಲಿ ಬಯಲು ಪ್ರದೇಶಕ್ಕೆ ಬಂದು ಒಂದನೆಯ ಬೀರಸೇನನ ನಾಯಕತ್ವದಲ್ಲಿ ಕರ್ನಾಟಕದಲ್ಲಿ ಮತ್ತು ತರುವಾಯ ಪಂಜಾಬ, ಬಂಗಾಲಗಳಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿ ಇಮ್ಮಡಿ ಬೀರಸೇನನ ಕಾಲಕ್ಕೆ ಕ್ರಿ.ಶ. ೧೨೩೩ ರಲ್ಲಿ ಹಿಮಾಲಯಕ್ಕೆ ಮರಳಿದರೆ? ಹಾಗಿದ್ದ ಪಕ್ಷದಲ್ಲಿ, ಸೇನರು ಸ್ಪಿತಿಯಿಂದ ಅನತಿ ದೂರದಲ್ಲಿರುವ ಕೈಲಾಸ ಮಾನಸ ಸರೋವರ ಪ್ರದೇಶದವನಾದ ವೈದ್ಯಕೀಯ ಮನುಷ್ಯನೂ ಪಾಶುಪತ ಯೋಗ ಪರಂಪರೆಯನ್ನು ಪಾಲಿಸುವವನೂ ಬಾನ್ ಧರ್ಮದ ಸಂಸ್ಥಾಪಕನೂ ಆದ ಚ್ಯೆನರಾಬನ ವಂಶಜರು ಯಾ ಶಿಷ್ಯರಾಗಿದ್ದರೆ? ಬಾನ್ ದೈವವಾದ ಕುಂಟುಝುಂಗ್ಪೊ ಅಂದರೆ ಸದಾಶಿವನು ಸೇನ ಅರಸರ ಕುಲದೇವತೆಯಾಗಿದ್ದನು. 'ಚ್ಯೇನ' ಎಂದರೆ ಬುದ್ಧಿವಂತ, ಮಂತ್ರಗಳು ಮತ್ತು ವೈದ್ಯಕೀಯ, ಧರ್ಮಜ್ಞಾನ ಮತ್ತು ಸಾಹಿತ್ಯದಲ್ಲಿ ಮಾಂತ್ರಿಕ ಎಂದರ್ಥ. ನಿಜಕ್ಕೂ ಸೇನ ಅರಸರು ಸ್ವತಃ ಪಂಡಿತ ಗ್ರಂಥಕರ್ತರಾಗಿದ್ದು ತಮ್ಮ ಆಸ್ಥಾನದಲ್ಲಿ ನಾಡಿನ ಶ್ರೇಷ್ಠತಮ ಪ್ರತಿಭೆಗಳಿಗೆ ಮನ್ನಣೆ ಮತ್ತು ರಾಜಾಶ್ರಯ ನೀಡಿದ್ದರು. ಈ ಸಂಸ್ಕೃತಿಯ ಶ್ರೇಷ್ಠತೆ ಹರಳುಗಟ್ಟಿದುದನ್ನು ನೋಡಬೇಕಿದ್ದರೆ ಉದಾಹರಣಾರ್ಥವಾಗಿ ಬಂಗಾಲ ಸೇನ ಅರಸ ಲಕ್ಷ್ಮಣಸೇನನ ಆಸ್ಥಾನವನ್ನು ಅವಲೋಕಿಸಬಹುದು.

### ಬಂಗಾಲದ ಅರಸ ಲಕ್ಷ್ಮಣಸೇನನ ಆಸ್ಥಾನಿಕರು

ಅರಸ ಲಕ್ಷ್ಮಣಸೇನನ ಆಸ್ಥಾನದಲ್ಲಿ ಪಂಚರತ್ನರೆಂದು ಕರೆಯಲಾಗುತ್ತಿದ್ದ ಐವರು ಕವಿಗಳಿದ್ದರು. ಅವರೆಂದರೆ, ಶರಣ, ಧೋಯಿ, ಗೋವರ್ಧನಾಚಾರ್ಯ, ಉಮಾಪತಿಧರ ಮತ್ತು ಜಯದೇವ. ಅವರಲ್ಲಿ ಶರಣನು ಸದ್ಯುಕ್ತಿಕರ್ಣಾಮೃತಮ್, ಧೋಯಿಯು ಪವನದೂತಮ್, ಉಮಾಪತಿಧರನು ಚಂದ್ರಚೂಡಚರಿತಮ್, ದೇವಪಾದ ಪ್ರಶಸ್ತಿ ಮತ್ತು ಮಧೈನಗರ ಶಾಸನವನ್ನು ರಚಿಸಿದರು. ಗೋವಿಂದಾಚಾರ್ಯನ ಆರ್ಯಸಪ್ತಶತೀ ಗ್ರಂಥವನ್ನೂ ಅದರ ಕರ್ತೃವನ್ನೂ ಇಂದಿಗೂ ನೆನಪಿಡಲಾಗಿದೆ. ಗೋವಿಂದಾಚಾರ್ಯನು ಬ್ರಾಹ್ಮಣರಲ್ಲಿಯೇ ಅತ್ಯಂತ ಧರ್ಮಿಷ್ಠನೂ

ಲಕ್ಷ್ಮಣಸೇನನ ಮಂತ್ರಿಗಳಲ್ಲಿಯೆ ಅತ್ಯಂತ ಧೈರ್ಯಶಾಲಿಯೂ ಆಗಿದ್ದನು. ಜಯದೇವನ ಗೀತಗೋವಿಂದ ವಿರಳ ಶ್ರೇಷ್ಠತೆಯ ಕೃತಿಯೆಂದು ಇಂದಿಗೂ ಪರಿಗಣಿತವಾಗುತ್ತಿದೆ. ಅವನು ಮೊದಲು ತನ್ನ ಗ್ರಾಮ ಕೆಂದುಬಿಲ್ವದಿಂದ ಅರಸ ಲಕ್ಷ್ಮಣಸೇನನ ಆಸ್ಥಾನಕ್ಕೆ ಬಂದಾಗ ಅರಸನನ್ನು ಈ ಕೆಳಗಿನ ಶ್ಲೋಕಗಳಲ್ಲಿ ಸ್ತುತಿಸಿದನು. ಆ ಪ್ರಶಸ್ತಿಯು ಪ್ರಜೆಗಳು ರಾಜನಿಗಾಗಿ ಇಟ್ಟುಕೊಂಡಿದ್ದ ಪ್ರೀತಿಯ ಕಾರಂಜಿಯಿಂದ ಪುಟಿದಂತಿತ್ತು.

ಲಕ್ಷ್ಮೀ ಕೇಳಿ ಭುಜಂಗ ಜಂಗಮ ಹರೇ ಸಂಕಲ್ಪ ಕಲ್ಪದ್ರುಮ
ಶ್ರೇಯಃ ಸಾಧಕಸಂಗ ಸಂಗರಕಲಾ ಗಾಂಗೇಯ ವಂಗಪ್ರಿಯ
ಗೌಡೇಂದ್ರ ಪ್ರತಿರಾಜರಾಜಕ ಸಭಾಲಂಕಾರ ಕರಾರ್ಪಿತ
ಪ್ರತ್ಯಾರ್ಥಿಕ್ಷಿತಿಪಾಲ ಪಾಲಕ ಸತಾಮ್ ದೃಷ್ಟೋಽಸಿ ತುಷ್ಟಾ ವಯಮ್ |

◈◈◈

## ಅಧ್ಯಾಯ ೧

# ಕರ್ನಾಟಕದ ಸೇನವರರು

ಹಿಮಾಚಲಪ್ರದೇಶದ ಸೇನ ಅರಸರು ಬಂಗಾಲದ ಸೇನ ವಂಶಜರು. ಬಂಗಾಲದ ಸೇನವಂಶಜರು ಕರ್ನಾಟಕದಿಂದ ಬಂದವರು. ಬಂಗಾಲದ ಬಿಜೊಯ್‌ಸೇನ ಅರಸನ ದೇವಪಾದ ಶಾಸನವು ಈ ಮಾತನ್ನು ಪುಷ್ಟೀಕರಿಸುತ್ತದೆ. ಅವನ ಆಸ್ಥಾನಕವಿ ಉಮಾಪತಿಧರನು ರಚಿಸಿದ ಪ್ರಶಸ್ತಿಯನ್ನು ದೇವಪಾದದಲ್ಲಿ ಅರಸ ಬಿಜೊಯ್‌ಸೇನನು ಕಟ್ಟಿಸಿದ ಶಿವಾಲಯದ ಗೋಡೆಯ ಮೇಲೆ ಕೆತ್ತಲಾಗಿದೆ. ಈ ಶಾಸನದಲ್ಲಿ ಬಿಜೊಯ್‌ಸೇನನನ್ನು ದಾಕ್ಷಿಣಾತ್ಯ ಕ್ಷೌಣೀಂದ್ರನಾದ ಬೀರಸೇನನ ವಂಶಜನೆಂದು ಹೇಳಿದೆ. ಕ್ಷೌಣೀಂದ್ರನು ದಕ್ಖನದಲ್ಲಿ ಸೇನವಂಶದ ಸಂಸ್ಥಾಪಕ.

ಆದರೆ, ಅತ್ಯಂತ ಪ್ರಾಚೀನ ಬೀರಸೇನನ (ಒಂದನೆಯ ಬೀರಸೇನ) ಕಾಲವನ್ನಾಗಲಿ ಅವನು ದಕ್ಖನದಲ್ಲಿ ಸೇನವಂಶವನ್ನು ಎಂದು ಸ್ಥಾಪಿಸಿದನೆಂಬುದಾಗಲಿ ಆ ಶಾಸನ ಹೇಳುವುದಿಲ್ಲ.

ಬಲ್ಲಾಳಸೇನನ ಜೀವನಚರಿತ್ರೆ ಬರೆದ ಆನಂದಭಟ್ಟನು ಬೀರಸೇನನನ್ನು ಮಹಾಭಾರತದ ವೀರ ಕರ್ಣನ ವಂಶಜನೆಂದು ಬಣ್ಣಿಸುತ್ತಾನೆ.

ಇದನ್ನನುಸರಿಸಿ ಕೆಲವು ಲೇಖಕರು ಬೀರಸೇನನು ಅಂಗದೇಶದಲ್ಲಿ (ಆಧುನಿಕ ಬಿಹಾರ) ಇದ್ದನೆಂದೂ ಬಿಹಾರದಿಂದ ದಕ್ಷಿಣಕ್ಕೆ ವಲಸೆಹೋಗಿ ಕರ್ನಾಟಕದಲ್ಲಿ ನೆಲೆಸಿದನೆಂದೂ ಗ್ರಹಿಸುವರು. ಆದರೆ, ಸಂತ್‌ಸಿಂಗ್ ಅನುವಾದಿಸಿದ ಮಾಂಡೀ ಅರಸರ ವಂಶಾವಳಿಯು ಮಾಂಡೀ ಸೇನರ ಪೂರ್ವಜರನ್ನು ಮಹಾಭಾರತದ ವೀರ ಅರ್ಜುನನ ಮಗ ಅಭಿಮನ್ಯುವಿಗೆ ಜಾಡು ಹಿಡಿಯುತ್ತದೆ.

ದಕ್ಷಿಣ ಭಾರತದ ಕರ್ನಾಟಕದಲ್ಲಿ ದೊರೆಯುವ ಶಾಸನಗಳಲ್ಲಿ ಸೇನ ಅರಸರನ್ನು ಸೇನವರರೆಂದು ಕರೆಯುತ್ತಿದ್ದುದು ಕಂಡುಬರುವುದು. ಬಂಗಾಲದ ದೇವಪಾದ ಶಾಸನದಲ್ಲಿ ಪ್ರಾಚೀನ ಅರಸ ಬೀರಸೇನನ ಉತ್ತರಾಧಿಕಾರಿಯ ಹೆಸರು ಕಂಡುಬರುವುದಿಲ್ಲ. ಆಳುಪ ಅರಸ ಚಿತ್ರವಾಹನನ ಕಿಗ್ಗ ಶಾಸನದಲ್ಲಿ ದಕ್ಷಿಣ ಭಾರತದ ಸೇನವರ ಅರಸರ ಉಲ್ಲೇಖವಿದೆ.

## ಕರ್ನಾಟಕದಲ್ಲಿ ಸೇನರು ಆಳಿದ ಪ್ರದೇಶಗಳು

ಸೇನವರರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲೂಕಿನ ಮತ್ತು ಶಿವಮೊಗ್ಗ ಜಿಲ್ಲೆಯ ಕೊಪ್ಪ ತಾಲೂಕಿನ ಪ್ರದೇಶಗಳನ್ನು ಕ್ರಿ.ಶ. ೭ನೆಯ ಶತಮಾನದಿಂದ ೧೧ನೆಯ ಶತಮಾನದ ವರೆಗೆ ಆಳಿದರು. ಅವರನ್ನು ಮೊದಲು ವಿದ್ಯಾಧರ ಲೋಕರಾಜ ಎಂದು ಕರೆಯಲಾಗುತ್ತಿತ್ತು.

## ಸೇನವರರ ಸಂಬಂಧಗಳು

ಶಿಲಾಹಾರ ವಂಶದೊಂದಿಗೆ ಸೇನವರರು ಮಧುರ ಸಂಬಂಧ ಹೊಂದಿದ್ದರು. ಸೇನವರ ಅರಸರು ಕ್ರಿ.ಶ. ೧೧ನೆಯ ಶತಮಾನದಲ್ಲಿ ಖಚರ ವಂಶದ ಪನ್ನಗಧ್ವಜರೊಂದಿಗೆ ಸ್ನೇಹಸಂಬಂಧ ಇಟ್ಟುಕೊಂಡಿದ್ದರೆಂದು ಡಾ. ಬಾರ್ನೆಟ್ ಅಭಿಪ್ರಾಯಪಡುವರು. ಖಚರರು ಕಲ್ಯಾಣಚಾಲುಕ್ಯರ ಮಾಂಡಲಿಕರಾಗಿದ್ದು ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿದ್ದ ಬಾಸವೂರನ್ನು ಆಗ ಆಳುತ್ತಿದ್ದರು. ಖಚರ ವಂಶದ ಅರಸರು ತಮ್ಮನ್ನು ಹೇಮಕೂಟಪುರಾಧಿನಾಥರೆಂದೂ ಮತ್ತು ಕೂಡಲೂರಪುರವರೇಶ್ವರರೆಂದೂ ಕರೆದುಕೊಳ್ಳುತ್ತಿದ್ದರು. ಅವರು ಸಿಂಹಲಾಂಛನರೂ ಸರ್ಪಧ್ವಜರೂ ಆಗಿದ್ದರು. ಅವರ ರಾಜಧಾನಿಯ ಹೆಸರನ್ನು ಖಚಿತಪಡಿಸಿಕೊಳ್ಳುವುದು ಕಠಿಣವಿದೆ. ಅದು ವಸ್ತಾರೆ ಹೋಬಳಿಯ ತೂದವಳ್ಳಿಯಾಗಿರಲೂಬಹುದು. ಖಚರ ಅರಸ ಕಂದರ್ಪನು ತನ್ನನ್ನು ಸೇನವರ ಜೀವಿತವಾರನ ಮೊಮ್ಮಗನೆಂದು ಪರಿಗಣಿಸಿಕೊಂಡಿದ್ದನು. ಮತ್ತು ಅಜ್ಜನನ್ನು ಕೊಂದ ಶತ್ರುಗಳ ವಿರುದ್ಧ ಯುದ್ಧಹೂಡಿದ್ದನು. ಅದನ್ನು ಮುಂದೆ ಚರ್ಚಿಸಲಾಗಿದೆ.

## ಸೇನವರರ ಬಗೆಗಿನ ಶಾಸನಗಳು

ಕ್ರಿ.ಶ. ೭೦೦ ರ ಕಾಲಾವಧಿಗೆ ಸೇರಿದ ಶಾಸನದಲ್ಲಿ ಪೃಥ್ವೀವಲ್ಲಭ ಸೇನವರನನ್ನು ಪ್ರಥಮ ಸೇನ ಅರಸನೆಂದು ಉಲ್ಲೇಖಿಸಲಾಗಿದೆ. ರೈಸ್‌ನ ಅಭಿಪ್ರಾಯದಲ್ಲಿ, ಅವನು ಚಾಲುಕ್ಯ ವಿಜಯಾದಿತ್ಯ ಸತ್ಯಾಶ್ರಯನ ಮಾಂಡಲಿಕನಾಗಿದ್ದನು.

೧೧ನೆಯ ಶತಮಾನದ ಆರಂಭಕಾಲದಲ್ಲಿ ಆಳ್ವಿಕೆ ನಡೆಸಿದ ಸೇನವರ ಅರಸನು ಕಲ್ಯಾಣದ ಹೆಮ್ಮಾಡಿ ವಿಕ್ರಮಾದಿತ್ಯನ ಮಾಂಡಲಿಕನಾಗಿದ್ದನೆಂದು ಮತ್ತೊಂದು ಶಾಸನ ತಿಳಿಸುತ್ತದೆ. ಈ

ವಿಕ್ರಮಾದಿತ್ಯನು ಕ್ರಿ.ಶ. ೧೨೦೦ ರಲ್ಲಿ ಬನವಾಸಿಯ ಅರಸನಾಗಿದ್ದನು. ಜೀವಿತವಾರನ (ಅಥವಾ ಜೀವಿತೇಶ್ವರನ) ಮೊಮ್ಮಗ ಮಾರಸಿಂಹದೇವನ ಶಾಸನದಲ್ಲಿ ಹೇಳಿರುವಂತೆ ಜೀವಿತವಾರನು ಕ್ರಿ.ಶ. ೧೦೨೦ರಲ್ಲಿ ಆಳುತ್ತಿದ್ದನು. ಅವನು ಒಂದು ದೇವಾಲಯವನ್ನು ಕಟ್ಟಿಸಿ ಅದನ್ನು ವಿಥೇಶ್ವರ ದೇವತೆಗೆ ಸಮರ್ಪಿಸಿದನೆಂದು ಹೇಳಲಾಗುತ್ತಿದೆ. ದೀರ್ಘಾಯುಸ್ಸು ಮತ್ತು ಶಕ್ತಿಸೂಚಕವಾದ ಜೀವಿತವಾರನೆಂದು ಹೆಸರು ಪಡೆದಿದ್ದರೂ ಯುದ್ಧದಲ್ಲಿ ತನ್ನ ವೈರಿಗಳ ಕೈಯಲ್ಲಿ ಅವನು ಮರಣವನ್ನಪ್ಪಿದನೆಂದು ಹೇಳಲಾಗುತ್ತಿರುವುದು ಚೋದ್ಯವೇ ಸರಿ. ಜೀವಿತವಾರನ ತರುವಾಯ ಅವನ ಮಗ ಜೀಮೂತವಾಹ (ಜೀಮೂತವಾಹನ) ರಾಜ್ಯವನ್ನಾಳಿದನು. ಮತ್ತು ಆ ದೇವಾಲಯಕ್ಕೆ ಮೂರು ಗ್ರಾಮಗಳ ದತ್ತಿಯಿತ್ತನು.

ಮಾರ ಅಥವಾ ಮಾರಸಿಂಹದೇವನು ಆ ಕಾಲದ ಅತಿ ಮಹತ್ವದ ಅರಸನಾಗಿದ್ದನು. ಅವನ ಐದು ಶಾಸನಗಳು ದೊರೆತಿವೆ. ವಿಳಂಬಿ ಸಂವತ್ಸರದ (ಕ್ರಿ.ಶ. ೧೦೫೮) ಆ ಶಾಸನ ಅವನನ್ನು ಮಾರಸಿಂಹನೆಂದು ಹೆಸರಿಸುತ್ತದೆ. ಇನ್ನೂ ಒಂದು ಶಾಸನದ ಪ್ರಕಾರ, ಅವನು ಚಿತ್ರವಳ್ಳಿ, ಮಳ್ಳವೂರ, ಚಕ್ಕವಿಟ್ಟಿ ಗ್ರಾಮಗಳಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದನು. ಅವನು ಮಾನಾದಗುಲಾ ಎಂಬ ದೇವಾಲಯವನ್ನು ಕಟ್ಟಿಸಿದನೆಂದು ಮತ್ತೂ ಒಂದು ಶಾಸನ ಹೇಳುತ್ತದೆ. ಅವನು ಚಿಕ್ಕಜೀಯ ಎಂಬವನಿಗೆ ಮಟದಪಳ್ಳಿಯನ್ನು ದತ್ತಿ ನೀಡಿದನೆಂದೂ ಹೇಳಲಾಗಿದೆ. ಖಚರ ಕಂದರ್ಪ ಸೇನವರನೆಂಬ ಅರಸನು ಜೈನದೇವಾಲಯ ಕಟ್ಟಿಸಿಕೊಳ್ಳಲು ಜೈನನೊಬ್ಬನಿಗೆ ಭೂಮಿಯನ್ನು ದತ್ತಿನೀಡಿದನೆಂದು ಖಾಂಡ್ಯ ಹೋಬಳಿಯ ಕಡವಂತಿ ಗ್ರಾಮದ ಶಾಸನವೊಂದು ಹೇಳುತ್ತದೆ.

ತನ್ನ ಅಜ್ಜ ಜೀವಿತವಾರನನ್ನು ಕೊಂದ ವೈರಿಗಳನ್ನು ಸೋಲಿಸಿ ಖಚರ ಕಂದರ್ಪ ಸೇನವರನು ಸೇಡು ತೀರಿಸಿಕೊಂಡ ಸಂಗತಿಯನ್ನು ಇನ್ನೊಂದು ಶಾಸನ ಹೇಳುತ್ತದೆ.ಬಲು ಶೂರ ಮತ್ತು ಬಲಶಾಲಿ ಅರಸನಾದ ಅವನಿಗೆ ಬಹುವಿಧ ಗುಣಗಳು ಮತ್ತು ಸಾಧನೆಗಳಿಗಾಗಿ ಹಲವಾರು ಶ್ರೇಷ್ಠ ಪ್ರಶಸ್ತಿಗಳು ಪ್ರಾಪ್ತವಾಗಿದ್ದವು. ಪದ್ಮಾವತಿಚರಣಸರೋಜಭೃಂಗ, ರಣರಂಗರಾಘವ, ಕಲಿಮುಟ್ಟೆಗಂಡ, ಬಿರುದರಂಕುಸ ಇತ್ಯಾದಿ.

ಅವನ ಆಳ್ವಿಕೆಯ ತರುವಾಯ ಈ ವಂಶದ ಬೇರಾವ ಅರಸನನ್ನೂ ಹೆಸರಿಸಿಲ್ಲ. ಅವನು ಈ ವಂಶದ ಕೊನೆಯ ಬಲಶಾಲಿ ಅರಸನೆಂದು, ಅವನ ತರುವಾಯ ಸೇನವರರು ದೃಶ್ಯದಿಂದ ಮಾಯವಾದಂತಿದೆ ಎಂದು ತಿಳಿಯಬಹುದು ಎಂಬುದು ಡಾ. ಸೂರ್ಯನಾಥ ಯು. ಕಾಮತ ಅಭಿಮತ. ಕಾಮತರು ಕರ್ನಾಟಕ ಪರಂಪರೆ ಸಂ.೧ (ಕರ್ನಾಟಕ ಸರಕಾರದ ಪ್ರಕಟಣೆ, ಬೆಂಗಳೂರು, ೧೯೭೦, ಪೃ.೩೮೫-೩೮೭)ರಲ್ಲಿ 'ಸೇನವರರು' ಎಂಬ ಲೇಖನ ಪ್ರಕಟಿಸಿದರು. ಆ ಲೇಖನ ಇದುವರೆಗೆ ಕರ್ನಾಟಕದಲ್ಲಿ ದೊರೆತ ಸೇನವರರನ್ನು ಕುರಿತ ಶಾಸನಗಳನ್ನು ಹೆಸರಿಸುತ್ತದೆ.

ಕೆಲವು ಲೇಖಕರ ಅಭಿಪ್ರಾಯದಲ್ಲಿ ಸೇನವರರು ಜೈನರಾಗಿದ್ದರು. ಈ ಗ್ರಹಿಕೆಗೆ ಖಚಿತ ಆಧಾರವಿಲ್ಲ. ಸೇನವರರು ಕಟ್ಟಿಸಿದ ದೇವಾಲಯಗಳು ಸಹ ಶಿವಾಲಯಗಳು. ದಕ್ಷಿಣ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಸೇನವರರು ಕಟ್ಟಿಸಿದ ದೇವಾಲಯವು ಈ ವಂಶದವರೆ ಕಟ್ಟಿಸಿದ್ದೆಂದು ಡಾ. ಪಿ. ಗುರುರಾಜ ಭಟ್ಟ ಅಭಿಪ್ರಾಯಪಡುತ್ತಾರೆ.

ಸಾರ್ಯನಾಥ ಯು ಕಾಮತ ಅವರ ಸೇನವರರು ಎಂಬ ಶೀರ್ಷಿಕೆಯ ಮೇಲ್ಕಾಣಿಸಿದ ಲೇಖನವೊಂದನ್ನು ಹೊರತುಪಡಿಸಿ ದಕ್ಷಿಣದಲ್ಲಿ ಸೇನ ಆಳ್ವಿಕೆಯ ಬಗೆಗೆ ಅತ್ಯಲ್ಪ ಮಾಹಿತಿ ಇದೆ. ಪ್ರಸ್ತುತ ಲೇಖನವು ಜ್ಞಾನದ ಕತ್ತಲುಪ್ರದೇಶವನ್ನು ಕೊಂಚಮಟ್ಟಿಗೆ ಬೆಳಗುತ್ತದೆ.

ಆದರೆ, ಇದೇ ಸೇನವರ ವಂಶದ ಕೊನೆಯೆಂದು ಬಗೆಯುವುದು ತಪ್ಪು. ಅವರು ಕತ್ತಲಲ್ಲಿ ಮುಳುಗಿಹೋಗಲಿಲ್ಲ. ಅವರ ವೈಭವ ಮತ್ತು ಪ್ರಾಬಲ್ಯ ಮರಣಿಸಲಿಲ್ಲ. ಕರ್ನಾಟಕದ ಪಶ್ಚಿಮದಲ್ಲಿ ರವಿ ಅಸ್ತಂಗತನಾದರೂ ಪೂರ್ವ ದಿಗಂತವನ್ನು ಉಜ್ವಲಗೊಳಿಸಲು ಉದಯಿಸಿದನು. ಸೇನವಂಶದ ಸೂರ್ಯ ತನ್ನೆಲ್ಲ ಪ್ರಕಾಶಮಾನತೆಯೊಂದಿಗೆ ಉದಯಿಸಿದುದನ್ನು ಬಂಗಾಲ ಕಂಡಿತು. ಆ ಕಾಲಕ್ಕೆ ಬಿಜೊಯ್‌ಸೇನನು ಬಂಗಾಲದಲ್ಲಿ ತನ್ನನ್ನು ಸ್ಥಾಪಿಸಿಕೊಂಡಿದ್ದನು. ಮತ್ತು ತನ್ನ ರಾಜ್ಯವನ್ನು ವಿಸ್ತರಿಸಬಯಸಿದ್ದನು. ತನ್ನ ಕನಸನ್ನು ಸಾಕಾರಗೊಳಿಸಲೋಸುಗ ಅವನು ಕರ್ನಾಟಕದಿಂದ ಶೂರ ಸೇನ ಯೋಧರನ್ನು ಮತ್ತು ದೊರೆಗಳನ್ನು ಕರೆಸಿಕೊಂಡಿರಬಹುದು. ತತ್ಪರಿಣಾಮವಾಗಿ, ಬಂಗಾಲ ಸಾಮ್ರಾಜ್ಯವನ್ನು ಭದ್ರಪಡಿಸಲೋಸುಗ ಸೇನ ಮಾಂಡಲಿಕರು ಕರ್ನಾಟಕದಿಂದ ಬಂಗಾಲಕ್ಕೆ ವಲಸೆಹೋದರು. ಆದುದರಿಂದ, ಕರ್ನಾಟಕದಲ್ಲಿ ಅವರ ಶೌರ್ಯ ಸಾಹಸಗಳನ್ನು ಸಾರುವ ಮತ್ತಾವ ಸ್ತಂಭಗಳಾಗಲಿ, ಶಾಸನಗಳಾಗಲಿ ಇಲ್ಲ. ಬಂಗಾಲದಲ್ಲಿ- ಅಂದರೆ ಬರಕಪುರ, ದೇವಪಾದ ಮತ್ತು ನೈಹಾತಿಗಳಲ್ಲಿ- ದೊರೆತ ಶಾಸನಗಳ ಪ್ರಕಾರ, ಸ್ಥಳೀಯ ಮತ್ತು ಕರ್ನಾಟಕದಿಂದ ಬಂದ ಸೇನ ವೀರಯೋಧರ ಸಹಾಯದಿಂದ ಬಿಜೊಯ್‌ಸೇನನು ತನ್ನ ರಾಜ್ಯವನ್ನು ಪೂರ್ವದಲ್ಲಿ ಬ್ರಹ್ಮಪುತ್ರದವರೆಗೆ, ಪಶ್ಚಿಮದಲ್ಲಿ ವಾರಣಾಸಿವರೆಗೆ ಮತ್ತು ದಕ್ಷಿಣದಲ್ಲಿ ಕಲಿಂಗದವರೆಗೆ ವಿಸ್ತರಿಸುವಲ್ಲಿ ಯಶಸ್ವಿಯಾದನು. ಹೀಗೆ, ಅವರು ಬಂಗಾಲದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆದರು.

◈◈◈

ಅಧ್ಯಾಯ ೨

# ಬಂಗಾಲದ ಸೇನರು

ಸಾಮಂತಸೇನ: ಸಾಮಂತಸೇನನು ಕರ್ಣಾಟಕದಲ್ಲಿ ಸೇನವಂಶ ಸ್ಥಾಪಿಸಿದ ಸೇನವರ ಬೀರಸೇನನ ವಂಶಜ. ಅವನು ಕರ್ಣಾಟಕದಲ್ಲಿ ಕ್ರಿ.ಶ. ೧೧ ನೆಯ ಶತಮಾನದಲ್ಲಿ ಆಳಿದನು. ಅವನ ಆಳ್ವಿಕೆಯಲ್ಲಿ ಕರ್ಣಾಟಕದ ಮೇಲೆ ದಾಳಿಗಾರರು ಆಕ್ರಮಣ ಮಾಡಿದರು. ಸಾಮಂತಸೇನನು ಅವರನ್ನು ಪ್ರತಿಭಟಿಸಿ ಹಿಮ್ಮೆಟ್ಟಿಸಿದನು. ಆದರೆ, ಆಂತರಿಕ ದಂಗೆಯಿಂದಾಗಿ ತನ್ನ ರಾಜ್ಯದಲ್ಲಿ ಶಾಂತಿ ಪುನರ್‌ಸ್ಥಾಪಿಸಲು ವಿಫಲನಾದನು. ಮೇಲಿಂದ ಮೇಲೆ ದಂಗೆಯೇಳುವುದು ಸಾಮಾನ್ಯ ಸ್ಥಿತಿಯಾದುದರಿಂದ ಅವನು ಇವೆಲ್ಲ ಅಪಾಯಕಾರಿ ಘಟನೆಗಳಿಂದ ಬೇಸತ್ತು ಕರ್ಣಾಟಕವನ್ನು ಬಿಟ್ಟು ಬಂಗಾಲಕ್ಕೆ ಬಂದ. ಹೀಗೆ, ಅವನನ್ನು ಬಂಗಾಲದ ಪ್ರಥಮ ಸೇನ ಅರಸನೆಂದು ಕರೆಯಬಹುದು. ಮುಪ್ಪು ಬಂದಾಗ ಸಾಮಂತಸೇನನು ಕರ್ನಾಟಕದಿಂದ ಪಶ್ಚಿಮ ಬಂಗಾಲದ ದಕ್ಷಿಣದಲ್ಲಿದ್ದ ಗಂಗಾನದಿ ತೀರಕ್ಕೆ ತೆರಳಬಯಸಿದ. ತನ್ನ ವಾನಪ್ರಸ್ಥಾಶ್ರಮದಲ್ಲಿ ಪವಿತ್ರ ಗಂಗಾನದಿ ದಕ್ಷಿಣದಲ್ಲಿದ್ದ ಗಂಗಾನದಿ

ತೀರಕ್ಕೆ ತೆರಳಬಯಸಿದ. ತನ್ನ ವಾನಪ್ರಸ್ಥಾಶ್ರಮದಲ್ಲಿ ಪವಿತ್ರ ಗಂಗಾನದಿ ತೀರದಲ್ಲಿ ನೆಮ್ಮದಿ ಪಡೆಯಬಯಸಿದ.

**ಹೇಮಂತಸೇನ:** ಸಾಮಂತಸೇನನ ವಂಶಜನಾದ ಹೇಮಂತಸೇನನು ಪಶ್ಚಿಮ ಬಂಗಾಲದಲ್ಲಿ ತನ್ನನ್ನು ಇನ್ನಷ್ಟು ಸ್ಥಾಪಿಸಿಕೊಂಡ. ಬಖ್ತಿಯಾರ ಖಿಲ್ಜಿಯ ದಾಳಿಯವರೆಗೆ ಸೇನರು ಬಂಗಾಲದಲ್ಲಿ ನೆರೆ ರಾಜ್ಯಗಳ ಹಸ್ತಕ್ಷೇಪವಿಲ್ಲದೆ ಸುದೀರ್ಘವಾಗಿ ಆಳಿದರು. ತಾನು ಬಂಗಾಲಕ್ಕೆ ಬಂದಾಗ ಸಾಮಂತಸೇನನು ಯಾವುದೆ ರಾಯಬಿರುದನ್ನು ಧರಿಸಿರಲಿಲ್ಲ. ಆದರೆ, ಅವನ ಮಗ ಹೇಮಂತಸೇನನು ಮಹಾರಾಜಾಧಿರಾಜಾ ಎಂಬ ಬಿರುದು ಧರಿಸಿದನು. ಮತ್ತು ತನ್ನ ರಾಜ್ಯಕ್ಕೆ ಪಶ್ಚಿಮ ಬಂಗಾಲದ ಕೆಲ ದಕ್ಷಿಣ ಭಾಗವನ್ನು ಸೇರ್ಪಡಿಸಿದನು. ಆದರೆ, ಅವನ ವಂಶಜರು ಬಿಟ್ಟುಹೋಗಿರುವ ಶಾಸನಗಳು ಮತ್ತು ತಾಮ್ರಪಟಗಳನ್ನು ಹೊರತುಪಡಿಸಿ ಹೇಮಂತಸೇನನ ಬಗೆಗೆ ನಿರ್ದಿಷ್ಟ ಪ್ರಮಾಣ ಇದುವರೆಗೂ ದೊರೆತಿಲ್ಲ. ಅಂತಾಗಿಯೂ, ವಂಶಾವಳಿಯ ಪುಸ್ತಕದ (ಕುಲ್ಜಿ) ಪ್ರಕಾರ, ಸಾಮಂತಸೇನನು ಯಾವುದೇ ರಾಯಬಿರುದನ್ನು ಧರಿಸದಿದ್ದರೂ ಅವನ ಮಗ ಹೇಮಂತಸೇನನು ಕಾಶೀಪುರಿಯ ಮೇಲೆ ಪ್ರಭುತ್ವ ಹೊಂದಿದ್ದ. ಅದನ್ನೀಗ ಕೇಸಿಯಾರಿ ಎಂದು ಕರೆಯುತ್ತಿದ್ದು ಅದು ಸುಬರ್ಣರೇಖಾ ನದಿಯ ತಟದಲ್ಲಿ ಮಿದ್ನಾಪುರ ಜಿಲ್ಲೆಯಲ್ಲಿದೆ. ಹೇಮಂತಸೇನನು ದಕ್ಷಿಣ ಬಂಗಾಲದ ಮೂಲಕ ಮುಂದುವರೆದು ಪೂರ್ವ ಬಂಗಾಲದಲ್ಲಿ ತನ್ನ ಪ್ರಭುತ್ವ ಸ್ಥಾಪಿಸಿದ.

**ಬಿಜೊಯ್‌ಸೇನ (ಬಿಜಯಸೇನ):** ವಂಶಾವಳಿ ಪುಸ್ತಕಗಳ ಪ್ರಕಾರ ಬಿಜೊಯ್‌ಸೇನನು ಶಕ ೯೫೧ ರಲ್ಲಿ ಜನಿಸಿದನು. ಸಂಬಂಧ ತತ್ತ್ವಾರ್ಣವ ಕೂಡ ಅವನ ಜನ್ಮದಿನಾಂಕವನ್ನು ಶಕ ೯೫೧ ಅಂದರೆ ಕ್ರಿ.ಶ. ೧೦೨೯ ಎಂದು ದೃಢಪಡಿಸುತ್ತದೆ. ರಾಢೀಯ ಕುಲಮಾಂಜರಿ ಪ್ರಕಾರ, ಅವನು ೩೪ ವರ್ಷ ಆಳಿದ (ಶ್ರೀಧರೋ ಪಾಲಯತಾಬ್ದಮ್ ಚತುಸ್ತ್ರಿಂಶತ್ ಸಮಾಃ ಕ್ಷಮಾಮ್).

ಬಿಜೊಯ್‌ಸೇನನು ಶಕ ೧೦೪೧ ಅಂದರೆ ಕ್ರಿ.ಶ. ೧೧೧೯ ರಲ್ಲಿ ತನ್ನ ತೊಂಬತ್ತನೆಯ ವಯಸ್ಸಿಗೆ ತೀರಿಕೊಂಡನು. ಆದರೆ, ನಿಹಾರ ರಂಜನ ರೇ ತಮ್ಮ ಬಾಂಗಾಲೀರ ಇತಿಹಾಸದ 'ರಾಜಬೃತ್ತ' ಅಧ್ಯಾಯದಲ್ಲಿ ಬಿಜೊಯ್‌ಸೇನನು ಕ್ರಿ.ಶ. ೧೦೯೫ ರಿಂದ ಕ್ರಿ.ಶ. ೧೧೧೯ ರವರೆಗೆ ಆಳಿದನೆಂದು ಸೂಚಿಸಿದ್ದಾರೆ. ಹೇಮಂತಸೇನನ ಮರಣ ಮತ್ತು ಬಲ್ಲಾಳಸೇನನ ಸಿಂಹಾಸರೋಹಣ ದಿನಾಂಕವನ್ನು ಗಮನಿಸಿ ಬಿಜೊಯ್‌ಸೇನನು ಕ್ರಿ.ಶ. ೧೦೭೯ ರಿಂದ ಕ್ರಿ.ಶ. ೧೧೧೯ ರವರೆಗೆ ಆಳಿದನೆಂದು ಸಮಂಜಸವಾಗಿ ಹೇಳಬಹುದು. ಹೇಮಂತಸೇನನ ಮಗ ಬಿಜೊಯ್‌ಸೇನನು ತಂದೆಯ ತರುವಾಯ ಗದ್ದುಗೆಯೇರಿದ. ಬಿಜೊಯ್‌ಸೇನನ ಬಗೆಗೆ ಬರಕಪುರ ಶಾಸನ ಮತ್ತು ದೇವಪಾದ ತಾಮ್ರಪಟ ಶಾಸನಗಳು ತಿಳಿಸುತ್ತವೆ. ಸಾಮಂತಸೇನನ ವಂಶಜರು ಪಶ್ಚಿಮ ಬಂಗಾಲದ ದಕ್ಷಿಣ ಭಾಗದ ನಿವಾಸಿಗಳಾಗಿದ್ದರೆಂದು ನೈಹಾತಿ ತಾಮ್ರಪಟಶಾಸನ ತಿಳಿಸುತ್ತದೆ. ಸಾಮಂತಸೇನನು ರಾಜ ಉಪಾದಿಯನ್ನು ಧರಿಸದಿದ್ದರೂ ತನ್ನ ಕಾಲದ ಶ್ರೇಷ್ಠತಮ ಬ್ರಹ್ಮಕ್ಷತ್ರಿಯನಾಗಿದ್ದನೆಂದು ಆ ಶಾಸನ ಮುಂದುವರೆದು ತಿಳಿಸುತ್ತದೆ. ಕರ್ನಾಟಕ ರಾಜವಂಶ ತನ್ನ ರಾಜಶ್ರೇಷ್ಠತೆಗೆ ಹೆಸರಾಗಿದ್ದುದ್ದಲ್ಲದೆ

ಬಲ್ಲಾಳಸೇನನು ಕುಲೀನ ಹಿಂದೂಗಳಿಗೆ ಕೌಲೀನ್ಯಪ್ರಥಾ ಎಂಬ ಸ್ವಗೋತ್ರ ವಿವಾಹದ ಸಾಮಾಜಿಕ ಉಪವರ್ಗೀಕರಣವನ್ನು ಆಸ್ಥೆವಹಿಸಿ ಜಾರಿಗೊಳಿಸಿದ. ಬ್ರಾಹ್ಮಣರು ಮತ್ತು ಕಾಯಸ್ಥರಂಥ ಕುಲೀನರ ರಕ್ತಶುದ್ಧಿಯನ್ನು ಅಂದರೆ, ದೈಹಿಕ ಲಕ್ಷಣಗಳು ಮತ್ತು ಮೌಲ್ಯಗಳನ್ನು ಸಂರಕ್ಷಿಸುವುದೆ ಕೌಲೀನ್ಯಪ್ರಥಾ ದ ಉದ್ದೇಶವಾಗಿತ್ತು.

ಬಿಜೊಯ್‌ಸೇನನ ಆಳ್ವಿಕೆಯ ಕಾಲದ ಐತಿಹಾಸಿಕ ಘಟನೆಗಳಿಂದ ಅವನೊಬ್ಬ ಆ ಕಾಲದ ಪರಿಣಿತ ಮತ್ತು ಪರಿಣಾಮಕಾರಿ ರಾಜತಂತ್ರಜ್ಞನಾಗಿದ್ದನೆಂದು ತಿಳಿದುಬರುತ್ತದೆ. ಅವನು ಬಂಗಾಲ ರಾಜಕಾರಣದ ಪ್ರಕ್ಷುಬ್ಧ ನೀರಿನಲ್ಲಿ ಮುಳುಗುಹಾಕಿ ಯಶಸ್ವಿಯಾಗಿ ಮೇಲೆದ್ದು ಬಂದನು ಎಂದಿದ್ದಾರೆ ಡಾ. ರಮೇಶ ಮಜುಮದಾರ. ನಾನ್ಯದೇವ, ಬೀರದೇವ ಮತ್ತು ರಾಘವವರ್ಧನ ಮುಂತಾದ ಕೆಲವು ಸ್ವತಂತ್ರ ಭೂಪಾಲರು ಮತ್ತು ಗೌಡ, ಕಲಿಂಗ ಮತ್ತು ಕಾಮರೂಪಗಳ ಅರಸರನ್ನು ಸೋಲಿಸಿದನು. ನಾನ್ಯದೇವನ ರಾಜ್ಯದ ಬಹುಭಾಗವನ್ನು ಗೆದ್ದುಕೊಂಡನು. ನಾನ್ಯದೇವನೂ ಕರ್ನಾಟಕದವನೇ. ಬಿಜೊಯ್‌ಸೇನನಿಗೆ ಮೊಮ್ಮಗ ಲಕ್ಷ್ಮಣಸೇನ ನೆರವು ನೀಡಿದ. ಲಕ್ಷ್ಮಣಸೇನನು ಉತ್ತರ ಬಂಗಾಲ ಮತ್ತು ಮಿಥಿಲೆಯ ರಾಜರ ವಿರುದ್ಧ ತನ್ನ ಸೈನ್ಯವನ್ನು ಮುನ್ನಡೆಸಿದ.

ಬಿಜೊಯ್‌ಸೇನನು ಗೌಡ ರಾಜ್ಯದ ಸಾಮ್ರಾಟನೆಂಬ ಅಂತಸ್ತನ್ನು ಪಡೆಯಲಿಲ್ಲ. ಆದರೆ, ಅವನ ಮೊಮ್ಮಗ ಲಕ್ಷ್ಮಣಸೇನನು ಅದನ್ನು ಸಾಧಿಸುವಲ್ಲಿ ಯಶಸ್ವಿಯಾದನು.ಮತ್ತು ಗೌಡೇಶ್ವರ ಎಂಬ ಬಿರುದಿನೊಂದಿಗೆ ಸಿಂಹಾಸನವೇರಿದ. ಬಿಜೊಯ್‌ಸೇನನು ತನ್ನ ರಾಜ್ಯವನ್ನು ಪೂರ್ವದಲ್ಲಿ ಬ್ರಹ್ಮಪುತ್ರದವರೆಗೆ, ಪಶ್ಚಿಮದಲ್ಲಿ ವಾರಣಾಸಿಯವರೆಗೆ, ದಕ್ಷಿಣದಲ್ಲಿ ಕಲಿಂಗದವರೆಗೆ ವಿಸ್ತರಿಸಿದ.

ಬಲ್ಲಾಳಸೇನ (೧೧೫೮-೧೧೭೯): ಬಿಜಯಸೇನನ ನಂತರ ಅವನ ಮಗ ಬಲ್ಲಾಳಸೇನನು ಸಿಂಹಾಸನವನ್ನೇರಿ ಕ್ರಿ.ಶ. ೧೧೭೯ ರವರೆಗೆ ಆಳಿದನು. ಸಮಕಾಲೀನ ಗ್ರಂಥಗಳು ಮತ್ತು ಇತರ ಪ್ರಮಾಣಗಳು ಅವನು ಮಗಧ ಮತ್ತು ಮಿಥಿಲೆಗಳನ್ನು ಗೆದ್ದುದನ್ನು ತೋರ್ಪಡಿಸುತ್ತವೆ.ಅವನು ಶ್ರೇಷ್ಠ ಅರಸನಷ್ಟೇ ಆಗಿರದೆ ತೀಕ್ಷ್ಣಮತಿಯ ಪಂಡಿತನೂ ಬಂಗಾಲದ ಹಿಂದೂ ಸಮಾಜದ ಮುಖ್ಯಸ್ಥನೂ ಆಗಿದ್ದ. ದಾನಸಾಗರ ಮತ್ತು ಅದ್ಭುತಸಾಗರ ಮುಂತಾದ ಕೆಲವು ಗ್ರಂಥಗಳನ್ನು ರಚಿಸಿರುವನು.

ಬಿಜೊಯ್‌ಸೇನನು ತನ್ನ ಜೇಷ್ಠಪುತ್ರ ಶ್ಯಾಮಲಸೇನನಿಗೆ ಕ್ರಿ.ಶ. ೧೧೭೯ರಲ್ಲಿ ಪಟ್ಟಗಟ್ಟಿದನೆಂದು ವೈದಿಕ ಬ್ರಾಹ್ಮಣರ ವಂಶಾವಳಿ ವೃತ್ತಾಂತದಲ್ಲಿ ಬರೆದಿದೆ. ಸಾಮಾನ್ಯ ನಂಬಿಕೆಯಂತೆ, ಬಲ್ಲಾಳಸೇನನು ಆ ಸಮಯದಲ್ಲಿ ಅಸ್ಸಾಂನಕ್ಕೆ ಹೋಗಿದ್ದ. ಬಂಗಾಲದ ಸೂರವಂಶದ ರಾಜಕುಮಾರಿಯಾಗಿದ್ದ ಅವನ ತಾಯಿ ಅವನೊಂದಿಗೆ ಮಧುರ ಸಂಬಂಧ ಹೊಂದಿರಲಿಲ್ಲವಾದ್ದರಿಂದ ಆಸಾಮದಲ್ಲಿಯೇ ಬಹುಕಾಲ ವಾಸಿಸಿದಳು. ಬಲ್ಲಾಳ ಹುಟ್ಟಿದ್ದು ಅಲ್ಲಿಯೇ. ಬಲ್ಲಾಳ ಎಂಬ ಹೆಸರಿಗೆ ಅವನ ಜನ್ಮಸ್ಥಳದ ಆರಣ್ಯಕ ಲತಾಬಲ್ಲರಿ ಪರಿಸರವೇ ಪ್ರೇರಕವೆಂದು ಭಾವಿಸಲಾಗಿದೆ.

ಸೇನರು ಒಳ್ಳೆಯ ಸಂಬಂಧ ಹೊಂದಿದ್ದ ಕರ್ನಾಟಕದ ಹೊಯ್ಸಳ ಬಲ್ಲಾಳ ಬಣದಿಂದ ಬಲ್ಲಾಳ ಎಂಬ ಹೆಸರು ಇವರಿಗೆ ಬಂದಿರಬಹುದು. ಅದು ಏನೆ ಇರಲಿ, ಬಿಜೊಯ್‌ಸೇನನ

ಮರಣಾನಂತರ ಬಲ್ಲಾಳಸೇನನು ರಾಜಧಾನಿಗೆ ಆಗಮಿಸಿ ಬಹುಶಃ ಶ್ಯಾಮಲದೇವನನ್ನು ಉಚ್ಚಾಟಿಸಿ ಸಿಂಹಾಸನವೇರಿದ.

ಬಲ್ಲಾಳನನ್ನು ಬಂಗಾಲಿ ಮತ್ತು ಆಸಾಮಿ ಪ್ರಜೆಗಳು ತಮ್ಮ ರಾಜನೆಂದೇ ಸ್ವೀಕರಿಸಿದರು. ಎರಡೂ ಸಮುದಾಯಗಳ ಮಧ್ಯೆ ಯಾವುದೇ ಭೇದಭಾವ ಇರಲಿಲ್ಲವೆಂಬುದನ್ನು ಇತ್ತೀಚಿನ ದಿನಗಳ ಕೆಲವು ಸಂದರ್ಭಗಳಲ್ಲಿ ಕಾಣಬಹುದು.

ಕ್ರಿ.ಶ. ೧೧೯೮ ಅಥವಾ ೧೧೯೯ ರ ಸುಮಾರಿಗೆ ಕುತುಬುದ್ದೀನನು ದಿಲ್ಲಿಯ ಸುಲ್ತಾನನಾಗಿದ್ದಾಗ ಬಖ್ತಿಯಾರನು ನದಿಯಾ ಊರಿನ ಮೇಲೆ ದಾಳಿಮಾಡಿದನೆಂದು ಮಿನ್ಹಾಜ್-ಆಸ್-ಸಿರಾಜ ರಚಿಸಿದ ಗ್ರಂಥ ತಬಾಕತ್-ಇ-ನಾಸಿರಿ ಹೇಳುತ್ತದೆ. ಲಕ್ಷ್ಮಣಸೇನನು ತನ್ನ ತಾಯಿಯ ಗರ್ಭದಲ್ಲಿದ್ದಾಗಲೆ ಅವನ ತಂದೆ ಮೃತಪಟ್ಟನೆಂದು ಈ ಗ್ರಂಥದಲ್ಲಿ ಹೇಳಿದೆ. ಅವನಿಗೆ ಜನ್ಮವಿತ್ತು ನಂತರ ತಾಯಿಯು ಮೃತಳಾದಳು. ಅವನ ಸಿಂಹಾಸನಾರೋಹಣದ ದಿನಾಂಕವನ್ನೇ ಅವನ ಜನ್ಮದಿನಾಂಕವನ್ನಾಗಿ ತೆಗೆದುಕೊಳ್ಳಲಾಗಿದೆ. ಆದ್ದರಿಂದ, ೧೧೧೯ ಲಕ್ಷ್ಮಣಸೇನನ ಸಿಂಹಾಸನಾರೋಹಣದ ವರ್ಷವೆಂದು ಸ್ವೀಕರಿಸಲಾಗಿದೆ. ಬಖ್ತಿಯಾರನು ಕ್ರಿ.ಶ. ೧೧೯೯ರಲ್ಲಿ (ಅಥವಾ ಕ್ರಿ.ಶ. ೧೨೦೨ರಲ್ಲಿ ?) ನದಿಯಾ ಊರಿನ ಮೇಲೆ ದಾಳಿ ಮಾಡಿದಾಗ ಲಕ್ಷ್ಮಣಸೇನನಿಗೆ ಎಂಬತ್ತು ವರ್ಷವಾಗಿತ್ತು. ಲಘುಭಾರತ ಎಂಬ ಸಂಸ್ಕೃತ ಗ್ರಂಥದಲ್ಲಿ ಹೇಳಿರುವಂತೆ ಲಕ್ಷ್ಮಣಸೇನನ ತಂದೆ ಬಲ್ಲಾಳಸೇನನು ಮಿಥಿಲಾ ಯುದ್ಧದಲ್ಲಿ ಕಾದಾಡುತ್ತಿದ್ದಾಗ ಮೃತನಾದನೆಂಬ ವದಂತಿ ಕೇಳಿಬಂತು. ಆ ಕ್ಷಣದಲ್ಲಿಯೇ ಲಕ್ಷ್ಮಣಸೇನ ಜನಿಸಿದ. ಈ ವದಂತಿಯಿಂದಾಗಿ ಲಕ್ಷ್ಮಣಸೇನನನ್ನು ವಿಕ್ರಮಪುರ ಸಿಂಹಾಸನದ ಮೇಲೆ ಕೂಡಿಸಲಾಯಿತು. ಇದಕ್ಕೆ ಪ್ರತಿಯಾಗಿ ಬಲ್ಲಾಳಸೇನನು ಮಿಥಿಲೆಯಲ್ಲಿದ್ದಾಗ ತನ್ನ ಮಗನ ಜನನದ ಸುದ್ದಿ ಕೇಳಿದಾಗ ಅವನು ಲಕ್ಷ್ಮಣಸೇನ ಸಂಬತನನ್ನು ತಂದು ಸಿಂಹಾಸನದ ಮೇಲೆ ಕೂಡಿಸಿದ. ಲಘುಭಾರತದಲ್ಲಿ ಈ ಶ್ಲೋಕವಿದೆ

ಪ್ರವಾದಃ ಶ್ರೂಯತೇ ಚಾತ್ರ ಪಾರಂಪರೀನಾ ವಾರ್ತಯಾ
ಮಿಥಿಲೇ ಯುದ್ಧ ಯಾತ್ರಾಯಾಂ ಬಲ್ಲಾಲೋಭೂನ್ಮೃತಧ್ವನಿಃ
ತದನೀಂ ಬಿಕ್ರಮಪುರೇ ಲಕ್ಷ್ಮಣಃ ಜಾತವಾನಸು||

ಹಾಗೆ ನೋಡಿದರೆ, ಬಲ್ಲಾಳಸೇನನು ಕ್ರಿ.ಶ. ೧೧೬೯ರಲ್ಲಿ ಮಡಿದನೆಂದು ಹೇಳಲು ಬರುವುದಿಲ್ಲ. ಏಕೆಂದರೆ, ಅವನು ತನ್ನ ವಿಖ್ಯಾತ ದಾನಸಾಗರವನ್ನು ಕ್ರಿ.ಶ. ೧೧೬೯ರಲ್ಲಿ ಬರೆದುದು ಸ್ಪಷ್ಟವಿದೆ.

ನಿಖಿಲ ಚಕ್ರ ಆರಿಮತ್ ಬಲ್ಲಾಲಸೇನ

ಪೂರ್ಣೇಶಶೀ ನವ ದಶಮಿತೇ ಶಕವರ್ಷೇ ದಾನಸಾಗರಃ ರಚಿತಃ||

- ದಾನಸಾಗರ ಭಾಗ, ಪುಟ ೨೬.

ಬಲ್ಲಾಳಸೇನ ವಿರಚಿತ ಅದ್ಭುತಸಾಗರದ ಪೀಠಿಕೆಯಲ್ಲಿ ಅವನು ಅದನ್ನು ಕ್ರಿ.ಶ. ೧೧೬೮ರಲ್ಲಿ ರಚಿಸಲಾರಂಭಿಸಿದನು. ಆದರೆ, ಅದನ್ನು ಪೂರ್ತಿಗೊಳಿಸುವ ಮುನ್ನ ತನ್ನ ಮಗ ಲಕ್ಷ್ಮಣಸೇನನಿಗೆ

ಪಟ್ಟಗಟ್ಟಿ, ಆ ಗ್ರಂಥವನ್ನು ಪೂರ್ತಿಗೊಳಿಸುವ ಕಾರ್ಯವನ್ನು ಮಗನಿಗೆ ಒಪ್ಪಿಸಿದನೆಂದು ಕಂಡುಬರುತ್ತದೆ.

ಕ್ರಿ.ಶ. ೧೧೧೯ ಲಕ್ಷ್ಮಣಸೇನನ ಜನ್ಮವರ್ಷವೆಂದು ಒಪ್ಪಿದರೆ ಆಗ ಬಲ್ಲಾಳಸೇನನಿಗೆ ೨೦ ವರ್ಷ ವಯಸ್ಸಾಗುತ್ತದೆ. ೧೧೬೮ರಲ್ಲಿ ಅದ್ಭುತಸಾಗರ ರಚನೆಯ ಕಾಲಕ್ಕೆ ೬೯ ಆಗುವುದು. ಇಂಥ ಮುಪ್ಪಿನ ವಯಸ್ಸಿನಲ್ಲಿ ಅರಸ ಬಲ್ಲಾಳಸೇನನು ಅದ್ಭುತಸಾಗರ ಗ್ರಂಥವನ್ನು ಪೂರ್ತಿಗೊಳಿಸಲು ಅಶಕ್ತನಾಗಿ ತನ್ನ ಮಗನಿಗೆ ಅದರ ಜವಾಬ್ದಾರಿ ವಹಿಸುವಂತೆ ಕೇಳಿದುದು ಸಹಜವಾಗಿದೆ. ತಾನೊಬ್ಬ ವೀರನೂ ಬ್ರಹ್ಮಕ್ಷತ್ರಿಯನೂ ಆಗಿದ್ದು ವೃದ್ಧಾಪ್ಯ ಮತ್ತು ಅನಾರೋಗ್ಯದಿಂದ ಹಾಸಿಗೆ ಹಿಡಿದು ಮರಣಿಸಬಯಸಲಿಲ್ಲ.

ಇಚ್ಛಾಮರಣವನ್ನಪ್ಪಿದ ಭೀಷ್ಮ ಪಿತಾಮಹನ ಹೆಜ್ಜೆಯನ್ನನುಸರಿಸಿ ಪಾಂಡವರು ತಮ್ಮ ಪ್ರಾಣ ತ್ಯಜಿಸಲು ಅಪಾಯಕಾರಿ ಹಿಮಾಲಯ ಪರ್ವತಾರೋಹಣ ಕೈಗೊಂಡಂತೆ ಪಾಂಡವ ವಂಶೀಯನಾದ ಬಲ್ಲಾಳಸೇನನು ಮತ್ತು ಅವನ ಮಡದಿಯು ಗಂಗಾನದಿ ಪ್ರವೇಶಿಸಿ ಸ್ವಯಮಿಚ್ಛೆಯಿಂದ ಸಾವನ್ನಪ್ಪಿದರು.

ಮೇಲಾಗಿ, ಅಪ್ರಸ್ತುತ ಪ್ರಶಂಸೆಯ ಕೆಲವು ಸಂಸ್ಕೃತ ಪದ್ಯಗಳ ರಚನೆಯನ್ನು ಲಕ್ಷ್ಮಣಸೇನನಿಗೆ ಆರೋಪಿಸಲಾಗಿದೆ. ತನ್ನ ತಂದೆ ಬಲ್ಲಾಳಸೇನನು ತಾಂತ್ರಿಕ ವಿಧಾನದ ಸಾಧನೆಗೈಯಲು ಅಂಥ ತಾಂತ್ರಿಕ ಆಚರಣೆಗಳಿಗಾಗಿ ಕೀಳು ದೊಂಬ ಕುಲದ ಹೆಂಗಸೊಬ್ಬಳನ್ನು ಪತ್ನಿಯಾಗಿ ತಂದಾಗ ಲಕ್ಷ್ಮಣಸೇನನು ಆ ಪದ್ಯಗಳನ್ನು ರಚಿಸಿದನು. ಆಕ್ಷೇಪಣೆಗಳಿಗೆ ಬಲ್ಲಾಳಸೇನನು ನೀಡಿದ ಉತ್ತರಗಳು ಬಂಗಾಲದ ಸಂಪ್ರದಾಯವಾದಿ ಪಂಡಿತರಿಗೆ ಇನ್ನೂ ನೆನಪಿನಲ್ಲಿವೆ. ಲಕ್ಷ್ಮಣಸೇನನು ಕೆಳಗೆ ನೀಡಿದಂಥ ಶ್ಲೋಕಗಳನ್ನು ರಚಿಸುವಷ್ಟು ಪ್ರೌಢನಾದಾಗ ಬಲ್ಲಾಳಸೇನನು ಇನ್ನೂ ಬದುಕಿದ್ದನೆಂದು ಈ ಶ್ಲೋಕಗಳು ಸೂಚಿಸುತ್ತವೆ:

ಲಕ್ಷ್ಮಣಸೇನ:

ಶೈತ್ಯಮ್ ನಾಮಗುಣಸ್ತವೈವ
ಸಹಜ ಸ್ವಾಭಾವಿಕೀ ಸ್ವಚ್ಛತಾ
ಕಿಮ್ ಬ್ರೂಮಃ ಸುಚಿತಾಂಭ್ವಂತಿ
ಸೂಚಯ ಸ್ಪರ್ಶೇನ ಯಸ್ಯಾಪರೇ |
ಕಿಮ್‌ಚಾನ್ಯತ್ ಕಥಯಾಮಿ ತೇ ಸ್ತುತಿಪದಮ್‌ತ್ವಮ್
ಜೀವಿನಾಮ್ ಜೀವನಮ್
ತ್ವಮ್ ಚೇತ್ ನೀಚಪಕ್ಷೇಣ ಗಚ್ಛಸಿ ಪಯಃ
ಕಸ್ತ್ವಾನಿರೋಧ್ಯಮ್ ಕ್ಷಮಃ|

ಅನುವಾದ: ಯಾವುದು ಶಾಂತತೆ ಮತ್ತು ಸ್ವಚ್ಛತೆಯಿಂದ ಕೂಡಿದೆಯೊ, ಯಾವುದರ ಸ್ಪರ್ಶ ಇತರರನ್ನು ಪವಿತ್ರಗೊಳಿಸುವುದೊ, ಯಾವುದು ಬೇರೆ ಜೀವಿಗಳ ಪ್ರಾಣವೇ ಆಗಿದೆಯೊ ಅಂಥ ಜಲ (ಅಂದರೆ, ಅರಸ ಬಲ್ಲಾಳ) ಅಧೋಮುಖವಾಗಿ ಹರಿದರೆ ಅದನ್ನಾರು ತಡೆದಾರು?

ಬಲ್ಲಾಳಸೇನ: ತಾಪೋನಾವಸಿತಸ್ತೃಷಾ ನಚಕೃಷಾ ಧೂಲಿರ್ನಧೂತಸ್ತ್ಸ್ತ್
ನ ಸ್ವಚ್ಛಂದ ಮಕರಿಕಂದಕ ಬಲಮ್ ಕಾ
ನಾಮಕೇಲಿಕಥಾ?
ದೂರೋತ್ಕ್ಷಿಪ್ತ ಕರೇಣ ಹಂತ ಕೃಷ್ಣಾ ಸ್ಪರ್ಶತ್ಯಾನ ವಾ ಪದ್ಮಿನೀ
ಪ್ರಾರಬ್ಧೋ ಮಧು ಪ್ಯೆರಕಾರ್ಣಮಹೋ ಸ್ವಚ್ಛಂದ ಕೋಲಾಹಲ:||

ಅನುವಾದ: ದೇಹವಿನ್ನೂ ಬಿಸಿಯಿದೆ
ತಣ್ಣಗೊಳಿಸಲಿನ್ನೂ ಅಸಾಧ್ಯ
ಎದೆಯ ಮೇಲಣ ಧೂಳು
ಇನ್ನೂ ಸ್ವಚ್ಛಗೊಳಿಸಲಾಗಿಲ್ಲ.
ಕಮಲದ ಬೇರು ಇನ್ನೂ ಉಧ್ವಸ್ತಗೊಂಡಿಲ್ಲ
ಅದುಕಾರಣ, ಅದರೊಂದಿಗಿನ ಆಟ ದೂರವಿದೂರ,
ಭೃಂಗಗಳು ವದಂತಿಯನ್ನು ಗುಂಯ್ಗುಡುವಾಗ
ಮುಂಚಾಚಿದ ಕರಕಮಲವ ಸ್ಪರ್ಶಿಸದು
(ಕಮಲವೆಂದರೆ ಪದ್ಮಿನಿ ಅಥವಾ ಸುಂದರಯೋಗಿನಿ ಎಂದು ಇನ್ನೊಂದರ್ಥ)

ಲಕ್ಷ್ಮಣಸೇನ : ಪರೀವಾದಸ್ತಥ್ಯ ಭವತಿವಿತಥೋವಾಪಿ ಮಹತಾಮ್
ತಥಾಪ್ಯುಚ್ಚೈರ್ಧಾಮಣಾಮ್ ಮಹಿಮಾನಮ್ ಜನರವ:
ತುಲೋತ್ತೀರ್ಣಸ್ಯಾಪಿ ಪ್ರಖರ ಮಹಸಾ ಶೇಷ ತಮಸೋ
ರಟೆಸ್ತಾದೃಕ್ ತೇಜ: ನಹಿ ಭವತಿ ಕನ್ಯಾಂ ಗತವತ:

ಅನುವಾದ: ಪುರುಷೋತ್ತಮನ ಉತ್ತಮಿಕೆಯನ್ನು
ಜನರ ಹಗರಣ ಕೊಂಡೊಯ್ಯುದು.

ಅಶ್ವಿನಿಯಲ್ಲಿ ಕನ್ಯಾ ಪ್ರವೇಶಿಸಿದ ನಂತರ
ಸೂರ್ಯ ತನ್ನ ಶಕ್ತಿ ಕಳೆದುಕೊಳ್ಳುವಂತೆ
ಕತ್ತಲನು ಭೇದಿಸಿ ಕಾರ್ತಿಕದ ತುಲಾರಾಶಿ
ಪರೀಕ್ಷೆಯನು ದಾಟಿದರೂ
ಅವನ ಉಜ್ವಲತೆ ಕ್ಷೀಣಿಸುವುದು

ಬಲ್ಲಾಳಸೇನ: ಸುಧಂಶೋರ್ಜಾತೇಯಾಂ ಕಥಮಪಿ: ಕಲಂಕಸ್ಯ ಕಣಿಕಾ
ವಿಧಾತುರ್ದೋಷೋಯಂ ನಹಿಂಭವತಿ ಶಶಾಂಕಸ್ಯ ಕಿಮಪಿ
ನಾ ಕಿಮ್ ನಾತ್ರೇಪುತ್ರ ನ ಕಿಮು ಹರಚೂಡಾರ್ಚನಮಣಿ
ನ ವಾ ಹಂತಿಧ್ಹಾಂತಂ ನ ಕಿಂ ವಿಮಲಾನಂದ ಜನಕಃ||

ಅನುವಾದ: ಅದರೊಳಗಣ ಕಲೆಗಾಗಿ
ಚಂದ್ರನನ್ನು ದೂಷಿಸಲಾಗದು
ಅದು ವಿಧಾತನ ದೋಷ.
ಚಂದ್ರನು ಋಷಿ ಅತ್ರಿಯ ಮಗನಲ್ಲವೆ?
ಶಿವನ ಜಡೆಯನ್ನವನು ಅಲಂಕರಿಸಿಲ್ಲವೆ?
ಕತ್ತಲೆಯನ್ನವನು ಬೆಳಗಿಸುವುದಿಲ್ಲವೆ?
ಅಂತಾಗಿ ಕಲೆಗಾಗಿ ದೂಷಿಸಬೇಕಿರುವುದು
ಚಂದ್ರನನ್ನಲ್ಲ, ವಿಧಾತನನ್ನು.

ಲಕ್ಷ್ಮಣಸೇನ: ಸಿಂಹಾಸನದ ವಾರಸುದಾರನಾದ ಲಕ್ಷ್ಮಣಸೇನನು ಬಲ್ಲಾಳಸೇನನ ಉತ್ತರಾಧಿಕಾರಿಯಾದನು. ಅವನನ್ನು ಬಂಗಾಲದ ಅಂತಿಮ ಸ್ವತಂತ್ರ ಹಿಂದೂ ಅರಸನೆಂದು ಬಣ್ಣಿಸಲಾಗಿದೆ. ಅದು ಬಹುಶಃ ಮುಸ್ಲಿಮ ಇತಿಹಾಸಕಾರರ ಉತ್ಪ್ರೇಕ್ಷೆ. ಅವರು ಬಖ್ತಿಯಾರ ಖಿಲ್ಜಿಯನ್ನು ಪ್ರಶಂಸಿಸಬಯಸಿದ್ದರು. ಹೀಗೆ, ಅವರು ಈ ಸುಳ್ಳು ವೃತ್ತಾಂತ ಸೃಷ್ಟಿಸಿದರು. ಯಾರ ವಂಶಜರು ಗೌಡ ಹಾಗೂ ಜಯಸ್ಕಂಧಾಬಾರ (ಬಿಕ್ರಮಪುರ) ಗಳನ್ನು ಇನ್ನೂ ನಾಲ್ಕು ತಲೆಮಾರು ಆಳಿದರೋ ಆ ಸೇನವಂಶದ ಅಂತಶ್ಶಕ್ತಿಯನ್ನು ಉಪೇಕ್ಷಿಸಿ ಹೀಗೆ ವರ್ಣಿಸಲಾಗಿದೆ. ಅವರ ಕೆಲವು ವಂಶಜರು ಹಿಮಾಚಲಪ್ರದೇಶದ ಸುಕೇತ ಮತ್ತು ಮಾಂಡಿಗಳಲ್ಲಿ ವಿಶಾಲ ಪ್ರದೇಶಗಳನ್ನು ಪಶ್ಚಿಮ ಹಿಮಾಚಲದಲ್ಲಿಯ ಇತರ ಕೆಲ ಊರುಗಳನ್ನು ಗೆದ್ದುಕೊಂಡು ೧೯೪೭ರಲ್ಲಿ ಭಾರತ ಒಕ್ಕೂಟದಲ್ಲಿ ಅವು ವಿಲೀನವಾಗುವವರೆಗೂ ಆಳಿದರು.

ಲಕ್ಷ್ಮಣಸೇನನು ಸಿಂಹಾಸನವನ್ನೇರಿ ಗೌಡೇಶ್ವರ ಮತ್ತೂ ಅರಿರಾಜಮರ್ದನ ಬಿರುದುಗಳನ್ನು ಧರಿಸಿದನು. ಅವನ ಪ್ರಭುತ್ವವು ಗೌಡ, ಕಾಮರೂಪ, ವಾರಣಾಸಿ., ಪುರಿ ಮತ್ತು ಅಲಹಾಬಾದಗಳ ಮೇಲೆ ವಿಸ್ತರಿಸಿತ್ತೆಂದು ವಿವಿಧ ಶಾಸನಗಳು ತಿಳಿಸುತ್ತವೆ. ಲಕ್ಷ್ಮಣಸೇನನು ತನ್ನ ಅಜ್ಜ ಬಿಜಯಸೇನನ ಸೈನ್ಯವನ್ನು ಮುನ್ನಡೆಸಿದಾಗ ಅಜ್ಜನಿಗಾಗಿ ಇವುಗಳಲ್ಲಿ ಕೆಲವು ರಾಜ್ಯಗಳನ್ನು ಗೆದ್ದಿರಬಹುದು.

ಭಾರತದಲ್ಲಿ ಮುಸ್ಲಿಮ ಆಳ್ವಿಕೆಯ ವಿಸ್ತರಣ:

ಲಕ್ಷ್ಮಣಸೇನನ ಆಳ್ವಿಕೆಯ ಕೊನೆಯ ಭಾಗದಲ್ಲಿ ಅಂದರೆ, ೧೩ನೆಯ ಶತಮಾನದ ಆರಂಭಕ್ಕೆ, ಭಾರತದ ಪೂರ್ವಭಾಗದ ಮೇಲೆ ಪ್ರಭುತ್ವ ಸಾಧಿಸಲು ಮುಸ್ಲಿಮ ಸಾಹಸಿಗರು ಸೇನವಂಶದ ಅರಸರನ್ನು ಹೊರದೂಡಿದರು. ಬಂಗಾಲ ಮತ್ತು ದಿಲ್ಲಿಗಳ ನಡುವಣ ದೀರ್ಘ ದೂರದ ಪ್ರಯೋಜನ ಪಡೆದು ಬಖ್ತಿಯಾರ ಖಿಲ್ಜಿಯು ಬಂಗಾಲದಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸಲು ಯತ್ನಿಸಿದನು. ಆದರೆ, ಬೇರೆಯವರು ಬಂಗಾಲವನ್ನು ದಿಲ್ಲಿ ಸಲ್ತನತ್ತಿನಡಿ ತರಬಯಸಿದ್ದರು. ಲಕ್ಷ್ಮಣಸೇನನ ವಯಸ್ಸು ೮೦ ದಾಟಿತ್ತು. ಹಾಗಾಗಿ, ಅವನ ದೈಹಿಕ ಸಾಮರ್ಥ್ಯ ಕ್ರಮೇಣ ಕುಂಠಿತಗೊಂಡು ರಾಜ್ಯದ ಮೇಲಿನ ಅವನ ಪ್ರಾಬಲ್ಯ ಕ್ಷೀಣಿಸತೊಡಗಿತ್ತು. ಅರಸನು ನಿಷ್ಕ್ರಿಯನೂ ದುರ್ಬಲನೂ ಆಗಿದ್ದಾಗ್ಯೂ ಬಂಗಾಲದ ಸೇನರ ಸೈನಿಕ ವ್ಯವಸ್ಥೆಯ ಗುಪ್ತಚರ ಜಾಲಕ್ಕೆ ತಿಳಿಯದಂತೆ ಬಖ್ತಿಯಾರನು ಬಂಗಾಲದ ಮೇಲೆ ದಾಳಿ ಮಾಡಿದ್ದು ಆಶ್ಚರ್ಯದಾಯಕವಾಗಿದೆ. ಸೇನ ರಾಜಧಾನಿಯಿಂದ ಮತ್ತು ಯಾವುದೇ ರಣರಂಗದಿಂದ ದೂರವಿದ್ದ ಪವಿತ್ರ ಸ್ಥಳದ ಮೇಲೆ ತುರ್ಕಿ ದಾಳಿಗಾರರ ವೀರೋಚಿತವಲ್ಲದ ಅನಿರೀಕ್ಷಿತ ಆಕ್ರಮಣ ಇದಾಗಿದ್ದು, ಕ್ಷಾತ್ರ ಸೈನಿಕ ಗೂಢಚಾರರ ಮತ್ತು ಸಮರತಂತ್ರಜ್ಞರ ಕಲ್ಪನೆಗೆ ನಿಲುಕದಂತಹದಾಗಿತ್ತು. ಸೇನ ಅರಸನು ಗಂಗಾತಟದಲ್ಲಿರುವ ಪವಿತ್ರನಗರಕ್ಕೆ ತೀರ್ಥಯಾತ್ರೆ ಕೈಗೊಂಡಿದ್ದನು. ಅಂಥಾದ್ದರಲ್ಲಿ ಒಬ್ಬ ಘನತೆವೆತ್ತ ವೀರಪುರುಷನು ಆಕ್ರಮಣ ಮಾಡಿಯಾನೆಂಬುದು ಅನೂಹ್ಯನೇ ಸರಿ. ಕೆಲವು ಶತಮಾನಗಳ ತರುವಾಯ ಮುಘಲ ಚಕ್ರವರ್ತಿ ಔರಂಗಜೇಬನು ಯುದ್ಧಮಧ್ಯದಲ್ಲಿಯೇ ತನ್ನ ಆನೆಯಿಂದಿಳಿದು ನಮಾಜ ಸಲ್ಲಿಸುತ್ತಿರುವಾಗ ವೈರಿಯೋಧರಿಂದ ಸುತ್ತುವರಿಯಲ್ಪಟ್ಟು, ಸಂಪೂರ್ಣವಾಗಿ ಅಸುರಕ್ಷಿತನಾಗಿದ್ದರೂ ಕೂಡ, ಅದೇ ಆ ಶಕ್ತಿಶಾಲಿ ಶತ್ರುನಾಯಕನನ್ನು ಕೊಲ್ಲುವ ಅವಕಾಶವೆಂದು ಯಾವ ಕ್ಷತ್ರಿಯ ಯೋಧನೂ ಪ್ರಯೋಜನ ಪಡೆಯಬಯಸಲಿಲ್ಲ. ಬಂಗಾಲದ ಸೇನ ಸಾಮ್ರಾಜ್ಯದ ಅವಸಾನಕ್ಕೆ ಇದೊಂದೇ, ಅಂದರೆ, ಗುಪ್ತಚರ್ಯದ ವೈಫಲ್ಯವೊಂದೇ ಕಾರಣವಾಗಿರಲಿಲ್ಲ. ಅದಕ್ಕೆ ಅನೇಕ ಕಾರಣಗಳಿದ್ದವು. ಫಕೀರರ ಹಲವಾರು ಅಂತರಾಕ್ರಮಣಗಳು ಮತ್ತು ವಿರೋಧವನ್ನು ನಿಷ್ಕ್ರಿಯಗೊಳಿಸಲು ಕೆಲವು ಜನರನ್ನು ಮತಾಂತರಗೊಳಿಸಿದ್ದು, ಮತ್ತಿತ್ತರ ಸಮಾಜೋ - ಆರ್ಥಿಕ ವಿಷಯಗಳು ಹಾಗೂ ಮೌಲ್ಯಗಳ ಕುಸಿತ ಆ ಕಾರಣಗಳಲ್ಲಿ ಸೇರಿದ್ದವು. ಬಖ್ತಿಯಾರನ ಹಠಾತ್ ದಾಳಿ ಮತ್ತು ಅವಿತುಕೊಳ್ಳುವಿಕೆ ಮರೆಮಾಚುವಿಕೆಗಳಂಥ ಸಮರತಂತ್ರಗಳು ಸೇನರಂಥ ಸಾಂಪ್ರದಾಯಿಕ ಭಾರತೀಯ ಕ್ಷತ್ರಿಯರ ಊಹೆಗೆ ಮೀರಿದವಾಗಿದ್ದವು. ಭಾರತದಲ್ಲಾಗಲಿ ವಿದೇಶದಲ್ಲಾಗಲಿ ಆರ್ಯರನ ದುಂಡುಮೇಜಿನ ಸರದಾರರಿಗೆ ಇಂಥ ಪದ್ಧತಿಯು ಯುದ್ಧನೀತಿಗೆ ವಿರುದ್ಧವಾಗಿತ್ತು. ಭಾರತದಲ್ಲಾಗಲಿ, ವಾಸ್ತವವಾಗಿ ಇತರ ಸಮಕಾಲೀನ ನಾಗರಿಕ

ಸಮಾಜಗಳೆಲ್ಲಾಗಲಿ ಯುದ್ಧಗಳು ಯುದ್ಧಘೋಷಣಾ ನಂತರ ಇಬ್ಬರು ಸಮಾನರ ಮಧ್ಯೆ ಜರುಗುತ್ತಿದ್ದವು. ಪೂರ್ವನಿರ್ಧಾರಿತ ಸ್ಥಳ ಮತ್ತು ಕಾಲದಲ್ಲಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಜರುಗುತ್ತಿದ್ದವು. ಶಂಖ, ಕಹಳೆ ಮತ್ತಿತರ ವಾದ್ಯಗಳು ಸೂರ್ಯೋದಯಕ್ಕೆ ಯುದ್ಧಾರಂಭವನ್ನು ಸಾರಿದರೆ ಸೂರ್ಯಾಸ್ತಕ್ಕೆ ಯುದ್ಧಾಂತ್ಯವನ್ನು ಸಾರುತ್ತಿದ್ದವು. ಆದರೆ, ತುರ್ಕಿ ದಾಳಿಗಾರನ ಮುಂಚೂಣಿ ತುಕಡಿಯು ಕುದುರೆ ವ್ಯಾಪಾರಿಗಳ ಮಾರುವೇಷದಲ್ಲಿ ಬಂದು, ತೊಂಬತ್ತು ವಯಸ್ಸಿನ ಅರಸನು ಭೋಜನ ಮಾಡುತ್ತಿದ್ದಾಗ ಒಮ್ಮೆಲೆ ನಡುಹಗಲಿನಲ್ಲಿ ಆಕ್ರಮಣ ಮಾಡಿದರು. ಅಜಾಗರೂಕನಾಗಿದ್ದ ಆವನು ತತ್ಕಾಲಕ್ಕೆ ನವದ್ವೀಪದಿಂದ ಹಿಂತೆಗೆಯಬೇಕಾಯಿತು. ಅವನು ಉತ್ತರ ಬಂಗಾಲದಲ್ಲಿದ್ದ ತನ್ನ ರಾಜಧಾನಿಗೆ (ಗೌಡ) ಮರಳಿ ಅಲ್ಲಿಂದ ಇನ್ನೂ ಕೆಲವರ್ಷ ಬಂಗಾಲವನ್ನು ಆಳಿ ಕ್ರಿ.ಶ.೧೨೦೬ರ ಸುಮಾರಿಗೆ ತೀರಿಕೊಂಡನು.

ಅರಸರ ನಡುವಣ ಅಂತಃಕಲಹಗಳು ಹಾಗೂ ಕಡಲವ್ಯಾಪಾರದ ಇಳಿಕೆ ಕಾರಣವಾಗಿ ಬಂಗಾಲವು ೭ನೆಯ ಶತಮಾನದಿಂದಲೇ ಆಂತರಿಕವಾಗಿ ದುರ್ಬಲವಾಗುತ್ತ ನಡೆದಿತ್ತೆಂದು ರಾಮಶರಣ ಶರ್ಮಾ ಮೊದಲಾದ ಇತಿಹಾಸಕಾರರು ಅಭಿಪ್ರಾಯಪಡುವರು. ಕ್ರಿ.ಶ. ೭ರಿಂದ ೧೨ನೆಯ ಶತಮಾನಗಳ ಕಾಲಘಟ್ಟವನ್ನು ಭಾರತದ ಊಳಿಗಮಾನ್ಯ ಯುಗವೆಂದೂ ಆಗ ನಗರಜೀವನದ ಗುಣಮಟ್ಟ ಮತ್ತು ಭಾರತದ ವಿದೇಶಿ ವ್ಯಾಪಾರದಲ್ಲಿ ಅವನತಿ ಆಯಿತೆಂದೂ ರಾಮಶರಣ ಶರ್ಮಾ ಬಣ್ಣಿಸಿರುವರು. ಅವರ ಅಭಿಮತದಲ್ಲಿ ಬಂಗಾಲದ ಅವನತಿ ಸರ್ವವ್ಯಾಪಿಯಾಗಿದ್ದು ಇಡೀ ರಾಷ್ಟ್ರದ ಮೇಲೆ ಪರಿಣಾಮ ಬೀರಿತು. ಮುಸ್ಲಿಮ ಅಂತರಾಕ್ರಮಿಗಳ ಉದ್ದೇಶ ಭಾರತದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸುವುದಲ್ಲದೆ ಭಾರತದ ವ್ಯಾಪಾರವನ್ನು ಹಿಡಿದುಕೊಳ್ಳುವುದು ಆಗಿತ್ತು. ಅವರು ಜಲಮಾರ್ಗಗಳನ್ನು ವಶಪಡಿಸಿಕೊಂಡು ಭಾರತದಲ್ಲಿಯ ವ್ಯಾಪಾರ ವಾಣಿಜ್ಯಗಳ ಮೇಲೆ ಹತೋಟಿ ಸಾಧಿಸಿದರು. ಲಾಲನಜಿ ಗೋಪಾಲರ ಅಭಿಮತದಲ್ಲೂ ಭಾರತದ ನಾನಾ ಭಾಗಗಳಲ್ಲಿಯ ಸಮೃದ್ಧ ವ್ಯಾಪಾರ ಮುಸ್ಲಿಮ ದಾಳಿಯ ಅನಂತರ ಕುಗ್ಗುತ್ತ ಬಂದು ಕೊನೆಗೊಮ್ಮೆ ಒಮ್ಮೆಲೆ ನಿಂತಿತು.

ಪೂರ್ವಭಾರತದಲ್ಲಿ ತುರ್ಕಿ ಆಕ್ರಮಣ ಕ್ರಿ.ಶ. ೧೨೦೬ರ ಸುಮಾರಿಗೆ ಪೂರ್ತಿಗೊಂಡಿತು. ಈ ಕಾಲಾವಧಿಯಲ್ಲಿ ಬಖ್ತಿಯಾರ ಖಿಲ್ಜಿಯು ಮೊದಲು ಬಂಗಾಲದ ನವದ್ವೀಪಕ್ಕೆ ಬಂದು ತದನಂತರ ಲಕ್ಷ್ಮಣಾವತಿಯನ್ನು ಗೆದ್ದುಕೊಂಡನು. ಉತ್ತರ ಬಂಗಾಲದ ಕೆಲವು ಭಾಗಗಳ ಮೇಲೆ ತುರ್ಕರು ವಿಜಯ ಸಾಧಿಸಿದ ತರುವಾಯ ಬಂಗಾಲದಲ್ಲಿ ಸಲ್ತನತ್ತು ಸ್ಥಾಪಿತವಾಯಿತು. ಈ ಕಾಲಾವಧಿಯಲ್ಲಿ ಬೆಹಾರ ಸೇರಿದಂತೆ ಗಂಗಾನದಿ ಕೊಳ್ಳದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದನ್ನು ಇತಿಹಾಸಕಾರರು ಗಮನಿಸುರುವರು. ಸೇನ ಸಾಮ್ರಾಜ್ಯವು ಮತ್ತು ಸಾಮಾಜಿಕ ರಚನೆಯು ಕುಲ, ಜಾತಿ ಮತ್ತು ಅಂತಸ್ತುಗಳ ಬಗೆಗೆ ಭಿನ್ನ ಭಾವನೆಗಳನ್ನು ಹೊಂದಿದ್ದು ಸಮಾಜದ ನೆಯ್ಗೆಯನ್ನು ಹರಿದು ಹಾಕಿದವು. ಒಂದು ಬದಿಯಲ್ಲಿ ಮಹತ್ವಾಕಾಂಕ್ಷಿ ಸಾಮಂತ ದೊರೆಗಳು, ಇನ್ನೊಂದು ಬದಿಯಲ್ಲಿ ಬಂಗಾಲದ ವಿಭಜನೆಗೆ ಕಾರಣರಾದ ಅತಿ ಮುದ್ದು ಅನುಭವಿಸಿದ್ದ ಅಧಿಕಾರಶಾಹಿ ಇದ್ದವು.

ಭಖ್ತಿಯಾರ ಖಿಲ್ಜಿಯ ದಾಳಿ:

ಕ್ರಿ.ಶ. ೧೧೯೯ ರಲ್ಲಿ ಬಖ್ತಿಯಾರನು ಬಿಹಾರಕ್ಕೆ ಬಂದು ಒದಂತಪುರ ಬೌದ್ಧ ಮಹಾವಿಹಾರವನ್ನು ಧ್ವಂಸಗೊಳಿಸಿದನು.ಬೌದ್ಧ ಭಿಕ್ಷುಗಳನ್ನೆಲ್ಲ ಹತ್ಯೆಗೈದನು. ಮಠದಲ್ಲಿ ಸಂರಕ್ಷಿಸಿಡಲಾಗಿದ್ದ ಧರ್ಮಗ್ರಂಥಗಳನ್ನು- ಅಂದರೆ ತ್ರಿಪಿಟಕಗಳು, ನೀತಿಶಾಸ್ತ್ರ ಮತ್ತು ದರ್ಶನ ಕುರಿತ ಅಸಂಖ್ಯ ಗ್ರಂಥಗಳನ್ನು - ಸುಟ್ಟುಹಾಕಿದನು. ಒಂದು ವರ್ಷ ನಂತರ ಕ್ರಿ.ಶ. ೧೨೦೦ ರಲ್ಲಿ ಅವನು ತುರ್ಕಿ ಆಳ್ವಿಕೆಯನ್ನು ಭದ್ರಪಡಿಸಲು ಪುನಃ ಬಿಹಾರಕ್ಕೆ ನಡೆದನು. ಏತನ್ಮಧ್ಯೆ, ಆಕ್ರಮಣದ ಸುದ್ದಿ ನವದ್ವೀಪದಲ್ಲಿದ್ದ ಲಕ್ಷ್ಮಣಸೇನನಿಗೆ ತಲುಪಿತು. ವಿಜಯದ ಸಾಧ್ಯತೆಯಿಲ್ಲ, ಬಖ್ತಿಯಾರ ಖಿಲ್ಜಿಯ ವಿರುದ್ಧ ಯುದ್ಧ ಮಾಡಿದರೆ ತನ್ನ ಪ್ರಾಣ ಕಳೆದುಕೊಳ್ಳಬಹುದು, ಅಂತಿಮವಾಗಿ ಮುಸ್ಲಿಮರು ಬಂಗಾಲವನ್ನು ಆಳುವರು ಎಂದೆಲ್ಲ ಜ್ಯೋತಿಷಿಯೊಬ್ಬ ಭವಿಷ್ಯ ನುಡಿದಿದ್ದನೆಂದು ಹೇಳಲಾಗುತ್ತದೆ. ಬರನಿ ಪ್ರಕಾರ, ಮೊಣಕಾಲು ಮುಟ್ಟುವಷ್ಟು ದೀರ್ಘ ಬಾಹುಗಳುಳ್ಳ ಕುಳ್ಳನೊಬ್ಬನು ಬಂಗಾಲದ ವಿಜೇತನಾಗುವನು ಎಂದು ಜ್ಯೋತಿಷಿ ಭವಿಷ್ಯ ಹೇಳಿದ್ದ. ಜ್ಯೋತಿಷಿ ನೀಡಿದ್ದ ವರ್ಣನೆಯನ್ನು ತುರ್ಕಿ ಆಕ್ರಮಣಕಾರನು ಹೋಲುತ್ತಾನೆಂಬ ಸುದ್ದಿ ಬಂತು. ಇದರಿಂದ ಅರಸನ ಹಿತೈಷಿಗಳು ಘರ್ಷಣೆಯನ್ನು ತಪ್ಪಿಸಬೇಕೆಂದು ನವದ್ವೀಪ ಬಿಡಬೇಕೆಂದು ಸಲಹೆ ನೀಡುವಂತಾಯಿತು. ಅನೇಕ ಬ್ರಾಹ್ಮಣರು ಮತ್ತು ವ್ಯಾಪಾರಿಗಳು ಬಂಗಾಲ ತ್ಯಜಿಸಿ ಪೂರ್ವ ಬಂಗಾಲ ಮತ್ತು ಅಸಾಮಿಗೆ ತೆರಳಿದರು. ಆದರೆ ಶೂರನಾದ ೮೦ ವರ್ಷದ ಲಕ್ಷ್ಮಣಸೇನನು ಇದಾವುದನ್ನೂ ಲೆಕ್ಕಿಸದೆ ನವದ್ವೀಪದಲ್ಲುಳಿದನು. ಏತನ್ಮಧ್ಯೆ, ಕ್ರಿ.ಶ. ೧೨೦೧ ರಲ್ಲಿ ಬಖ್ತಿಯಾರನು ದೊಡ್ಡ ಸೈನ್ಯ ಜಮಾಯಿಸಿಕೊಂಡು ಬಿಹಾರದ ಗಯಾ ಮತ್ತು ಝಾರಖಂಡ ಮಾರ್ಗವಾಗಿ ನವದ್ವೀಪಕ್ಕೆ (ನದಿಯಾ) ಸಾಗಿದನು. ಬಹುತೇಕ ಯೋಧರನ್ನು ಹಿಂದೆಬಿಟ್ಟು ಕೇವಲ ಹದಿನೆಂಟು ಯೋಧರೊಂದಿಗೆ ಮಧ್ಯಾಹ್ನದಲ್ಲಿ ಅರಮನೆ ತಲುಪಿದನು. ಅವನು ಕುದುರೆ ವರ್ತಕನೆಂದು ಬಗೆದು ಯಾರೂ ಅವನನ್ನು ಅಡ್ಡಗಟ್ಟಲಿಲ್ಲ. ಅರಸ ಲಕ್ಷ್ಮಣಸೇನನಿಗೆ ಇದಾವುದೂ ತಿಳಿಯಲಿಲ್ಲ. ಅವನು ರಾಜಕರ್ತವ್ಯಗಳನ್ನು ಮುಗಿಸಿ ಭೋಜನನಿರತನಾದಾಗ ಬಖ್ತಿಯಾರನು ಸಾಮೂಹಿಕವಾಗಿ ಹತ್ಯಾಕಾಂಡವೆಸಗಿದನು. ತುರ್ಕರ ಈ ಹಿಂದುಮುಂದಿಲ್ಲದ ಆಕ್ರಮಣದಿಂದ ಪಾರಾಗಲು ಅರಸನು ಬರಿಗಾಲಿನಿಂದಲೆ ನವದ್ವೀಪ ಬಿಟ್ಟು ಪಲಾಯನಗೈಯ್ಯಬೇಕಾಯಿತು. ಮೌಲಾನಾ ಮಿನ್ಹಾಜ ಉದ್ದೀನನು ನವದ್ವೀಪದ ಮೇಲೆ ಬಖ್ತಿಯಾರ ಖಿಲ್ಜಿ ಮಾಡಿದ ದಾಳಿಯ ವೃತ್ತಾಂತವನ್ನು ನೀಡಿರುವನು. ಅದಕ್ಕಾಗಿ ಅವನು ಘಟನೆ ಜರುಗಿದ ೪೦ ವರ್ಷ ನಂತರ ಲಕ್ಷ್ಮಣಾವತಿಯಲ್ಲಿ ಎರಡುವರ್ಷ ಕಳೆದ. ನಿಜಾಮುದ್ದೀನ ಮತ್ತು ಸಮಸುದ್ದೀನ ಎಂಬಿಬ್ಬರು ಮುಸ್ಲಿಮರು ಹೇಳಿದ ಕತೆಗಳನ್ನು ದಾಖಲಿಸಿದ. ಅವರು ಭಖ್ತಿಯಾರನ ಸಮಕಾಲೀನರಾಗಿದ್ದು ಅವನ ಸೈನ್ಯದಲ್ಲಿ ಸೇವೆ ಸಲ್ಲಿಸಿದವರಾಗಿದ್ದು ಘಟನೆಗಳ ಪ್ರತ್ಯಕ್ಷದರ್ಶಿಗಳಾಗಿದ್ದರು. ಮಿನ್ಹಾಜನು ಮತ್ತು ಇತಿಹಾಸಕಾರ ಇಸ್ಮಿಯು ತನ್ನ ಫತುಹ-ಅಸ್-ಸಲಾತಿನ್ ಗ್ರಂಥದಲ್ಲಿ ನೀಡಿದ ವೃತ್ತಾಂತಗಳು ವಂಚನೆಯನ್ನು ದೃಢೀಕರಿಸುತ್ತವೆ. ಇಸ್ಮಿ ಪ್ರಕಾರ, ಬಖ್ತಿಯಾರನು ಕುದುರೆ ವರ್ತಕನ ಮಾರುವೇಷದಲ್ಲಿ ನದಿಯಾಕ್ಕೆ ಬಂದು ತಾನು ತಂದಿದ್ದ ತಾತಾರ ಕುದುರೆಗಳು, ಚೀನಿ ಬಟ್ಟೆಗಳು ಮತ್ತಿತರ ದುಬಾರಿ ವಸ್ತುಗಳನ್ನು ಅರ್ಪಿಸಲು ಅರಸನ ಅಪ್ಪಣೆ ಕೋರಿದನು. ಅರಸನು ಕಾಣಿಕೆಗಳನ್ನು ಸ್ವೀಕರಿಸಲು ಹೊರಬಂದಾಗ

ಆಕ್ರಮಣ ಮಾಡುವಂತೆ ಬಖ್ತಿಯಾರನು ತನ್ನ ಸೈನಿಕರಿಗೆ ಸೂಚನೆಯಿತ್ತ. ಹಿಂದೂ ಸೈನಿಕರಿಗೆ ಇದು ಅನಿರೀಕ್ಷಿತವಾಗಿದ್ದು ಪ್ರತಿರೋಧಿಸಲಾಗದೆ ಅವರು ಸೋಲು ಕಂಡರು. ವೀರಯೋಧರ ತಂಡವೊಂದು ಅರಸ ಲಕ್ಷ್ಮಣಸೇನನನ್ನು ರಕ್ಷಿಸಲು ಜೋರಾಗಿ ಕಾದಾಡಿದ್ದು ವಿಫಲವಾಯಿತು. ಏಕೆಂದರೆ, ತುರ್ಕಿ ಅಶ್ವದಳದ ಪ್ರಮುಖ ಪಡೆ ಅಷ್ಟರಲ್ಲಿ ಸ್ಥಳಕ್ಕೆ ಧಾವಿಸಿ ಅರಸ ಲಕ್ಷ್ಮಣಸೇನನನ್ನು ಸೆರೆಹಿಡಿಯಿತು. ಸರದಾರರು ಮತ್ತು ಕಾವಲುಗಾರರು ಮಧ್ಯಾಹ್ನದಲ್ಲಿ ತಮ್ಮ ತಮ್ಮ ಮನೆಗಳಲ್ಲಿದ್ದಾಗ ತುರ್ಕರು ಆಕ್ರಮಣ ಮಾಡಿದರೆಂಬುದು ಎರಡೂ ವೃತ್ತಾಂತಗಳಿಂದ ಸ್ಪಷ್ಟಪಡುತ್ತದೆ.

ನವದ್ವೀಪವು ಸೇನರ ರಾಜಧಾನಿಯಾಗಿರಲಿಲ್ಲ. ಅದು ಗಂಗಾ ತಟದಲ್ಲಿದ್ದ ಪವಿತ್ರ ತಾಣ. ಅಲ್ಲಿ ಸೇನ ಅರಸರು ತೀರ್ಥಯಾತ್ರೆಗೆಂದು ಒಂದು ಕಟ್ಟಡ ನಿರ್ಮಿಸಿದ್ದರು. ಅಲ್ಲಿ ಕಲ್ಲಿನ ಕೋಟೆಯಿರಲಿಲ್ಲ. ಅವರ ಮುಖ್ಯ ರಾಜಧಾನಿ ವಿಕ್ರಮಪುರವಾಗಿತ್ತು. ಆರಂಭಕಾಲದಲ್ಲಿ ಬಂಗಾಲದ ವಿಕ್ರಮಪುರ ವಲಯದಲ್ಲಿಯೆ ಎಲ್ಲ ಶಾಸನಗಳನ್ನು ರಚಿಸಲಾಗಿತ್ತು. ವಂಗೇ ವಿಕ್ರಮಪುರ ಭಾಗೇ ಎಂದು ಅವು ತಿಳಿಸುತ್ತವೆ. ಲಕ್ಷ್ಮಣಸೇನನ ಪೂರ್ವಜನೂ ಬಂಗಾಲದಲ್ಲಿ ಸೇನ ವಂಶದ ಸಂಸ್ಥಾಪಕನೂ ಆಗಿದ್ದ ಸಾಮಂತಸೇನನು ಗಂಗಾತಟದಲ್ಲಿರುವ ಬಂಗಾಲದ ರಾಢ ಪ್ರದೇಶಕ್ಕೆ ತನ್ನ ವೃದ್ಧಾಪ್ಯ ದಿನಗಳನ್ನು ಕಳೆಯಲು ಬಂದನು. ಸೇನ ಅರಸರು ಧಾರ್ಮಿಕ ಸ್ವಭಾವದವರೂ ವಿದ್ವಾಂಸರೂ ಆಗಿದ್ದುದರಿಂದ ಸಾಮಂತಸೇನನ ಅನೇಕ ವಂಶಜರು ಪವಿತ್ರ ನಗರವಾದ ನವದ್ವೀಪಕ್ಕೆ ಆಗಾಗ ಬರುತ್ತಿದ್ದರು. ಲಕ್ಷ್ಮಣಸೇನನೂ ಈ ಧಾರ್ಮಿಕ ಪದ್ಧತಿಯನ್ನು ಅನುಸರಿಸಿದ. ಹಿಮಾಚಲ ಪ್ರದೇಶದ ಸುಕೇತದಲ್ಲಿ ಆಳುತ್ತಿದ್ದ ಬಿಕ್ರಮಸೇನ ಮುಂತಾದ ವಂಶಜರೂ ಗಂಗಾತಟಕ್ಕೆ ಆಗಮಿಸಲು ಹಾತೊರೆಯುತ್ತಿದ್ದರು. ಅದನ್ನು ಆಮೇಲೆ ನೋಡೋಣ. ಅದೊಂದು ಆಧ್ಯಾತ್ಮಿಕ ಗೂಡೆಂದು ಅವರು ಅಲ್ಲಿಗೆ ಬರುತ್ತಿದ್ದರು.

ನದಿಯಾದಿಂದ ಸೈನ್ಯ ಹಿಂತೆಗೆದುಕೊಂಡ ನಂತರ ಲಕ್ಷ್ಮಣಸೇನನು ಗೌಡಕ್ಕೆ ತೆರಳಿ ಅಲ್ಲಿ ಮುಂದಿನ ಐದು ವರ್ಷ ಆಳಿದನು. ಈ ಐದು ವರ್ಷಗಳಲ್ಲಿ ಅವನು ತುರ್ಕರೊಂದಿಗೆ ಕಾದಾಡಿರಬಹುದು. ಆಸ್ಥಾನ ಕವಿ ಶರಣನು ಈ ಬಗೆಗೆ ಬರೆದಿರುವನು. ಆದರೆ, ಮಿನ್ಹಾಜ್ ಮತ್ತು ಇಸ್ಮಿ ಮೌನ ತಾಳಿರುವರು.

ಸ್ವೇಚ್ಛಾಮ್ಲೇಚ್ಛಾನ್ ವಿನಾಶಮ್ ನಯತಿ ವಿನಯತೆ ಕಾಮರೂಪಾಭಿಮಾನಮ್

ಕಶ್ಚಿೀರ್ಭರ್ತುರ್ಪ್ರಕಾಶಮ್ ಹರತಿ ವಿರಹತೆ ಮೂರ್ಧ್ನಿಯೋ ಮಾಗಧಸ್ಯ

ಲಕ್ಷ್ಮಣಸೇನನು ತುರ್ಕರನ್ನು ಯಾವುದೊ ಒಂದು ಯುದ್ಧದಲ್ಲಿ ಸೋಲಿಸಿದನೆಂದು ನಮ್ಮ ನಂಬಿಕೆ. ನವದ್ವೀಪದಲ್ಲಿ ತುರ್ಕರ ೫೦ ವರ್ಷಗಳ ಆಳ್ವಿಕೆಯ ನಂತರವೂ ಸೇನರು ವಿಕ್ರಮಪುರದಲ್ಲಿ ಆಳಿದುದು ಕಂಡುಬರುತ್ತದೆ. ಮುಸ್ಲಿಮ ಇತಿಹಾಸಕಾರ ಮಿನ್ಹಾಜುದ್ದೀನನು ರಾಯ ಲಕ್ಷ್ಮಣಿಯಾನನ್ನು ಹಿಂದುಸ್ಥಾನದ ಅತ್ಯಂತ ಉದಾತ್ತ, ಉದಾರ ಮತ್ತು ಗೌರವಾನ್ವಿತ ಅರಸನೆಂದು ಶ್ಲಾಘಿಸಿರುವನು. ಅವನು ಯಾವಾಗಲೂ ನಿಷ್ಪಕ್ಷಪಾತಿಯಾಗಿದ್ದು ಯಾರಿಗೂ ಒಂದು ಲಕ್ಷ ಕವಡಿಗಳಿಗಿಂತ ಕಡಿಮೆ ದಾನ ಮಾಡಿದವನಲ್ಲ. ಆದಾಗ್ಯೂ ಸೇನರು ಬಂಗಾಲದಲ್ಲಿ ತಮ್ಮ ರಾಜ್ಯವನ್ನು ಕಳೆದುಕೊಂಡರು. ಅದಕ್ಕೆ ಮುಸ್ಲಿಮ ಆಕ್ರಮಣವೊಂದೆ ಕಾರಣವಾಗಿರದೆ ಬಹು ಕಾರಣಗಳಿದ್ದವು.

## ಲಕ್ಷ್ಮಣಸೇನ: ಉಪಕಾರಿ ನಿರಂಕುಶಪ್ರಭು

ಲಕ್ಷ್ಮಣಸೇನನು ಸತ್ಯವಂತ ಮತ್ತು ನಿಷ್ಪಕ್ಷಪಾತಿ ಅರಸನಾಗಿದ್ದನು. ತಾನು ಪ್ರಭುವಾಗಿದ್ದರೂ ತನ್ನ ಮಂತ್ರಿಗಳ, ಸಲಹೆಗಾರರ ಮಾತನ್ನು ಉಪೇಕ್ಷಿಸುತ್ತಿರಲಿಲ್ಲ. ಇದನ್ನು ರಾಜಾಸ್ಥಾನದಲ್ಲಿ ಜರುಗಿದ ಹಲವಾರು ಘಟನೆಗಳು ಸ್ಪಷ್ಟಪಡಿಸುತ್ತವೆ. ಇವುಗಳಲ್ಲೊಂದು ಲಕ್ಷ್ಮಣಸೇನನ ಆಸ್ಥಾನ ಕವಿ ಹಲಾಯುಧ ಮಿಶ್ರನು ತನ್ನ ಸೆಖ ಶುಭೋದಯ ಗ್ರಂಥದಲ್ಲಿ ವರ್ಣಿಸಿರುವನು. ಕತೆ ಹೀಗಿದೆ. ಅರಸನ ಷಡ್ಡಕನಾದ ಕುಮಾರದತ್ತನು ಒಬ್ಬ ವರ್ತಕನ ಹೆಂಡತಿ ಮಾಧವಿಯೊಂದಿಗೆ ದುರ್ವರ್ತಿಸಿದ್ದ. ಮಾಧವಿಯು ಅರಸ ಲಕ್ಷ್ಮಣಸೇನನ ಆಸ್ಥಾನಕ್ಕೆ ಹೋಗಿ ನ್ಯಾಯಕ್ಕಾಗಿ ಮೊರೆಯಿಟ್ಟಳು. ರಾಣಿ ಸಿಟ್ಟಾದಾಳೆಂದು ಆಸ್ಥಾನಿಕರು ಮೌನ ತಾಳಿದರು. ಈ ಪ್ರತಿಕ್ರಿಯಾರಾಹಿತ್ಯ ಕಂಡು ಮಾಧವಿ ಕುಸಿದುಬಿದ್ದಳು. ನ್ಯಾಯ ಒದಗಿಸಲು ಇಷ್ಟವಿಲ್ಲದ್ದಕ್ಕಾಗಿ ಮತ್ತು ಮಹಿಳೆಯರ ಅಪಮಾನದ ವಿರುದ್ಧ ನಿಷ್ಕ್ರಿಯತೆಗಾಗಿ ರಾಜನನ್ನು ಮತ್ತು ಅವನ ಆಸ್ಥಾನಿಕರನ್ನು ದೂಷಿಸಿದಳು. ಇದರಿಂದ ರೊಚ್ಚಿಗೆದ್ದ ರಾಣಿಯು ಮಾಧವಿಯ ಕೂದಲು ಜಗ್ಗಿ ಅವಳನ್ನು ಬೈಯ್ಯಲಾರಂಭಿಸಿದಳು. ಎಂಬತ್ತು ದಾಟಿದ ಅರಸನು ರಾಣಿಯನ್ನು ಅವಳ ಕೃತ್ಯಕ್ಕಾಗಿ ಬೈಯಬೇಕೊ ಬೇಡವೊ ನಿರ್ಧರಿಸದಾದ. ಈ ಸನ್ನಿವೇಶದಲ್ಲಿ ಆಸ್ಥಾನ ಗುರುವಾಗಿದ್ದ ಗೋವಿಂದಾಚಾರ್ಯನ ನ್ಯಾಯಪ್ರಜ್ಞೆ ಜಾಗೃತಗೊಂಡು ಅವನು ವಿಷಯವನ್ನು ಕೈಗೆತ್ತಿಕೊಂಡ. ಅರಸನ ನಿಷ್ಕ್ರಿಯತೆಯನ್ನು ಗುಣಪಡಿಸೆಂದು ರಾಣಿಗೆ ಬುದ್ಧಿವಾದ ಹೇಳಿದ ಮತ್ತು ತಾನು ಆಸ್ಥಾನ ತ್ಯಜಿಸುವುದಾಗಿಯೂ ಘೋಷಿಸಿದ. ಇದರಿಂದ ಲಕ್ಷ್ಮಣಸೇನನಿಗೆ ಪರಿಸ್ಥಿತಿಯ ಗಂಭೀರತೆಯ ಅರಿವು ಮೂಡಿ ತಾನು ನ್ಯಾಯ ಒದಗಿಸುವುದಾಗಿ ಆಚಾರ್ಯನಿಗೆ ಭರವಸೆಯಿತ್ತನು ಮತ್ತು ಆಸ್ಥಾನ ತ್ಯಜಿಸದಿರಲು ಅವನಿಗೆ ಅರಿಕೆ ಮಾಡಿಕೊಂಡನು. ಲಕ್ಷ್ಮಣಸೇನನು ಖಡ್ಗವನ್ನು ಮೇಲೆತ್ತಿ ಸಿಟ್ಟಿನಿಂದ ಮರಣಶಿಕ್ಷೆ ನೀಡಲು ತನ್ನ ಷಡ್ಡಕನತ್ತ ಧಾವಿಸಿದ. ಆದರೆ, ಮಾಧವಿಯು ಹಾಗೆ ಮಾಡದಂತೆ ರಾಜನನ್ನು ತಡೆದಳು. ರಾಜನು ತನ್ನ ನ್ಯಾಯಬದ್ಧ ರೋಷದಲ್ಲಿ ಪಾಲ್ಗೊಂಡಾಗಲೆ ಮತ್ತು ಆರೋಪಿಯನ್ನು ಖಂಡಿಸಿ ಶಿಕ್ಷಿಸಲು ಮುಂದಾದಾಗಲೆ ತನಗೆ ನ್ಯಾಯ ದೊರಕಿತೆಂದು ಹೇಳಿದಳು. ಆಸ್ಥಾನಿಕರು ಅವಳ ಹೃದಯವೈಶಾಲ್ಯತೆಯನ್ನು ಮತ್ತು ಆರೋಪಿಯ ಬಗೆಗೆ ಸೇಡಿನ ಭಾವನೆ ತಾಳದಿದ್ದುದನ್ನು ಶ್ಲಾಘಿಸಿದರು.

ಈ ಘಟನೆ ಜರುಗಿ ೮೦೦ ವರ್ಷಗಳು ಉರುಳಿವೆ. ದೇಶವು ನಿರಂಕುಶ.ಪ್ರಭುತ್ವದಿಂದ ಪ್ರಜಾಪ್ರಭುತ್ವಕ್ಕೆ ಜರುಗಿದೆ. ಕಾನೂನನ್ನು ಪರಿಪಾಲಿಸಲಾಗುತ್ತಿದೆ. ಆದಾಗ್ಯೂ, ನಿಷ್ಕ್ರಿಯತೆ ಇಲ್ಲವೆ ಅನ್ಯಾಯಕ್ಕಾಗಿ ಅಧಿಕಾರದಲ್ಲಿದ್ದವರನ್ನು ದಂಡಿಸಲು ಸರಕಾರದ ಸಲಹೆಗಾರರಿಗೆ ಇವತ್ತಿಗೂ ಸಾಧ್ಯವಾಗುತ್ತಿದೆಯೆ?

ಲಕ್ಷ್ಮಣಸೇನನ ಮೇಲಿನ ಹಠಾತ್ ಆಕ್ರಮಣದಿಂದ ಬಖ್ತಿಯಾರನು ಬಲು ಮಹತ್ವಾಕಾಂಕ್ಷಿಯಾದ. ಟಿಬೆಟನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಅವನು ೧೦,೦೦೦ ಅಶ್ವದಳದೊಂದಿಗೆ ಮುಂದೆ ಸಾಗಿದ. ಆದರೆ, ಮಳೆಯಿಂದಾಗಿ ಕಾಮರೂಪ ದಾಟಿ ಭೂತಾನದ ಹಿಮಾಲಯದಲ್ಲಿ ಕಿರುದೂರವನ್ನು ಮಾತ್ರ ಕ್ರಮಿಸಲು ಅವನಿಗೆ ಸಾಧ್ಯವಾಯಿತು. ಭೂಕುಸಿತದಿಂದಾಗಿ ದಾರಿ ಮುಚ್ಚಿದ್ದರಿಂದ ಅವನು ಮರಳುವಂತಿರಲಿಲ್ಲ. ಹಿಂತಿರುಗುತ್ತಿದ್ದಾಗ ಕಾಮರೂಪದ ನದಿಗಳು

ಪ್ರವಾಹಭರಿತವಾಗಿದ್ದುದನ್ನು ಬಖ್ತಿಯಾರ ಕಂಡ. ಹಾಗೂ ತಾನು ದಾಟಿ ಬಂದ ಕಲ್ಲಿನ ಸೇತುವೆಯನ್ನು ಕಾಮರೂಪದ ಸೈನಿಕರು ಧ್ವಂಸಗೊಳಿಸಿದ್ದನ್ನು ಕಂಡ. ಹೀಗೆ, ತುರ್ಕರು ಪ್ರಾಕೃತಿಕ ವಿಕೋಪ, ಆಹಾರದ ಅಭಾವ ಮತ್ತು ವೈರಿಕೃತ್ಯಗಳಿಂದಾಗಿ ಸೋತರು. ಭಖ್ತಿಯಾರ ಅನುಭವಿಸಿದ ಅನಾಹುತವನ್ನು ಬ್ರಹ್ಮಪುತ್ರೆಯ ಉತ್ತರ ಭಾಗದಲ್ಲಿರುವ ಗುವಾಹತಿಯ ಕಾನೈಬೋದ್ವೀಪವಾದಲ್ಲಿ ಕಲ್ಲಿನ ಗೋಡೆಯ ಮೇಲೆ ಬರೆಯಲಾಗಿರುವ ಸಂಸ್ಕೃತ ಶ್ಲೋಕದಲ್ಲಿ ಕಾಣಬಹುದು.

**ಶಕೆ ತುರುಗಯುಗ್ಮೇಶೆ ಮಧುಮಾಸ ತ್ರಯೋದಶೇ**

**ಕಾಮರೂಪಂ ಸಮಾಗತ್ಯ ತುರುಷ್ಕಾಃ ಕ್ಷಯಮಾಯಯುಃ||**

ಉತ್ತಮನೂ ಧಾರ್ಮಿಕನೂ ಆಗಿದ್ದ ಲಕ್ಷ್ಮಣಸೇನನನ್ನು ಭಖ್ತಿಯಾರನು ಸೋಲಿಸಿದ್ದು ಹಠಾತ್ ದಾಳಿಯಿಂದ, ನೇರ ಮುಖಾಮುಖಿಯಿಂದಲ್ಲ. ತದನಂತರ ಭಖ್ತಿಯಾರನು ಹಿಮಾಲಯದತ್ತ ಸಾಗಿದಾಗ ಧಾರಾಕಾರ ಮಳೆ, ಭೂಕುಸಿತ ಮತ್ತು ಸಂಪರ್ಕ ಸೇತುವೆಯ ಧ್ವಂಸ ಅವನ ಸೈನಿಕರ ಸೋಲಿಗೆ ಕಾರಣವಾದವು. ತಿರುಗಿ ಕಾದಾಡಲು ಅವಕಾಶವಿಲ್ಲದಂತೆ ಅವನ ಇಡೀ ಸೈನ್ಯಪಡೆ ನಾಶಹೊಂದಿತು. ವೈಜ್ಞಾನಿಕ ದೃಷ್ಟಿಯಿಂದ ನೋಡಿದರೆ ಎರಡೂ ಘಟನೆಗಳ ಮಧ್ಯೆ ಯಾವ ಸಂಬಂಧವಿಲ್ಲವಾದರೂ ಅದು ಪ್ರಾಕೃತಿಕ ನ್ಯಾಯವನ್ನು ನೆನಪಿಗೆ ತರುತ್ತದೆ. ಆಸಾಮಿ ಸೈನಿಕರು ಸೇತುವೆಯನ್ನು ಮರು ನಿರ್ಮಿಸಬಹುದಾಗಿತ್ತು ಮತ್ತು ಮಾನವೀಯ ದೃಷ್ಟಿಯಿಂದ ತಮ್ಮ ವೈರಿಗಳ ಪ್ರಾಣ ಉಳಿಸಬಹುದಿತ್ತು. ತಮ್ಮ ವೈರಿಗಳಲ್ಲಿ ನ್ಯಾಯ ಬುದ್ಧಿ ಮತ್ತು ದೊಡ್ಡಸ್ತಿಕೆ ಕಂಡುಬಂದಿದ್ದರೆ ಇದು ಸಾಧ್ಯವಾಗಬಹುದಿತ್ತು. ಆಪತ್ತಿಗೊಳಗಾಗಿದ್ದ ವೈರಿಗಳ ಪ್ರಾಣಗಳನ್ನು ಬರ್ಮನ್ ಮತ್ತು ಶಾಲಸ್ಥಂಭ ರಾಜವಂಶಗಳು ಸಂರಕ್ಷಿಸಿದ ಹಲವಾರು ಉದಾಹರಣೆಗಳಿವೆ. ಅಸುರ ವಂಶದ ಭಾಸ್ಕರಬರ್ಮನ್ ಮತ್ತು ರಾಜಾ ಅಹೋಮ್ ವಂಶದ ರುದ್ರಸಿಂಗ್ ಅಸಾಮದ ಈ ಪರಂಪರೆಗನುಗುಣವಾಗಿ ಬಾಳಿದರು.

ಭಖ್ತಿಯಾರನು ಅನ್ಯಾಯ ಮಾರ್ಗದಿಂದ ಮತ್ತು ಕುಂಟುನೆಪದ ಮೂಲಕ ಭಾರತ ಪ್ರವೇಶಿಸಿದ. ಆದುದರಿಂದ, ಆಸಾಮದ ಅಸುರ ಅರಸ ಮತ್ತು ಅವನ ಸೈನಿಕರು ಭಖ್ತಿಯಾರನಿಗೆ ಆಪತ್ಕಾಲದಲ್ಲಿ ಸಹಾಯ ನೀಡಲು ಹಿಂಜರಿದರು.

## ವರ್ಣಾಶ್ರಮದ ಬಗೆಗೆ ಅಸಡ್ಡೆ ಮತ್ತು ಅಂ ದಾಟಿದ ವೃದ್ಧನ ಅಧಿಕಾರ ಲಾಲಸೆ:

ಬೌದ್ಧ ಮತ್ತು ಜೈನ ಧರ್ಮಗಳ ಆಗಮನಕ್ಕೆ ಮುನ್ನ ಭಾರತೀಯ ಪುರಾತನರು ವರ್ಣಾಶ್ರಮ ವ್ಯವಸ್ಥೆಗನುಗುಣವಾಗಿ ತಮ್ಮ ಜೀವನದ ಧ್ಯೇಯೋದ್ದೇಶಗಳನ್ನು ಅಂದರೆ, ಧರ್ಮ, ಅರ್ಥ, ಕಾಮ ಮತ್ತು ಅಂತಿಮವಾಗಿ ಮೋಕ್ಷಗಳ ನೈತಿಕೋ-ಧಾರ್ಮಿಕ ಸನ್ನಡತೆಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು. ಬಾಲ್ಯದ ಬ್ರಹ್ಮಚರ್ಯಾಶ್ರಮದಲ್ಲಿ ಶಿಕ್ಷಣ ಮತ್ತು ನೈತಿಕೋ-ಧಾರ್ಮಿಕ ಮೌಲ್ಯಗಳನ್ನು ಸಂಪಾದಿಸಿ ಮುಂದಿನ ಗೃಹಸ್ಥಾಶ್ರಮ ಪ್ರವೇಶಿಸುತ್ತಿದ್ದರು. ಗೃಹಸ್ಥಾಶ್ರಮದಲ್ಲೂ ನೈತಿಕೋ-ಧಾರ್ಮಿಕ ಮೌಲ್ಯಗಳನ್ನು ಪರಿಪಾಲಿಸುತ್ತಲೇ ಅವರು ಧನ ಹಾಗೂ ಜೀವನದ ಸುಖಗಳನ್ನು

ಅನುಭವಿಸಲಿಚ್ಛಿಸುತ್ತಿದ್ದರು. ೫೦ ವರ್ಷ ವಯಸ್ಸಿನ ನಂತರ ವಾನಪ್ರಸ್ಥಾಶ್ರಮ ಪ್ರವೇಶಿಸಿ ಧ್ಯಾನ, ನಿಷ್ಕಾಮಕರ್ಮ, ಸಸ್ಯ ಮತ್ತು ಪ್ರಾಣಿ ಮತ್ತು ಮನುಷ್ಯ ಬಾಂಧವರ ಸೇವೆಗೈಯುತ್ತ ಕೊನೆಯ ಸನ್ಯಾಸಾಶ್ರಮದಲ್ಲಿ ಎಲ್ಲ ಬಂಧನಗಳಿಂದ ಮುಕ್ತಿ ಹೊಂದಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಬಲ್ಲಾಳಸೇನನು ಕೂಡ ತನ್ನ ಪತ್ನಿಯೊಂದಿಗೆ ಗಂಗೆಯನ್ನು ಪ್ರವೇಶಿಸಿದ.

ಬೌದ್ಧ ಮತ್ತು ಜೈನ ಧರ್ಮಗಳು ಪ್ರಚಾರಗೊಂಡಾಗ ವರ್ಣಾಶ್ರಮ ಧರ್ಮ ಹಿಂದೇಟು ಕಂಡಿತು. ವಯಸ್ಸು ಎಷ್ಟೇ ಇರಲಿ, ಪಾತ್ರ ಅಪಾತ್ರವೆಂಬ ತಾರತಮ್ಯವಿಲ್ಲದೆ ಎಲ್ಲರೂ ನಿರ್ವಾಣ ಪಡೆಯಲು ಹೆಣಗಿದರು. ಹಾಗಾಗಿ, ರಾಜ್ಯವು ತನ್ನ ಹಿಡಿತ ಕಳೆದುಕೊಂಡಿತು. ಮನು ಮತ್ತು ಇತರ ಪುರಾತನ ದಾರ್ಶನಿಕರ ವಿಚಾರದಲ್ಲಿ, ಯಾವುದೇ ರಾಜ್ಯವು ಆಧ್ಯಾತ್ಮಿಕ ಮತ್ತು ಸೈನ್ಯಶಕ್ತಿಯ ಬೆಸುಗೆ ಇಲ್ಲದೆ ಸಬಲವಾಗದು.

ಆದರೆ, ಬೌದ್ಧ ಮತ್ತು ಜೈನಧರ್ಮಗಳ ಪ್ರಭಾವದಲ್ಲಿ ಸೈನ್ಯಶಕ್ತಿ ದುರ್ಬಲಗೊಂಡಿತು. ಪ್ರತಿಯೊಬ್ಬ ವ್ಯಕ್ತಿ ರಾಜ್ಯದ ಸಮಾಜೋ - ಆರ್ಥಿಕ ಸಂರಕ್ಷಣೆ ಮಾಡುವ ಬದಲು ತನ್ನ ಆತ್ಮದ ಮೋಕ್ಷಕ್ಕಾಗಿ ಶ್ರಮಿಸಿದ. ಅನೇಕರು ಗೃಹಸ್ಥಾಶ್ರಮ ಸೇರುವ ಬದಲು ಬೌದ್ಧ ಸಂಘಗಳನ್ನು ಸೇರಿದುದರಿಂದ ಗೃಹಸ್ಥಾಶ್ರಮ ನಾಶಹೊಂದಿತು. ಈ ಕಾಲದಲ್ಲಿ ಅರಸ ಧಮ್ಮಾಶೋಕನು ತನ್ನ ಎಳೆಯದಲ್ಲಿಯೆ ಧರ್ಮಕ್ಕೆ ಆದ್ಯತೆ ಇಟ್ಟು ಅದನ್ನು ಪ್ರಸಾರ ಮಾಡಿದನು. ತನ್ಮೂಲಕ, ರಾಜಕೀಯ, ಸಮರತಂತ್ರ, ರಾಜ್ಯಭಾರ ಮತ್ತು ಯುದ್ಧ ಕೌಶಲ್ಯಗಳನ್ನು ಅಲಕ್ಷಿಸಿದನು. ಈ ಮೊದಲು, ತಮ್ಮ ಮಧ್ಯ ವಯಸ್ಸು ಮುಗಿಯುತ್ತಲೇ ಅರಸರು ತಮ್ಮ ಉತ್ತರಾಧಿಕಾರಿಗಳಾದ ಯುವರಾಜರಿಗೆ ಅಧಿಕಾರ ವಹಿಸಿಕೊಟ್ಟು ಐಹಿಕ ಸುಖಗಳನ್ನು ತ್ಯಜಿಸಿ ವಾನಪ್ರಸ್ಥ ಸ್ವೀಕರಿಸುತ್ತಿದ್ದರು. ಏಕೆಂದರೆ, ಅವರಿಗೆ ತಮ್ಮ ಇಳಿವಯಸ್ಸಿನಲ್ಲಿ ಯುದ್ಧಕಾರ್ಯ, ರಾಜಕೀಯ ಸಂಚುಗಳು ಮತ್ತು ಗೂಢಚಾರರ ಮೇಲೆ ನಿಯಂತ್ರಣ ಕಠಿಣವಾಗುತ್ತಿದ್ದವು. ಆದರೆ, ಬೌದ್ಧ ಅರಸರು ತಮ್ಮ ವೃದ್ಧಾಪ್ಯದಲ್ಲೂ ತಮ್ಮ ವಾನಪ್ರಸ್ಥವನ್ನು ಪ್ರವೇಶಿಸದೆ ತಮ್ಮ ಸೈನಿಕ ಕರ್ತವ್ಯ ಮತ್ತು ರಾಜ್ಯದ ಹೊಣೆಗಾರಿಕೆಗಳನ್ನು ನಿರ್ಲಕ್ಷಿಸುತ್ತ ಸಿಂಹಾಸನದ ಮೇಲಿಂದಲೆ ಬೋಧಿಸುವುದನ್ನು ಮುಂದುವರಿಸಿದರು. ಈ ಪದ್ಧತಿಯನ್ನು ಬೌದ್ಧ ಪಾಲ ಅರಸರು ಮಾತ್ರವೇ ಪಾಲಿಸಲಿಲ್ಲ. ತಮ್ಮ ಸೈನಿಕ ಕರ್ತವ್ಯಗಳಲ್ಲಿ ಲಕ್ಷ್ಮಣಸೇನನಂಥ ಹಿಂದೂ ಅರಸರೂ ಆಸಕ್ತಿಯಿಂದ ಪಾಲಿಸಿದರು. ತುರ್ಕರು ಮತ್ತು ಇತರ ಬಾಹ್ಯ ಶತ್ರುಗಳು ಈ ಜಾಡ್ಯದ ಲಾಭ ಪಡೆದು ಹಿಂದೂ ರಾಜ್ಯಗಳ ಮೇಲೆ ಯಶಸ್ವಿ ದಾಳಿ ನಡೆಸಿ ಸುಲಭವಾಗಿ ತಮ್ಮ ಪ್ರಭುತ್ವ ಸ್ಥಾಪಿಸಿದರು.

ಪ್ರಾಯಶಃ ೮೦ ದಾಟಿದ ಲಕ್ಷ್ಮಣಸೇನನ ಬದಲು ಪ್ರಾಯದ ಇನ್ನೊಬ್ಬ ಸೇನ ಅರಸನು ನವದ್ವೀಪವನ್ನು ಆಳುತ್ತಿದ್ದ ಪಕ್ಷದಲ್ಲಿ ಭಖ್ತಿಯಾರನಿಗೆ ಇಷ್ಟೊಂದು ಸುಲಭ ಜಯ ದೊರೆಯುತ್ತಿರಲಿಲ್ಲ. ನವದ್ವೀಪದ ಪತನದ ಕೆಲವೆ ವರ್ಷ ತರುವಾಯದಲ್ಲಿ ಲಕ್ಷ್ಮಣಸೇನನ ಮೊಮ್ಮಗ ರೂಪಸೇನನ ಹೋರಾಟಗಳನ್ನಾಗಲಿ ಮರಿಮೊಮ್ಮಗ ಬೀರಸೇನನ ವಿಜಯಗಳನ್ನಾಗಲೀ ಗಮನಿಸಿದರೆ, ಲಕ್ಷ್ಮಣಸೇನನ ಉತ್ತರಾಧಿಕಾರಿಗಳು ಪಡೆದಿದ್ದ ರಾಜಕೀಯ ಮತ್ತು ಸೈನಿಕ ಕೌಶಲ್ಯಗಳ ಬಗೆಗಿನ ನಮ್ಮ ಗ್ರಹಿಕೆಗಳು ತಪ್ಪಾಗಿಲ್ಲವೆಂದು ಸಿದ್ಧಪಡುತ್ತದೆ. ಪಂಜಾಬದಲ್ಲಿ ರೂಪನಗರ (ರೋಪರ) ರಾಜ್ಯದ ಮೇಲಿನ ಮುಸ್ಲಿಮ ದಾಳಿಯ ಕಾಲಕ್ಕೆ ರೂಪಸೇನನು ಅದನ್ನು ಉಳಿಸಿಕೊಳ್ಳಲು

ಕಲಿತನದಿಂದ ಕಾದುತ್ತ ಮಡಿದನು. ರೂಪಸೇನನ ಮಗ ಮತ್ತು ಲಕ್ಷ್ಮಣಸೇನನ ಮರಿಮೊಮ್ಮಗನಾದ ಬೀರಸೇನನು ೧೨೩೩ರ ಸುಮಾರಿಗೆ ಹಿಮಾಚಲ ಪ್ರದೇಶದ ಸುಕೇತದಲ್ಲಿ ರಾಜ್ಯಸ್ಥಾಪಿಸಿ, ಅಲ್ಲಿ ಸೇನವಂಶದ ಸಾರ್ವಭೌಮತ್ವ ಪ್ರತಿಷ್ಠಾಪಿಸಿದ. ಸ್ಥಳೀಯ ರಾಜಪೂತ ರಾಣಾಗಳು ಮತ್ತು ಕನೇತ ಅರಸರ ಮೇಲೆ ವಿಜಯ ಸರಣಿಯನ್ನು ಸಾಧಿಸುವ ಮೂಲಕ ಹಾಗೆ ಮಾಡಲು ಸಾಧ್ಯವಾಯಿತು. ಇಂದು ಕೂಡ ಭಾರತವು ವೃದ್ಧ ರಾಜಕಾರಣಿಗಳ ಚಾಡ್ಯ ಮತ್ತು ಅಧಿಕಾರ ಬಿಡಲು ಮನಸ್ಸಿಲ್ಲದಿರುವಿಕೆಗಳ ಬಲಿಪಶುವಾಗಿದೆ. ಅನೇಕ ಸಲ, ಈ ವೃದ್ಧ ರಾಜಕಾರಣಿಗಳು ಲಕ್ಷ್ಮಣಸೇನನಂತೆಯೆ ಗತ್ತುಗಾರಿಕೆಯಿಂದ ಅಧಿಕಾರ ಹಿಡಿದುಕೊಂಡಿರಲು ಬಯಸುವರು. ಹಾಗಾಗಿ, ರೂಪಸೇನ ಮತ್ತು ಬೀರಸೇನರಂಥ ಪರಿಣಿತ ವೀರರು ತಮ್ಮ ಯೋಗ್ಯ ವ ಯುವ ಮುಂದಾಳುಗಳಿಗೆ ತಮ್ಮ ಸಾಮರ್ಥ್ಯ ತೋರುವ ಅವಕಾಶ ಲಭಿಸುವುದಿಲ್ಲ. ಇತಿಹಾಸದಿಂದ ನಾವು ಪಾಠ ಕಲಿತಂತಿಲ್ಲ.

**ಭೂ ರಾಜಕೀಯ ಪರಿಗಣನೆಗಳಲ್ಲಿ ಔದಾಸೀನ್ಯ:**

ಲಕ್ಷ್ಮಣಸೇನನಲ್ಲಿ ಮುತ್ಸದ್ಧಿತನ ಮತ್ತು ದೂರದೃಷ್ಟಿ ಇಲ್ಲದ್ದರಿಂದ ಮಿಥಿಲೆಯ ಗಢವಾಲವಂಶ ನಾಶವಾಯಿತು. ಅವನ ವಿವೇಚನಾರಹಿತ ಮನೋಭಾವದಿಂದ ಭಖ್ತಿಯಾರ ಖಿಲ್ಜಿಗೆ ನವದ್ವೀಪ ಗೆಲ್ಲಲು ಸಹಾಯವಾಯಿತು. ಜಯಚಂದ್ರನು ಮಹಮ್ಮದ ಘೋರಿಯ ಪರವಾಗಿದ್ದುದರಿಂದ ಪೃಥ್ವೀರಾಜ ಚೌಹಾಣನ ವಂಶ ಶೀಘ್ರ ಪತನಹೊಂದಿತು. ಇದರಿಂದ ಭಾರತದಲ್ಲಿ ಮುಸ್ಲಿಮ ಆಳ್ವಿಕೆ ಸ್ಥಾಪಿಸಲು ಮಹಮ್ಮದ ಘೋರಿಗೆ ಸಾಧ್ಯವಾಯಿತು. ಈ ಹಿಂದೂ ಅರಸರು ಮತ್ತು ಅವರ ಮಂತ್ರಿಗಳ ರಾಜಕೀಯ ವಿವೇಚನಾರಾಹಿತ್ಯ ಅನಾಹುತಕ್ಕೆ ದಾರಿಮಾಡಿತು. ಸ್ವದೇಶೀಯ ಅರಸರನ್ನು ಕಿತ್ತೊಗೆದು ವಿದೇಶಿ ವೈರಿಗಳಿಗೆ ನೆರವು ನೀಡುವ ಅರಸನು ತನ್ನದೇ ದೇಶದ ವಿನಾಶವನ್ನು ತ್ವರಿತಗೊಳಿಸುತ್ತಾನೆ. ಬುದ್ಧಿವಂತ ಅರಸನಾದರೂ ಸಮಾನತೆಯಿಂದ, ದಾನದಿಂದ, ವಿವೇಚನೆ ಇಲ್ಲವೆ ಶಿಕ್ಷೆಯಿಂದ ಇತರ ದೇಶಿ ಅರಸರನ್ನು ವಿದೇಶಿ ದಾಳಿಗಾರನ ವಿರುದ್ಧ ಕಾದಾಡಹಚ್ಚುವನು. ಅನೇಕ ವರ್ಷಗಳ ಹಿಂದೆ ಕಾಮಂದಕನು ತನ್ನ ನೀತಿಸಾರದಲ್ಲಿ ಕೆಳಗಿನ ಉಪದೇಶವನ್ನು ಸ್ಪಷ್ಟವಾಗಿ ನೀಡಿದ್ದಾನೆ.

**ಯಾಸ್ಮಿನ್ನು ಚ್ಛಿದ್ರ್ಯಮನೇ ತು ರಿಪುರನೂಯಃ ಪ್ರವರ್ತತೇ**

**ನ ತಸ್ಯೋಚ್ಛಿತ್ತಿ ಮತಿಷ್ಮೇತ್ ಕುರ್ವಿತ್ಮೆನಮ್ ಸ್ವಗೋಕರ್ಮ||**

ಆದರೆ, ಬುದ್ಧನ ಯುಗದ ನಂತರ ರಾಜಕೀಯಕ್ಕೆ ಅಥವಾ ವಾಣಿಜ್ಯಕ್ಕೆ ಮಹತ್ವ ಕಡಿಮೆಗೊಳ್ಳುತ್ತ ಕೊನೆಗೊಮ್ಮೆ ಮಾಯವಾಯಿತು.

ಈ ಕಾಲದಲ್ಲಿ, ಭಖ್ತಿಯಾರನ ಒಮ್ಮಿಂದೊಮ್ಮಿನ ದಾಳಿಯ ಪರಿಣಾಮವಾಗಿ ನವದ್ವೀಪ ಪತನಗೊಂಡು ಲಕ್ಷ್ಮಣಸೇನನು ನವದ್ವೀಪ ತೊರೆದು ವಿಕ್ರಮಪುರದತ್ತ ನಡೆಯುವಂತಾಯಿತು.

**ಮಾಧವಸೇನ:** ಲಕ್ಷ್ಮಣಸೇನನ ತರುವಾಯ ಆವನ ಮಗ ಮಾಧವಸೇನ ಪಟ್ಟಕ್ಕೆ ಬಂದ. ಆದರೆ, ಅಲ್ಪಕಾಲ ರಾಜ್ಯವಾಳಿದ ಅವನು ತನ್ನ ತಮ್ಮ ಕೇಶವಸೇನನಿಗೆ ರಾಜ್ಯಭಾರ ಬಿಟ್ಟುಕೊಟ್ಟು

ಹಿಮಾಲಯಕ್ಕೆ ಹೊರಟುಹೋದ. ಕುಮಾಂವನಲ್ಲಿರುವ ಆಲ್ಮೋರಾ ಬಳಿಯ ಯೋಗೇಶ್ವರ ದೇವಾಲಯದ ಗೋಡೆಯ ಮೇಲೆ ಮಾಧವಸೇನನ ಸಾಧನೆಗಳನ್ನು ಕೆತ್ತಿರುವುದು ಕಂಡುಬರುತ್ತದೆ.

ಕೇಶವಸೇನ: ಕೇಶವಸೇನನು ಗೌಡ ಪ್ರದೇಶವನ್ನು ಕ್ರಿ.ಶ. ೧೨೧೫ ರವರೆಗೆ ಆಳಿದನೆಂದು ಕೆಲವು ವಿದ್ವಾಂಸರ ಅಭಿಮತ. ಗೌಡ ಪ್ರದೇಶದ ಮೇಲೆ ಮುಸ್ಲಿಮರ ವಿಜಯದಿಂದಾಗಿ ಅವನು ಪ್ರಧಾನ ರಾಜಧಾನಿ ಬಿಕ್ರಮಪುರಕ್ಕೆ ಹಿಂತೆಗೆಯುವಂತಾಯಿತು. ಸೃಜನಾತ್ಮಕ ಮತ್ತು ಸೌಂದರ್ಯಾತ್ಮಕ ಬುದ್ಧಿಯವನಿದ್ದ ಅವನ ಕವನಗಳು ಸದುಕ್ತಿಕರ್ಣಾಮೃತದಲ್ಲಿ ಸೇರ್ಪಡೆಗೊಂಡಿವೆ. ಮಾಧವಸೇನನು ೧೦ವರ್ಷ ಮತ್ತು ಕೇಶವಸೇನನು (ಕಷ್ಮಸೇನ) ಹದಿನೈದು ವರ್ಷ ಆಳಿದರೆಂದು ಐನ್-ಏ-ಅಕಬರಿ ದಾಖಲಿಸುತ್ತದೆ. ಇದನ್ನು ಅಬುಲ್ ಫಜಲ್ ಬರೆದುದು ೧೬ನೆಯ ಶತಮಾನದ ದ್ವಿತೀಯಾರ್ಧದಲ್ಲಿ. ಈ ಅರಸರ ಭೂದತ್ತಿಗಳು ಅಬುಲ್ ಫಜಲ್ ಗೊತ್ತುಪಡಿಸಿದ ಕಾಲಾವಧಿಗಳೊಂದಿಗೆ ತಾಳೆಹೊಂದುವುದಿಲ್ಲ. ಕೇಶವಸೇನನ ಮರಣಾನಂತರ ಬಿಶ್ವರೂಪಸೇನನು ಸಿಂಹಾಸನವೇರಿದ. ಅವನು ಲಕ್ಷ್ಮಣಸೇನನ ಅತಿ ಕಿರಿಯ ಪುತ್ರ. ಅವನ ತಾಯಿ ಬಸುದೇವಿ. ಕಲಿತನ ಮತ್ತು ಶಕ್ತಿಯಲ್ಲಿ ಅವನು ತನ್ನಿಬ್ಬರು ಸೋದರರನ್ನು ಮೀರಿಸಿದ್ದ. ಲಕ್ಷ್ಮಣಸೇನನು ವಯಸ್ಸು ಟಂ ದಾಟಿದ ಮೇಲೂ ಆಳ್ವಿಕೆ ನಡೆಸಿದ. ಅವನ ಅನೇಕ ಮಕ್ಕಳು ಸಮರ್ಥರಾಗಿದ್ದೂ ಸಿಂಹಾಸನವಂಚಿತರಾದರು. ಮಾಧವಸೇನ, ಕೇಶವಸೇನ ಮತ್ತು ಬಿಶ್ವರೂಪಸೇನ ಸೋದರರು ಒಬ್ಬರಾದ ನಂತರ ಒಬ್ಬರು ಪಟ್ಟಕ್ಕೆ ಬಂದರು. ಅವರ ಮಕ್ಕಳು -ಅಂದರೆ, ಮುಂದಿನ ಪೀಳಿಗೆಯ ಅರಸರು-ಬಂಗಾಲದ ಸಿಂಹಾಸನವೇರುವ ಅವಕಾಶವಿಲ್ಲದೆ ವೃದ್ಧರಾಗತೊಡಗಿದರು. ಈ ಕಗ್ಗಂಟಿನಿಂದ ತನ್ನನ್ನು ಬಿಡಿಸಿಕೊಂಡು ನಿರ್ಭೀತ ಮತ್ತು ಸಾಹಸಿ ಅರಸನಾಗಿದ್ದ ಸೂರ್ಯಸೇನನು ಪ್ರಯಾಗದ ಕಡೆಗೆ ಸಾಗಿ, ತನ್ನ ಸ್ವಂತ ರಾಜ್ಯ ಸ್ಥಾಪಿಸಿದನು. ಮುಪ್ಪಿನಿಂದಾಗಿ ಅವನು ಅರಸನಾಗಲು ಸಾಧ್ಯವಾಗದಿದ್ದರೂ ಹಿಮಾಚಲಪ್ರದೇಶದಲ್ಲಿ ಒಂದು ಸಮೃದ್ಧ ರಾಜ್ಯ ಸ್ಥಾಪಿಸುವಲ್ಲಿ ಅವನ ಮಕ್ಕಳು ಯಶಸ್ವಿಯಾದರು.

**ಸೇನ ಅರಸರ ಆಳ್ವಿಕೆಯ ದಿನಾಂಕಗಳನ್ನು ಖಚಿತಪಡಿಸುವಲ್ಲಿನ ತೊಡಕುಗಳು:**

ಕನ್ವರ ಸಂತ ಸಿಂಗ್ ಕ್ರಿ.ಶ. ೧೮೫೭ರಲ್ಲಿ ಸೇನ ಅರಸರ ವಂಶಾವಳಿಯೊಂದನ್ನು ಮಂಡಿಯಾಲಿ ಭಾಷೆಯಿಂದ ಹಿಂದಿಗೆ ಅನುವಾದಿಸಿದನು. ಅದರಲ್ಲಿರುವ ವಿವಿಧ ದಿನಾಂಕಗಳ ಮತ್ತು ವೃತ್ತಾಂತಗಳ ಹೊಂದಾಣಿಕೆಗೋಸ್ಕರ ಸೇನ ಅರಸರ ಪ್ರಸ್ತುತ ವಂಶಾವಳಿಯಲ್ಲಿ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

**ಪಶ್ಚಿಮಕ್ಕೆ ಸೇನರ ಚಲನೆ:**

ಸಾಕಷ್ಟಿರದ ಭೂಮಿ ಮತ್ತು ಬಂಗಾಲ, ಬಿಹಾರಗಳಿಂದ ಬಂದ ನಿರಾಶ್ರಿತರ ಪ್ರವಾಹದಿಂದುಂಟಾದ ಇತರ ಸಮಸ್ಯೆಗಳ ಕಾರಣದಿಂದ ಸೂರಸೇನನ ಮಗ ರೂಪಸೇನನು ಮತ್ತಷ್ಟು

ಪಶ್ಚಿಮಕ್ಕೆ ಸರಿದ. ಕೊನೆಯಲ್ಲಿ ಅದು ಕ್ರಮೇಣ ರೋಪರ ಎಂದು ಪ್ರಸಿದ್ಧಿ ಪಡೆಯಿತು. ಆದರೆ, ಇಲ್ಲಿ ಕೂಡ ಮುಸ್ಲಿಮ ದಾಳಿಗಾರರು ಸೇನರನ್ನು ಬಿಡಲಿಲ್ಲ.


ಮುಸ್ಲಿಮರು ರೂಪನಗರದ ಮೇಲೆ ದಾಳಿಯಿಟ್ಟಾಗ ರೂಪಸೇನನು ಸುಲ್ತಾನನ ಬೃಹತ್ ಸೇನೆಯಿಂದ ತನ್ನ ರಾಜ್ಯ ಸಂರಕ್ಷಿಸಲು ಕಾದಾಡುತ್ತ ಯುದ್ಧಭೂಮಿಯಲ್ಲಿ ಮಡಿದ. ಅವನ ಮೂವರು ಮಕ್ಕಳಲ್ಲೊಬ್ಬನಾದ ಬೀರಸೇನನು ತನ್ನ ಅನುಯಾಯಿಗಳೊಂದಿಗೆ ಸುಕೇತಕ್ಕೆ ಬಂದನು. ಕ್ರಮೇಣ ಅವನು ಒಂದು ಸಾಮ್ರಾಜ್ಯ ನಿರ್ಮಿಸಿಕೊಂಡನು. ತನ್ನ ೩೫ ವರ್ಷಗಳ ಆಳ್ವಿಕೆಯಲ್ಲಿ ಚಿಕ್ಕ ಚಿಕ್ಕ ಗಿರಿ ರಾಜ್ಯಗಳ ಅನೇಕ ರಾಜಪೂತ ಮತ್ತು ಕನೇತ ದೊರೆಗಳನ್ನು ಸೋಲಿಸಿದ. ಅವನು ಅವರೊಡನೆ ನೆಲಜಲಗಳೆರಡರ ಮೇಲೂ ಕಾದಾಡಿದನು.

◈◈◈

ಅಧ್ಯಾಯ ೩

## ಹಿಮಾಚಲಪ್ರದೇಶದ ಸೇನರು

**ಬೀರಸೇನ:** ಹಿಮಾಚಲಪ್ರದೇಶದಲ್ಲಿ ಸೇನವಂಶದ ಸಂಸ್ಥಾಪಕ ಬೀರಸೇನನು ತನ್ನ ಅನುಯಾಯಿಗಳೊಂದಿಗೆ ಸುಕೇತ ತಲುಪಿ ಅಲ್ಲಿ ತನ್ನನ್ನು ಸಂಸ್ಥಾಪಿಸಿಕೊಂಡ. ಸ್ಥಳೀಯ ರಾಣಾ ಆಗಿದ್ದ ಸನ್ಯತ್ರೋ ವೀರ ರಾಜಪೂತ ಮನೆತನದವನು. ತನ್ನನ್ನು ಸ್ಥಳೀಯ ದೊರೆಗಳ ಸಾರ್ವಭೌಮನೆಂದೇ ತಿಳಿದುಕೊಂಡಿದ್ದ. ಹಾಗಾಗಿ, ಬೀರಸೇನನ ಸಾರ್ವಭೌಮತ್ವವನ್ನು ಒಪ್ಪಲಾರೆ ಎಂಬ ಸಂದೇಶ ಕಳಿಸಿ ಸನ್ಯತ್ರೋ ಆಹ್ವಾನವೆಸಗಿದ. ಆದಾದ ಮೇಲೆ ಬೀರಸೇನನು ತನ್ನ ಸೈನ್ಯ ಜಮಾಯಿಸಿ ಸನ್ಯತ್ರೋನ ಮೇಲೆ ದಾಳಿಯಿಟ್ಟ. ಹಾಗೂ ಅವಕಾಶ ಕಂಡುಕೊಂಡು ಬೀರಸೇನನು ಮಾಸಿಲ ಕೋಟೆಗೆ ಮುತ್ತಿಗೆ ಹಾಕಿ ದೀರ್ಘ ಕಾಲ ಅದನ್ನು ತನ್ನ ವಶದಲ್ಲಿರಿಸಿಕೊಂಡ. ಆ ಕೋಟೆಯಲ್ಲಿ ತನ್ನ ಸೇನಾಬಲಗಳನ್ನು ಮರುಜಮಾಯಿಸಿಕೊಂಡು ಸನ್ಯತ್ರೋನ ಮೇಲೆ ಪುನಃ ದಾಳಿಮಾಡಿದ. ದೀರ್ಘ ಕಾಲ ನಡೆದ ಯುದ್ಧದಲ್ಲಿ ಮಾಸಿಲ, ಧಿಂಗ್ರಕೋಟಿ ಮತ್ತು ಕಜುಂಥನ ಮುಂತಾದ ಕೆಲವು ಕೋಟೆಗಳನ್ನು ಗೆದ್ದುಕೊಂಡು ಅವುಗಳ ಮೇಲೆ ತನ್ನ ಅಧಿಪತ್ಯ ವಿಸ್ತರಿಸಿದ. ಆ ಮೇಲೆ ರಾಣಾ ದೇವಪಾಲನನ್ನು ಸುಲಭವಾಗಿ ಸೋಲಿಸಿ ಸೆರೆಹಿಡಿದ. ಕ್ರಮೇಣ


(Mandi)
(Allahabad)
(Ropar)
Jayaskanchabar
(Chikmagalur)
(Chola)
Vangapa Sagara
Arab Sagara

ಅವನು ಆ ಪ್ರದೇಶದ ಮೇಲೆ ತನ್ನ ಪ್ರಭುತ್ವ ವಿಸ್ತರಿಸಿದ. ಸ್ವಲ್ಪ ಜಹಗೀರು ಕೊಟ್ಟು ಅವನನ್ನು ಬಿಡುಗಡೆಗೊಳಿಸಿದ.

ತನ್ನ ಕುಟುಂಬಸಮೇತ ವಾಸಕ್ಕೆಂದು ಬೀರಸೇನನು ಸಮುದ್ರಪಾತಳಿಯಿಂದ ಐದುಸಾವಿರ ಅಡಿ ಎತ್ತರದಲ್ಲಿ ಪಾಂಗನಾ ಎಂಬ ಅರಮನೆಯನ್ನು ಕಟ್ಟಿಸಿದ. ಇದನ್ನು ನಾರೋಲ ಅಥವಾ ನಿರಾಲಾ ಎಂದು ಕರೆಯಲಾಗುತ್ತದೆ. ಏಕಾಂತ ಎಂದು ಇದರರ್ಥ. ತದನಂತರ ಕಂಜುಂಥನದಲ್ಲಿ ಸೈನ್ಯ ಕಟ್ಟಿ ಅನೇಕ ಗಿರಿರಾಜ್ಯಗಳನ್ನು ಗೆದ್ದುಕೊಂಡ. ಕಾಂಗ್ರಾದಲ್ಲಿ ಎರಡು ಕೋಟೆ ಕಟ್ಟಿಸಿದ. ಆಮೇಲೆ ಅವನು ಶತದ್ರು ನದಿಯ ಪಶ್ಚಿಮ ಮತ್ತು ದಕ್ಷಿಣ ತಟಗಳಲ್ಲಿದ್ದ ರಾಜಪೂತ ರಾಜ್ಯಗಳ ಮೇಲೆ ಆಕ್ರಮಣ ಮಾಡಿದ. ತಾನೇ ಆಕ್ರಮಣ ಮಾಡಿದಾಗ್ಯೂ ಸ್ಥಳೀಯ ರಾಣಾಗಳಿಂದ ಪ್ರತಿರೋಧ ಎದುರಾಗಲಿಲ್ಲ. ಆದುದರಿಂದ ತನ್ನ ದಾಳಿಯನ್ನು ನಿರ್ಭಯವಾಗಿ ಮುಂದುವರಿಸಿದ. ವೀರಕೋಟ ಕೋಟೆಯನ್ನು ಗೆದ್ದುಕೊಂಡ ಮೇಲೆ ಅವನು ಅನೇಕ ಕೋಟೆಗಳು ಮತ್ತು ಗಿರಿರಾಜ್ಯಗಳ ಮೇಲೆ ಪ್ರಭುತ್ವ ಹೊಂದಿ ಕ್ರಮೇಣ ಅವುಗಳನ್ನು ಗೆದ್ದುಕೊಂಡ. ವೀರಯೋಧನೂ ಸ್ವಾತಂತ್ರ್ಯಪ್ರಿಯನೂ ಆಗಿದ್ದ ಕುಲು ಪ್ರದೇಶದ ರಾಜನು ಅವನ ಪ್ರಭುತ್ವವನ್ನು ಒಪ್ಪಿಕೊಂಡು ವಾರ್ಷಿಕ ಕಪ್ಪಕಾಣಿಕೆ ಸಲ್ಲಿಸಿದ. ಅದಕ್ಕೆ ಪ್ರತಿಯಾಗಿ ಬೀರಸೇನ ಅವನನ್ನು ಮುಕ್ತಗೊಳಿಸಿದ. ಅದಾದ ನಂತರ ಬೀರಸೇನನು ಸುಕೇತದ ಉತ್ತರಕ್ಕೆ ಮತ್ತು ಪಶ್ಚಿಮಕ್ಕೆ ಇದ್ದ ಅಸಂಖ್ಯ ರಾಜ್ಯಗಳನ್ನು ದಾಳಿಯಿಟ್ಟು ಗೆದ್ದುಕೊಂಡನು. ಈ ವಿಜಯದ ಸ್ಮರಣಾರ್ಹ ಬೀರಕೋಟ (ಈಗ ಬಿಹಾರಕೋಟ) ಎಂಬ ಕೋಟೆ ಕಟ್ಟಿಸಿದ.

ಮೊಂಡಿ ರಾಜ್ಯದ ಉತ್ತರ ಮತ್ತು ದಕ್ಷಿಣ, ಪೂರ್ವ ಮತ್ತು ಪಶ್ಚಿಮಗಳುದ್ದಕ್ಕೂ ಎಲ್ಲ ದಿಶೆಗಳಲ್ಲಿ ಬೀರಸೇನನ ಪರಾಕ್ರಮದ ಕುರುಹುಗಳು ಕಂಡುಬರುತ್ತವೆ. ಪ್ರದೇಶಗಳನ್ನು ಗೆಲ್ಲಲು ಅವನು ಯುದ್ಧದಲ್ಲಿ ತೋರಿದ ಧೈರ್ಯ ಪರಾಕ್ರಮಗಳನ್ನು ನೋಡಿದರೆ ಅವನ ಈ ಗುಣಗಳಿಗೆ ಸರಿಸಮಾನರಾದ ಇನ್ನೊಬ್ಬ ಅರಸನನ್ನು ಸೇನ ವಂಶದಲ್ಲಿ ಕಾಣೆವು. ಬಂಗಾಲದ ದೇವಪಾದ ಶಾಸನದಲ್ಲಿ ದಾಕ್ಷಿಣಾತ್ಯ ಕ್ಷೌಣೀಂದ್ರ ಎಂದು ವರ್ಣಿತನಾಗಿರುವ ಸೇನವರರ ವಂಶದ ಈ ಒಂದನೆಯ ಬೀರಸೇನನ ಬಗೆಗೆ ನಮಗೆ ಹೆಚ್ಚು ತಿಳಿಯದು. ಹಿಮಾಚಲಪ್ರದೇಶದ ಈ ಇಮ್ಮಡಿ ಬೀರಸೇನನು ಸೇನ ಸಾಮ್ರಾಜ್ಯವನ್ನು ವಿಸ್ತರಿಸಿ ಅದಕ್ಕೆ ಭದ್ರ ಬುನಾದಿ ನಿರ್ಮಿಸಿದ. ಅವನು ತನ್ನ ಬಾಲ್ಯದ ಕನಸನ್ನು ಸುಕೇತದಲ್ಲಿ ಕಾರ್ಯಗತ ಮಾಡಿದ. ವೀರಯೋಧನಾಗಿದ್ದ ಬೀರಸೇನನು ೬೫ ವರ್ಷ ವೈಭವಪೂರ್ಣ ಆಳ್ವಿಕೆಯ ನಂತರ ಕಾದುತ್ತಲೇ ಮಡಿದ. ಕಲಿತನ, ಶೌರ್ಯ, ದೂರದೃಷ್ಟಿಗಾಗಿ ಹಿಮಾಚಲಪ್ರದೇಶದಲ್ಲಿ ಸೇನ ವಂಶ ಸಂಸ್ಥಾಪಿಸಿದವನು ಬೀರಸೇನನು. ಅವನ ಹೆಸರು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುವುದು.

### ಸುಕೇತ ಬಂಗಾಲಗಳ ಸಂಬಂಧ:

ರೂಪನಗರ ಬಿಟ್ಟು ಸುಕೇತಕ್ಕೆ ಹೊರಡುವ ನಿರ್ಣಯವನ್ನು ಅರಸ ಬೀರಸೇನನು ಏಕೆ ಮತ್ತು ಹೇಗೆ ತೆಗೆದುಕೊಂಡನೆಂಬುದು ಒಂದು ತೆರೆದ ಪ್ರಶ್ನೆ.ಅವನಿಗೆ ಸುಕೇತಕ್ಕೆ ಹೋಗುವ ಮಾರ್ಗ ಹೇಗೆ ತಿಳಿಯಿತು? ಉತ್ತರವಾಗಿ ಹೇಳಬಹುದಾದಂತೆ, ರಿವಲ್ಸರ ಎಂಬ ಪ್ರಾಚೀನ ಹಿಂದೂ ಮತ್ತು ಬೌದ್ಧ ತೀರ್ಥಯಾತ್ರೆಗಳ ಸ್ಥಳವಿದೆ. ಅಲ್ಲಿ ಲೋಮ ಜನಾಂಗದ ಮುನಿಯೊಬ್ಬನ

ದೇವಾಲಯವಿದೆ. ಪ್ರಾಚೀನ ಕಾಲದಲ್ಲಿ ಲೋಮ ಜನಾಂಗದ ಮುನಿಯ ಆಶ್ರಮ ಅಲ್ಲಿತ್ತೆಂದು ತಿಳಿದುಬರುತ್ತದೆ. ಸಮೀಪವಿರುವ ಕಾನಪುರ ಗ್ರಾಮವು ಮಹಾಭಾರತದ ದಾನಶೂರ ಕರ್ಣನು ಸ್ಥಾಪಿಸಿದ್ದೆಂದು ಹೇಳುತ್ತಾರೆ. ಮೇಲಾಗಿ, ಅರಗಿನ ಮನೆಯಿಂದ ಪಾರಾದ ಕೂಡಲೆ ಪಾಂಡವರು ಇಲ್ಲಿ ಗುಮ್ಮ ಎಂಬ ಹಳ್ಳಿಯಲ್ಲಿ ಆಶ್ರಯ ಪಡೆದಿದ್ದರು. ಮತ್ತು ಅಲ್ಲಿ ಛದ್ಮವೇಷದಲ್ಲಿ ವಾಸಿಸಿದ್ದರು. ಮಾಂಡಿಯ ರಿವಲ್ಸರ ಕೆರೆಯು ಯಾತ್ರಾಸ್ಥಳವಾಗಿತ್ತೆಂದು ಸ್ಕಂದಪುರಾಣದಲ್ಲಿ ವರ್ಣಿಸಲಾಗಿದೆ.

ಬೌದ್ಧ ಭಿಕ್ಷು ಪದ್ಮಸಂಭವನು (ಕ್ರಿ.ಶ. ೭೫೦-೮೦೦) ರಿವಲ್ಸರದಲ್ಲಿ ಜನಿಸಿದನೆಂದು ಹೇಳಲಾಗುತ್ತದೆ. ತಿಬೆಟಿನ ಅರಸ ತ್ರಿಸಂದೇಟನ ಮತ್ತು ಭೂತಾನಿನ ಅರಸ ಸಿಂಧು ನೀಡಿದ ಆಮಂತ್ರಣದ ಮೇರೆಗೆ ಪದ್ಮಸಂಭವನು ಭಾರತದಿಂದ ತಿಬೆಟ್ ಮತ್ತು ಭೂತಾನಗಳಿಗೆ ಹೋದನು. ಬೌದ್ಧ ಧರ್ಮದ ಇತಿಹಾಸ (ಛೋಸ್ಯುಂಗ್) ತಿಳಿಸುವಂತೆ, ಅವನು ಅಲ್ಲಿ ಮಹಾಯಾನ ಪಂಥವನ್ನು ಬೋಧಿಸಿದನು. ಹಾಗೂ ಬೌದ್ಧ ಧರ್ಮದ ನಿಂಗ್ಮಪ ಸಂಘವನ್ನು ಸಂಘಟಿಸಿದನು.

ಕ್ರಿ.ಶ. ೮ನೆಯ ಶತಮಾನದಲ್ಲಿ ಬೌದ್ಧ ಭಿಕ್ಷು ಪದ್ಮಸಂಭವನ ಉಚ್ಛ್ರಾಯಕಾಲದಿಂದ ರಿವಲ್ಸರ ಮತ್ತು ಬಂಗಾಲಗಳ ನಡುವೆ ಸಂಪರ್ಕ ಮತ್ತು ಸಾಂಸ್ಕೃತಿಕ ಕೊಡುಕೊಳೆ ಆರಂಭಗೊಂಡವು.

**ಧೀರಸೇನ:** ಬೀರಸೇನನ ಮಗ ಧೀರಸೇನನು ಕೇವಲ ೭ ವರ್ಷ ಆಳಿದನು. ನೆರೆಹೊರೆಯ ಎಲ್ಲ ರಾಜರನ್ನು ಬೀರಸೇನನು ಮಣಿಸಿದ್ದರಿಂದ ಧೀರಸೇನನ ಆಳ್ವಿಕೆಯಲ್ಲಿ ಯಾವುದೇ ಬಾಹ್ಯ ದಾಳಿಯಾಗಲಿ ದೊಡ್ಡ ಆಂತರಿಕ ತೊಂದರೆಯಾಗಲಿ ಸಂಭವಿಸಲಿಲ್ಲ. ಆದುದರಿಂದ ತನ್ನ ರಾಜ್ಯದ ಸಮಾಜೋ-ಆರ್ಥಿಕ ಪುನರ್ನಿರ್ಮಾಣ ಮತ್ತು ಆಂತರಿಕ ವಿಕಾಸದತ್ತ ಗಮನ ಹರಿಸಲು ಧೀರಸೇನನಿಗೆ ಸಾಧ್ಯವಾಯಿತು.

**ಬಿಕ್ರಮಸೇನ:** ಬಿಕ್ರಮಸೇನನು ಧೀರಸೇನನ ಉತ್ತರಾಧಿಕಾರಿ. ಬಲು ಧರ್ಮಿಷ್ಠನಾಗಿದ್ದ. ಕರ್ನಾಟಕದಲ್ಲಿದ್ದ ಪೂರ್ವಜ ಸಾಮಂತಸೇನನು ತನ್ನ ವೃದ್ಧಾಪ್ಯದಲ್ಲಿ ಬಂಗಾಲದ ರಾಢ ಪ್ರದೇಶದಲ್ಲಿಯ ಗಂಗಾತಟದಲ್ಲಿ ಇರಲು ಬಂದನು.ಅವನ ಹಾಗೆಯೇ ಬಲ್ಲಾಳಸೇನ ಮತ್ತು ಲಕ್ಷ್ಮಣಸೇನರೂ ನವದ್ವೀಪದ ಗಂಗಾತಟದಲ್ಲಿ ತಮ್ಮ ನಿವಾಸಗಳನ್ನು ಕಟ್ಟಿದರು. ಸೂರಸೇನನು ವಿಕ್ರಮಪುರ ಬಿಟ್ಟು ಪಶ್ಚಿಮದತ್ತ ಹೋಗಬೇಕಾಗಿ ಬಂದರೂ ಗಂಗಾನದಿಯ ತ್ರಿವೇಣಿ ಸಂಗಮವಾದ ಪ್ರಯಾಗದಲ್ಲಿ ನೆಲೆಸಲೆತ್ನಿಸಿದನು. ಈ ಕಾಲಕ್ಕೆ ಸೇನರಾಜ್ಯದಲ್ಲಿ ಶಾಂತಿ ಸಮಾಧಾನಗಳಿದ್ದುದರಿಂದ ವಿಕ್ರಮಸೇನನಿಗೆ ಗಂಗಾಸ್ನಾನ ಮಾಡಬೇಕೆಂಬ ಉತ್ಕಟೇಚ್ಛೆಯಾಯಿತು. ಆದರೆ, ಗಂಗಾನದಿ ಸುಕೇತದಿಂದ ದೂರವಿತ್ತು. ಆದರೂ, ಈ ಸೇನ ಅರಸನ ರಕ್ತದಲ್ಲಿ ಗಂಗಾನದಿಯು ಕರೆ ಮೊರೆಯತೊಡಗಿತು. ಹರಿದ್ವಾರದ ಬಳಿ ಗಂಗಾನದಿಯಲ್ಲಿ ಸ್ನಾನಗೈದು ತನ್ನ ಪೂರ್ವಜರಿಗೆ ನೈವೇದ್ಯ ಸಲ್ಲಿಸುವುದೆಂದು ಅವನು ಯೋಚಿಸಿದ. ತದನಂತರ ರಾಜ್ಯದ ಆಡಳಿತಭಾರವನ್ನು ತನ್ನ ಸೋದರ ತ್ರಿವಿಕ್ರಮಸೇನನಿಗೆ ವಹಿಸಿಕೊಟ್ಟು ತೀರ್ಥಯಾತ್ರೆಗೆ ಹೊರಟ. ತೀರ್ಥಯಾತ್ರೆಯಿಂದ ಹಿಂತಿರುಗಿದಾಗ, ಅವನಿಗೆ ತ್ರಿವಿಕ್ರಮನು ರಾಜ್ಯವನ್ನು ಹಿಂತಿರುಗಿಸಲಿಲ್ಲ. ಬಿಕ್ರಮಸೇನನ ಸೋದರ ತ್ರಿವಿಕ್ರಮಸೇನನು ದ್ರೋಹವೆಸಗಿ ಕುಲು ರಾಜನ ಜೊತೆ ಸೇರಿ, ಕುಲು ರಾಜನು ಬಿಕ್ರಮಸೇನನ ರಾಜ್ಯವನ್ನು ಆಕ್ರಮಿಸಲು

ಅವಕಾಶ ಮಾಡಿಕೊಟ್ಟ. ಹಾಗಾಗಿ, ಬಿಕ್ರಮಸೇನನು ಸೋದರ ತ್ರಿವಿಕ್ರಮಸೇನನ ವಿರುದ್ಧ ಕಾದಾಡಬೇಕಾಗಿ ಬಂತು. ಬಿಕ್ರಮಸೇನ ತನ್ನ ಸಂಬಂಧಿಯಾಗಿದ್ದ ಕಿಯೊಂಥಲ ರಾಜನ ಸಹಾಯ ಪಡೆದು ಕುಲು ರಾಜನನ್ನು ಸೋಲಿಸಿ, ತನ್ನ ಸೋದರನ ದ್ರೋಹದಿಂದಾಗಿ ಕಳೆದುಕೊಂಡಿದ್ದ ತನ್ನ ರಾಜ್ಯವನ್ನು ಮರಳಿ ಗೆದ್ದುಕೊಂಡ. ಕುಲು ರಾಜ್ಯವನ್ನು ಮಾಂಡಿಗೆ ಸೇರಿಸಿಕೊಳ್ಳಲಾಯಿತು. ಕುಲು ರಾಜ ಮತ್ತು ದಂಗೆಕೋರ ಸೋದರ ಇಬ್ಬರೂ ಅಸುನೀಗಿದರು. ಆದರೂ ಕೂಡ, ಬಿಕ್ರಮಸೇನನು ಕುಲು ರಾಜವಂಶಕ್ಕೆ ಮಾಸಿಕ ಜೀವನಾಂಶ ನೀಡಿದ. ಹೀಗೆ, ಬಿಕ್ರಮಸೇನನು ತನ್ನ ತಮ್ಮನಿಗಿಂತ ಭಿನ್ನನಾಗಿ ತಾನೊಬ್ಬ ಧರ್ಮಿಷ್ಠ ಹಾಗೂ ನ್ಯಾಯಬುದ್ಧಿಯ ಅರಸನೆಂದು ಸಿದ್ಧಪಡಿಸಿದ. ಅವನು ಕೇವಲ ಹತ್ತು ವರ್ಷ ಆಳಿದ.

ಧರಿತ್ರೀಸೇನ: ಬಿಕ್ರಮಸೇನನ ತರುವಾಯ ಧರಿತ್ರೀಸೇನ ಸಿಂಹಾಸನವೇರಿದ. ಅವನೂ ಕೆಲವೇ ವರ್ಷ ಆಳಿದ. ಅವನು ತನ್ನ ವೈಯಕ್ತಿಕ ಜೀವನದಲ್ಲಿ ಅಸುಖಿಯಾಗಿದ್ದ. ತನ್ನ ಕಣ್ಣ ಮುಂದೆಯೇ ಹಿರಿಯ ಮಗನನ್ನು ಕಳೆದುಕೊಂಡ. ಅವನ ನಂತರ ಕಿರಿಯ ಮಗ ಖಡ್ಗಸೇನ ಸಿಂಹಾಸನವೇರಿದ. ಖಡ್ಗಸೇನನನ್ನು ಭುವನೇಶ್ವರನು ಕೆಳಕಂಡಂತೆ ಸ್ತುತಿಸಿರುವನು.

ಶೂರಸ್ತಸ್ಮಾದ್ ಖಡ್ಗ ಸೇನೊ ಬಲಿಷ್ಠಃ
ಶ್ರೇಷ್ಠತೋ ಜಜ್ಞೋ ಜ್ಞಾನ ಕರ್ಮ ಪ್ರವೀಣಃ
ವಂಶಖ್ಯಾತಿಯಸ್ಯ ಸೇನಾವಿಧಾನಾತ್ ಖ್ಯಾತಿ
ಖ್ಯಾಯತಿ ಭೂತ ಭೂವುಜಾನ್ ಭೂಮಿಭಾಗೇ
ಯೋ ನಿಗ್ರಹ ನಿಜ ಖಡ್ಗೇ ಧಾರಯಾ
ಸೇನಯಾ ಚ ಪ್ರಬಲಾರಿ ಮಂಡಲಿಮ್
ಮಾಂಡವೀಯ ಪುರಾಖಡ್ಗಮಂಡನಃ
ಖಡ್ಗರಸೇನೇತಿ ಸೋ ಭವನ್ ನೃಪಃ
ಶ್ರೀಮನ್‌ಮಾನವಿಕಾತಿ ಮಂಡನ ಪರಃ
ಪ್ರೌಢ ಪ್ರತಾಪಾನಲಾವಾಲ
ಜಲವಿಶೇಷಿತ ರಿಪುತಮಃ ಪ್ರೌಢ ಪ್ರಸರ್ಯ ದ್ಯಾಸಃ
ಪ್ರೋದ್ದಾಮಪ್ರಸರತ್ ಸ್ಫೂರನ್ನಿಜ ಭುಜದಂಡ ಪ್ರಚಂಡಾಹುತಿ
ಕೃದ್ವತ್ವೈರಿ ಹೃದ್ಗೋದ್ವತಃ ಸಂಭವತ್ ಶ್ರೀಖಡ್ಗಸೇನೋ ನೃಪಃ||

ಖಡ್ಗಸೇನನ ತರುವಾಯ ಅವನ ಮಗ ಇಮ್ಮಡಿ ಲಕ್ಷ್ಮಣಸೇನನು ಸಿಂಹಾಸನಕ್ಕೆ ಬಂದ.

**ಇಮ್ಮಡಿ ಲಕ್ಷ್ಮಣಸೇನ:** ಎರಡು ವರ್ಷದವನಿದ್ದಾಗಲೆ ಇಮ್ಮಡಿ ಲಕ್ಷ್ಮಣಸೇನನು ಸಿಂಹಾಸನದ ಉತ್ತರಾಧಿಕಾರಿಯಾದನು. ಅಶಾಂತಿಯ ಈ ಅವಕಾಶವನ್ನು ಬಳಸಿಕೊಂಡು ಕುಲು ರಾಜನು ಅಲ್ಪವಯಿ ಅರಸನ ವಿರುದ್ಧ ಸಂಚು ಮಾಡಿ ತನ್ನ ಸೋತ ರಾಜ್ಯವನ್ನು ಮರಳಿ ಪಡೆಯಲೆತ್ನಿಸಿದ.

ಕುಲು ರಾಜ್ಯದ ಮಂತ್ರಿಗಳು ತಮ್ಮ ರಾಜನ ಅನ್ಯಾಯದ ಅವಕಾಶವಾದಿತ್ವದ ವಿರುದ್ಧ ಪ್ರತಿಭಟಿಸಿದರು.ಕಾಲಾನಂತರದಲ್ಲಿ ಬಾಲಕನು ಹದಿನಾರು ವರ್ಷದವನಾದಾಗ ತನ್ನ ಪೂರ್ಣ ಬಲದೊಂದಿಗೆ ಕುಲು ರಾಜ್ಯದ ಮೇಲೆ ದಾಳಿಮಾಡಿ ವಜೀರ, ರೂಪಿ,ಲೇಗ ಮುಂತಾದವನ್ನು ಗೆದ್ದುಕೊಂಡ. ಅವನು ೨೫ ವರ್ಷ ಆಳಿದ. ಪ್ರಾಯಶಃ ಇಮ್ಮಡಿ ಲಕ್ಷ್ಮಣಸೇನನ ಇಂಥ ವೀರೋಚಿತ ಸಾಧನೆಗಳಿಗಾಗಿಯೆ ಭುವಂಶ್ಚರನು ಅವನನ್ನು ಕೆಳಕಂಡ ಶಬ್ದಗಳಲ್ಲಿ ಅವನ ಪೂರ್ವಜ ಬಂಗಾಲದ ಅರಸ ಲಕ್ಷ್ಮಣಸೇನನಿಗೆ ಹೋಲಿಸಿರುವನು.

**ತಸ್ಮಾದ್ಬಭುಬ ಭೂಬಿ ಲಕ್ಷ್ಮಣಸೇನಃ ನಾಮಃ**

**ಪ್ರಾಚೀನ ಲಕ್ಷ್ಮಣ ಇವ ಅಮಲತುಲ್ಯಕೀರ್ತಿಃ |**

**ಪೂರ್ಣೀಕೃತ ಜಾಗತಿ ಯೇನ ಖಲು ದ್ವಿಜಾಶಾಃ**

**ವ್ಯಾಸಾಸಿಷ್ಟಾ ನೃಪತಯಃ ಪರಿಪಾಲಿತಾಶಾಃ ||**

**ಚಂದ್ರಸೇನ:** ಚಂದ್ರಸೇನನು ತನ್ನ ತಂದೆ ಲಕ್ಷ್ಮಣಸೇನನ ಉತ್ತರಾಧಿಕಾರಿಯಾದನು. ಅವನು ೧೦ ವರ್ಷ ಶಾಂತಿಯುತ ಆಳ್ವಿಕೆ ನಡೆಸಿ ತೀರಿಕೊಂಡನು. ನಂತರ ಅವನ ಮಗ ಬಿಜಯಸೇನನು ಸಿಂಹಾಸನವೇರಿ ೨೦ ವರ್ಷ ವೈಭವದಿಂದ ಆಳಿದನು. ಹಿಮಾಚಲಪ್ರದೇಶದ ಸೇನರು ಬಂಗಾಲ ಮತ್ತು ಕರ್ನಾಟಕದ ತಮ್ಮ ಪೂರ್ವಜರ ಹೆಸರುಗಳನ್ನು ಧರಿಸಿದರು. ಉದಾ: ಬೀರಸೇನ, ಬಿಜಯಸೇನ, ಲಕ್ಷ್ಮಣಸೇನ ಇತ್ಯಾದಿ.

**ಸಾಹುಸೇನ:** ಬಿಜಯಸೇನನ ತರುವಾಯ ಅವನ ಮಗ ಸಾಹುಸೇನ (ಅಥವಾ ಅಹುಸೇನ) ಸಿಂಹಾಸನವೇರಿದ. ಅವನು ತನ್ನ ಸಮಯದ ಬಹುಭಾಗವನ್ನು ಸೋದರ ಬಹುಸೇನನೊಂದಿಗೆ ಕಾದಾಟದಲ್ಲಿಯೇ ಕಳೆದ. ಆ ಘರ್ಷಣೆಯೆ ಅವನ ಆಳ್ವಿಕೆಯ ಪ್ರಮುಖ ಘಟನೆಯಾಗಿತ್ತು. ಕೊನೆಗೆ ಬಹುಸೇನನು ಕುಲು ರಾಜ್ಯದಲ್ಲಿ ಆಶ್ರಯ ಪಡೆದ.

ಹನ್ನೊಂದು ರಾಜರ ಆಳ್ವಿಕೆಯ ತರುವಾಯ ರಾಜಧಾನಿಯನ್ನು ಸ್ಥಳಾಂತರಗೊಳಿಸುವುದು ಸೂಕ್ತವೆಂದು ಬಗೆಯಲಾಯಿತು. ಹೀಗಾಗಿ, ಸೇನರಿಗೆ ಎರಡು ವಾಹಿನಿಗಳಿದ್ದವು. ನಾವೀಗ ರತನಸೇನನೊಂದಿಗೆ ಆರಂಭಿಸಿ ಅವನ ಉತ್ತರಾಧಿಕಾರಿಗಳ ವಾಹಿನಿಯನ್ನು ಚರ್ಚಿಸೋಣ. ನಿಮಿಸೇನನೊಂದಿಗೆ ಆರಂಭಿಸುವ ಇನ್ನೊಂದು ವಾಹಿನಿಯನ್ನು ಆಮೇಲೆ ಚರ್ಚಿಸೋಣ.

**ರತನಸೇನ:** ರತನಸೇನನು ಸಾಹುಸೇನನ ಉತ್ತರಾಧಿಕಾರಿ. ಅವನ ಆಳ್ವಿಕೆ ಶಾಂತಿಯುತವಾಗಿತ್ತು. ಅವನಿಗೆ ವಿಲಾಸಸೇನ ಮತ್ತು ಸಮುಂದರಸೇನ ಎಂಬಿಬ್ಬರು ಮಕ್ಕಳು. ಹಿರಿಯ ಮಗ ವಿಲಾಸಸೇನ ಗದ್ದುಗೆಯೇರಿದ. ಅವನನ್ನು ಪ್ರಜೆಗಳು ದ್ವೇಷಿಸುತ್ತಿದ್ದಂತೆಯೆ ಅವನೂ ತನ್ನ ಪ್ರಜೆಗಳೊಂದಿಗೆ ಸೌಹಾರ್ದ ಹೊಂದಿರಲಿಲ್ಲ. ಅವರು ತಮ್ಮ ಅಸಂತುಷ್ಟಿಯನ್ನು ವ್ಯಕ್ತಮಾಡುತ್ತಿದ್ದರು.ಮತ್ತು ಅರಸನಿಗೆ ಸಹಕಾರ ನೀಡುತ್ತಿರಲಿಲ್ಲ. ಕೊನೆಗೆ ಅವರು ವಿಲಾಸಸೇನನ್ನು ವಿಷವಿಕ್ಕಿ ಕೊಂದರು. ಪ್ರಜೆಗಳು ವಿಲಾಸಸೇನನ ಕೂಸು ಶ್ರೀಮಂತಸೇನನನ್ನು ಕೊಲ್ಲುವ ಮತ್ತು ಅವನ ತಮ್ಮ ಸಮುಂದರಸೇನನನ್ನು ಪಟ್ಟಕೇರಿಸುವ ಹಂಚಿಕೆ ಹೂಡಿದರು. ಕೂಸಿನ ತಾಯಿಗೆ ಅವರ ಹೊಂಚು ಗೊತ್ತಾಗಿ ಮಾರುವೇಷದಲ್ಲಿ ಕೂಸಿನೊಂದಿಗೆ ಅರಮನೆಯಿಂದ ಪಾರಾಗಿ ಒಬ್ಬ ಧಣಿಯ ಮನೆಯಲ್ಲಿ ಆಶ್ರಯಪಡೆದಳು. ಒಬ್ಬ ಸಾಧು ಒಂದು ದಿನ ಅವಳ ಮಗ ಸಿಂಹಾಸನವೇರುವನೆಂದು ಭವಿಷ್ಯ ನುಡಿದ. ಏತನ್ಮಧ್ಯೆ, ಸಮುಂದರಸೇನನ ಪಟ್ಟಾಭಿಷೇಕ ಏರ್ಪಟ್ಟಿತ್ತು. ಅವನು ಇಹಲೋಕ ತ್ಯಜಿಸಿದಾಗ ಅವನ ಮಕ್ಕಳಾದ ಇಮ್ಮಡಿ ಹೇಮಂತಸೇನ ಮತ್ತು ಬಲಬಂತಸೇನ ಸಿಂಹಾಸನದ ವಾರಸುದಾರರಾದರು. ಆದರೆ, ಅವರಿಬ್ಬರೂ ಅಲ್ಪ ವಯಸ್ಸಿನಲ್ಲಿ ಮೃತಪಟ್ಟರು. ಆಗ, ಶ್ರೀಮಂತಸೇನನಲ್ಲದೆ ಸಿಂಹಾಸನಕ್ಕೆ ಬೇರೆ ವಾರಸುದಾರರಿರಲಿಲ್ಲ. ಆದುದರಿಂದ, ಪ್ರಜೆಗಳು ವಿಲಾಸಸೇನನ ಮಗ ಶ್ರೀಮಂತಸೇನನನ್ನು ಸಿಂಹಾಸನದ ಮೇಲೆ ಕುಳ್ಳರಿಸುವ ಉದ್ದೇಶದಿಂದ ಅವನಿಗಾಗಿ ಹುಡುಕಾಡತೊಡಗಿದರು.

**ಶ್ರೀಮಂತಸೇನ:** ಪ್ರಜೆಗಳು ಶ್ರೀಮಂತಸೇನನನ್ನು ಹುಡುಕಿ ತೆಗೆದು ಸಿಂಹಾಸನದ ಮೇಲೆ ಕುಳ್ಳರಿಸಿದರು. ಸಿಹಾಸನವೇರಿದ ಕೂಡಲೆ ಸಿರಾಜದ ಧಣಿಗೆ ಒಂದು ಗ್ರಾಮವನ್ನು ದತ್ತಿನೀಡಿ ಕೃತಜ್ಞತೆ ತೋರಿದ. ಆ ಗ್ರಾಮದಲ್ಲಿ ಶ್ರೀಮಂತಸೇನನು ತನಗಾಗಿ ತಾಯಿ ತೋರಿದ ಪ್ರೀತಿ ಮತ್ತು ತ್ಯಾಗಗಳ ಸ್ಮರಣಾರ್ಥ ಭವನವನ್ನು ಕಟ್ಟಿಸಿ ಅದಕ್ಕೆ ರಾಣಿಕೋಟ ಎಂದು ಹೆಸರಿಟ್ಟನು. ಕಾಲಾಂತರದಲ್ಲಿ ಕಟ್ಟಡವು ಅವಸಾನ ಹೊಂದಿತಾದರೂ ಶ್ರೀಮಂತಸೇನನ ತಾಯಿಯ ಗೌರವಾರ್ಥ ಸುಕೇತದ ಆ ಪ್ರದೇಶವನ್ನು ಇಂದಿಗೂ ರಾಣಿಕೋಟ ಎಂದೆ ಕರೆಯಲಾಗುತ್ತದೆ.

**ನಿಜವಾದ ವಾರಸುದಾರನಿಲ್ಲ:** ಶ್ರೀಮಂತಸೇನನ ತರುವಾಯ ಐದು ಅರಸರು ಸಂಕ್ಷಿಪ್ತವಾಗಿ ಆಳಿದರು. ಅವರ ಆಳ್ವಿಕೆಯಲ್ಲಿ ಯಾವುದೆ ಗಮನಾರ್ಹ ಘಟನೆ ಸಂಭವಿಸಲಿಲ್ಲ. ಐದನೆಯ ಅರಸ ಮಂತರಸೇನನಿಗೆ (ಮಂತ್ರಸೇನ) ಮಕ್ಕಳಿರಲಿಲ್ಲ.

ಮಾಂಡಿಯ ಆಸ್ಥಾನಿಕರು ಮತ್ತು ಪ್ರಜೆಗಳು ಮಕ್ಕಳಿರದ ಅರಸನ ಮುತ್ತಜ್ಜನ ತಮ್ಮನಾದ ಲಿಯಾನ್‌ಫಿಯಾನ್‌ನನ್ನು ವಾರಸುದಾರನಾಗಿ ಬರವಂತೆ ಆಮಂತ್ರಿಸಲು ನಿರ್ಧರಿಸಿದರು. ಆದರೆ, ಲಿಯಾನ್‌ಫಿಯಾನ್‌ನ ಹೆಸರು ಸೇನ ವಂಶದ ಅರಸರ ಹೆಸರಿಗಿಂತ ಭಿನ್ನವಾಗಿದ್ದುದಲ್ಲದೆ ಅವನ ಚಹರೆ, ನಡತೆ ಮತ್ತು ಮೌಲ್ಯಕಲ್ಪನೆಗಳೂ ಭಿನ್ನವಾಗಿದ್ದವು.

ಅವನ ಸ್ವಭಾವ ಮತ್ತು ಗುಣಲಕ್ಷಣಗಳು ನಿರೀಕ್ಷಿಸಿದಂತೆ ಇರಲಿಲ್ಲವಾದ್ದರಿಂದ ಅವರು ರಾಜವಂಶಕ್ಕೆ ತಕ್ಕಂಥ ವ್ಯಕ್ತಿಯನ್ನು ಆಯ್ಕೆ ಮಾಡಬಯಸಿದ್ದರು. ಅದಕ್ಕಾಗಿ ಒಂದು ಯೋಜನೆ

ರೂಪಿಸಿದರು. ಮೇಜವಾನಿ ನಡೆದಾಗ ಉಪಸ್ಥಿತರಿದ್ದ ಅರ್ಹ ನಾಗರಿಕರೆದುರು ರಾಜ್ಯದ ಸಮಸ್ಯೆಯೊಂದನ್ನು ಇಟ್ಟು ಆ ಸಮಸ್ಯೆಯನ್ನು ಬಿಡಿಸುವಲ್ಲಿ ಉತ್ತಮ ಜ್ಞಾನ ಸಾಮರ್ಥ್ಯ ತೋರಿದ ವ್ಯಕ್ತಿಯನ್ನು ಆಯ್ಕೆ ಮಾಡಲು ಯೋಜಿಸಿದರು. ಅದಕ್ಕನುಗುಣವಾಗಿ, ಅರ್ಹ ನಾಗರಿಕರನ್ನು ಆಹ್ವಾನಿಸಲಾಯಿತು. ಮೇಜವಾನಿ ಭರ್ಜರಿ ನಡೆದಾಗ ಉದ್ವೇಗಕ್ಕೊಳಗಾಗಿದ್ದ ದೂತನೊಬ್ಬ ಧಾವಿಸಿ ಬಂದು ನಾಟ್ನಿಯ ರಾಣಾ ದಂಗೆಯೆದ್ದು ಐದು ಗ್ರಾಮಗಳಿಗೆ ಬೆಂಕಿಯಿಟ್ಟಿರುವನೆಂದು ಘೋಷಿಸಿದ. ಮೇಜವಾನಿ ಮುಗಿದ ನಂತರ ಯೋಗ್ಯ ಕ್ರಮ ಕೈಗೊಳ್ಳಲಾಗುವುದೆಂದು ಲಿಯಾನ್‌ಫಿಯಾನ್ ಪ್ರತಿಕ್ರಿಯಿಸಿದ. ಆದರೆ, ಮೇಜವಾನಿಯಲ್ಲಿ ಪಾಲ್ಗೊಂಡವರಲ್ಲೊಬ್ಬ ಊಟ ಬಿಟ್ಟೆದ್ದು ಆಸ್ತಿಪಾಸ್ತಿ ಮತ್ತು ಜನರು ಗಂಡಾಂತರದಲ್ಲಿದ್ದಾಗ ಕುಡಿಯುವುದು ಮತ್ತು ತಿನ್ನುವುದು ಮುಂದುವರಿಯಕೂಡದೆಂದು ಸಾರಿದ. ಅವನು ತಕ್ಷಣ ದಂಗೆಯನ್ನು ಹತ್ತಿಕ್ಕಲು ಹಾಗೂ ಬೆಂಕಿಯನ್ನು ನಂದಿಸಲು ಹೊರಟೇಬಿಟ್ಟ. ತನ್ನನ್ನು ಹಿಂಬಾಲಿಸುವಂತೆ ಇತರರಿಗೂ ಸಲಹೆಯಿತ್ತು ಅವನು ಧ್ವಂಸಗೊಂಡ ಗ್ರಾಮಗಳತ್ತ ಧಾವಿಸಿದ. ಮಿಂಯಾ ಮದನ ಎಂಬ ಆತ ಆ ಸ್ಥಳದಿಂದ ಹೊರನಡೆದಾಗ ಮೇಜವಾನಿಯ ಸಂಘಟಕರು ರಾಜಸಿಂಹಾಸನಕ್ಕೆ ಮಿಂಯಾ ಮದನನೇ ಅತ್ಯಂತ ಯೋಗ್ಯ ಉತ್ತರಾಧಿಕಾರಿಯೆಂದು ಮುಕ್ತವಾಗಿ ಒಟ್ಟಾಭಿಪ್ರಾಯಕ್ಕೆ ಬಂದರು. ಹೀಗೆ ಮಿಂಯಾ ಮದನನು ರಾಜನೆಂದು ಆಯ್ಕೆಗೊಂಡು ಮದನಸೇನ ಎಂಬ ಹೆಸರಿನಿಂದ ಸಿಂಹಾಸನವೇರಿದ.

**ಹಿಮಾಚಲ ಪ್ರದೇಶದಲ್ಲಿ ಬಂಗಾಲದ ಇತಿಹಾಸದ ಪುನರಾವರ್ತನೆ:**

ಉಚ್ಚವರ್ಗದಿಂದ ಸಾಮಾನ್ಯರೆಡೆಗೆ ರಾಜಪ್ರಭುತ್ವ ಹಸ್ತಾಂತರಗೊಂಡುದನ್ನು ಮೇಲ್ಕಾಣಿಸಿದ ಘಟನೆ ತೋರ್ಪಡಿಸುತ್ತದೆ. ಹಾಗೂ ಜ್ಯೇಷ್ಠಾಧಿಕಾರ ಕಾಯ್ದೆಯನ್ವಯ ಆನುವಂಶಿಕ ಹಕ್ಕುದಾರಿಕೆಯ ಬದಲು ಚುನಾಯಿತ ರಾಜನ ಸಿಂಹಾಸನಾರೋಹಣವನ್ನು ನಿದರ್ಶಿಸುತ್ತದೆ.

ಗೌಡ ಅರಸ ಲಕ್ಷ್ಮಣಸೇನನು ಭೋಜನ ಮಾಡುತ್ತಿರುವಾಗ ಬಖ್ತಿಯಾರ ಖಿಲ್ಜಿ ನವದ್ವೀಪದ ಮೇಲೆ ದಾಳಿಯಿಟ್ಟ. ಅವನ ಆಕ್ರಮಣಕ್ಕೆ ಅರಸನು ಪ್ರತಿರೋಧ ಒಡ್ಡಲಾಗದ್ದರಿಂದ ನವದ್ವೀಪವನ್ನು ಮತ್ತು ತನ್ನ ರಾಜ್ಯದ ಪಶ್ಚಿಮ ಭಾಗವನ್ನು ಕಳೆದುಕೊಂಡ. ಆ ಘಟನೆಯ ಇನ್ನೊಂದು ವರ್ಷಾನಂತರ ಲಕ್ಷ್ಮಣಸೇನನ ದಾರ ವಂಶಜನಾದ ಲಿಯಾನ್‌ಫಿಯಾನ್ ಅಂಥದೇ ರೀತಿಯಲ್ಲಿ ತಾನು ಮಾಡಬೇಕಾಗಿದ್ದಂತೆ ಮೇಜವಾನಿ ಊಟ ಬಿಟ್ಟು ತೆರಳಿ ವೈರಿಯನ್ನು ಮಣಿಸಲು ಹೋಗಲಿಲ್ಲವಾದ್ದರಿಂದ ಸಿಂಹಾಸನಕ್ಕೆ ಬರುವ ಅವಕಾಶ ಕಳೆದುಕೊಂಡ. ಅವನ ಬದಲು ಒಬ್ಬ ಶ್ರೀಸಾಮಾನ್ಯ ಸಿಂಹಾಸನವೇರಿದ.

ಇದು ಹಿಮಾಚಲಪ್ರದೇಶದಲ್ಲಿ ಬಂಗಾಲದ ಇತಿಹಾಸದ ಪುನರಾವರ್ತನೆ. ಗುಣಾರ್ಹತೆಗಳನ್ನು ಪರೀಕ್ಷಿಸಿ ಜನರು ರಾಜನನ್ನು ಆಯ್ಕೆಮಾಡಿದ ಸಂಗತಿ ಅದರಲ್ಲಡಗಿದೆ. ಬಂಗಾಲಿ ರಾಜ್ಯ ಮತ್ತು ಬಂಗಾಲಿ ಸಮಾಜವನ್ನು ಅರಾಜಕತೆ ಮತ್ತು ದಬ್ಬಾಳಿಕೆಗಳಿಂದ ರಕ್ಷಿಸಲು ಬಂಗಾಲದ ಜನತೆ ಕ್ರಿ.ಶ. ೮ ನೆಯ ಶತಮಾನದ ಮಧ್ಯದಲ್ಲಿ ಗೋಪಾಲನನ್ನು ತಮ್ಮ ರಾಜನನ್ನಾಗಿ ಆಯ್ಕೆ ಮಾಡಿದರು. ಗೋಪಾಲನಂತೆಯೆ ಶ್ರೀಸಾಮಾನ್ಯನಾಗಿದ್ದ ಮಿಂಯಾ ಮದನನನ್ನು ತಮ್ಮ ರಾಜ್ಯವಾಳಲು ಯೋಗ್ಯವ್ಯಕ್ತಿಯೆಂದು ಪರಿಗಣಿಸಿ ಹಿಮಾಚಲ ಪ್ರದೇಶದ ಜನತೆ ಆಯ್ಕೆ ಮಾಡಿದರು.

ಬಹಳ ಮಾಡಿ, ಅಲ್ಲಿ ಕೆಲವು ಬಂಗಾಲಿ ಆಸ್ಥಾನಿಕರ ವಂಶಜರಿದ್ದು ಹಿಮಾಚಲಪ್ರದೇಶದಲ್ಲಿ ಬಂಗಾಲದ ಪ್ರಾಚೀನ ಪೂರ್ವನಿದರ್ಶನವನ್ನು ಪ್ರಜ್ಞಾಪೂರ್ವಕವಾಗಿಯೆ ಪುನರಾವರ್ತಿಸಿದರು.

ಮಿಂಯಾ ಮದನ ಒಬ್ಬ ಸಾಮಾನ್ಯ ಗಿರಣಿಗಾರನಾಗಿದ್ದನೆಂದು ಪ್ರೊ. ಮನಮೋಹನ ಅಭಿಪ್ರಾಯಪಡುವರು. ಉಚ್ಚ ಕುಲದ ನೀಲಿ ರಕ್ತವಾಗಲಿ, ಚಹರೆ ಯಾ ನಡತೆಯಲ್ಲಿ ಸೇನ ಅರಸತ್ವಕ್ಕೆ ಯೋಗ್ಯವಾದ ಗುಣ ಅಥವಾ ಲಕ್ಷಣವಾಗಲಿ ಅವನಲ್ಲಿರಲಿಲ್ಲ. ಆದರೆ, ಅವನ 'ಮದನ' ಎಂಬ ಹೆಸರಿನ ಹಿಂದೆ 'ಮಿಂಯಾ' ಎಂಬ ಹೆಸರು ಸೇರಿತ್ತು. ಆದ್ದರಿಂದ ಕುಲೀನರೊಂದಿಗೆ ನಿಕಟ ಸಂಬಂಧವಿದ್ದವನೆಂದು ಸಹಜವಾಗಿಯೆ ಭಾವಿಸಲಾಗಿತ್ತು. ಮತ್ತು ಮದನ ಎಂಬ ಹೆಸರು ಸಮಕಾಲೀನ ಬಂಗಾಲದಲ್ಲಿ ಯುವಕರಲ್ಲಿ ಮತ್ತು ದೇವತೆಗಳಲ್ಲಿ ಕೂಡ ಸಾಮಾನ್ಯವಾಗಿತ್ತು. ಉದಾ: ಮದನಮೋಹನ, ಮದನ ಕಾಮದೇವ, ಇತ್ಯಾದಿ.

**ಚುನಾಯಿತ ಅರಸ ಮದನಸೇನ:** ಮಿಂಯಾ ಮದನನು ಮದನಸೇನ ಎಂಬ ಹೆಸರು ಧರಿಸಿ ಸೇನವಂಶದ ಗದ್ದುಗೆಯೇರಿದ. ಪಟ್ಟವೇರಿದ ನಂತರ ನಾಚ್ನ ಪ್ರಾಂತದ ಮೇಲೆ ಆಕ್ರಮಣಮಾಡಿದ. ರಾಣಾನನ್ನು ಸೋಲಿಸಿ ಬಂಧಿಸಿದ. ಆದರೆ, ರಾಣಾನು ತನಗೆ ದಂಗೆಯೇಳುವ ವಿಚಾರವಿರಲಿಲ್ಲವಾಗಿ ತಾನು ತಪ್ಪಿತಸ್ಥನಲ್ಲವೆಂದು ಮಿಂಯಾ ಮದನನಿಗೆ ಅರಿಕೆ ಮಾಡಿಕೊಂಡ. ಆಗ, ನಾಚ್ನ ರಾಣಾನ ದಂಗೆಯ ಸುದ್ದಿಯನ್ನು ತನ್ನನ್ನು ಸೇನಸಿಂಹಾಸನಕ್ಕೆ ಆಯ್ಕೆ ಮಾಡುವ ಪರೀಕ್ಷೆಗಾಗಿ ಯೋಜಿಸಲಾಗಿತ್ತೆಂದು ಮಿಂಯಾ ಮದನನ ತಿಳುವಳಿಕೆಗೆ ಬಂತು. ಮಿಂಯಾ ಮದನನು ಕಳೆದುಹೋಗಿದ್ದ ವೈಭವವನ್ನು ಮರಳಿ ತಂದುಕೊಟ್ಟು ಸೇನರಾಜ್ಯವನ್ನು ಭದ್ರ ತಳಹದಿಯ ಮೇಲೆ ಮರುಸ್ಥಾಪಿಸಿದನು. ಮೊದಲಿಗೆ ಅವನು ಮದನಕೋಟಿ ಎಂಬ ಕೋಟೆಯನ್ನು ಕಟ್ಟಿಸಿದ. ಅದನ್ನೀಗ ಮರ್ದನಗರೆ ಎಂದು ಕರೆಯಲಾಗುತ್ತಿದೆ. ಅದಾದ ಮೇಲೆ ಸೇನ ಸಾಮ್ರಾಜ್ಯ ಕಳೆದುಕೊಂಡಿದ್ದ ಕೆಲವು ಪ್ರದೇಶಗಳನ್ನು ಮರಳಿ ಪಡೆದುಕೊಂಡ. ಕುಲು ರಾಜನನ್ನು ಸೋಲಿಸಿ ಕುಲುನಲ್ಲಿ ಒಂದು ಕೋಟೆ ಕಟ್ಟಿಸಿದ. ಮದನಸೇನನು ಹಲವಾರು ರಾಣಾರನ್ನು ಸೋಲಿಸಿ ಅವರ ರಾಜ್ಯಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಮಾಂಡಿಯ ವಾಯವ್ಯ ಮತ್ತು ಪಶ್ಚಿಮದ ಅನೇಕ ಅರಸರು ಮದನಸೇನನಿಗೆ ತಮ್ಮ ಪ್ರದೇಶಗಳನ್ನು ಸೋತರು. ತರುವಾಯದಲ್ಲಿ ಅವನು ದಕ್ಷಿಣಕ್ಕೆ ಸಾಗಿ, ಈಗ ಬಿಲಾಸಪುರದ ಭಾಗವಾಗಿರುವ ಪ್ರದೇಶದಲ್ಲಿ ಸಿಯೊನಿ ಮತ್ತು ತಿಯೊನಿ ಎಂಬೆರಡು ಕೋಟೆಗಳನ್ನು ಕಟ್ಟಿಸಿದ. ಆಮೇಲೆ ಅವನು ಅಭೇದ್ಯವೆಂದು ಬಗೆಯಲಾಗಿರುವ ಧಾರ ಕೋಟೆಯನ್ನು ಕಟ್ಟಿಸಿದ. ಈ ಕೋಟೆಯನ್ನು ಯಾವ ಕಾಲಕ್ಕೂ ಯಾರೂ ಮುತ್ತಿಗೆ ಹಾಕಲು ಸಾಧ್ಯವಾಗಲಿಲ್ಲ. ಆಮೇಲೆ ಅವನು ಸೇನ ಅರಮನೆ ಪಾಂಗನಾದಲ್ಲಿ ವಾಸಿಸತೊಡಗಿದ. ವಿಶಾಲ ರಾಜ್ಯದ ಆಡಳಿತವನ್ನು ಈ ಅರಮನೆಯಿಂದಲೆ ನೋಡಿಕೊಳ್ಳತೊಡಗಿದ. ಭೂತಕಾಲದ ನೆನಪುಗಳಿಂದ ತುಂಬಿದ್ದ ಸೇನ ರಾಜರ ಅರಮನೆಯಲ್ಲಿ ಅವನು ಶಾಂತಿಯುತವಾಗಿ ನಿದ್ದೆಗೈಯದಾದ. ಒಂದು ರಾತ್ರಿ ಸೇನವಂಶದ ಲಕ್ಷ್ಮೀದೇವತೆ ಕನಸಿನಲ್ಲಿ ಬಂದು ತನ್ನದೇ ನಿವಾಸವಾಗಿರುವ ಅರಮನೆಯನ್ನು ಬಿಟ್ಟುಹೋಗಲು ಆದೇಶಿಸಿದಳೆಂದು ಹೇಳಲಾಗುತ್ತದೆ. ಅಲ್ಲಿ ವಾಸಿಸಿದ್ದೇ ಆದರೆ ಅವನು ವಿನಾಶ ಹೊಂದುವುದಾಗಿಯೂ ಹೇಳಿದಳು. ಆದ್ದರಿಂದ ಮದನಸೇನನು ತನ್ನ ನಿವಾಸವನ್ನು ಈ ಮಾಂಡಿ ರಾಜ್ಯದಲ್ಲಿಯೆ ಇರುವ ಲಹೋರಕ್ಕೆ ಸ್ಥಳಾಂತರಿಸಿದನು. ಕನಸಿನಿಂದ ಎಚ್ಚೆತ್ತಾಗ ಸಿಂಹಾಸನದ ಮೇಲೆ ದೇವಿಯ ಪ್ರತಿಮೆಯನ್ನು

ಮತ್ತು ಅದರ ಬದಿಯಲ್ಲಿ ಅಸಹಜ ಮತ್ತು ರಹಸ್ಯಮಯ ರೀತಿಯಲ್ಲಿ ಬಿದ್ದಿರುವ ಒಂದು ಖಡ್ಗವನ್ನು ಕಂಡ. ಆ ಜಾಗದಲ್ಲಿ ಅವನು ಒಂದು ದೊಡ್ಡ ದೇವಾಲಯವನ್ನು ಕಟ್ಟಿಸಿದ. ಅವನು ಲಹೋರದಲ್ಲಿ ಶಾಂತಿಯಿಂದ ಇರತೊಡಗಿದ.

ನಿಮಿಸೇನ: ಅಹುಸೇನನ ಮರಣಾನಂತರ ಅವನ ಜ್ಯೇಷ್ಠಪುತ್ರ ನಿಮಿಸೇನ ಪಟ್ಟಕ್ಕೆ ಬಂದ. ಹಾಗೆಯೆ, ನಿಮಿಸೇನನ ತರುವಾಯ ಅವನ ಮಗ ನರವಾಹನನು ಪಟ್ಟಕ್ಕೆ ಬಂದ. ನರವಾಹನಸೇನನ ಜ್ಯೇಷ್ಠಪುತ್ರ ಸುಬಾಹುಸೇನ ಅಧಿಕಾರಕ್ಕೆ ಬಂದ. ಆದರೆ, ಅವನು ೧೧ ವರ್ಷದ ಎಳೆಯದಲ್ಲಿಯೆ ಮಡಿದುದರಿಂದ ಅವನ ಕಕ್ಕ ಇಮ್ಮಡಿ ಬೀರಸೇನನು* ಅರಸನಾದರೂ ಮೂರು ವರ್ಷಗಳ ಕಿರು ಅವಧಿಯಲ್ಲಿ ತೀರಿಕೊಂಡ. ಅವನ ಮಗ ಸಮುದ್ರಸೇನನು ಅಧಿಕಾರಕ್ಕೆ ಬಂದ ಆರು ವರ್ಷದ ನಂತರ ಮೃತಪಟ್ಟ. ಅವನ ಮಗ ಕೇಶಬಸೇನನು ಅಧಿಕಾರಕ್ಕೆ ಬಂದು ಹತ್ತು ವರ್ಷ ಆಳಿದ.

ಕೇಶಬಸೇನನಿಗೆ ಮಕ್ಕಳಿರಲಿಲ್ಲವಾದ್ದರಿಂದ ಅವನ ಕಕ್ಕ ಮಂಗಲಸೇನನು ಸಿಂಹಾಸನವೇರಿದ. ಪ್ರಾಯಶಃ ಅವನು ಹತ್ತು ವರ್ಷ ಆಳಿ ತನ್ನ ಅರವತ್ನಾಲ್ಕನೆಯ ವಯಸ್ಸಿನಲ್ಲಿ ತೀರಿಕೊಂಡ. ಪ್ರೊ. ಮನಮೋಹನರು ಅವನಿಗೆ ನರಭಕ್ಷಕ ಪ್ರವೃತ್ತಿಗಳನ್ನು ಆರೋಪಿಸುತ್ತಾರಾದರೆ ಸಂತಸಿಂಗ್ ಸಂಪಾದಿಸಿದ ವಂಶಾವಳಿ ಅದೇ ವೃತ್ತಾಂತವನ್ನು ಕಾಂಚನಸೇನನಿಗೆ ಆರೋಪಿಸುತ್ತದೆ.

ಕಾಂಚನ/ಮಂಗಲಸೇನ: ಮಂಗಲಸೇನನು ಕಾಡು ಸ್ವಭಾವದವನಾಗಿದ್ದನೆಂದು ಹೇಳಲಾಗುತ್ತದೆ. ಅವನಿಗೆ ಮಾಂಸಾಹಾರದ ರುಚಿ ಹತ್ತಿತ್ತು. ತಾನು ನಿಯಮಿಸಿದ ಬೇಟೆಗಾರರು ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಿದ್ದ. ಒಮ್ಮೆ ಧಾರಾಕಾರ ಮಳೆ ಸುರಿದು ಅವನ ಬೇಡೆಗಾರರು ಬರಿಗೈಯಿಂದ ಹಿಂದಿರುಗಿದರು. ಆದರೆ, ಅರಸನು ಅವರನ್ನು ಬೇಟೆಗಾಗಿ ಮರಳಿ ಅರಣ್ಯಕ್ಕೆ ಅಟ್ಟಿದ.

ಕೆರಳಿದ ಬೇಟೆಗಾರರು ದಾರಿಯಲ್ಲಿ ಮೃತ ನರದೇಹವೊಂದು ಬಿದ್ದುದನ್ನು ಕಂಡರು. ಅದರ ಕೆಲವು ಅಂಗಾಂಗಗಳನ್ನು ತುಂಡರಿಸಿ ಚೊಕ್ಕಟಗೊಳಿಸಿ ರಾಜನ ಅಡಿಗೆಯವನಿಗೆ ಕೊಟ್ಟರು. ಅದನ್ನು ಬಡಿಸಿದಾಗ ರಾಜನಿಗೆ ಅದು ರುಚಿಕರವೆನಿಸಿ ಅದು ಯಾವ ಮಾಂಸವೆಂದು ವಿಚಾರಿಸಿದನು. ಅದಾವುದೆಂದು ಹೇಳುವಂತೆ ಬೇಟೆಗಾರರನ್ನು ಪೀಡಿಸಿದನು. ಅದಾವುದೆಂದು ತಿಳಿದು, ತಾಂತ್ರಿಕ ಸಾಧನೆಗೈದು ಅವಧೂತನಾಗಲೋಸುಗ ತಾನು ಒಂದುನೂರಾ ಒಂದು ದಿನ ನರಮಾಂಸದಿಂದ ಮಾಡಿದ ಆಹಾರವನ್ನೇ ಸೇವಿಸುವುದಾಗಿ ಹೇಳಿದ.

ತನ್ನ ಸೆರೆಮನೆಯಲ್ಲಿದ್ದ ಅಪರಾಧಿಗಳನ್ನು ತನ್ನ ಆಹಾರಕ್ಕಾಗಿ ಕೊಲ್ಲುವಂತೆ ಆಜ್ಞಾಪಿಸಿದ. ಅವರೆಲ್ಲ ಮುಗಿದಾದ ಮೇಲೆ ತನ್ನ ದೇಶಬಾಂಧವರು ಮತ್ತು ಆಸ್ಥಾನಿಕರಿಗೆ ಒಂದು ಹೊಸ

---

* *ಈ ಇಮ್ಮಡಿ ಬೀರಸೇನನೇ ಹಿಮಾಚಲ ಪ್ರದೇಶದ ಇಮ್ಮಡಿ ಬೀರಸೇನನಾಗಿರುವನು. ಆದರೆ, ವಂಶವನ್ನು ಸ್ಥಾಪಿಸಿದ ಕರ್ನಾಟಕದ ಮೊದಲಿನ ಬೀರಸೇನನನ್ನು ನಾವು ಬಲ್ಲೆವು. ಹಾಗಾಗಿ, ಈ ಬೀರಸೇನನನ್ನು ಮುಮ್ಮಡಿ ಬೀರಸೇನನೆಂದೂ ಕರೆಯಬಹುದು.*

ಪದ್ಧತಿಯನ್ನು ಜಾರಿಗೊಳಿಸಿದ. ಅದೇನೆಂದರೆ, ಅವರು ಅವನೊಂದಿಗೆ ಅರಣ್ಯಕ್ಕೆ ಹೋಗಬೇಕು ಮತ್ತು ಯಾರ ಮೇಲೆ ಪೈನ್ ಮರದ ಕಾಯಿ ಬೀಳುವುದೊ ಅವನನ್ನು ಕೊಲ್ಲುವುದು. ಅನೇಕ ಅಮಾಯಕರು ಅರಸನ ಖಯಾಲಿ ಮತ್ತು ನರಭಕ್ಷಣೆಗೆ ಬಲಿಪಶುವಾದರು. ಕೊನೆಗೆ, ಈ ಪೈಶಾಚಿಕ ಪದ್ಧತಿಯನ್ನು ಕೊನೆಗೊಳಿಸಲು ಅವರೊಂದು ಉಪಾಯ ಹೂಡಿದರು. ಒಬ್ಬನನ್ನು ಪೈನ್ ಮರದಲ್ಲಿ ಅವಿತಿಟ್ಟು ಅರಸನ ತಲೆಯ ಮೇಲೆ ಕಾಯಿ ಬೀಳಿಸಲು ನಿರ್ಣಯಿಸಿದರು. ಅರಸನೇ ಜಾರಿಗೊಳಿಸಿದ ನಿಯಮದಂತೆ ಅರಸನನ್ನು ಕೊಲ್ಲಬೇಕಲ್ಲವೆ? ಪೈನ್ ಕಾಯಿ ಅರಸನ ತಲೆಯ ಮೇಲೆ ಬಿದ್ದಾಕ್ಷಣ ಆಸ್ಥಾನಿಕರು ಮತ್ತು ಇತರ ಅಮಾಯಕರ ಪ್ರಾಣ ಉಳಿಸಲು ಅರಸನ ತಲೆ ಕಡಿದರು.

**ಜಯಸೇನ:** ಮಂಗಲಸೇನನ ಮರಣಾನಂತರ ಜಯಸೇನ ಸಿಂಹಾಸನವೇರಿದ. ಅವನು ಎರಡೇ ವರ್ಷ ಆಳಿದನು. ಜಯಸೇನ ಮರಣಿಸಿದ ಮೇಲೆ ಮಗ ಕಾಂಚನಸೇನ ಪಟ್ಟಕ್ಕೆ ಬಂದ.

**ಕಾಂಚನಸೇನ:** ಮೊದಲಿನ ರಾಣಾಗಳು ಕೇವಲ ರಾಣಾಗಳಾಗಿದ್ದು ಯಾವನೊಬ್ಬ ಅಧಿಪತಿಗೆ ಕಪ್ಪ ಕೊಟ್ಟು ಅಧಿಕಾರ ಅನುಭವಿಸುತ್ತಿದ್ದರು. ಬಹುಶಃ ಕುಲು ಅರಸ ಈ ಅಧಿಪತಿಯಾಗಿದ್ದ. ಆದರೆ, ಕಾಂಚನಸೇನನಿಗೆ ಅವನ ಅಧಿಪತ್ಯವನ್ನು ಒಪ್ಪಲು ಮನಸ್ಸಿರಲಿಲ್ಲ. ಕುಲು ಅರಸನ ಅಧಿಕಾರವನ್ನು ಧಿಕ್ಕರಿಸಿ ಸ್ವಾತಂತ್ರ್ಯ ಪಡೆಯಬಯಸಿದ. ಕಾಂಚನಸೇನನು ಪಂಜಾಬದ ರಾಣಾನ ಮೇಲೆ ದಾಳಿಯಿಟ್ಟು ಅವನನ್ನು ಕೊಂದ. ಹೀಗೆ, ಅವನು ಘುಜ್ರಿ ಮತ್ತು ಕಾವೊಗಳನ್ನು ವಶಪಡಿಸಿಕೊಂಡ. ಮಗ್ಗುಲಿನ ರಾಜ್ಯಗಳಾದ ಬಾಗಿ, ಥಜ, ನೇರು ಮತ್ತು ಬೋನಗಳ ಮೇಲೆ ಆಕ್ರಮಣ ಮಾಡಿದನು. ಆಯಾ ರಾಣಾಗಳು ತಾತ್ಕಾಲಿಕವಾಗಿ ಅವನಿಗೆ ಶರಣಾಗಿ ಕಪ್ಪ ಕೊಡಲೊಪ್ಪಿದರು. ಜೊತೆಗೆ ಅವರು ತಮ್ಮ ಅಧಿಪತಿಯಾದ ಕುಲು ಅರಸನಲ್ಲಿ ಅಹವಾಲನ್ನು ಹೇಳಿದರು. ಅವನು ಮಹತ್ವಾಕಾಂಕ್ಷಿ, ಯುದ್ಧಪಿಪಾಸುವಾದ ಕಾಂಚನಸೇನನನ್ನು ಸೆರೆಹಿಡಿಯಲು ಕೂಡಲೆ ಕ್ರಮ ಜರುಗಿಸಿದನು. ಕಾಂಚನಸೇನನು ಯುದ್ಧದಲ್ಲಿ ಸೋತು ಮೃತನಾದನು.

ಅವನ ಮರಣಕಾಲಕ್ಕೆ ಕಾಂಚನಸೇನನ ಪತ್ನಿ ಗರ್ಭಿಣಿಯಾಗಿದ್ದಳು. ಮಂಗಳೂರು ಉರಿಯುತ್ತಿರುವಾಗ ಕಾಂಚನಸೇನನ ಪತ್ನಿ ಬ್ರಾಹ್ಮಣ ಹೆಂಗಸಿನ ಛದ್ಮವೇಷದಲ್ಲಿ ತನ್ನ ತಂದೆಯ ರಾಜ್ಯಕ್ಕೆ ಹೊರಟಳು. ಸೇವಕಾತದ ರಾಣಾ ಅವಳ ತಂದೆಯಾಗಿದ್ದ. ಆದರೆ, ಸುರಕ್ಷಿತ ಸ್ಥಳ ತಲುಪುವ ಮೊದಲೆ ಅವಳು ಹಾದಿ ತಪ್ಪಿಸಿಕೊಂಡಳು. ಆಯಾಸಗೊಂಡು ಬೋನ ಮರದ ಕೆಳಗೆ ಆಶ್ರಯ ಪಡೆದು ಅಲ್ಲಿಯೆ ಪುತ್ರನನ್ನು ಹೆತ್ತಳು. ಮರು ಮುಂಜಾನೆ ಅವಳ ತಂದೆಯ ರಾಜ್ಯದ ಕೆಲವು ಪ್ರಜೆಗಳು ಅಲ್ಲಿಗೆ ಬಂದರು. ಅವರು ಅವಳನ್ನು ತಂದೆಯ ಅರಮನೆಗೆ ಕರೆದೊಯ್ದರು. ರಾಣಾನಿಗೆ ಮಕ್ಕಳಿಲ್ಲದ್ದರಿಂದ ಆ ಕೂಸನ್ನು ಸಲಹುವ ಜವಾಬ್ದಾರಿ ವಹಿಸಿಕೊಂಡು ಕೂಸು ಬೋನ ಮರದ ಕೆಳಗೆ ಹುಟ್ಟಿದ್ದರಿಂದ ಅದಕ್ಕೆ ಬೋನ ಎಂದು ಹೆಸರಿಟ್ಟ.

ಕುಮಾರ ಸಂತಸಿಂಗ್ ಸಂಪಾದಿಸಿದ ವಂಶಾವಳಿಯ ಪ್ರಕಾರ, ಕಾಂಚನಸೇನನ ವಿಧವಾ ರಾಣಿಯು ತನ್ನ ತಂದೆಯ ರಾಜ್ಯಕ್ಕೆ ಹೋಗಲಿಲ್ಲ. ಅವಳು ಕನ್ನರ್ ರಾಣಾನ ಕೋಟೆಗೆ ಹೋಗಿ, ತಾನೊಬ್ಬ ಬ್ರಾಹ್ಮಣ ವಿಧವೆಯೆಂದು ಹೇಳಿ ತನ್ನ ಉದರ ನಿರ್ವಹಣೆಗೆ ದಿನಾಲು ಒಂದು ಸೇರು

ಕಾಳಿಗಾಗಿ ಬೇಡಿಕೊಂಡಳು. ರಾಣಾನಿಗೆ ಕನಿಕರವುಕ್ಕಿ ತನಗೆ ಮಕ್ಕಳಿಲ್ಲದ್ದರಿಂದ ಅವಳು ತನ್ನ ದತ್ತಕ ಮಗಳಂತೆಯೆ ತನ್ನ ಕೋಟೆಯಲ್ಲಿ ಇರಬಹುದೆಂದನು. ಕೆಲ ದಿನಗಳ ನಂತರ ಆ ವಿಧವೆ ಅರಣ್ಯಕ್ಕೆ ತೆರಳಿ, ಬೋನ ಮರದಡಿ ಕೂಸನ್ನು ಹೆತ್ತು ಕೋಟೆಗೆ ಮರಳಿದಳು. ಅವಳ ಆರೋಗ್ಯ ಸರಿಯಿಲ್ಲದುದನ್ನು ಕಂಡು ರಾಜನು ವಿಚಾರಿಸಲಾಗಿ ಆ ವಿಧವೆಯು ತಾನು ಕೂಸಿಗೆ ಜನ್ಮವಿತ್ತುದನ್ನು, ತಾನು ಕಾಂಚನಸೇನನ ವಿಧವೆಯೆಂಬ ಗುಟ್ಟು ಬಿಟ್ಟುಕೊಟ್ಟಳು. ರಾಣಾನು ಅವಳ ಮಗನನ್ನು ತನ್ನ ದತ್ತಕ ಮೊಮ್ಮಗನೆಂದು ಸ್ವೀಕರಿಸಿದನು.

**ಬೋನಸೇನ:** ಸೇವಕಾತದ ರಾಣಾ ತೀರಿಕೊಂಡ ಮೇಲೆ ಬೋನಸೇನ ಪಟ್ಟವೇರಿದ. ಆದರೆ, ಸೇವಕಾತನ ಅಮಾತ್ಯನಾದ ಬಿಸ್ಮನು ಬೋನಸೇನನನ್ನು ಸೇವಕಾತನ ಉತ್ತರಾಧಿಕಾರಿಯೆಂದು ಒಪ್ಪಲಿಲ್ಲ. ಬಹುಶಃ ತನಗೆ ಬೇಕಾದ ಬೇರೊಬ್ಬನನ್ನು ಪಟ್ಟಕ್ಕೇರಿಸಲು ಅವನು ಯೋಜಿಸಿದ್ದ. ಆದರೆ, ಬೋನಸೇನ ಅವನನ್ನು ಕೊಂದು ಸುದೀರ್ಘ ನಲವತ್ತು ವರ್ಷ ಆಳಿದ. ಬೋನಸೇನನು ಎಲ್ಲ ನೆರೆ ರಾಜ್ಯಗಳ ದೊರೆಗಳನ್ನು ಸೋಲಿಸಿ ಎಲ್ಲರಲ್ಲೂ ಅತ್ಯಂತ ಶಕ್ತಿಶಾಲಿಯೆಂದು ಪರಿಗಣಿತನಾಗಿ ಸಾಗರ ರಾಜ್ಯದ ಮೇಲೂ ದಾಳಿಮಾಡಿದ. ಸಾಗರದ ರಾಣಾ ಹಾಗೂ ಅವನ ಕುಟುಂಬದ ಎಲ್ಲರೂ ಮೃತಪಟ್ಟರು. ಆದರೆ, ಕೂಸೊಂದೆ ಸುರಕ್ಷಿತವಾಗಿ ಉಳಿಯಿತು. ಅಂದಿನಿಂದ ಅದು ಬ್ರಾಹ್ಮಣ ಕುಟುಂಬವೊಂದರಲ್ಲಿ ಬೆಳೆಯುತ್ತಿತ್ತು. ಕೂಸು ವಯಸ್ಕನಾದಾಗ ಬೋನಸೇನನಿಗೆ ಅದ್ಹೇಗೊ ಅವನಾರೆಂದು ತಿಳಿದುಬಂದು ಓಲಗದಲ್ಲಿ ಹಾಜರಾಗುವಂತೆ ಆಜ್ಞೆಯಿತ್ತ. ಆದರೆ, ಅವನೊಬ್ಬ ನಿರಾಶ್ರಿತನೆಂದು ಮೂದಲಿಸುತ್ತ ಅವನನ್ನು ಬಿಟ್ಟುಬಿಟ್ಟ. ಸಾಗರ ರಾಜ್ಯವನ್ನು ತನ್ನ ಭೂಪ್ರದೇಶಕ್ಕೆ ಸ್ವಾಧೀನಪಡಿಸಿಕೊಂಡ. ಬೋನಸೇನನು ಕೆಲ್ಹಿ ರಾಜ್ಯವನ್ನು ಗೆದ್ದುಕೊಂಡ. ತನ್ನ ರಾಜಧಾನಿಯನ್ನು ಶಿಯೊದಿಂದ ಭಿಯುವಿಗೆ ಸ್ಥಳಾಂತರಿಸಿದ. ಅದು ಬಹುಶ: ಇಂದಿನ ಕಾಂಚೀ ನಗರದಿಂದ ಎರಡು ಮೈಲು ದೂರವಿದೆ. ಆಮೇಲೆ ಅವನು ಬಿಯಾಸ್‌ದ (ಬಿಪಾಸಾ) ಆಚೆಯ ದಡದಲ್ಲಿರುವ ಶಾವುಅಲ, ಪಂದ, ಅರಕಲಿ, ಶೋಖಿನ ಮತ್ತು ದೋಧನ ರಾಜ್ಯಗಳನ್ನು ತನ್ನ ರಾಜ್ಯದ ಅಧೀನಕ್ಕೆ ಒಳಪಡಿಸಲು ನಿರ್ಧರಿಸಿದ. ಆದರೆ, ನದಿಯನ್ನು ದಾಟುವುದು ಅವನಿಗೆ ಕಷ್ಟಕರವಾಯಿತು. ಬಿಪಾಸಾ ತಟದಲ್ಲಿ ವಾಸಿಸುತ್ತಿದ್ದ ಬತಿಸ್ ಜನರು ಅವನ ಪ್ರಭುತ್ವವನ್ನು ಒಪ್ಪಿಕೊಂಡರು. ಎರಡೂ ಶತ್ರುಪಾಳೆಯಗಳು ಯುದ್ಧಸನ್ನದ್ಧವಾಗಿ ಎದುರುಬದುರು ನಿಂತಾಗ ಅವರು ಬೋನಸೇನನ ಗೆಲುವಿಗಾಗಿ ಯೋಜನೆ ಹಾಕಿದರು.ಬೋನಸೇನನ ಶತ್ರುಗಳು ಎಷ್ಟೊಂದು ಸುರಕ್ಷಿತಾ ಪ್ರಜ್ಞೆಯುಳ್ಳವರಾಗಿದ್ದರೆಂದರೆ ಊಟದ ಹೊತ್ತು ಬಿಟ್ಟು ಉಳಿದೆಲ್ಲ ಸಮಯದಲ್ಲೂ ಶಸ್ತ್ರಸಜ್ಜಿತರಾಗಿಯೇ ಇರುತ್ತಿದ್ದರು. ಒಂದು ದಿನ ಅವರು ಊಟದ ಸಮಯಕ್ಕೆ ಶಸ್ತ್ರಗಳನ್ನು ಕಳಚಿಟ್ಟಾಗ ಬತಿಸ್‌ರು ಅಡಿಗೆ ಮಾಡುವ ನೆಪದಲ್ಲಿ ಒಂದು ಭಾರಿ ಹೊಗೆಗೋಡೆ ಹರಡಿದರು. ಹೊಗೆ ಹಬ್ಬಿ ಬೋನಸೇನನ ಸೈನ್ಯ ವೈರಿಗಳ ಕಣ್ಣು ತಪ್ಪಿಸಿ ದಾಳಿ ಮಾಡಲು ಸಾಧ್ಯವಾಯಿತು. ಎದುರುಪಕ್ಷ ಸೋತು ಅವರ ಭೂಪ್ರದೇಶ ಬೋನಸೇನನ ವಶವಾಯಿತು.

ಬತಿಸ್ ಸಹಾಯಕೃತ್ಯಕ್ಕೆ ಮೆಚ್ಚಿ ಅವರಿಗೆ ಮನ್ನಣೆ ನೀಡಿ ಕೃತಜ್ಞತಾ ರೂಪವಾಗಿ ಲಡಮಾರ ಎಂಬ ಬಿರುದನ್ನಿತ್ತ.

ಪರಾಸರ ಸರೋವರದ ಬಳಿಯಿರುವ ದೇವಾಲಯವನ್ನು ಬೋನಸೇನ ಕಟ್ಟಿಸಿದ. ಅದು ಮಾಂಡಿಯಿಂದ ಇಪ್ಪತ್ತು ಮೈಲಿನಷ್ಟು ದೂರವಿದೆ. ತೇಲುವ ದ್ವೀಪದ ಮೇಲಿನ ದೇವಾಲಯವು

ಅನತಿ ಕಾಲದಲ್ಲಿಯೆ ಪವಿತ್ರ ತಾಣವೆಂದು ಪ್ರಸಿದ್ಧವಾಯಿತು. ಪ್ರತಿವರ್ಷ ಅಲ್ಲೊಂದು ಜಾತ್ರೆ ಜರುಗುತ್ತದೆ. ಎಲ್ಲ ಕಡೆಯಿಂದ ಜನರು ಬರುತ್ತಾರೆ. ೪೫ ವರ್ಷ ಆಳಿ ಬೋನಸೇನ ಮರಣ ಹೊಂದಿದ.

**ಕಲ್ಯಾಣಸೇನ:** ಬೋನಸೇನನ ಮಗ ಕಲ್ಯಾಣಸೇನನು ತಂದೆಯ ಮರಣಾನಂತರ ಹಳೆಯ ಮಾಂಡಿಯನ್ನು ಕೊಂಡುಕೊಂಡು ತನ್ನ ರಾಜಧಾನಿ ಮಾಡಿಕೊಂಡ. ಅಂದಿನಿಂದ ನೂರೈವತ್ತು ವರ್ಷಗಳವರೆಗೆ ಮಾಂಡಿಯನ್ನು ರಾಜಧಾನಿಯೆಂದು ಪರಿಗಣಿಸಲಾಯಿತು. ಬೋನಸೇನನ ದಿಟ್ಟ ರಾಜ್ಯವಿಸ್ತರಣೆ ಅವನ ಉತ್ತರಾಧಿಕಾರಿಗಳಿಗೆ ಗಟ್ಟಿ ಪೂರ್ವನಿದರ್ಶನವಾಯಿತು. ಕಲ್ಯಾಣಸೇನನು ಛತಿ, ಸಮರ ಮತ್ತು ಸಗ್ರು ರಾಜ್ಯಗಳನ್ನು ತನ್ನ ಆಧಿಪತ್ಯಕ್ಕೊಳಪಡಿಸಿಕೊಂಡ. ಕೊನೆಯ ಎರಡು ಅವನ ಭೂಪ್ರದೇಶಕ್ಕೆ ಸೇರ್ಪಡೆಯಾದವು. ಕಲ್ಯಾಣಸೇನನು ಉದಾರ ಬುದ್ಧಿಯ ರಾಜನಾಗಿದ್ದರೂ ಸಮರನಾಯಕನಾಗುವ ಸಾಮರ್ಥ್ಯ ಹೊಂದಿರಲಿಲ್ಲ. ಅವನು ಸುಮಾರು ನಲವತ್ತೊಂದು ವರ್ಷ ಆಳಿದ. ಅವನ ಮರಣಾನಂತರ ಮಗ ಹೀರಾಸೇನ ಪಟ್ಟಕ್ಕೆ ಬಂದ. ಚಾರಣ ಕವಿಗಳು ಅವನೊಬ್ಬ ಮಹಾ ವಿಜೇತನೆಂದು ಹಾಡಿರುವುದಾದರೂ ತನ್ನ ರಾಜ್ಯಕ್ಕೆ ಅವನು ಕೇವಲ ಕನ್ವಾಲವನ್ನು ಸೇರಿಸಿಕೊಳ್ಳಲು ಶಕ್ತನಾದನು. ಸೋದರ ಧರ್ತರೀಸೇನನ ನೆರವಿನಿಂದ ಗಾಂಧಾರದ ವಿರುದ್ಧ ಹೋರಾಡಿದನು.

**ಹೀರಾಸೇನ:** ಹೀರಾಸೇನ ಪಟ್ಟಕ್ಕೆ ಬಂದುದೇ ತಡ ರಾಮತುಲ ಗಾಂಧಾರ ಮತ್ತು ರುಕ್ಕೀಗಡಗಳ ವಿರುದ್ಧ ಯುದ್ಧಹೂಡಿದ. ಕೀರ್ತಿರಾಥಾದ ರಾಜಕುವರಿಯನ್ನು ಮದುವೆಯಾದ.

ಒಂದು ದಿನ ಕೀರ್ತಿರಾಥಾದ ರಾಣಾನು ಹೀರಾಸೇನನನ್ನು ಔತಣಕ್ಕೆ ಆಹ್ವಾನಿಸಿದ. ಭೋಜನ ಮುಗಿದ ಮೇಲೆ ಹೀರಾಸೇನನು ರಾಣಾನೊಂದಿಗೆ ಕೋಟೆಯ ಗೋಡೆಗೆ ಆತುಕೊಂಡು ಕುಳಿತು ವಿಶ್ರಾಂತಿಗೈಯುತ್ತಿದ್ದಾಗ ತನ್ನ ತೋಳು ಮತ್ತು ಅಂಗೈಯನ್ನು ಗೋಡೆಯ ಮೇಲಿಟ್ಟ. ಹೀರಾಸೇನನು ಕೋಟೆಗೋಡೆಯ ಎತ್ತರವನ್ನು ಅಳೆಯುತ್ತಿದ್ದಾನೆಂದು ರಾಣಾನಿಗೆ ಸಂಶಯ ಬಂತು. ತನ್ನ ಮಂತ್ರಿಮಂಡಲದ ಸಲಹೆ ಕೇಳಿದ: ತನ್ನ ಮನೆಯಲ್ಲಿರಲು ವಿಧವಾ ಮಗಳು ಲೇಸೊ? ವಿಧವಾ ಸೊಸೆ ಲೇಸೊ? ಅದೊಂದು ಕಠಿಣ ಆಯ್ಕೆ. ವಿಧವಾ ಮಗಳು ಸೊಸೆಗಿಂತ ಲೇಸೆಂದು ಮಂಡಲಿ ಸಲಹೆಯಿತ್ತಿತು.

ಸಲಹೆಯಂತೆ, ರಾಣಾನು ತನ್ನ ಅಳಿಯ ಹೀರಾಸೇನನನ್ನು ಕೊಲ್ಲಿಸಿದ. ಹೀರಾಸೇನನಿಗೆ ಸಂತಾನವಿರಲಿಲ್ಲ. ಧರ್ತರೀಸೇನ ಅವನ ಸೋದರನಾಗಿದ್ದ. ಹೀರಾಸೇನನು ಬೇನೆ ಬಿದ್ದು ಸತ್ತನೆಂದು ರಾಣಾನು ಧರ್ತರೀಸೇನನಿಗೆ ಹೇಳಿಕಳಿಸಿದ. ಆದರೆ, ಹೀರಾಸೇನನ ಸಂಬಂಧಿಗಳಿಗೆ ಹಕೀಕತ್ತು ಗೊತ್ತಾಯಿತು. ಹೀರಾಸೇನನ ಮೃತದೇಹಕ್ಕೆ ಅಗ್ನಿಸಂಸ್ಕಾರಕ್ಕಾಗಿ ಕಳಿಸಿದ ಶವಸಂಪುಟಗಾರರು ಮತ್ತು ಪರಿಚಾರಕರನ್ನು ದುಃಖಿತಪ್ತ ಯೋಧರು ಕೊಂದುಹಾಕಿದರು. ಆ ಯೋಧರು ಹೀರಾಸೇನನ ರಾಜ್ಯದಿಂದ ತಮ್ಮ ರಾಜನ ಅಂತ್ಯಕ್ರಿಯೆಗೆ ಆಗಮಿಸಿದ್ದರು. ಅವರು ತಮ್ಮ ರಾಜನ ಶವಕ್ಕೆ ತಾವೇ ಅಗ್ನಿಸಂಸ್ಕಾರ ನೀಡಿ ಮರಳಿದರು. ಆಮೇಲೆ ಹೀರಾಸೇನನ

ತಮ್ಮ ಧರ್ತರೀಸೇನ ಸಿಂಹಾಸನವೇರಿದ. ಅವನು ಐವತ್ತಾರನೆಯ ವಯಸ್ಸಿನಲ್ಲಿ ಅಕಾಲಿಕ ಮರಣಕ್ಕೆ ತುತ್ತಾದ.

**ನರಿಂದರಸೇನ:** ಧರ್ತರೀಸೇನನ ಮರಣದ ನಂತರ ಅವನ ಕಕ್ಕ ನರಿಂದರಸೇನನು (ಬೋನಸೇನನ ಮಗ) ಪಟ್ಟಕ್ಕೆ ಬಂದ. ಅವನು ತೊಂಬತ್ತೆರಡನೆಯ ವಯಸ್ಸಿನಲ್ಲಿ ತೀರಿಕೊಂಡ.

**ಹರ್ಜಯಸೇನ:** ನರಿಂದರಸೇನನ ಜ್ಯೇಷ್ಠಪುತ್ರ ಹರ್ಜಯಸೇನ ಪಟ್ಟಕ್ಕೆ ಬಂದ. ಪ್ರಜೆಗಳು ಅವನ ಯೋಧಗುಣಗಳಿಗಾಗಿ ಅವನನ್ನು 'ಸೈನಿ' ಎಂದರೆ 'ಯೋಧ'ಎಂದು ಕರೆಯುತ್ತಿದ್ದರು. ಅವನು ಮೂವತ್ತೆರಡು ವರ್ಷ ಆಳಿ ಐವತ್ತೆಂಟನೆಯ ವಯಸ್ಸಿನಲ್ಲಿ ತೀರಿಕೊಂಡ. ಅವನಿಗೆ ಇಬ್ಬರು ಮಕ್ಕಳು: ಹಿರಿಯವನಾದ ದಿಲಾವರ, ಕಿರಿಯವನಾದ ಪಲಾಸ್ರಮ.

**ದಿಲಾವರಸೇನ:** ಸಿಕಂದರ ಲೋಧಿ ಮಾಂಡಿಯ ಮೇಲೆ ಆಕ್ರಮಣ ಮಾಡಿದ್ದು ಮತ್ತು ಲೋಧಿ ಪರ್ವತಶ್ರೇಣಿಗೆ ಅವನ ಹೆಸರಿಟ್ಟದ್ದು ದಿಲಾವರಸೇನನ ಆಳ್ವಿಕೆಯಲ್ಲಿಯೆ. ಆದರೆ, ಬಂಗಾಲದ ಮೇಲೆ ಬಖ್ತಿಯಾರನ ಆಕ್ರಮಣದಷ್ಟು ಸ್ಪಷ್ಟ ದಾಖಲೆ ಸಿಕಂದರನ ಆಕ್ರಮಣದ ಬಗೆಗೆ ಲಭ್ಯವಿಲ್ಲ. ಅವನು ಉಮಾ ಮಾಂಡಿ ಮಾರ್ಗವನ್ನು ದಾಟಿ ಸಕುಂದ್ರಗುಂಟ ಸಾಗಿ ಮಾಂಡಿ ತಲುಪಿದನೆಂದು ಹೇಳಲಾಗುತ್ತದೆ. ಪ್ರಜೆಗಳ ಜೀವನ ಮತ್ತು ವರ್ತನೆಗಳನ್ನು ಕ್ರಮಗೊಳಿಸಿದ್ದ ಕಾನೂನು ಮತ್ತು ಸುವ್ಯವಸ್ಥೆ ವಿದೇಶಿ ದಾಳಿಯ ಒತ್ತಡದಿಂದಾಗಿ ಕುಸಿಯಿತು. ಜನರು ತಮ್ಮ ಪ್ರಾಣರಕ್ಷಣೆಗಾಗಿ ಗುಡ್ಡಗಳಿಗೆ ಓಡಿದರು. ಸಿಕಂದರ ಲೋಧಿಯಾದರೊ ತನ್ನ ಸ್ವಲ್ಪ ದಂಡನ್ನು ಹಿಂದೆ ಬಿಟ್ಟು ಈ ನಾಡಿನಿಂದ ಹೊರಟ. ಆ ದಂಡು ಪರ್ವತದ ಮೇಲೆ ಠಾಣ್ಯ ಹೂಡಿತು. ಅವರ ವಂಶಜರನ್ನು ತರುವಾಯದಲ್ಲಿ ಬಂದ ಸೇನ ಅರಸರು ತಮ್ಮ ಸೇನೆಯಲ್ಲಿ ಸೇರಿಸಿಕೊಂಡರು.

ದಿಲಾವರಸೇನನು ಸಿಂಹಾಸನವೇರಿ ನಲವತ್ತೆರಡು ವರ್ಷ ಆಳಿದನು. ಐವತ್ತೇಳನೆಯ ವಯಸ್ಸಿನಲ್ಲಿ ಮೃತಪಟ್ಟನು.

**ಅಜ್ಮೇರಸೇನ:** ಆಜ್ಮೇರಸೇನನು ಸಿಂಹಾಸನವೇರಿದ. ಅವನ ಪ್ರಜೆಗಳು ಅವನನ್ನು ಕರೆಯುತ್ತಿದ್ದದ್ದು ಅಜರಾಮರಸೇನ ಎಂದು. ಕ್ಷತ್ರಿಯ ಜಾತಿಯವನಾಗಿದ್ದ ಮಧುಸೂದನ ಬಿಸ್ತ ಅವನ ಮಂತ್ರಿಗಳಲ್ಲೊಬ್ಬನಾಗಿದ್ದ. ಆ ಮಂತ್ರಿಗೆ ಮೂವರು ಸಹೋದರರು: ಅನುಕ್ರಮವಾಗಿ ವಾಮನ, ಪರಶುರಾಮ ಮತ್ತು ವಾಸುದೇವ.

ತಾನು ಕನ್ವಾಲ, ಮರಥು ಮತ್ತು ಗಂಧರ್ವ ರಾಜ್ಯಗಳ ದೊರೆಗಳನ್ನು ಯುದ್ಧದಲ್ಲಿ ಗೆಲ್ಲುವುದೆಂತು ಎಂದು ಅರಸನು ಒಂದು ದಿನ ಮಧುಸೂದನನ್ನು ಕೇಳಿದ. ತನ್ನನ್ನು ಮತ್ತು ತನ್ನ ಮೂವರು ಸಹೋದರರನ್ನು ಗಡಿಪಾರು ಮಾಡಬೇಕೆಂದೂ ಅರಸನು ಶತ್ರು ದೊರೆಗಳ ಕೋಟೆಯೊಳಗೆ

ನುಸುಳುವ ಹಂಚಿಕೆಯನ್ನು ತಾವು ಹಾಕುವುದಾಗಿಯೂ ಮಧುಸೂದನನು ಉತ್ತರಿಸಿದ. ಅದಕ್ಕೊಪ್ಪಿ ಅರಸನು ನಾಲ್ಕೂ ಸೋದರರನ್ನು ಸಾರ್ವಜನಿಕವಾಗಿ ಅಪಮಾನಗೊಳಿಸಿ ತನ್ನ ಗಡಿಯಾಚೆ ಹೊಡೆದೋಡಿಸಿದ. ತತ್ಪರಿಣಾಮವಾಗಿ, ಅವರು ಗಾಂಧಾರದ ರಾಣಾನಿಗೆ ವರದಿ ಮಾಡಿದರು. ರಾಣಾನ ಹೆಸರು ಗೋಕುಲ ಎಂದಿತ್ತು. ಅವನು ಅವರ ಸಂಕಷ್ಟ ಮತ್ತು ವಲಸೆ ಬಂದ ಕಾರಣವನ್ನು ವಿಚಾರಿಸಿದ. ಸೇನ ಅರಸ ಆಜ್ಮೇರಸೇನನು ಗಾಂಧಾರದ ರಾಣಾನ ಮೇಲೆ ಆಕ್ರಮಣ ಮಾಡುವ ಹಂಚಿಕೆ ಹಾಕಿರುವನೆಂದೂ ಆದನ್ನವನು ತಮಗೆ ತಿಳಿಸಿ ಸಲಹೆ ಕೇಳಿದನೆಂದೂ ಸೋದರರು ವರದಿ ಮಾಡಿದರು. ಗಾಂಧಾರದ ರಾಣಾ ಬಲು ಬಲಶಾಲಿಯಾಗಿದ್ದು ಸೇನ ಅರಸನು ಅವನ ಮೇಲೆ ಆಕ್ರಮಣವೆಸಗಿ ಸೋಲಿಸಲು ಸಾಧ್ಯವಿಲ್ಲವೆಂದು ತಾವು ಸಲಹೆಯಿತ್ತುದಾಗಿ ವಿವರಿಸಿದರು. ಆ ಸಲಹೆ ಕೇಳಿ ಅರಸ ಆಜ್ಮೇರಸೇನ ಕೆರಳಿ ತಮ್ಮನ್ನು ಅಪಮಾನಗೊಳಿಸಿ ತನ್ನ ರಾಜ್ಯದಿಂದ ಗಡಿಪಾರುಮಾಡಿದನೆಂದು ಹೇಳಿದರು. ಇದನ್ನೆಲ್ಲ ಕೇಳಿ ರಾಣಾ ಗೋಕುಲನು ಸಂತುಷ್ಟನಾಗಿ ಅವರನ್ನು ತನ್ನ ರಾಜ್ಯಕ್ಕೆ ಪ್ರೀತಿಯಿಂದ ಬರಮಾಡಿಕೊಂಡ. ಅವರ ವಾಸಕ್ಕಾಗಿ ನಿವೇಶನವನ್ನು ನೀಡುವುದಾಗಿ ಹೇಳಿದ. ತಮ್ಮ ಮನೆ ಕಟ್ಟಿಕೊಳ್ಳಲು ನಿವೇಶನ ಬೇಕೆಂದು ಮಧುಸೂದನನು ಅಪೇಕ್ಷೆ ವ್ಯಕ್ತಮಾಡಿದ. ವೈರಿಗಳ ಮೇಲೆ ಕಣ್ಣಿಟ್ಟು ಮುಂಬರುವ ಅಪಾಯಗಳನ್ನು ಅರಸನಿಗೆ ಅರುಹಲೋಸುಗ ದೂರ ಮತ್ತು ಶಂಭು ಉಪಾಧ್ಯಾಯನ ಹೊಲದ ಬಳಿ, ರಾಜ್ಯದ ಅಂಚಿನಲ್ಲಿ ನಿವೇಶನ ಬಯಸುವುದಾಗಿ ಮಧುಸೂದನ ಅರಿಕೆ ಮಾಡಿಕೊಂಡ. ಇದರಿಂದ ರಾಣಾ ಸಂತುಷ್ಟನಾದ. ಹೀಗೆ, ಮಧುಸೂದನನಿಗೆ ಜಂಬೂ ಮಣ್ಣಿನ ಪಥುಪತ್ತಮ್ ಎಂಬ ಹೆಸರಿನ ಹದಿಮೂರು ಖರಿ ಭೂಮಿ ದಾನವಾಗಿ ದೊರೆಯಿತು. ಮಧುಸೂದನ ಮತ್ತು ಅವನ ಸೋದರರು ಅಲ್ಲಿ ತಮ್ಮ ಮನೆ ಕಟ್ಟಿಕೊಂಡರು. ಈಗ ಅಲ್ಲೊಂದು ಊರ್ಜಿತದಲ್ಲಿರುವ ಪಟ್ಟಣವಿದೆ. ರಾಣಾ ಗೋಕುಲನನ್ನು ಗೃಹಪ್ರವೇಶಕ್ಕೆ ಆಹ್ವಾನಿಸಲಾಯಿತು. ಸವಿಯೂಟದಲ್ಲಿ ರಾಣಾನಿಗೆ ವಿಷಯುಕ್ತ ಆಹಾರ ಬಡಿಸಲಾಗಿ ಅವನು ಅಸ್ವಸ್ಥನಾದನು. ಆಜ್ಮೇರಸೇನನಿಗೆ ತಿಳಿಸಲಾಗಿ ಅವನು ತನ್ನೆಲ್ಲಾ ಬಲಗಳೊಂದಿಗೆ ದಂಡೆತ್ತಿ ಬಂದು ಅನಿರೀಕ್ಷಿತ ಆಕ್ರಮಣಗೈದ. ವಿಷದಿಂದಾಗಿ ರಾಣಾನ ಕೆಲವು ಮಂದಿ ಸತ್ತರು. ಮಿಕ್ಕವರು ಕಾದಾಡುತ್ತ ಮಡಿದರು. ರಾಣಾ ಗೋಕುಲ ಮತ್ತು ಅವನ ಎಲ್ಲಾ ಮಂದಿಯನ್ನು ಕೊಲ್ಲಲಾಯಿತು. ಇತರ ರಾಣಾಗಳು ಈ ಆಕ್ರಮಣವನ್ನು ಎದುರಿಸದಾದರು. ಮತ್ತು ಆಜ್ಮೇರಸೇನನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ನಿಯಮಿತವಾಗಿ ಕೊಡಬೇಕಾದ ನಜರಾನಾ ನಿಗದಿಗೊಳಿಸಲಾಯಿತು.

ಸಲೀನನದ ರಾಣಾ ಗೋಕುಲನಿಂದ ಮಾಂಡಿಯನ್ನು ಗೆದ್ದುಕೊಂಡ ಬಳಿಕ ಆಜ್ಮೇರಸೇನನು ಮಾಂಡಿ ಸಿಂಹಾಸನವನ್ನೇರಿದ. ಹೊಸ ರಾಜಧಾನಿಯನ್ನು ಮಾಂಡಿಯೆಂದು ಕರೆದರೆ, ಹಳೆಯ ರಾಜಧಾನಿಯನ್ನು ಬತೌಲಿ ಎಂದು ಕರೆಯಲಾಯಿತು. ಹಳೆಯ ಮಾಂಡಿಯ ತ್ರಿಲೋಕನಾಥ ದೇವಾಲಯದ ಮೇಲೆ ಕ್ರಿ.ಶ. ೧೫೦೦ ದಿನಾಂಕದ ಶಾಸನದಲ್ಲಿ ಈ ಹೆಸರನ್ನು ಉಲ್ಲೇಖಿಸಲಾಗಿದೆ. ಇದರಿಂದ ಸ್ಪಷ್ಟವಡುವುದೇನೆಂದರೆ, ಮಾಂಡಿಯ ಹೊಸ ರಾಜಧಾನಿ ಸ್ಥಾಪಿತಗೊಳ್ಳುವ ಮುಂಚೆಯೇ ಹಳೆಯ ಮಾಂಡಿ ಪ್ರಾಚೀನ ಕಾಲದಿಂದಲೇ ಅಸ್ತಿತ್ವದಲ್ಲಿತ್ತೆಂಬುದು. ಲದಾಖ ಮತ್ತು ಹೋಶಿಯಾರಪುರಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದ ಮಾರುಕಟ್ಟೆ ಸ್ಥಳ ಇದಾಗಿತ್ತೆಂದು

ವೋಗೆಲ್ ಮತ್ತು ಹಚಿನ್‌ಸನ್ ಪರಿಗಣಿಸುತ್ತಾರೆ. ಇದಕ್ಕೆ ಭಿನ್ನವಾಗಿ ಕೆಲ ಲೇಖಕರು ಮಾಂಡಿ ಎಂಬ ಹೆಸರು ವೃದ್ಧ ಋಷಿ ಮಾಂಡವನಿಂದ ಬಂದುದೆಂದು ಬಗೆಯುತ್ತಾರೆ. ಅವನು ದೀರ್ಘಕಾಲ ತಪಗೈದು ಪುಣ್ಯ ಗಳಿಸಿಕೊಂಡಿದ್ದ. ಆದರೆ, ಪ್ರಾಚೀನ ಋಷಿಯೊಂದಿಗೆ ಮಾಂಡಿ ಹೊಂದಿತ್ತೆಂಬ ಸಂಬಂಧವು ನಗರಕ್ಕೆ ಪುರಾತನತೆ ತಂದುಕೊಡುವುದಿಲ್ಲ.

ತರುವಾಯದಲ್ಲಿ ಅಜ್ಮೀರಸೇನನು ಒಂದು ಹೊಸ ಮನೆಯನ್ನು (ತಾಲೀಮಖಾನಾ) ಕಟ್ಟಿಸಲು ನಿರ್ಧರಿಸಿದ. ಪುರೋಹಿತನು ಗುಡ್ಡದ ತುದಿಯ ಮೇಲೆ ರಕ್ತ ಸುರುವಿದ್ದರಿಂದ ಗುಡ್ಡವೆಲ್ಲ ರಕ್ತದಲ್ಲಿ ಮುಳುಗಿದಂತೆ ಅರಸನು ಕನಸು ಕಂಡ. ಅದಕ್ಕಾಗಿ ಅರಸನು ತನ್ನ ಪಂಡಿತರ ಸಲಹೆ ಕೇಳಿದ. ಕನಸು ಶುಭದಾಯಕವಾಗಿದೆಯೆಂದು ಪಂಡಿತರು ಹೇಳಿದರು. ಲೆಕ್ಕಹಾಕಿ ಗೃಹವನ್ನು ಕಟ್ಟುವ ಶುಭ ಗಳಿಗೆಯನ್ನು ತಿಳಿಸುವುದಾಗಿ ಹೇಳಿದರು. ಆ ಸ್ಥಳದ ಹೆಸರು ಗೋಡಾ ಕೋರದ. ಅಡಿಗಲ್ಲು ಇಡುವ ಶುಭ ಗಳಿಗೆಯನ್ನು ಆಯ್ಕೆ ಮಾಡಲಾಯಿತು. ಸಂವತ್ ೧೬೦೨ ಫಾಲ್ಗುಣ ಪ್ರಬಿಷ್ಟ ೨ ಅಡಿಗಲ್ಲು ಇಡುವ ದಿನಾಂಕವೆಂದು ಗೊತ್ತುಪಡಿಸಲಾಯಿತು. ದಿವಾನಖಾನಾ ಕಟ್ಟಲಾಯಿತು. ಸುಕೇತದ ಅರಸನಿಗೆ ಸುದ್ದಿ ತಲುಪಿತು. ಅಡಿಗಲ್ಲು ಇಟ್ಟುದದರ ಫಲಶ್ರುತಿ ಏನೆಂದು ಸುಕೇತದ ಅರಸನು ತನ್ನ ಪುರೋಹಿತರನ್ನು ಕೇಳಿದನು. ಅದು ಮಾಂಡಿಯ ಅರಸನಿಗೆ ಶುಭಪ್ರದವಾಗಿದ್ದು, ಅವನು ನೆರೆಹೊರೆಯ ಎಲ್ಲ ರಾಜರನ್ನು ಮಣಿಸುವನೆಂದು ಅವರು ಹೇಳಿದರು. ಇದಕ್ಕೆ ಉಪಾಯ ಹೇಳಲು ಸುಕೇತದ ರಾಜನು ಜ್ಯೋತಿಷಿಯೊಬ್ಬನನ್ನು ಕರೆಕಳಿಸಿದ. ಅಗತ್ಯವಿದ್ದುದ್ದನ್ನು ಮಾಡಲೋಸುಗ ತನ್ನನ್ನು ಗಡಿಪಾರುಮಾಡಬೇಕೆಂದು ಜ್ಯೋತಿಷಿ ರಾಜನಿಗೆ ಹೇಳಿದ. ಅದರಂತೆ ಜ್ಯೋತಿಷಿಯನ್ನು ಹೊರಗಟ್ಟಲಾಗಿ ಅವನು ಅಜ್ಮೀರಸೇನನಲ್ಲಿಗೆ ಬಂದ. ಅವನಿಗೆ ಸ್ವಾಗತ ನೀಡಲಾಯಿತು. ಅಡಿಗಲ್ಲು ಹಾಕಿದ ಸಮಯದ ಬಗೆಗೆ ಅಜ್ಮೀರಸೇನ ಅವನನ್ನು ಕೇಳಿದ. ಅಡಿಗಲ್ಲನ್ನು ಕಿತ್ತು ಬೇರೊಂದು ಶುಭಮಹೂರ್ತದಲ್ಲಿ ಪುನಃ ಅದನ್ನು ಇಡುವಂತೆ ಜ್ಯೋತಿಷಿ ಸಲಹೆ ಇತ್ತ. ಅಡಿಗಲ್ಲನ್ನು ಸ್ವಲ್ಪ ಸಡಿಲಿಸಿದಾಗ ರಕ್ತಧಾರೆ ಚಿಮ್ಮಿತು. ತನ್ನ ಕಾರ್ಯಮಾಡಿದ ಜ್ಯೋತಿಷಿ ಲಗುಬಗೆಯಿಂದ ಸುಕೇತಕ್ಕೆ ಮರಳಿದ. ಅಡಿಗಲ್ಲನ್ನು ಇದ್ದಂತೆಯೆ ಕೈಬಿಡಲಾಯಿತು. ಹೀಗೆ, ಅಡಿಗಲ್ಲಿನ ಪ್ರಭಾವವನ್ನು ನಿಷ್ಕ್ರಿಯಗೊಳಿಸಲಾಯಿತು. ಆಮೇಲೆ ಈಗ ತಾಲೀಮಖಾನಾ ಎಂದು ಕರೆಯಲಾಗುವ ಸ್ಥಳದಲ್ಲಿ ದುರ್ಗವನ್ನು ಕಟ್ಟಲಾಯಿತು. ನಾಲ್ಕು ಚಿಕ್ಕ ಕೋಟೆಗಳನ್ನು ನಾಲ್ಕು ದಿಕ್ಕಿನಲ್ಲಿ ಕಟ್ಟಿ, ಅವುಗಳನ್ನು 'ಚಂಕಿರ ಕಿಲಾ' ಎಂದು ಕರೆಯಲಾಯಿತು. ಅರಸನು ಒಂದು ನಗರವನ್ನು ನೆಲೆಗೊಳಿಸಿ ಅಲ್ಲಿ ನೆಲೆಸುವಂತೆ ಸುಜನರನ್ನು ಕೇಳಿಕೊಂಡನು. ಅವರನ್ನು ಪಲ್ಲಕ್ಕಿಯಲ್ಲಿ ಗೌರವದಿಂದ ಕರೆದೊಯ್ಯಲಾಯಿತು.

ಅವರಿಗೆ ನೆಲೆಸಲನುವಾಗುವಂತೆ ಭೂಮಿ ಕೊಡಲಾಯಿತು. ಬತೌಲಿಯ ಜನರು ಅಲ್ಲಿಗೆ ಹೋಗಿ ಚಂಕಿರ ಕಿಲಾ ದುರ್ಗದ ಬಳಿ ನೆಲೆಸಿದರು. ಶಂಭು ಉಪಾಧ್ಯಾಯ ಹಸುಗಳನ್ನು ಸಾಕಿದ್ದ. ಅವನ ದನಗಾಹಿಯು ಹಸುಗಳನ್ನು ಮೇಯಲು ಹೊಡೆದೊಯ್ಯುತ್ತಿದ್ದ. ಒಂದು ಹಸು ಅಲೆದಾಡುತ್ತ ಬೇರೆಡೆ ಹೋಯಿತು. ದನಗಾಹಿಯು ಅದನ್ನು ಹಿಂಬಾಲಿಸಲಾಗಿ ಅದು ಅಲ್ಲಿ ಹುಲ್ಲಿನ ಮೇಲೆ ಹಾಲು ಸುರಿಸುತ್ತಿದ್ದುದನ್ನು ಕಂಡ. ರಾಜನಿಗೆ ಸುದ್ದಿ ಹೋಯಿತು. ಅಲ್ಲಿ ಭೂತನಾಥ ದೇವಾಲಯ

ನಿರ್ಮಿಸಲಾಯಿತು. ನಗರಕ್ಕೆ ಪುನರ್ನಾಮಕರಣ ಮಾಡಲು ನಿರ್ಧರಿಸಲಾಯಿತು. ವಿಚಾರ ವಿಮರ್ಶೆ ಮಾಡಲಾಗಿ, ಮಾಂಡಾವ ಋಷಿ ಅಲ್ಲಿ ತಪಸ್ಸೆಗೈದಿದ್ದರಿಂದ ಅದಕ್ಕೆ 'ಮಾಂಡಿ' ಎಂದು ಕರೆಯಬೇಕೆಂದು ಪಂಡಿತರು ಅರಸನಿಗೆ ತಿಳಿಸಿದರು. ಆ ಸ್ಥಳವು ಪಾತಾಳ ಭುವನೇಶ್ವರಿ ಕ್ಷೇತ್ರವಾಗಿದ್ದರಿಂದ ಅದನ್ನು ಮಾಂಡಿ ಎಂದು ಕರೆಯಲಾಯಿತು.

ಅದಾದ ಮೇಲೆ, ಮಣಿದಿದ್ದ ರಾಣಾಗಳು ದಂಗೆಯೆದ್ದರು. ಅವರು ಸುಕೇತದ ಅರಸನ ನೆರವು ಪಡೆದು ಸೈನ್ಯಗಳನ್ನು ಜಮಾಯಿಸಲಾರಂಭಿಸಿದರು ಮತ್ತು ತಮ್ಮ ಭೂಪ್ರದೇಶಗಳನ್ನು ತೆರವು ಮಾಡಬೇಕು ಇಲ್ಲವೆ ತಮ್ಮೊಂದಿಗೆ ಯುದ್ಧ ಎದುರಿಸಬೇಕೆಂಬ ಸಂದೇಶವನ್ನು ಅಜ್ಮೇರಸೇನನಿಗೆ ಕಳಿಸಿದರು. ಈ ರಾಣಾಗಳು ೧೩೦೦ ಯೋಧರನ್ನು ಹೊಂದಿದ್ದು ಅವರಲ್ಲಿ ೭೦೦ ಬಿಲ್ಲುಗಾರರಿದ್ದರು. ರಾಜಾ ಅಜ್ಮೇರಸೇನ ಒಂದು ಬದಿಯಿಂದ ಮತ್ತು ಅವನ ಜ್ಯೇಷ್ಠಪುತ್ರ ಚತುರಸೇನ ಇನ್ನೊಂದು ಬದಿಯಿಂದ ಮುನ್ನಡೆದು ಘೋರ ಯುದ್ಧ ಜರುಗಿತು. ಯುದ್ಧದಲ್ಲಿ ಮಧುಸೂದನನ ಮೂವರು ಸೋದರರು ಮಡಿದರು. ಮಧೂಸೂದನ ಮಾತ್ರ ಬದುಕುಳಿದ. ರಾಣಾರ ಅನೇಕ ಯೋಧರನ್ನು ಕೊಲ್ಲಲಾಯಿತು. ಮಾಂಡಿ ಸೈನ್ಯದ ಕೆಲವು ಯೋಧರು ಮೃತಪಟ್ಟರು. ಯುವರಾಜ ಚತುರಸೇನನ ಒಂದು ಕಾಲಿಗೆ ಗಾಯವಾಯಿತು. ಆದಾಗ್ಯೂ, ರಾಣಾರು ಸೋತರು. ಕನಬುಲ, ಮರಥೆನ ನಗರಗಳನ್ನು ಗೆದ್ದು ನಂತರ ಅವರು ಮಾಂಡಿಗೆ ಮರಳಿದರು. ಸ್ವೇನ ಅರಸನ ಬೆಂಬಲಾರ್ಥವಾಗಿ ಆಡಿದ ಪಾತ್ರಕ್ಕಾಗಿ ಮನ್ನಣೆಯಿತ್ತು ಮಧುಸೂದನನಿಗೆ ಪ್ರಶಸ್ತಿ ನೀಡಲಾಯಿತು.

ಆ ಕಾಲಕ್ಕೆ ಚೆನೆತ್ರಿದರದ ಆಚೆಯ ದಡದಲ್ಲಿದ್ದ ಭೂಮಿ ಸುಕೇತಕ್ಕೆ ಸೇರಿತ್ತು. ಸುಕೇತದ ಅಧಿಕಾರಿಗಳು ಅಲ್ಲಿ ವಾಸಿಸುತ್ತಿದ್ದರು. ಜನರು ಅಗ್ನಿಸಂಸ್ಕಾರಕ್ಕಾಗಿ ಶವವನ್ನು ಅಲ್ಲಿಗೆ ತಂದರೆ ಅಧಿಕಾರಿಗಳು ಸ್ವಲ್ಪ ಕರ ವಿಧಿಸಿ ಸುಡಲು ಬಿಡುತ್ತಿದ್ದರು. ಈ ಕರವನ್ನು ಸುಕೇತ ರಾಜ್ಯ ವಿಧಿಸಿತ್ತು. ಅವರು, ಅಂದರೆ ಚತುರಸೇನನ ಜನರು, ಈ ಜನರಿಂದ ನಜರಾನಾ ಸಂಗ್ರಹಿಸತೊಡಗಿ ಅದನ್ನು ದೀರ್ಘ ಕಾಲದವರೆಗೆ ಮುಂದುವರಿಸಿದರು. ಆಮೇಲೆ ತಿಕ್ಕಾ ಚತುರಸೇನ ಮೃತಪಟ್ಟು ರಾಜಾ ಅಜ್ಮೇರಸೇನ ತನ್ನ ನಲವತ್ತೇಳನೆಯ ವಯಸ್ಸಿಗೆ ದುಃಖಿತಪ್ತನಾದ.

ಅಜ್ಮೇರಸೇನನ ಆಳ್ವಿಕೆ ರಾಜಕೀಯವಾಗಿ ಸಕ್ರಿಯವಾಗಿತ್ತು. ಮಾಂಡಿಯನ್ನು ಸಲಿಯನದ ರಾಣಾ ಗೋಕುಲನ ವಶದಿಂದ ಕಿತ್ತುಕೊಂಡು ಆವನ ರಾಜಧಾನಿಯನ್ನು ವಶಪಡಿಸಿಕೊಳ್ಳಲಾಯಿತು. ಆದರೆ, ಆವನ ವಿಜಯತೃಷೆ ಹಿಂಗಲಿಲ್ಲ. ಮತ್ತು ರಾಣಾ ಗೋಕುಲನನ್ನು ಸೋಲಿಸಿಯೂ ಅಜ್ಮೇರಸೇನನಿಗೆ ತೃಪ್ತಿಯಿರಲಿಲ್ಲ. ನೆರೆರಾಜ್ಯಗಳ ಬಲವನ್ನು ಅಡಗಿಸಲು ಅಜ್ಮೇರಸೇನ ನಿರ್ಧರಿಸಿದ್ದ. ಶೀಘ್ರವೆ ಅವನು ಕನವಲ ಮತ್ತು ಗಾಂಧಾರಗಳ ರಾಣಾರನ್ನು ಸೋಲಿಸಿ ಕನವಲವನ್ನು ವಶಪಡಿಸಿಕೊಂಡ. ಆದರೆ, ಕೆಲ ಕಾಲಾನಂತರ ಕನವಲ ದಂಗೆಯೆದ್ದು ಸ್ವತಂತ್ರವಾಯಿತು.

ಸಂತಸಿಂಗ್ ಮಂಡಿಯಾಲಿ ಭಾಷೆಯಲ್ಲಿ ರಚಿಸಿದ ಗ್ರಂಥವು ಅಜ್ಮೇರಸೇನನು ಕ್ರಿ.ಶ. ೧೪೯೯ರಲ್ಲಿ ಸಿಂಹಾಸನವೇರಿದನೆಂದು ಹೇಳುತ್ತದೆ. ಕನ್ವರ ಕಾಶ್ಮೀರ ಸಿಂಗ್‌ನಿಂದ ಪಡೆದ ಅರಸರ ವಂಶಾವಳಿಯು ಅಜ್ಮೇರಸೇನನ ಮರಣ ದಿನಾಂಕ ಸರಿಸುಮಾರು ಕ್ರಿ.ಶ. ೧೫೩೪ ಎಂದು ಉಲ್ಲೇಖಿಸುತ್ತದೆ.

ಅಜ್ಮೇರಸೇನನು ಮಾಂಡಿಯ ಪ್ರಥಮ ಅರಸನೆಂದು ಮತ್ತು ಅವನು ರಾಜಾ ಎಂಬ ಬಿರುದು ಧರಿಸಿದ್ದನೆಂದು ಗ್ರಹಿಸಬಹುದು. ಉತ್ತರಾಧಿಕಾರಿಯಾಗಿ ತನ್ನ ಪೂರ್ವಜರಿಂದ ಪಡೆದಿದ್ದ ಎಲ್ಲ ಗೆದ್ದ ಪ್ರದೇಶಗಳನ್ನು ಅವನು ಬಲಪಡಿಸಿದ. ಮತ್ತು ಬೇರೆ ಊರುಗಳನ್ನು ಗೆದ್ದುಕೊಂಡು ತನ್ನ ರಾಜ್ಯದ ಗಡಿಗಳನ್ನು ವಿಸ್ತರಿಸಿದ. ಅವನು ತನ್ನ ಉತ್ತರಾಧಿಕಾರಿಗಳಿಗೆ ತಾನು ವಶಪಡಿಸಿಕೊಂಡಿದ್ದ ವಿಶಾಲ ಭೂಪ್ರದೇಶಗಳನ್ನು ಬಿಟ್ಟುಹೋದ. ಮತ್ತು ತನ್ನ ಪ್ರಜೆಗಳಿಗೆ ತ್ರಿಲೋಕನಾಥ ಮತ್ತು ಭೂತನಾಥ ದೇವಾಲಯಗಳನ್ನು ಸಮರ್ಪಿಸಿದ.

◈◈◈

ಅಧ್ಯಾಯ ೪

# ಸೇನ ಕಾಲಾವಧಿಯಲಿ ಹಿಮಾಚಲಪ್ರದೇಶದ (ಮಾಂಡಿಯ) ದೇವತೆಗಳು

ಸೇನರು ಹಿಮಾಚಲ ಪ್ರದೇಶಕ್ಕೆ ಬರುವ ಪೂರ್ವದಲ್ಲಿ ಆ ಪ್ರದೇಶವು ರಾಣಾ ಇಲ್ಲವೆ ಠಾಕೂರ ದೊರೆಗಳು ಆಳುತ್ತಿದ್ದ ಚಿಕ್ಕ ಚಿಕ್ಕ ಗಿರಿರಾಜ್ಯಗಳಲ್ಲಿ ಹಂಚಿಹೋಗಿತ್ತು. ಕನೇತ ಬಣಕ್ಕೆ ಸೇರಿದ್ದ ಅವರನ್ನು ಮಹಾಭಾರತದ ಕುಲಿಂದ (ಕುನಿಂದ) ಜನಾಂಗವೆಂದು ಕನಿಂಗ್ಹಮ್ ಗುರುತಿಸುತ್ತಾರೆ. ನಮಗೆ ತಿಳಿದಿರುವಂತೆ, ಬೀರಸೇನನು ತನ್ನ ಅಧಿಪತ್ಯ ಸ್ಥಾಪಿಸಲು ಸನ್ಯಾತೋರ್‌ನಂಥ ರಾಜಪೂತ ರಾಣಾಗಳೊಂದಿಗೆ ಕಾದಾಡಬೇಕಾಯಿತು. ನಂಜ, ಸಲಲು, ಬೇಲು ಮತ್ತು ಮಗ್ರ ಮುಂತಾದ ಪ್ರದೇಶಗಳನ್ನು ಕಿತ್ತುಕೊಳ್ಳಲು ಕೋಟಿಧರನಂಥ ಠಾಕೂರ ದೊರೆಗಳೊಂದಿಗೆ ಘರ್ಷಣೆಗಿಳಿಯಬೇಕಾಯಿತು. ಹಿಮಾಚಲ ಪ್ರದೇಶದಂಥ ಸಮ್ಮಿಶ್ರ ಸಮಾಜದಲ್ಲಿ ಆಳುವ ವರ್ಗಗಳಾದ ರಾಜಪೂತರು ಮತ್ತು ಕನೇತರ ನಂತರ ಸಾಮಾನ್ಯರು, ಗೊಲ್ಲರು, ಬೇಸಾಯಗಾರರು ಮತ್ತು ಕಸಬುದಾರರನ್ನು ಸಮಾಜದ ಕೆಳ ಸ್ತರಗಳಲ್ಲಿ ಇರಿಸಲಾಗುತ್ತಿತ್ತು. ಅವರು ಬಡವರು ಮತ್ತು ನಿಮ್ನ ವರ್ಣದವರಾಗಿದ್ದರು. ಅಲೆಮಾರಿ ಜನರಾದ ಗುಜ್ಜರರಂಥ ಗ್ರಾಮೀಣ ದನಗಾಹಿಗಳು ತಮ್ಮ ದನ ಹಾಗೂ ಕುರಿಗಳನ್ನು ಸಾಕುತ್ತಿದ್ದರು.

ಲಾಹೌಲ (ಲ್ಯಾ-ಯುಲ್) ಮತ್ತು ಸ್ಪಿತಿಗಳಿಂದಲೂ ಜನರು ಚಳಿಗಾಲದಲ್ಲಿ ಕೆಳಗಿಳಿದು ಬಂದು ಉಣ್ಣೆ, ಯಾಕ್ ಪ್ರಾಣಿಗಳ ಬಾಲ ಮತ್ತು ಇತರ ಗಿರಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದರು. ಚಳಿಗಾಲದಲ್ಲಿ ಕೆಲವರು ಅಕ್ಕಿಯಿಂದ ತಯಾರಿಸಿದ ಬಿಯರ್ ಮಾರಲು ತಾತ್ಕಾಲಿಕ ಮಳಿಗೆಗಳನ್ನು ತೆರೆಯುತ್ತಿದ್ದರು. ಸೇನ ಅರಸರು ದೃಶ್ಯ ಪ್ರವೇಶಿಸುವ ಕಾಲಕ್ಕಾಗಲೇ ರಿವಲ್ಸರದ ಗುರು ಪದ್ಮಸಂಭವನ ಮತ್ತು ತರುವಾಯದ ಲಾಮಾಗಳ ಪ್ರಯತ್ನಗಳಿಂದಾಗಿ ಬಹುತೇಕ ಅಲೆಮಾರಿಗಳು ಮೊದಲಿನ ತಮ್ಮ ಬೊನ್‌ಪೊ ಅಥವಾ ಶೈವಧರ್ಮದಿಂದ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ್ದರು. ಗುಜ್ಜರರು ಮತ್ತು ಗದ್ದಿಗಳು ಮುಸ್ಲಿಮ ಸಂಪರ್ಕದಲ್ಲಿ ಬಂದಾಗ ಮುಸ್ಲಿಮರಾಗಿ ಹೀಗೆಯೆ ಮತಾಂತರಗೊಂಡಿದ್ದರು. ಹಿಮಾಚಲಪ್ರದೇಶದ ಮೂಲನಿವಾಸಿಗಳು ಗಿರಿಜನರಾಗಿದ್ದು ಆರಂಭದಲ್ಲಿ ಹಿಂದೂಧರ್ಮದ ವೈದಿಕ ರೂಪವನ್ನು ಅನುಸರಿಸುತ್ತಿದ್ದಿಲ್ಲ.

ಪ್ರತಿಯೊಂದು ಗ್ರಾಮಕ್ಕೂ ತನ್ನದೇ ದೇವತೆ ಇತ್ತು. ಗ್ರಾಮಸ್ಥರು ವಿಶೇಷತಃ ತಮ್ಮ ಕುಟುಂಬದಲ್ಲಿಯ ಜನನ, ಮರಣ ಅಥವಾ ವಿವಾಹ ಸಂದರ್ಭಗಳಲ್ಲಿ ಅವುಗಳನ್ನು ಪೂಜಿಸುತ್ತಿದ್ದರು. ಅನೇಕ ವೇಳೆ ಈ ದೇವತೆಗಳಿಗೆ ಸ್ಥಳೀಯ ಗಿರಿ ಇಲ್ಲವೆ ಪ್ರಾಚೀನ ಋಷಿಯ ಹೆಸರು ಇಡುತ್ತಿದ್ದರು. ಸುಂದರ ಆಕೃತಿಗಳೊಂದಿಗೆ ಲೋಹಪಟಗಳ ಮೇಲೆ ಸಾಲಾಗಿ ರೇಖಿಸಿದ ದೇವತೆಗಳ ಮೂರ್ತಿಗಳಿದ್ದು ಈ ಪಟಗಳನ್ನು ಒಂದರ ಕೆಳಗೊಂದರಂತೆ ಊರುಗೋಲಿನ ಮೇಲೆ ಹೊಂದಿಸಲಾಗುತ್ತಿತ್ತು. ಈ ಲೋಹಪಟಗಳು ಹೆಚ್ಚಾಗಿ ಕಂಚಿನವಿದ್ದು ಕೆಲವು ಬೆಳ್ಳಿ ಬಂಗಾರದವೂ ಇದ್ದವು. ಇಂಥ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಒಯ್ಯಲಾಗುತ್ತಿತ್ತು. ಸೌಂದರ್ಯ ಹೆಚ್ಚಿಸಲು ಪಲ್ಲಕ್ಕಿಯ ಹಿಡಿಗಳಿಗೆ ವಿವಿಧ ಬಣ್ಣಗಳ ಅರಿವೆಗಳನ್ನು ಸುತ್ತಲಾಗುತ್ತಿತ್ತು. ದೇವತೆಗಳನ್ನು ಒಂದು ಗುಡಿಯಿಂದ ಇನ್ನೊಂದಕ್ಕೆ ಹೊತ್ತೊಯ್ಯುವಾಗ ಅರ್ಚಕರು, ಸಂಗೀತಗಾರರು ಮತ್ತು ನೃತ್ಯಗಾರರು ದೇವತೆಯ ಹಿಂದೆ ಹಿಂದೆ ಹೋಗುತ್ತಿದ್ದರು. ಇವುಗಳಲ್ಲಿ ಕೆಲವು ದೇವತೆಗಳು ಪರ್ಜನ್ಯ ದೇವತೆಗಳೆಂದು ಪ್ರಸಿದ್ಧಿ ಪಡೆದಿದ್ದವು.

ಅನಾವೃಷ್ಟಿ ಕಾಲಕ್ಕೆ ನಾರಾಯಣ, ಪಾಸ್ಕೋತ (ಪಶುಪತಿ) ಮತ್ತು ಘುಗ್ನಿದೇವಿ ಮೊದಲಾದ ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸಲು ಅರ್ಚಕರೊಂದಿಗೆ ರಾಜರೂ ಬರುತ್ತಿದ್ದರು. ಲ್ಯಾಯುಲ್ ಮತ್ತು ಸ್ಪಿತಿಯ ಲಾಮಾತ್ಮಕ ಬೌದ್ಧ ದೇವಾಲಯಗಳಲ್ಲಿರುವಂತೆಯೆ, ನಾರಾಯಣ ಮತ್ತು ಪಾಸ್ಕೋತ ದೇವಾಲಯಗಳ ಆವರಣದಲ್ಲಿ ತಂಬಾಕು ಸೇದುವುದು ನಿಷಿದ್ಧವಾಗಿತ್ತು. ಅಂತಾಗಿಯೂ ಹಿಂದೂ ಪಶುಪತಿ ದೇವಾಲಯಗಳಲ್ಲಿ ಭಕ್ತರು ಪಶುಪತಿನಾಥ ಮತ್ತು ತತ್ಸಂಬಂಧಿ ನಂದಿ ಮತ್ತು ಭೃಂಗಿಗಳಿಗೆ ಅದನ್ನೇ ಎಡೆ ಹಿಡಿದು ಗಾಂಜಾ ಸೇದುತ್ತಿದ್ದರು.

ಸನೋರ ಪರಾಸರ ಹೆಸರಿನ ಗ್ರಾಮದೇವತೆಗೆ ಋಷಿ ಪರಾಸರನಿಂದ ಆ ಹೆಸರು ಬಂದಿದೆ. ಕುಲು ಮತ್ತು ಮಾಂಡಿಗಳಲ್ಲಿ ಅವನ ಗೌರವಾರ್ಥವಾಗಿ ಆಷಾಢಮಾಸದಲ್ಲಿ ದೊಡ್ಡ ಜಾತ್ರೆ ಜರುಗುತ್ತದೆ. ಸಾವಿರಾರು ಜನ ನೆರೆಯುತ್ತಾರೆ. ಕಟ್ಟಿಗೆಯ ಕರಕುಶಲ ವಸ್ತುಗಳು ಮತ್ತು ಬಟ್ಟೆಗಳನ್ನು ಮಾರುತ್ತಾರೆ. ಬರನಾಗದ ಟಿಕ್ಕಿದೇವಿಯು ಸಂಸೋರದಲ್ಲಿರುವ ಇನ್ನೊಂದು ದೇವತೆ. ಅವಳ ಹೆಸರಿನಲ್ಲಿ ದೊಡ್ಡ ಜಾತ್ರೆ ಏರ್ಪಟ್ಟು ಉಣ್ಣೆ ಮತ್ತು ಕಂಬಳಿ ವಿಪುಲವಾಗಿ ಮಾರಾಟವಾಗುತ್ತವೆ. ಪಾಂಡವರ ಕಾಲದಲ್ಲಿ ಇತ್ತೆಂದು ಹೇಳಲಾದ ಕಾಮರುನಾಗ ದೇವತೆಯ ಕಲ್ಲಿನ ಮೂರ್ತಿ ನಾಚನ್‌ದಲ್ಲಿದೆ. ಈ ದೇವಾಲಯ ಸುಕೇತ ಮತ್ತು ಮಾಂಡಿಗಳ ಗಡಿಯಲ್ಲಿದ್ದು ಪಿಡುಗುಗಳು ಪರಿಹಾರವಾಗಲೆಂದು ಭಕ್ತರು ಈ ದೇವತೆಯನ್ನು ಪೂಜಿಸುತ್ತಾರೆ. ನಾಚನ್‌ದ ಉನ್ನತ ಪರ್ವತದ ತುದಿಯ ಮೇಲೆ ಶಿಖರಿದೇವಿ ಇದ್ದಾಳೆ. ಅವಳಿಗೆ ಆಡಿನ ರಕ್ತ ಇಷ್ಟವೆಂದು ಭಾವಿಸಿ ಭಕ್ತರು,


## ಗ್ರಾಮದೇವತೆಗಳು



ಹಿಮಾಚಲ ಪ್ರದೇಶದ ಪ್ರತಿಯೊಂದು ಗ್ರಾಮಕ್ಕೆ ತನ್ನದೇ ಆದ ದೇವತೆ ಇರುತ್ತದೆ. ಅದಕ್ಕೆ ಬಹುಮಟ್ಟಿಗೆ ಸ್ಥಳೀಯ ಗಿರಿ ಇಲ್ಲವೆ ಸಂತನ ಹೆಸರು ಇಡಲಾಗಿದೆ.

ಈ ದೇವತೆಗಳ ಮೂರ್ತಿಗಳನ್ನು ಕಂಚಿನ ಪಟಗಳ ಮೇಲೆ ರೇಖಿಸಲಾಗಿರುತ್ತದೆ. ಕೆಲವೊಮ್ಮೆ ಈ ಪಟಗಳನ್ನು ಬೆಳ್ಳಿ ಇಲ್ಲವೆ ಬಂಗಾರದಿಂದಲೂ ಮಾಡಲಾಗಿರುತ್ತದೆ.

ಶಿವರಾತ್ರಿ ಮತ್ತು ಇತರ ಹಬ್ಬಗಳಂದು ಈ ದೇವತೆಗಳನ್ನು ಅಲಂಕೃತ ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆಯಲ್ಲಿ ಒಯ್ಯಲಾಗುತ್ತದೆ. ಅರ್ಚಕರು, ಗಾಯಕರು ಮತ್ತು ಭಕ್ತರು ಪಲ್ಲಕ್ಕಿಯ ಹಿಂದೆ ನಡೆದುಹೋಗುವರು.



ಸೇನವಂಶದ ರಾಜರು ಮತ್ತು ಪುರೋಹಿತರು ತಮ್ಮ ತಮ್ಮ ಕುಲದೇವತೆಗಳನ್ನು ತಂದರು. ಉದಾ: ರಾಜೇಶ್ವರಿ, ಬಗಲಮುಖಿ ಮತ್ತು ಶ್ರೀ, ತಾರಾ ಹಾಗೂ ಕಾಲಿಕಾದಂಥ ಸಾಗರ ದೇವತೆಗಳೊಂದಿಗೆ ಸ್ಥಳೀಯ ದೇವತೆಗಳನ್ನು ಮೇಳೈಸಿ ಹಿಂದೂ ಧರ್ಮದ ತಿರುಳಾಗಿರುವ ಗಿರಿಗಳ ಮತ್ತು ಬಯಲುಗಳ ಸಂಕೀರ್ಣ ದೇವತಾಗಣವನ್ನಾಗಿಸಿದೆ.

ಪರಿಹಾರವಾಗಲೆಂದು ಭಕ್ತರು ಈ ದೇವತೆಯನ್ನು ಪೂಜಿಸುತ್ತಾರೆ. ನಾಚನ್‌ದ ಉನ್ನತ ಪರ್ವತದ ತುದಿಯ ಮೇಲೆ ಶಿಖರಿದೇವಿ ಇದ್ದಾಳೆ. ಅವಳಿಗೆ ಆಡಿನ ರಕ್ತ ಇಷ್ಟವೆಂದು ಭಾವಿಸಿ ಭಕ್ತರು ಆಡುಗಳನ್ನು ಬಲಿ ಕೊಡುತ್ತಾರೆ.

ಭಂಗಲದಲ್ಲಿ ಬಾಲರೂಪಿ ಶಿವನ ದೇವಾಲಯವಿದೆ. ಅವನು ಎಲ್ಲ ರೋಗಗಳನ್ನು ನಿವಾರಿಸುವ ವೈದ್ಯದೇವತೆಯೆಂದು ಖ್ಯಾತನಾಗಿರುವನು. ಭಕ್ತರು ರೋಗನಿವಾರಣೆಗಾಗಿ ಅವನನ್ನು ಪ್ರಾರ್ಥಿಸುತ್ತಾರೆ. ಉಚ್ಚ ವರ್ಗದ ಹಿಂದೂಗಳು ಚೂಡಾಕರಣಕ್ಕಾಗಿ (ಜವಳ ಕಾರ್ಯಕ್ರಮ) ತಮ್ಮ ಹುಡುಗರನ್ನು ದೇವಾಲಯಕ್ಕೆ ತರುತ್ತಾರೆ. ಸುಗ್ಗಿಯ ನಂತರ, ಹಿಮಾಚಲ ಪ್ರದೇಶದ ರೈತರು ಬೆಳೆಗಳನ್ನು ತಾವು ತಿನ್ನುವ ಮೊದಲು ಒಂದು ಪಾಲನ್ನು ದೇವತೆಗೆ ಅರ್ಪಿಸುವರು.

ಪ್ರತಿವರ್ಷದ ಭಾದ್ರಪದ ೧೬ ರ ರಾತ್ರಿಯಂದು (ಸರಿಸುಮಾರು ಸಪ್ಟೆಂಬರ ೨) ಎಲ್ಲ ದಿಕ್ಕುಗಳಿಂದ ದೇವತೆಗಳೆಲ್ಲ ಬಂದು ಮಾಂಡಿಯ ಧರ ಕಂಬೋಗಿರಿಯ ತುದಿಯಲ್ಲಿ ಸೇರುತ್ತಾರೆ.

ನಾಲ್ಕು ಯೋಗಿನಿಗಳೂ (ದಿಕ್ಪಾಲಕರು) ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಾಲ್ಕೂ ದಿಕ್ಕುಗಳಿಂದ ಬರುವರು. ಅವರು ಅಧಿಪತ್ಯಕ್ಕಾಗಿ ದೇವರುಗಳೊಂದಿಗೆ ಯುದ್ಧಕ್ಕಿಳಿಯುವರು ಮತ್ತು ಯಾವುದೊಂದು ಪಕ್ಷ ನಿರ್ಣಾಯಕವಾಗಿ ಗೆಲ್ಲುವವರೆಗೆ ಕಾದಾಡುವರು. ದೇವರು ಗೆದ್ದ ಪಕ್ಷದಲ್ಲಿ ಆ ವರ್ಷ ಬೆಳೆಗಳು ಹುಲುಸಾಗುವವು. ಆದರೆ, ಯೋಗಿನಿಯರು ಗೆದ್ದ ವರ್ಷ ಅಭಾವ ಮತ್ತು ಬರ ತಲೆದೋರುತ್ತದೆ. ಯೋಗಿನಿಯರು ಎಷ್ಟೊಂದು ಜೋರಾಗಿರುತ್ತಾರೆಂದರೆ ಅವರು ಎಮ್ಮೆಗಳನ್ನು ಕೊಂದುಗಿಂದಾರೆಂಬ ಭಯದಿಂದ ಸ್ಥಳೀಯ ದನಗಾಹಿಗಳು ಅವುಗಳನ್ನು ಧರ ಕಂಬೋಗಿರಿಯ ತುದಿಯಿಂದ ಕೆಳಗೆ ತರುವ ತೊಂದರೆ ತೆಗೆದುಕೊಳ್ಳುವರು. ಆ ರಾತ್ರಿ ನೆರೆಹೊರೆಯವರು ರೇಪ್ ಬೀಜಗಳನ್ನು ತಮ್ಮ ತಮ್ಮೊಳಗೆ ವಿನಿಮಯ ಮಾಡಿಕೊಳ್ಳುತ್ತಾರೆ. ಏಕೆಂದರೆ, ಅದು ಯೋಗಿನಿಯರ ದುಷ್ಪ್ರಭಾವವನ್ನು ತಪ್ಪಿಸುವುದೆಂದು ನಂಬಲಾಗಿದೆ.

ರಾಜಪೂತ ಮತ್ತು ಕನೇತ ಮುಂತಾದ ಉಚ್ಚ ಜಾತಿಯ ಹಿಂದೂಗಳು ತಮ್ಮ ತಮ್ಮಲ್ಲಿಯೆ ಮತ್ತು ಕುಲದೇವಾಲಯಗಳಲ್ಲಿಯೆ ಇಂಥ ಮೂಲನಿವಾಸಿಗಳ ಪೂಜೆ ಮತ್ತು ಜಾತ್ರೆಯಲ್ಲಿ ಪಾಲ್ಗೊಳ್ಳುವರು. ಅವರು ಪೌರಾಣಿಕ ದೇವರುಗಳಾದ ವಿಷ್ಣು, ಸೂರ್ಯ, ಶಿವ, ಗಣೇಶ ಮತ್ತು ದೇವಿಯರಾದ ಶ್ರೀವಿದ್ಯಾ ಅಥವಾ ರಾಜೇಶ್ವರಿ, ವಗಲಾದೇವಿ, ಬಲಾ,ಕಾಲಿ, ತಾರಾ ಮೊದಲಾದವರನ್ನು ಪೂಜಿಸುವರು. ಸೇನರು ತಮ್ಮ ಕುಲದೇವತೆಯಾದ ಶ್ರೀವಿದ್ಯಾ (ಅಥವಾ ರಾಜೇಶ್ವರಿ)ಳನ್ನು, ಪುರೋಹಿತರು ತಮ್ಮ ಕುಲದೇಲತೆಯಾದ ವಗಲಾಮುಖಿಯನ್ನು ಹಿಮಾಚಲ ಪ್ರದೇಶಕ್ಕೆ ತಂದರು.

**ರಾಜೇಶ್ವರಿ (ಶ್ರೀವಿದ್ಯಾ):** ಶ್ರೀವಿದ್ಯಾ ದೇವತೆಯು ಸೇನ ಅರಮನೆಯ ಲಕ್ಷ್ಮೀದೇವಿಯೆಂದು ಭಾವಿಸಲಾಗಿದೆ. ಹಾಗಾಗಿ, ಅವಳು ರಾಜೇಶ್ವರಿಯೆಂದೂ ಪ್ರಸಿದ್ಧಳಾಗಿರುವಳು.

ಕೆಂಪು ವಸ್ತ್ರ ಧರಿಸಿದ ಆವಳಿಗೆ ನಾಲ್ಕು ಕೈಗಳಿವೆ. ಒಂದರಲ್ಲಿ ಮಾನವ ತಲೆಬುರುಡೆ, ಇನ್ನೊಂದರಲ್ಲಿ ಅಂಕುಶ, ಇನ್ನೆರಡು ಕೈಗಳಲ್ಲಿ ಬಿಲ್ಲು ಬಾಣ ಹಿಡಿದಿರುವಳು. ಹಣೆಯನ್ನು ಅರ್ಧಚಂದ್ರ ಅಲಂಕರಿಸಿದೆ. ಆವಳು ಸಂಪತ್ತು ಮತ್ತು ಸುಖಪ್ರದಾಯಿನಿ. ಅವಳ ಸಿಂಹಾಸನವನ್ನು

ಬ್ರಹ್ಮ, ವಿಷ್ಣು, ಇಂದ್ರ ಮತ್ತು ಶಿವ ಎತ್ತಿಹಿಡಿದಿರುವರು. ಅರಮನೆಯ ನೆರೆಯಲ್ಲಿಯೆ ಈ ದೇವತೆಯು ಗುಡಿಯಲ್ಲಿದ್ದು ಸೇನ ಅರಸರು ಅವಳ ಪ್ರಧಾನ ಭಕ್ತರಲ್ಲಿದ್ದರು.

ವಗಲಾದೇವಿ: ಈ ದೇವತೆಯ ಮುಖ ಬಕ (ಕ್ರೌಂಚ)ದಂತಿರುವುದರಿಂದ ಅವಳಿಗೆ ವಗಲಾಮುಖಿ ಎನ್ನುವುದುಂಟು.ಅವಳು ಹಳದಿ ವಸ್ತ್ರ ಧರಿಸಿರುವಳು. ಒಂದು ಕೈಯಲ್ಲಿ ರಾಜದಂಡವನ್ನು ಹಿಡಿದಿದ್ದು ಇನ್ನೊಂದರಿಂದ ಶತ್ರುರಾಕ್ಷಸನ ನಾಲಗೆ ಹಿಡಿದಿರುವಳು. ಅರಮನೆಯ ಅರ್ಚಕರು ಅವಳ ಪೂಜೆ ಮಾಡುವರು. ಪ್ರಾಯಶಃ ಬಂಗಾಲದಿಂದ ಬಂದ ಸೇನವಂಶದ ಪುರೋಹಿತರು ಬಂಗಾಲದಿಂದಲೇ ಅವಳ ಪ್ರತಿಮಾಶಾಸ್ತ್ರವನ್ನು ಮತ್ತು ಪೂಜಾವಿಧಾನವನ್ನು ತಂದರು. ಬಕಮುಖಿ ದೇವತೆಯ ಪ್ರತಿಮಾಶಾಸ್ತ್ರ ನದಿಗಳ ನಾಡಾದ ಬಂಗಾಲಕ್ಕೆ ಸಹಜವಾದುದಾಗಿತ್ತು. ಕೆರೆ, ಸರೋವರ, ಜವುಳು ಪ್ರದೇಶಗಳು ವಿಪುಲವಾಗಿದ್ದ ಬಂಗಾಲವು ಮೀನು, ಬಕ ಮುಂತಾದ ಮತ್ಸ್ಯಭಕ್ಷಕ ಪಕ್ಷಿಗಳಿಂದ ತುಂಬಿಹೋಗಿತ್ತು. ದುರ್ಗಾ, ತಾರಾ, ಕಾಲಿಕಾ ದೇವತೆಗಳ ಪ್ರತಿಮಾಶಾಸ್ತ್ರ ಮತ್ತು ಪೂಜಾವಿಧಾನವನ್ನು ತಂದಂತೆಯೇ ಸೇನ ಮನೆತನದ ರಾಜಪುರೋಹಿತರು ವಗಲಾಮುಖಿಯನ್ನು ಬಂಗಾಲದಿಂದ ಹಿಮಾಚಲಪ್ರದೇಶಕ್ಕೆ ತಂದರು. ಬಂಗಾಲಿ ಲಿಪಿಯಲ್ಲಿ ರಘುನಂದನ ರಚಿಸಿದ ಸಂಸ್ಕೃತ ಹಸ್ತಪ್ರತಿಯನ್ನು ಈ ಲೇಖಕನು ಮಾಂಡಿಯಲ್ಲಿರುವ ಹಿಮಾಚಲ ಲೋಕಸಂಸ್ಕೃತಿ ಸಂಸ್ಥಾನದ ಭಂಡಾರದಲ್ಲಿ ನೋಡಿರುವನು. ಇದೆಲ್ಲ ದೇವತಾ ಪ್ರಸರಣಕ್ಕೆ ಅದು ವಸ್ತುನಿಷ್ಠ ಪ್ರಮಾಣವಾಗಿದೆ. ಹಿಮಾಚಲಪ್ರದೇಶದಲ್ಲಿಯ ಮಹಿಷಮರ್ದಿನಿ ದುರ್ಗಾಳ ಪ್ರತಿಮಾಶಾಸ್ತ್ರ ಮತ್ತು ಪೂಜಾವಿಧಾನಗಳು ಬಂಗಾಲ ಮತ್ತು ಕರ್ನಾಟಕದಲ್ಲಿ ಇದ್ದವುಗಳನ್ನೇ ಹೋಲುತ್ತವೆ. ಆವಳ ಪೂಜೆಯನ್ನು ದೇವಿಪುರಾಣ ಮತ್ತು ಮಾರ್ಕಂಡೇಯಪುರಾಣಗಳಲ್ಲಿ ಹೇಳಿರುವ ತರಹವೇ ಮಾಡಲಾಗುತ್ತದೆ.

ಈ ಪುರಾಣಗಳ ಚಂಡಿ ಭಾಗವನ್ನು ಬಂಗಾಲ ಮತ್ತು ಕರ್ನಾಟಕಗಳಲ್ಲಿ ಮಾಡಲಾದಂತೆಯೆ ಇಲ್ಲೂ ಪೂಜಾ ಕಾಲಕ್ಕೆ ಪಠಣ ಮಾಡಲಾಗುತ್ತದೆ.

ತಾರಾ: ತಾರಾ ದೇವತೆಗೆ ನಾಲ್ಕು ಕೈಗಳಿದ್ದು ಒಂದರಲ್ಲಿ ಕಮಲ, ಇನ್ನೊಂದರಲ್ಲಿ ಮಾನವ ತಲೆಬುರುಡೆ ಹಿಡಿದಿರುವಳು. ತಲೆಯನ್ನು ಸರ್ಪ ಅಲಂಕರಿಸಿದೆ. ಇನ್ನೆರಡು ಕೈಗಳಲ್ಲಿ ಖಡ್ಗ, ಅಂಕುಶ ಹಿಡಿದಿರುವಳು. ವಸಿಷ್ಠ ಋಷಿಯು ತಾರಾ ದೇವಿಯ ಉಪಾಸನೆ ಮತ್ತು ಅರ್ಚನಾವಿಧಿಯನ್ನು ಕಲಿಯಲು ಹೇಗೆ ಭಾರತದಿಂದ ತಿಬೆಟಿಗೆ ಹೋದನೆಂಬುದನ್ನು ಹಲವಾರು ತಾಂತ್ರಿಕ ಗ್ರಂಥಗಳು ಹೇಳುತ್ತವೆ.

ಋಷಿ ವಸಿಷ್ಠನು ವೈದಿಕ ವಿಧಿಗಳಿಗನುಗುಣವಾಗಿ ಸುದೀರ್ಘ ತಪ, ಧ್ಯಾನಗೈದರೂ ಯಶಸ್ಸು ದೊರೆಯಲಿಲ್ಲ ಎಂದು ಹೇಳಲಾಗುತ್ತದೆ. ಸಿಟ್ಟಿಗೆದ್ದು ಋಷಿಯು ದೇವಿಯನ್ನು ಶಪಿಸಿದನು. ದೇವಿ ಪ್ರತ್ಯಕ್ಷಳಾಗಿ ತಪ್ಪು ಪದ್ಧತಿಯನ್ನು ಅನುಸರಿಸುತ್ತಿರುವಿ ಎಂದು ಅವನಿಗೆ ತೋರಿಸಿಕೊಟ್ಟಳು. ಅವಳಿಗೆ ಮಾಡುವ ಧ್ಯಾನಾರ್ಚನೆ ವೇದಗಳಲ್ಲಿ ಕಂಡುಬರುವುದಿಲ್ಲ. ಆದರೆ, ಬೌದ್ಧವಿಧಿಗಳು

ಪ್ರಚಲಿತವಿದ್ದ ಮಹಾಚೀನದಲ್ಲಿ ಅದು ಎಲ್ಲರಿಗೂ ಗೊತ್ತಿರುವುದು. ಅಲ್ಲಿಗೆ ಹೋಗಿ ಬುದ್ಧನಿಂದ (ಬುದ್ಧನ ಅವತಾರ) ಬೋಧನೆ ಪಡೆದಿದ್ದಾದರೆ ಯಶಸ್ವಿಯಾಗುವಿ ಎಂದು ಅವಳು ವಸಿಷ್ಠನಿಗೆ ಹೇಳಿದಳು.

ವಸಿಷ್ಠನು ಹಿಮಾಲಯದ ಓರೆಯಲ್ಲಿರುವ (ಹಿಮವತ್ ಪಾರ್ಶ್ವ) ಮಹಾಚೀನಕ್ಕೆ ಹೋದ. ಮಹಾಚೀನ ಮತ್ತು ಚೀನ ಎರಡೂ ಒಂದೇ ಅಲ್ಲ. ಏಕೆಂದರೆ, ಅವು ದೇವಿಯರ ಆರಾಧನೆಗೆ ಪ್ರಸಿದ್ಧವಾದ ಎರಡು ಬೇರೆ ಬೇರೆ ಪೀಠ ಅಥವಾ ಸ್ಥಳಗಳಾಗಿದ್ದವು ಎಂದು ಸಮ್ಮೋಹನತಂತ್ರದಂಥ ತಾಂತ್ರಿಕ ಗ್ರಂಥಗಳು ಹೇಳುತ್ತವೆ.

ಬುದ್ಧನು ಅತಿ ಪಾನಮತ್ತನಾಗಿ ನಗ್ನ ಸ್ತ್ರೀಪುರುಷರಿಂದ ಸುತ್ತುವರಿಯಲ್ಪಟ್ಟಿದ್ದ. ಅವರೆಲ್ಲ ಮಾಂಸ, ಮದಿರೆ, ಪ್ರಣಯಗಳಲ್ಲಿ ರಮಿಸುತ್ತಿದ್ದರು. ಇದನ್ನು ಕಂಡು ವಸಿಷ್ಠ ಆಶ್ಚರ್ಯಚಕಿತನಾದ. ವಸಿಷ್ಠನು ತನ್ನ ಅಚ್ಚರಿ ವ್ಯಕ್ತಮಾಡುತ್ತ ವೇದಸೂತ್ರಕ್ಕೆ ವಿರುದ್ಧವಾದ ಇಂಥ ಅಶುದ್ಧ ಆಚರಣೆಗಳ ಅರ್ಥವೇನೆಂದು ಪ್ರಶ್ನಿಸಿದ.

ಶಿವನು ಕೂಡ ಶಕ್ತಿ ದೇವತೆಯಿಲ್ಲದೆ ನಿಷ್ಕ್ರಿಯಾಭಾವಿಯಾಗಿದ್ದ. ಆದುದರಿಂದ, ಸಾಮಾನ್ಯ ಜನರನ್ನು ಸ್ತ್ರೀಯರೊಂದಿಗೆ ಸಂಬಂಧವಿಟ್ಟುಕೊಂಡುದಕ್ಕೆ ದೂಷಿಸಲಾಗದು ಎಂದು ಬುದ್ಧನು ವಸಿಷ್ಠನಿಗೆ ತಿಳಿಸಿ ಹೇಳಿದ. ಅವನು ವಸಿಷ್ಠನಿಗೆ ಪಂಚ 'ಮ' ಗಳ ದೀಕ್ಷೆ ನೀಡಿದ: ಮದ್ಯ, ಮಾಂಸ,ಮತ್ಸ್ಯ, ಮುದ್ರಾ (ಆಸನ) ಮತ್ತು ಮೈಥುನ. ವಸಿಷ್ಠನಿಗೆ ಆಧ್ಯಾತ್ಮಿಕ ಯಶಸ್ಸು ಪ್ರಾಪ್ತವಾಯಿತು. ರುದ್ರಯಾಮಲ ಈ ಕತೆಯನ್ನು ಹೇಳುತ್ತದೆ. ಯೋಗಿನಿತಂತ್ರ ಅದನ್ನು ದೃಢೀಕರಿಸುತ್ತ, ವಸಿಷ್ಠನು ಮಹಾಚೀನದಿಂದ ಹಿಂತಿರುಗಿದ ಬಳಿಕ ಕಾಮಾಖ್ಯಾ ಗುಡ್ಡದ ಮೇಲೆ ಧ್ಯಾನ ಮಾಡಿದನೆಂಬ ಹೆಚ್ಚಿನ ವಿವರಗಳನ್ನು ಸೇರಿಸುತ್ತದೆ. ಹೀಗೆ, ಕಾಮರೂಪವು ತಾರಾಸೂತ್ರದ ವಿಕಾಸಕ್ಕೆ ಫಲವತ್ತಾದ ನೆಲವಾಯಿತು. ಇದನ್ನು ಬೌದ್ಧ ತಾಂತ್ರಿಕ ಗ್ರಂಥವಾದ ಮಂಜುಶ್ರೀ-ಮೂಲ-ಕಲ್ಪದಲ್ಲೂ ಹೇಳಿದೆ.

ಧಾರ್ಮಿಕ ವಿಧಿಯ ಕೊನೆಯಲ್ಲಿ ದೇವಿಗೆ ಅಡ್ಡಬೀಳಲು ವಿಧಿಸಿದ ಪ್ರಾಣಮಂತ್ರದಲ್ಲಿ, ಅವಳು ನೀಲಪರ್ವತದಲ್ಲಿ ಯೋನಿರೂಪದಲ್ಲಿದ್ದು ಕಾಮಾಖ್ಯಾ ಎಂಬ ಹೆಸರು ಪಡೆದಿದ್ದಾಳೆ ಎಂಬ ವರ್ಣನೆ ಕಂಡುಬರುವುದು:

**ಕಾಮಾಖ್ಯಾ ವರದೇದೇವಿ ನೀಲಪರ್ವತ ವಾಸಿನೀ**

**ತ್ವಮ್ ಹಿ ಜಗನ್ಮಾತಾ ಯೋನಿಮುದ್ರೇ ನಮಸ್ತುತೇ।**

ಮಾವೊರಿಯಂಥ ಪೊಲಿನೇಶಿಯನ್ ಭಾಷೆಗಳಲ್ಲಿ 'ತಾರಾ' ಎಂದರೆ 'ಯೋನಿ'. ಕಿರವತ್ತಿ ದ್ವೀಪದಲ್ಲಿ ತರವ ಎಂಬ ರೇವು ಇದೆ. ಅದು ಪುರಾತನ ಯಮಕೋಟಿಪುರ ನಗರ ಆಗಿರಬಹುದು. ಅಲ್ಲಿ ತಾರಾ ದೇವತೆಯನ್ನು ಪೂಜಿಸುತ್ತಿದ್ದು ಅದು ಮೂಲ 'ತಾರಾ' ಪೀಠವಾಗಿರಲೂಬಹುದು. ಇಂಡೋನೇಶ್ಯನ್ ಜನರೂ ದೇವಿ ತಾರಾಳನ್ನು ಪೂಜಿಸುತ್ತಿದ್ದರು. ಅವಳನ್ನು ಅವರು ಕಾಂಗ್ಜೆಂಗ್-ರತು-ಕಿದುಲ್ (ಕಾಂಗ್ಜೆಂಗ್= ಉನ್ನತ, ರತು = ರಾಣಿ, ಕಿದುಲ್ = ದಕ್ಷಿಣ) ಎಂದು ಕರೆಯುವರು.

ಅವಳು ನಾವಿಕರನ್ನು ಸಮುದ್ರದ ಬಿರುಗಾಳಿ ಚಂಡಮಾರುತಗಳಿಂದ ರಕ್ಷಿಸಿ ಸಹಾಯಮಾಡುತ್ತಾಳೆ. ಇಂಡೋನೇಶ್ಯಾದಲ್ಲೂ ತಾರಾ ಎಂಬ ರೇವು ಇದೆ. ಇಂಡೋನೇಶ್ಯಾದ ಜನರು ಬೌದ್ಧಯುಗದಲ್ಲಿ ಅವಳನ್ನು ಬುದ್ಧಶಕ್ತಿ ಎಂದು ಸ್ವೀಕರಿಸಿದಂತೆ ಕಾಣುವುದು. ಅತಿಶ ದೀಪಂಕರನು ತಿಬೆಟಿಗೆ ಹೋಗುವ ಪೂರ್ವದಲ್ಲಿ ಇಂಡೋನೇಶ್ಯಾಕ್ಕೆ ಹೋಗಿದ್ದುದು ನಮಗೆ ಗೊತ್ತಿದೆ. ಹಾಗೆಯೇ, ತಿಬೆಟಿನ ಕೆಲವು ಬೌದ್ಧ ತಾಂತ್ರಿಕರು ಬೊರೊಬುದೂರ ಮುಂತಾದ ಬೌದ್ಧ ದೇವಾಲಯಗಳನ್ನು ಸಂದರ್ಶಿಸಿರಬಹುದು. ಮತ್ತು ತಾರಾ ದೇವತೆಯ ಪ್ರತಿಮಾಶಾಸ್ತ್ರ ಮತ್ತು ಅರ್ಚನಾವಿಧಾನಗಳನ್ನು ದಕ್ಷಿಣ ಸಮುದ್ರದಿಂದ ತಿಬೆಟಿಗೆ ಒಯ್ದಿರಬಹುದು. ವಸಿಷ್ಠ ಋಷಿಯು ಇದನ್ನು ತಿಬೆಟಿನಿಂದ (ಮಹಾಚೀನ) ಆಸಾಮದ ಕಾಮಾಖ್ಯಾಗೆ ತಂದಿರಬಹುದು. ಸುಕೇತದ ಬಳಿಯ ರಿವಲ್ಸರಕ್ಕೆ ತೀರ್ಥಯಾತ್ರೆಗೆ ಹೋದಾಗ ಆಸಾಮ ಮತ್ತು ಬಂಗಾಲಗಳ ಬೌದ್ಧ ಸಿದ್ಧಾಚಾರ್ಯರು ತಾರಾ ದೇವತೆಯ ಪ್ರತಿಮಾಶಾಸ್ತ್ರ ಮತ್ತು ಅರ್ಚನಾವಿಧಾನವನ್ನು ರಿವಲ್ಸರಕ್ಕೆ ತಂದರು. ಹೀಗೆ, ತಾರಾ ದೇವತೆಯ ಅರ್ಚನಾವಿಧಾನ ಹಿಮಾಚಲ ಬೌದ್ಧರಲ್ಲಿ ಜನಪ್ರಿಯಗೊಂಡಿತು. ಮತ್ತು ನಂತರ ಅದು ಹಿಂದೂ ದೇವಗಣವನ್ನು ಪ್ರವೇಶಿಸಿತು. ತಾರಾ ಪ್ರತಿಮಾಶಾಸ್ತ್ರ ಮತ್ತು ಅರ್ಚನಾವಿಧಾನ ಪೊಲಿನೇಶಿಯಾ ಮತ್ತು ಇಂಡೋನೇಶ್ಯಾದಿಂದ ದಕ್ಷಿಣ ಸಮುದ್ರಗಳನ್ನು ದಾಟಿ, ತಿಬೆಟ ಹಿಮಾಲಯ ತಲುಪಿ, ಬ್ರಹ್ಮಪುತ್ರಾ ಕಣಿವೆಗೆ ಇಳಿದು, ಅಲ್ಲಿಂದ ಬಂಗಾಲದ ಮೂಲಕ ಹಿಮಾಚಲ ಪ್ರದೇಶಕ್ಕೆ ಬಂತು. ಅದೇ ರೀತಿ, ಲ್ಯಾಟಿನ್ ಅಮೆರಿಕದಿಂದ ಹೊರಟು ದಕ್ಷಿಣಸಮುದ್ರಗಳನ್ನು ದಾಟಿ ಪೊಲಿನೇಶಿಯಾ ಮತ್ತು ಇಂಡೋನೇಶಿಯಾ ಮೂಲಕ ಬಂಗಾಲ ಕೊಲ್ಲಿಯ ತಟವನ್ನು ತಲುಪಿತು.

◈◈◈

ಅಧ್ಯಾಯ ೫

# ಕಾಲಿಕಾ ದೇವತೆಯ ಮೂಲ ಪ್ರತಿಮಾಶಾಸ್ತ್ರ ಮತ್ತು ಹಿಮಾಚಲಪ್ರದೇಶದಲ್ಲಿ ಪ್ರಸರಣ

ಹಿಮಾಲಯದ ಜನರು ಸಾಮಾನ್ಯವಾಗಿ ಶಿವನನ್ನು, ಕೆಲವೊಮ್ಮೆ ಸಿಂಹಾರೂಢ ದೇವಿಯಾದ ಅವನ ಮಡದಿಯನ್ನು ಪೂಜಿಸುವರು. ಅವಳದು ಸುಂದರ ಮೈಬಣ್ಣ. ಅವಳನ್ನು ದುರ್ಗಾ, ಉಮಾ, ಮಹೇಶ್ವರಿ, ಅನ್ನಪೂರ್ಣಾ ಮತ್ತು ಇಂಥ ಇತರ ಹೆಸರುಗಳಿಂದ ಕರೆಯುವರು. ಕಾಲಿಕಾ ದೇವತೆಯ ಪ್ರತಿಮಾಶಾಸ್ತ್ರ ಮತ್ತು ಆರಾಧನೆ ೮೦೦ ವರ್ಷಗಳ ಹಿಂದೆ ೧೩ನೆಯ ಶತಮಾನದ ಆದಿಯಲ್ಲಿ ಸೇನ ಅರಸರ ಇತರ ಆಸ್ಥಾನಿಕರ ಜೊತೆ ಹಿಮಾಚಲಪ್ರದೇಶಕ್ಕೆ ಬಂದಂತಿದೆ. ತದನಂತರ ಬಂಗಾಲಿ ವಲಸಿಗರು ಸೇನ ಅರಸರ ಮತ್ತು ಆಸ್ಥಾನಿಕರ ಈ ಪರಂಪರೆಯನ್ನು ಮುಂದುವರೆಸುತ್ತ ಹೊಸ ಊರುಗಳಲ್ಲಿ ಕಾಲಿ ಮಂದಿರಗಳನ್ನು ನಿರ್ಮಿಸಿದರು. ಉದಾ: ಸಿಮ್ಲಾದಲ್ಲಿ ಮತ್ತು ಹೊಸ ದಿಲ್ಲಿಯ ರೀಡಿಂಗ್ ರಸ್ತೆಯಲ್ಲಿ ಕಟ್ಟಿದ ಕಾಲಿ ಗುಡಿಗಳು. ಹೀಗೆ, ಅವರು ಇಂಥ ದೇವಸ್ಥಾನ

ಕೇಂದ್ರಗಳಲ್ಲಿ ವಿವಿಧ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ತಮ್ಮ ಬಂಗಾಲಿ ಸಂಸ್ಕೃತಿ ಮತ್ತು ಪರಂಪರೆಯನ್ನು ಸಂರಕ್ಷಿಸಲೆತ್ನಿಸುವರು. ಕೆಲವು ಸೇನ ಅರಸರು ಕಾಲಿ ದೇವಾಲಯಗಳನ್ನು ಕಟ್ಟಿಸಿ ಅವುಗಳಿಗೆ ಸೂಕ್ತ ಹೆಸರಿಟ್ಟರು. ಉದಾ: ಶ್ಯಾಮಸೇನನು ತಾನು ಕಟ್ಟಿಸಿದ ದೇವಾಲಯದ ದೇವತೆಯನ್ನು ಶ್ಯಾಮಕಾಲಿ ಎಂದು ಕರೆದ. ಅದೇ ರೀತಿ, ಸಿದ್ಧಸೇನನು ತಾನು ಕಟ್ಟಿಸಿದ ದೇವಾಲಯದ ದೇವತೆಗಳನ್ನು ಸಿದ್ಧಕಾಲಿ ಎಂದು ಕರೆದ.

ಈಗ ಏಳುವ ಪ್ರಶ್ನೆಯೆಂದರೆ: ಕಾಲಿ ದೇವತೆಯ ಪ್ರತಿಮಾಶಾಸ್ತ್ರ ಹಾಗೂ ಆರಾಧನೆ ಹುಟ್ಟಿದ ಮೂಲ ಸ್ಥಳ ಯಾವುದು? ಕಪ್ಪುಬಣ್ಣದ, ಬಿಚ್ಚುಗಣ್ಣಿನ, ಹಿರಿದ ನಾಲಗೆಯ, ರುಂಡಮಾಲೆ ಧರಿಸಿದ ಈ ದೇವತೆಯನ್ನು ಮೊದಲು ಕಲ್ಪಿಸಿಕೊಂಡ ಮತ್ತು ರೂಪಿಸಿದ ಜನ ಯಾರು? ಕಾಲಿಕಾ ದೇವತೆಯ ಉಗಮಸ್ಥಾನ ವಂಗದೇಶವೆಂದು ಆದ್ಯ ಸ್ತೋತ್ರಮ್ ಸೂಚಿಸುತ್ತದೆ:

**ಕಾಲಿಕಾ ವಂಗದೇಶೇಚ ಅಯೋಧ್ಯಾಯಾಂ ಮಹೇಶ್ವರೈ**

**ವಾರಣಾಸ್ಯಾ ಅನ್ನಪೂರ್ಣಾ ಗಯಾಕ್ಷೇತ್ರೇ ಗಾಯೇಶ್ವರೀ ।**

ಮಹೇಶ್ವರಿ, ಅನ್ನಪೂರ್ಣಾ ಮುಂತಾದ ದೇವತೆಗಳ ಪ್ರತಿಮಾಶಾಸ್ತ್ರ ಮತ್ತು ಅವರ ಆರಾಧನಾವಿಧಾನ ಕಾಲಿಕಾ ದೇವತೆಯವುಗಳಿಗಿಂತ ಭಿನ್ನವಾಗಿವೆ. ಹಿಂದೂ ದೇವಗಣದಲ್ಲಿ ನರಸಿಂಹನನ್ನು ಹೊರತುಪಡಿಸಿ ಲ್ಯಾಟಿನ್ ಅಮೆರಿಕ ಮತ್ತು ಪೊಲಿನೇಶಿಯಾದ ದೇವತೆಗಳಂತೆ ನಾಲಗೆ ಹಿರಿದುಕೊಂಡ ದೈವ ಅಥವಾ ದೇವಿ ಕಂಡುಬರುವುದಿಲ್ಲ. ಹುಲಿಯ ಮೇಲೆ ಕುಳಿತ ಹಿಂದೂದೇವತೆಗಳನ್ನು ಮಾನವಾಕಾರದಲ್ಲಿ ರೂಪಿಸಲಾಗಿರುವುದಲ್ಲದೆ ಪಶುಪಕ್ಷಿಗಳಂತೆ ಅಲ್ಲ. ಪಶು ಪಕ್ಷಿಗಳನ್ನು ಬಹುಮಟ್ಟಿಗೆ ದೇವತೆಗಳಿಗೆ ವಾಹನ ಮಾಡಲಾಗಿದೆ. ಇದಕ್ಕೆ ಆನೆತಲೆಯ ಗಣೇಶ ಅಪವಾದ. ಅವನೂ ಕಾಲಿಕಾ, ನರಸಿಂಹರಂತೆ ವಿಲಕ್ಷಣವಾಗಿ ಕಾಣಿಸುತ್ತಾನೆ. ಪ್ಯಾಸಿಫಿಕ್ ಮಹಾಸಾಗರ ಮತ್ತು ಪೆರು ಮುಂತಾದ ಲ್ಯಾಟಿನ್ ಅಮೆರಿಕ ದೇಶಗಳಲ್ಲಿ ಕಾಲಿಕಾಳಂತೆ ನಾಲಗೆ ಹಿರಿದ, ಬಿಚ್ಚುಗಣ್ಣಿನ ಅನೇಕ ವಿಗ್ರಹಗಳು ಕಂಡುಬರುತ್ತವೆ. ಹಸಿದ ಹುಲಿಯಂತೆ ಶತ್ರುಗಳನ್ನು ಹರಿದು ತಿನ್ನಲು ಕಾಯುತ್ತಿರುವರೇನೊ ಎಂಬಂತೆ. ಹಾಗೆ ನೋಡಿದರೆ, ಪೊಲಿನೇಶ್ಯನ್ ದ್ವೀಪಗಳ ಮಾವೊರಿಗಳಂಥ ಅನೇಕ ಜನಾಂಗದವರು ಶತ್ರುವನ್ನು ಎದುರಿಸುವಾಗ ಅವರನ್ನು ಅಂಜಿಸಲು ಹುಲಿಯ ಹಾಗೆ ಭಂಗಿ ತಾಳುತ್ತಾರೆ. ಕಾಲಿಕಾ ದೇವತೆಯು ಯುದ್ಧ ಕ್ಷೇತ್ರದಲ್ಲಿ ಅಸುರರನ್ನು ಸಂಹರಿಸುವ ಸಮರದೇವತೆಯೂ ಆಗಿರುವಳು.

ಡಕಾಯಿತಿ ಮಾಡುವ ಮುಂಚೆ ಧೈರ್ಯ, ಶಕ್ತಿ, ಯಶಸ್ಸಿಗಾಗಿ ಕಾಲಿಕಾದೇವತೆಯನ್ನು ಪ್ರಾರ್ಥಿಸುತ್ತಿದ್ದ ಚಿತ್ಪುರದ ಚಿತೆ ದಾಕಾತನಂಥ ಹಲವಾರು ಡಕಾಯಿತರು ಬಂಗಾಲದಲ್ಲಿದ್ದುದನ್ನು ಕಾಣುತ್ತೇವೆ. ಉಗ್ರಗಾಮಿಗಳು, ದೇಶಭಕ್ತ ಯುವಕರು ತಮ್ಮ ದೇಶವನ್ನು ಸ್ವತಂತ್ರಗೊಳಿಸಲೋಸುಗ ಪ್ರಾಣತ್ಯಾಗಕ್ಕೂ ಸಿದ್ಧರಾದರು. ಬಂಗಾಲದ ಮತ್ತಿತರ ಕಡೆಯ ಬ್ರಿಟಿಷ್ ವಸಾಹತುಶಾಹಿಗಳ ಹೃದಯದಲ್ಲಿ ಭಯದ ಅಲೆಗಳನ್ನು ಬಿತ್ತಿದರು. ಇವರು ಕೂಡ ತಮಗೆ ಧೈರ್ಯ, ಶಕ್ತಿ, ಯಶಸ್ಸು ದಯಪಾಲಿಸುವಂತೆ ಈ ದೇವತೆಯನ್ನು ಮಾತೃಭೂಮಿಯೆಂದು ಪರಿಗಣಿಸಿ ಪ್ರಾರ್ಥಿಸಿದರು.

ಕ್ರಿ.ಶ. ೭ನೆಯ ಶತಮಾನದಲ್ಲಿ ಟಿಬೆಟಿನಲ್ಲಿ ಗುರು ಪದ್ಮಸಂಭವನಿಗೆ ನೆರವು ನೀಡಿದ ಬಂಗಾಲಿ ಲಾಮಾ ಕಮಲಾಶಿಲಾನು ಕಾಲಿಕಾ ದೇವತೆಯ ವಿಗ್ರಹದ ನಂತರ ಕರುಚುಲ್ಲ ದೇವತೆಯ ವಿಗ್ರಹವನ್ನು ಪರಿಚಯಿಸಿದನು. ಕಾಮ, ಮೋಹ, ಮೊದಲಾದ ಭಾವನೆಗಳು ಮತ್ತು ಬಂಧನಗಳಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳಲು ಮನುಷ್ಯನ ಮನಸ್ಸಿನಲ್ಲಿರುವ ತುಮುಲವನ್ನು ಸಂಕೇತಿಸಲು ಕಮಲಾಶಿಲಾನು ಕಲಿಯಂತಿರುವ ದೇವತೆಯನ್ನು ಚಿತ್ರಿಸಿದನು. ತರುವಾಯದಲ್ಲಿ ಮಹಾಯಾನ ಮತ್ತು ವಜ್ರಯಾನ ಪಂಥದ ಲಾಮಾಗಳು ಅದನ್ನು ಇನ್ನೂ ಬೆಳೆಸಿ ಡಾಕಿನಿಯರು ಮತ್ತು ಯೋಗಿನಿಯರ ದೇವಗಣವನ್ನು ವಿಶದೀಕರಿಸುತ್ತಾರೆ. ಹಾಗೆ ನೋಡಿದರೆ, ಯೋನಿಯನ್ನಾರಾಧಿಸುವ ಬೌದ್ಧ ತಾರಾಪಂಥವು ಟಿಬೆಟಿನಲ್ಲೆಲ್ಲೂ ತಾಂತ್ರಿಕ ಲಾಮಾರಲ್ಲಿ ಉಚ್ಛ್ರಾಯಗೊಂಡಿತೆಂದು ತಿಳಿದುಬರುತ್ತದೆ. ಅವರು ಅದನ್ನು ಎಲ್ಲೆಡೆಗಳಿಗಿಂತ ಮೊದಲು ವಿಕಸನಗೊಂಡಿರಬಹುದಾಗಿದ್ದ ತಾರಾ ನಾಡಾಗಿದ್ದ ಇಂಡೋನೇಶಿಯಾದ ಬೊರೊಬುದೂರಿಗೆ ಹೋಗುತ್ತಿದ್ದುದುಂಟು. ಅತಿಶ ದೀಪಂಕರನೂ ಇಂಡೋನೇಶ್ಯದ ದೇವಾಲಯಗಳನ್ನು ಸಂದರ್ಶಿಸಿದ ನಂತರ ಟಿಬೆಟಿಗೆ ಹೋಗಿ ಖಂಡಪ ಎಂದು ಕರೆಯುವ ಲಾಮಾತ್ಮಕ ಮಹಾಯಾನ ಪಂಥವನ್ನು ಸ್ಥಾಪಿಸಿದ. ಇಂಥ ಲಾಮಾಗಳು ತಾರಾಪಂಥವನ್ನು ಟಿಬೆಟಿಗೆ ತಂದಿರಬಹುದು. ಯೋಗಿನಿ ತಂತ್ರಮ್ ಹೇಳುವಂತೆ, ವಸಿಷ್ಠನು ಅಲ್ಲಿಂದ ಆಸಾಮದ ಕಾಮಾಖ್ಯಾ ಗಿರಿಗಳಿಗೆ ಅಥವಾ ನೀಲಾಚಲಕ್ಕೆ ತಂದನು. (ತಾರಾಮಾರಾಧ್ಯಾಮಾಸ ತದಾ ನೀಲಾಚಲೇ ಮುನಿ: ಯೋಗತಂತ್ರಮ್). ನಿಜಕ್ಕೂ ಆಸಾಮದ ನೀಲಾಚಲವೆಂದು ಕರೆಯಲಾಗುವ ಕಾಮಾಖ್ಯಾಗಿರಿಯ ಮೇಲೆ ಯೋನಿ ಪ್ರತೀಕ ನೋಡಸಿಗುತ್ತದೆ. ಕಾಮಾಖ್ಯಾ ಎಂಬ ಹೆಸರನ್ನು ಸ್ಥಳೀಯ ಕಿರಾತ (ಮಂಗಲಾಯ್ಡ್) ಬೋಡೊ ಭಾಷೆಯಿಂದ ಇಲ್ಲವೆ ಆಸ್ಟ್ರಿಕ್ ಮಾತಾಡುವ ಖಾಸಿಗಳು ಮುಂತಾದ ಜನರಿಂದ ತೆಗೆದುಕೊಂಡಿದೆ. ಖಾಸಿ ಭಾಷೆಯಲ್ಲಿ ಕಾ-ಮೈ-ಖಾ ಎಂದರೆ ತಂದೆಯ ತಾಯಿ ಅರ್ಥಾತ್ ಅದ್ಯಾ ಅಥವಾ ಅಜ್ಜಿ. ಆಸ್ಟ್ರೋನೇಶ್ಯನ್ ಕಾಲಿ ಮತ್ತು ತಾರಾರನ್ನು ಬೇರೆ ಜನಾಂಗಗಳಿಂದ ಬಂದ ದೇವಿಯರು ಮತ್ತು ವಿಗ್ರಹಗಳೊಂದಿಗೆ ಸಂಕೀರ್ಣ ಹಿಂದೂಧರ್ಮದಲ್ಲಿ ಒಗ್ಗೂಡಿಸಲಾಗಿದೆ. ಮತ್ತು ಹತ್ತು ಶಕ್ತಿಯರ ಮತ್ತು ದೇವಿಯರ ದೇವಗಣದಲ್ಲಿ ಸೇರಿಸುವಂತೆ ಸಮೀಕರಿಸಲಾಗಿದೆ

ಆರಂಭದಲ್ಲಿ ಸ್ವತಃ ತಾವೇ ಬೇಟೆಗಾರರೂ ನರಹಂತಕರೂ ಆಗಿದ್ದ ಮೂಲನಿವಾಸಿಗಳು ಶಕ್ತಿದೇವತೆಗಳನ್ನು ಭಯಾನಕ ಮತ್ತು ಯುದ್ಧಪ್ರಿಯರಾಗಿ ಕಲ್ಪಿಸಿಕೊಂಡಿದ್ದರು. ತರುವಾಯದ ಕೃಷಿ ಸಮುದಾಯಗಳಲ್ಲಿ ದೇವತೆಯನ್ನು ಬೆಳೆಗಳು, ವ್ಯಾಪಾರ ವಹಿವಾಟುಗಳಲ್ಲಿ ಯಶ ದಯಪಾಲಿಸುವ ಭೂತಾಯಿಯೆಂದು ಪರಿಗಣಿಸಲಾಯಿತು. ಖಡ್ಗ ಹಿಡಿದ ಬಲಗೈಗಿಂತ ವರಾಭಯ ಮುದ್ರೆಯುಳ್ಳ ಎಡಗೈಗೆ ಅಧಿಕ ಮಹತ್ವ ನೀಡಲಾಯಿತು. ಕಾಪಾಲಿಕರು ಮತ್ತು ರಾಜರು ನರಬಲಿ ನೀಡುತ್ತಿದ್ದರು. ಸಾಮಾನ್ಯ ಭಕ್ತರು ಪ್ರಾಣಿಬಲಿ ನೀಡುತ್ತಿದ್ದರು. ಅದೆಲ್ಲ ಕ್ರಮೇಣ ಬದಲಾಗಿ ಕುಂಬಳಕಾಯಿ, ಕಬ್ಬುಗಳ ಬಲಿ ಆರಂಭವಾಯಿತು. ಹಿಮಾಲಯದಲ್ಲಿರುತ್ತಿದ್ದ ಬೌದ್ಧ ಲಾಮಾಗಳು ಪ್ರಾಣಿ ಬಲಿ ಕೊಡದೆ ಕಣಕದಿಂದ ಮಾಡಿದ ಪ್ರಾಣಿಗಳನ್ನು ಬಲಿಕೊಡುತ್ತಿದ್ದರು. ಅವುಗಳನ್ನು

ಗ್‌ತೋಮಾರ್ (ಪಿಶ್ಚಪಶು) ಎಂದು ಕರೆಯುತ್ತಿದ್ದರು. ಈ ಪ್ರವೃತ್ತಿಗೆ ಅಪವಾದಗಳೂ ಇದ್ದವು. ಇವತ್ತಿನ ಕೋಲ್ಕತಾದಲ್ಲಿ ಕೂಡ ಪ್ರಾಚೀನ ಶಿಲ್ಪಗಳನ್ನು ಹೋಲುವ ಈ ದೇವತೆಯನ್ನು ಅವಳ ಭಯಂಕರ ಮೂಲ ರೂಪದಲ್ಲಿ ಆರಾಧಿಸುವುದನ್ನು ಪುನರುಜ್ಜೀವಿಸುವ ಸಂಘಗಳಿರುವುದನ್ನು ಬಲ್ಲೆವು.

ಕೊಲ್ಲಿಗೆ ಹತ್ತಿಕೊಂಡಿರುವ ಇತರ ದೇಶಗಳನ್ನು ಕಲಿಂಗ, ಪುಂಡ್ರ, ಸುಹ್ಮ ಇತ್ಯಾದಿಯಾಗಿ ಕರೆಯಲಾಗುತ್ತಿತ್ತು. ಇವುಗಳನ್ನು ಸಾಗರೋತ್ತರ ದೇಶಗಳಾದ ಇಂಡೋನೇಶಿಯಾ ಮತ್ತು ಲ್ಯಾಟಿನ್ ಅಮೆರಿಕ ಮತ್ತು ಪಾಲಿನೇಶ್ಯನ್ ದ್ವೀಪಗಳೊಂದಿಗೆ ಕೊಲ್ಲಿಯು ಜೋಡಿಸುತ್ತದೆ. ಭೂದೇವಿಯ ಪಂಚಾಮಾಮಾ ವಿಗ್ರಹ ಮತ್ತು ಆರಾಧನೆಯು ಪೆರುದಿಂದ ಪ್ಯಾಸಿಫಿಕ್ ಮತ್ತು ಹಿಂದೂ ಮಹಾಸಾಗರಗಳ ಮಾರ್ಗವಾಗಿ ಭಾರತದ ಪೂರ್ವ ಕರಾವಳಿಗೆ ಬಂತು. ತದನಂತರ ಅದನ್ನು ಬಂಗಾಲ ಕೊಲ್ಲಿ ಮಾರ್ಗವಾಗಿ ಪೂರ್ವಭಾರತದ ವ್ಯಾಪಾರಿಗಳು, ನಾವಿಕರು ಮತ್ತು ನಾಥ ಯೋಗಿನಿಯರು ತಂದರು. ಕಲಿಂಗದ ಜನರು ವ್ಯಾಪಾರ ವಾಣಿಜ್ಯಗಳಿಗಾಗಿ ಬಾಲಿ ಮುಂತಾದ ದೂರ ದೇಶಗಳಿಗೆ ಯಾನಗೈಯುತ್ತಿದ್ದರು. ಅದರ ನೆನಪನ್ನು ಅವರ ಬಾಲಿಯಾತ್ರಾ ಉತ್ಸವದಲ್ಲಿ ಇಂದಿಗೂ ಕಾಣಬಹುದು. ತಮ್ಮ ಗಂಡಂದಿರ ಸುರಕ್ಷಿತ ಯಾನ ಮತ್ತು ಮರಳುವಿಕೆಗಾಗಿ ನಾವಿಕರ ಹೆಂಡಂದಿರು ಹೊತ್ತಿಸಿದ ದೀಪಗಳನ್ನು ನದಿ ನೀರಿನಲ್ಲಿ ತೇಲಿಬಿಡುತ್ತ ಸ್ತುತಿಗಳನ್ನು ಪಠಿಸುತ್ತ ಈ ಉತ್ಸವವನ್ನು ಆಚರಿಸಲು ಮಹಾನದಿಗೆ ಬರುತ್ತಿದ್ದರು. ನಮ್ಮ ಕಾಲದಲ್ಲಿ ಮಹಾನದಿಯ ನೀರಿನ ಮೇಲೆ ತೇಲುವ ಈ ದೀಪಗಳು ಬಾಲಿ ಮತ್ತು ಇಂಡೋನೇಶಿಯಾಗಳೊಂದಿಗಿದ್ದ ಕಡಲವ್ಯಾಪಾರದ ಮರೆತ ಇತಿಹಾಸವನ್ನು ಮರುಕಳಿಸುತ್ತವೆ. ಕಡಲರಾಣಿಯೂ ಪ್ರಖ್ಯಾತ ಸಂರಕ್ಷಕಿಯೂ ಆದ ತಾರಾದೇವತೆಯು ಕಡಲಾಪಾಯದಿಂದ ವ್ಯಾಪಾರಿಗಳನ್ನು ಮತ್ತು ನಾವಿಕರನ್ನು ಸಂರಕ್ಷಿಸುವಳೆಂದು ನಂಬಲಾಗಿದೆ. ಇಂಡೋನೇಶಿಯಾದಲ್ಲಿ ಅವಳ ಗುಡಿಗಳಿವೆ. ಇಂಡೋನೇಶಿಯಾ ಮತ್ತು ಪಾಲಿನೇಶಿಯಾಗಳಲ್ಲಿ ರೇವುಗಳಿಗೆ ಅವಳ ಹೆಸರಿಟ್ಟಿರುವರು. ಉದಾಹರಣೆಗೆ: ಕಿರಬತ್ತಿ ದ್ವೀಪಗಳಲ್ಲಿರುವ ತಾರಾವ. ಇಂಡೋನೇಶಿಯಾದ ಹಿಂದೂ ಮತ್ತು ಮುಸ್ಲಿಮ ಎರಡೂ ಕೋಮಿನ ನಾವಿಕರು ತಾರಾ ದೇವತೆಯನ್ನು ಕಂಜ್ಞೆಂಗ್-ರತು-ಕಿದುಲ್ ಎಂದರೆ, ದಕ್ಷಿಣದ ಅಗ್ರ ರಾಣಿ ಎಂದು ಭಯಭಕ್ತಿಯಿಂದ ಕಾಣುತ್ತಾರೆ. ಸರ್ಪದೇವತೆಯಾದ ಮನಸಾಳ ಪಂಥವು ಬಂಗಾಲದ ಚಾಂದ ಸೌದಾಗರನಂಥ ವಣಿಕರ ಮೂಲಕ ಇಂಥ ಸಾಗರೋತ್ತರ ದೇಶಗಳಿಂದ ಬಂತು. ಹಾಗೆಯೆ, ತಾರಾಪಂಥವೂ ಮೂಲತಃ ದಕ್ಷಿಣಪೂರ್ವ ಏಶಿಯಾದ ಸಾಗರೋತ್ತರ ದೇಶಗಳಿಂದ ಬಂದಿರಬಹುದು.

ವೇದ ಕಾಲದ ಋಷಿ ಅಗಸ್ತ್ಯನು ಇಂಡೋನೇಶಿಯಾವನ್ನು ಸಂದರ್ಶಿಸಿದಂತೆ ತೋರುತ್ತದೆ. ಇಂಡೋನೇಶಿಯಾದಲ್ಲಿದ್ದಾಗ ಅವನು ಶಕ್ತಿಪಂಥದ ಅನುಯಾಯಿಯಾಗಿದ್ದನೆಂದು ತಿಳಿದುಬರುತ್ತದೆ. ಇಂಡೋನೇಶಿಯಾದ ಜನರು ಗೌರವಿಸುತ್ತಿದ್ದ ಅಗಸ್ತ್ಯನ ೮ನೆಯ ಶತಮಾನದ ಶಿಲಾವಿಗ್ರಹಗಳು ಇಂಡೋನೇಶಿಯಾದ ವಸ್ತುಸಂಗ್ರಹಾಲಯಗಳಲ್ಲಿ ನೋಡಸಿಗುತ್ತವೆ. ತುತುರ

ಅಗಸ್ತ್ಯ ಎಂಬ ತಾಡೋಲೆ ಹಸ್ತಪ್ರತಿಯೊಂದಿದೆ. ಅದು ಬಾಲಿಯ ರಾಜಧಾನಿ ದೆಂಪಸ್ಸರದ ತಾಡೋಲೆ ಗ್ರಂಥಾಲಯದಲ್ಲಿದೆ. ಅದು ಅಗಸ್ತ್ಯ ಋಷಿಯ ಜೀವನ ಮತ್ತು ಆಧ್ಯಾತ್ಮಿಕ ಅನ್ವೇಷಣೆ ಮತ್ತು ಭಾರತದಿಂದ ದಕ್ಷಿಣಪೂರ್ವ ಏಶಿಯಾಕ್ಕೆ ಪಯಣಮಾರ್ಗದಲ್ಲಿ ಆದ ಆವನ ಪರಿವರ್ತನೆಯ ಬಗೆಗೆ ಹೆಚ್ಚಿನ ವಿವರಗಳನ್ನು ಒದಗಿಸಬಹುದು.

ಚಂಡಿ ಪ್ರಕರಣವನ್ನೊಳಗೊಂಡ ಮಾರ್ಕಂಡೇಯ ಪುರಾಣದ ಕರ್ತೃವಾದ ಶಾಕ್ತ ಮುನಿ ಮಾರ್ಕಂಡೇಯನು ಬಾಲಿಯಲ್ಲಿ ಇದ್ದನೆಂದು ತಿಳಿದುಬರುತ್ತದೆ. ಬೇಶಾಖಿಯಲ್ಲಿ ಅವನ ಅಂತ್ಯಸಂಸ್ಕಾರ ಜರುಗಿತೆಂದೂ ಹೇಳಲಾಗುತ್ತಿದೆ. ಬೇಶಾಖಿಯಲ್ಲಿ ಬಾಲಿಯ ಅತ್ಯಂತ ಪ್ರಾಚೀನ ಶಿವದೇವಾಲಯಗಳು ಸ್ಥಿತವಾಗಿವೆ. ಅದರಿಂದಾಗಿ ಅದು ಆದಿ ವೈಭವದ ತಾಣವಾಗಿದ್ದಂತೆಯೇ ಯಾತ್ರಾಸ್ಥಳವೂ ಆಗಿತ್ತು.

ಇಂಥ ಅಲೆಮಾರಿ ಭಿಕ್ಷುಗಳು, ಋಷಿಗಳು, ನಾವಿಕರು ಮತ್ತು ವರ್ತಕರು ಇಂಥ ಅನೇಕ ದೇವತೆಗಳನ್ನೂ ಆರಾಧನಾವಿಧಾನಗಳನ್ನೂ ಭಾರತಕ್ಕೆ ತಂದಿರಬೇಕು. ಆದರೆ, ನಮ್ಮ ದೇಶದ ಇತಿಹಾಸಕಾರರು ಈ ಪ್ರಸರಣದ ಸಾಕ್ಷ್ಯಗಳನ್ನು ಅಲಕ್ಷಿಸಿ ಬೇರೆ ಬೇರೆ ಪಂಥಗಳ ಮತ್ತು ದೇವತೆಗಳ ಇತಿಹಾಸವನ್ನು ಶೋಧಿಸುವ ಮತ್ತು ನಮ್ಮ ದೇಶದಲ್ಲಿ ಮಾತ್ರವೆ ಅವುಗಳ ಮೂಲವನ್ನರಸುವ ಯತ್ನ ಮಾಡುವರು. ಬೇರೆ ಬೇರೆ ದೇವತೆಗಳು ಮತ್ತು ಪಂಥಗಳು ಭಾರತದಿಂದ ಇತರ ನೆರೆದೇಶಗಳಿಗೂ ಸಾಗರೋತ್ತರ ದೇಶಗಳಿಗೂ ಪಯಣಿಸಿವೆ. ಅದೇ ರೀತಿ, ಸಾಕಷ್ಟು ದೇವತೆಗಳು ಮತ್ತು ಪಂಥಗಳು ಬೇರೆ ಬೇರೆ ನಾಡುಗಳಿಂದ ಮತ್ತು ಜನಾಂಗಗಳಿಂದ ಸಾಗರ ದಾಟಿ ಭಾರತಕ್ಕೆ ಬಂದುದು ನಿಜ ಸಂಗತಿಯಾಗಿದೆ.

ಕಾಲಿಕಾ ದೇವತೆಯ ಪ್ರತಿಮಾಶಾಸ್ತ್ರದ ಉಗಮ ಮತ್ತು ಅವಳ ಪಂಥದ ಪ್ರಸರಣವನ್ನು ಶೋಧಿಸುವಾಗ ಈ ಸಂಗತಿಗಳನ್ನು ಲಕ್ಷ್ಯದಲ್ಲಿರಿಸಿಕೊಳ್ಳಬಹುದು. ಆದ್ಯಾ ಸ್ತೋತ್ರಮ್ ನಲ್ಲಿ ವಂಗದೇಶವು ಕಾಲಿಕಾ ದೇವತೆಯ ನೆಲೆಯಾಗಿತ್ತೆಂದು ಹೇಳಿರುವುದನ್ನು ಈ ದೃಷ್ಟಿಯಿಂದ ಅರಿತುಕೊಳ್ಳಬೇಕು. ವಂಗ ಶಬ್ದವು ಪೊಲಿನೇಶಿಯನ್ ಶಬ್ದ ವ್ಹಂಗದಿಂದ ಬಂದಿದೆ. ಅದರ ಮೂಲಾರ್ಥ ಕೊಲ್ಲಿ. ಆದುದರಿಂದ ವಂಗದೇಶ ಎಂದರೆ, ಕೊಲ್ಲಿಗೆ ಹತ್ತಿರವಿರುವ ನಾಡು. ಕಾಲಾನಂತರದಲ್ಲಿ ಬಂಗಾಲದ ಜನ ಪೊಲಿನೇಶಿಯನ್ ಭಾಷೆ ಮಾತಾಡುವುದನ್ನು ಬಿಟ್ಟು ಇಂಡೊ ಯುರೋಪಿಯನ್ ಭಾಷೆಗಳಾದ ಪಾಲಿ ಮತ್ತು ಸಂಸ್ಕೃತಗಳನ್ನು ಬಳಸಲಾರಂಭಿಸಿದರು. ಅವರು ವಂಗ ಶಬ್ದದ ಮೂಲ ಅರ್ಥ ಮರೆತರು. ವಂಗ ಶಬ್ದಕ್ಕೆ ಸಂಸ್ಕೃತ ಶಬ್ದ 'ಉಪಸಾಗರ'ವನ್ನು ಸೇರಿಸಿ ವಂಗೋಪಸಾಗರವೆಂದು ಪುನರುಕ್ತಿಗೊಳಿಸಿದರು. ಈಗ ವಂಗ ಎಂದರೆ, ಒಂದು ಪ್ರದೇಶವನ್ನು ಸೂಚಿಸುತ್ತದೆ. ಈ ಕೊಲ್ಲಿ ನಾಡಾಗಿರುವ ವಂಗದ ಜನರು ಮಾತಾಡುವ ಅನೇಕ ಬಂಗಾಲಿ ಶಬ್ದಗಳು ಪೊಲಿನೇಶಿಯನ್ ಧ್ವನಿಸಂಕೇತದೊಂದಿಗೆ ಮತ್ತು ಉಚ್ಚಾರಣೆಗಳೊಂದಿಗೆ ಸಾಮ್ಯ ಹೊಂದಿವೆ. ಉದಾ:

| ಬಂಗಾಲಿ ಭಾಷೆಯಲ್ಲಿ ಪೊಲಿನೇಶಿಯನ್ ಶಬ್ದ | ಪೊಲಿನೇಶಿಯನ್ ಭಾಷೆಯಲ್ಲಿ ಆದರರ್ಥ | ಪೊಲಿನೇಶಿಯನ್ ಭಾಷೆಯಲ್ಲಿ ಆದರರ್ಥ | ಶಬ್ದದ ಅರ್ಥ |
|---|---|---|---|
| ೧. ವ್ಹಂಗ | ಕೊಲ್ಲಿ | ವಂಗ | ಬಂಗಾಲ ಕೊಲ್ಲಿಯಲ್ಲಿರುವ ದೇಶ |
| ೨. ವ್ಹರೆ | ಮನೆ | ಘರ | ಮನೆ |
| ೩. ಕೊಟಿಂಗೆ | ವಿಭಜನೆ | ಕಲಿಂಗ | ಕೊಲ್ಲಿಯಲ್ಲಿರುವ ದೇಶ ಅದು ಬಹುಶಃ ದಾನವರ ನೆಲೆನೆಡಾಗಿತ್ತು |
| ೪. ಕೊಯಿ | ತೀಕ್ಷ್ಣ | ಕೊಯಿ ಮಾಛ್ | ಹೊರಚಾಚಿದ ಈಜುರೆಕ್ಕೆಗಳುಳ್ಳ ಮೀನಿನ ಪ್ರಕಾರ |
| ೫. ಮಾಗುರ | ಶಾರ್ಕ್ ಮೀನು | ಮಾಗುರ | ಶಾರ್ಕ್ ಆಕಾರದ ತಲೆಯಿರುವ ಮೀನಿನ ಒಂದು ಪ್ರಕಾರ |
| ೬. ಕೌವಾವಿ | ಮಾತಾಡು | ಕಥ ಕೌವಾ | ಮಾತಾಡು, ಪಠಿಸು |

ಪೊಲಿನೇಶಿಯನ್ನರು (ದಾನವರು) ಬೇಟೆಗಾರರಾಗಿದ್ದ ಕಾಲದಲ್ಲಿ ಮತ್ತು ನೆರೆರಾಜ್ಯಗಳು ಒಬ್ಬರಿನ್ನೊಬ್ಬರ ರುಂಡ ಚೆಂಡಾಡುವಲ್ಲಿ ನಿರತರಾಗಿದ್ದ ಕಾಲದಲ್ಲಿ ಅವರು ಪ್ರತಿಯೊಬ್ಬ ಅಪರಿಚಿತನ ಬಗೆಗೆ ಸಂಶಯ ತಾಳಿದರು. ಯಾವನೊಬ್ಬ ಅಪರಿಚಿತ ಅಥವಾ ತಂಡ ತಮ್ಮ ಪ್ರದೇಶದಲ್ಲಿ ಕಾಲಿಟ್ಟಾಗ ಗ್ರಾಮಸ್ಥರು ವೈರಿಯನ್ನು ತಿನ್ನಲು ಹಸಿದ ಹುಲಿಯಂತೆ ಭಯ ಹುಟ್ಟಿಸುವ ರೀತಿಯಲ್ಲಿ ನಾಲಗೆ ಚಾಚಿ ಹೊರಬರುತ್ತಿದ್ದರು. ಮಾವೊರಿ ಜನರು ಈಗ ಬೇಟೆಗಾರರಾಗಲಿ ನರಹಂತಕರಾಗಲಿ ಆಗಿರದಿದ್ದರೂ ಪ್ರವಾಸಿಗರ ಮುಂದೆ ಆಗಂತುಕರೊಂದಿಗಿನ ತಮ್ಮ ಮೂಲ ಕದನವನ್ನು ಅಭಿನಯಿಸುತ್ತಾರೆ.

ಭೂದೇವಿ ಪಂಚಾಮಾಮಾ ಅಥವಾ ಕಾಲಿಕಾಳ ಪ್ರತಿಮಾಶಾಸ್ತ್ರ ಮೊಟ್ಟಮೊದಲು ಭಾರತಕ್ಕೆ ಬಂದಾಗ ಅವಳು ಭಯಂಕರವಾಗಿ ಕಾಣುತ್ತಿದ್ದಳಲ್ಲದೆ ಅವಳಿಗೆ ಪ್ರಾಣಿಗಳನ್ನೂ ಮನುಷ್ಯರನ್ನೂ ಬಲಿ ಕೊಡುತ್ತಿದ್ದರು. ಕಾಲಕ್ರಮೇಣ, ಭಾರತದ ಸುಸ್ಥಿರ ಕೃಷಿ ಸಮಾಜದಲ್ಲಿ ವಿಕಸನಗೊಂಡ ಪ್ರೀತಿ ಮತ್ತು ಅಹಿಂಸೆಯ ಭಾವನೆಗಳು ಮತ್ತು ಧರ್ಮವು ಮುಂಚಿನ ಬೇಟೆಯ ಮತ್ತು ನರಹಂತಕ ಜನಾಂಗಗಳ ಈ ಭಯಂಕರ ದೇವತೆಯ ಪ್ರತಿಮಾಶಾಸ್ತ್ರ ಮತ್ತು ಆರಾಧನಾವಿಧಾನಗಳ ಮೇಲೆ ಪ್ರಭಾವ ಬೀರಿದವು.

ಬುದ್ಧದೇವನು ಶಾಂತಿದೇವತೆಯಾಗಿದ್ದನು ಮತ್ತು ಬೌದ್ಧಧರ್ಮ ಅಹಿಂಸೆಯ ಧರ್ಮವಾಗಿತ್ತು. ಬುದ್ಧಶಕ್ತಿಗಳು ಪ್ರಾಣಬಲಿ ಸ್ವೀಕರಿಸಲಿಲ್ಲ. ಅದೇ ರೀತಿ, ಶಾಂತಿ ಮತ್ತು ಪ್ರೇಮದ ದೇವತೆಗಳಾದ ವಿಷ್ಣು ಮತ್ತು ಕೃಷ್ಣರು ಕೃಷಿಸಮುದಾಯದ ಜನರ ಜೀವನಶೈಲಿಯನ್ನು ಆದಿಮ ಬೇಟೆ ಮತ್ತು ನರಬೇಟೆಯಿಂದ ಆರಾಧನೆ, ಆಚರಣೆ ಮತ್ತು ಅಹಿಂಸಾತ್ಮಕ ರೂಪಕ್ಕೆ ತಿರುಗಿಸಿದರು. ಕಾಲಕ್ರಮೇಣ, ೧೬ ಮತ್ತು ೧೭ನೆಯ ಶತಮಾನಗಳ ವಂಗ ಮತ್ತು ಕಲಿಂಗಗಳಲ್ಲಿ ವೈಷ್ಣವಿಕ ಅಹಿಂಸೆಯೂ ಶಕ್ತಿದೇವತೆಯ ಪ್ರತಿಮಾಶಾಸ್ತ್ರ ಮತ್ತು ಶಾಕ್ತ ಆರಾಧನಾವಿಧಾನದ ಮೇಲೆ ಪ್ರಭಾವ ಬೀರಿತು. ಸಮಕಾಲೀನ ಶಾಕ್ತರ ಮೇಲೆ ಮತ್ತು ಚೈತನ್ಯ ಭಾಗವತ ಮತ್ತು ಚೈತನ್ಯ ಚರಿತಾಮೃತಗಳಲ್ಲಿಯ ಶಕ್ತಿ ಆರಾಧನೆಯ ಮೇಲೆ ಶ್ರೀ ಚೈತನ್ಯ, ನಿತ್ಯಾನಂದರ ವೈಷ್ಣವ  ಆಂದೋಲನದ ಪ್ರಭಾವ ಕಂಡುಬರುವುದು.

ಈ ವೈಷ್ಣವ ಧರ್ಮಗ್ರಂಥಗಳು ಸಮಕಾಲೀನ ಶಾಕ್ತರು ವೈಷ್ಣವರೊಂದಿಗೆ ಹೊಂದಿದ್ದ ಒಡನಾಟಗಳ ಕೆಲವು ಕತೆಗಳನ್ನು ಹೇಳುತ್ತವೆ. ಉದಾ: ರಾಮಚಂದ್ರ ಖಾನನು (ಕ್ರಿ.ಶ.೧೪೮೦-೧೫೭೮) ಜಲೇಶ್ವರದಲ್ಲಿ ವಾಸಿಸಿದ್ದನು. ಮತ್ತು ಹುಸೇನಶಾಹನ ಆಳ್ವಿಕೆಯಲ್ಲಿ ಒಡಿಸಾದ ಕಂದಾಯ ವಸೂಲಿಗಾರನಾಗಿದ್ದನು. ಈ ಉದಾತ್ತ ಕುಲೀನನು ಕಾಯಸ್ಥ ಸಮುದಾಯದವನಾಗಿದ್ದನು. ಮತ್ತು ಶಕ್ತಿದೇವತೆಯ ನಿಷ್ಠಾವಂತ ಆರಾಧಕನಾಗಿದ್ದನು. ಶ್ಯಾಮಾಕಾಲಿಕಾ ಅವನ ಕುಲದೇವತೆಯಾಗಿದ್ದಳು. ೧೫೧೦ರಲ್ಲಿ ಶ್ರೀ ಚೈತನ್ಯನು ಪುರಿಯನ್ನು ಸಂದರ್ಶಿಸಬಯಸಿದ್ದನು. ಆದರೆ, ಪುರಿಯ ಮಾರ್ಗ ಕಳ್ಳಕಾಕರಿಂದ ಮುಕ್ತವಾಗಿರಲಿಲ್ಲ. ಆ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಎಂಬುದಿರಲಿಲ್ಲ. ಆದ್ದರಿಂದ, ರಾಮಚಂದ್ರನು ಅವನಿಗೆ ಭೂಮಾರ್ಗದಿಂದ ಹೋಗದಿರಲು ಉಪದೇಶಿಸಿದ. ಮಹಾಪ್ರಭು ಕೊಂತಲಕ್ಕೆ ಬರಲು ನಾವೆಗಳ ಏರ್ಪಾಡು ಮಾಡಿದ. ಅಲ್ಲಿಂದ ಮಹಾಪ್ರಭು ಕೊಂತಲ ಸುಬರ್ಣರೇಖೆಯನ್ನು ದಾಟಿ ಭೂಮಾರ್ಗವಾಗಿ ಜಲೇಶ್ವರಕ್ಕೆ ಹೋಗಿ ಅಂತಿಮವಾಗಿ ಪುರಿ ತಲುಪಿದ. ಚೈತನ್ಯ ಭಾಗವತದ ಕೊನೆಯ ಭಾಗದಲ್ಲಿ ಶ್ರೀ ಚೈತನ್ಯ ಮಹಾಪ್ರಭುವಿಗೆ ರಾಮಚಂದ್ರನು ನೀಡಿದ ಸಹಾಯವನ್ನು ದಾಖಲಿಸಲಾಗಿದೆ. ರಾಮಚಂದ್ರನು ತಾನು ನಿಷ್ಠಾವಂತ ಶಾಕ್ತನಾಗಿದ್ದರೂ ಕೂಡ ಶ್ರೀ ಚೈತನ್ಯನಿಗೆ ಗೌರವ ತೋರಿದನು. ಮತ್ತು ಅವನ ಕಾಳಜಿ ಮಾಡಿದನು ಎಂದು ಇದರಿಂದ ಕಂಡುಬರುತ್ತದೆ.

ಹುಸೇನಶಾಹನ ಮರಣಾನಂತರ ಶೇರಶಾಹನು ಹುಮಾಯೂನನನ್ನು ಬಕ್ಸರದಲ್ಲಿ ಸೋಲಿಸಿ ದಿಲ್ಲಿ ಸಿಂಹಾಸನವನ್ನು ಹಿಡಿದುಕೊಂಡನು. ಅವನು ಬಂಗಾಲದ ನವಾಬನ ದಂಗೆಯನ್ನು ಹತ್ತಿಕ್ಕಲು ಬಂಗಾಲಕ್ಕೆ ಬಂದ. ರಾಮಚಂದ್ರ ಖಾನನನ್ನು ಮೆಚ್ಚಿ ಒಂದು ಸುಬಾದ ಆಡಳಿತಾಧಿಕಾರಿಯನ್ನಾಗಿ ಮಾಡಿದ. ಆ ಸುಬಾ ಇಂದಿನ ಮಿದ್ನಾಪುರ ಜಿಲ್ಲೆಯ ಇಡಿ ದಕ್ಷಿಣ ಪ್ರದೇಶವನ್ನು ವ್ಯಾಪಿಸಿತ್ತು. ರಾಮಚಂದ್ರನ ಪಿತ್ರಾರ್ಜಿತ ಮನೆ ಬಾಲಿಯಲ್ಲಿ ಇತ್ತಾದರೂ ಈಗ ಅವನು ಕಂದಾಯ ವಸೂಲು ಮಾಡಲು ಜಲೇಶ್ವರದಲ್ಲಿ ಇರಲಾರಂಭಿಸಿದನು. ಆದರೆ, ಅವನ ಮನಸ್ಸು ತನ್ನ ಕುಲದೇವತೆಯಾದ ಶ್ಯಾಮಾಕಾಲಿಕಾಳ ಧ್ಯಾನದಿಂದ ತುಂಬಿಹೋಗಿತ್ತು. ಹಾಗಾಗಿ, ಅವನು ಕಂದಾಯ ವಸೂಲಿಗಾಗಿ ತನ್ನ ಕೈಕೆಳಗಿನ ಚೌಧರಿಗಳು,  ಜಮೀನದಾರರು ಮತ್ತು ಕನುಂಗೋಗಳನ್ನು ಅವಲಂಬಿಸಿದ್ದನು.

ಅವರು ಸಕಾಲದಲ್ಲಿ ಕಂದಾಯ ವಸೂಲುಮಾಡಲು ವಿಫಲರಾದರು. ಈ ಕಾರಣದಿಂದ ಒಮ್ಮೆ, ನಿಗದಿತ ತಾರೀಖಿನೊಳಗೆ ಕಂದಾಯ ಜಮಾ ಮಾಡಲಾಗದಿದ್ದುದ್ದಕ್ಕೆ ರಾಮಚಂದ್ರನನ್ನು ಸೆರೆಯಲ್ಲಿಡಲಾಯಿತು.

ಬಹುಶಃ ಪಂಥಾಭಿಮಾನದ ದ್ವೇಷ ಮತ್ತು ತಪ್ಪು ತಿಳುವಳಿಕೆಯಿಂದಾಗಿ ಅವನನ್ನು ಹುದ್ದೆಯಿಂದ ಅಮಾನತುಗೊಳಿಸಲಾದ ಮತ್ತು ಸೆರೆಯಲ್ಲಿಟ್ಟ ಬಗ್ಗೆ ಕೆಲವು ಸಮಕಾಲೀನ ವೈಷ್ಣವರು ಸಹಾನುಭೂತಿಯಿಂದ ಬರೆದಿಲ್ಲ. ಒಮ್ಮೆ ಮಹಾಪ್ರಭು ನಿತ್ಯಾನಂದನು ತನ್ನ ಅನೇಕ ಅನುಯಾಯಿಗಳ ಜೊತೆಗೆ ಬಂದು ರಾಮಚಂದ್ರನ ದುರ್ಗಾ ಮಂಡಪದ ಪ್ರಾಂಗಣದಲ್ಲಿ ವಾಸಿಸಿದನೆಂದು ಚೈತನ್ಯ ಚರಿತಾಮೃತದಿಂದ ತಿಳಿದುಬರುತ್ತದೆ. ದುರ್ಗಾಮಂಡಪವು ಅವನ ಅನುಯಾಯಿಗಳಿಂದ ತುಬಿತುಳುಕುತ್ತಿದ್ದು ನೃತ್ಯ ಮತ್ತು ಕೀರ್ತನ ತಂಡದವರ ಗದ್ದಲದಿಂದ ಭರಿತವಾಗಿತ್ತು. ರಾಮಚಂದ್ರನ ಕುಟುಂಬದ ಸೇವಕನೊಬ್ಬ ಗೋಸ್ವಾಮಿಯಲ್ಲಿಗೆ ಬಂದು ಇಷ್ಟು ದೊಡ್ಡ ಪರಿವಾರ ಹೊಂದಿರುವುದರಿಂದ ಅವರು ಒಬ್ಬ ದನಗಾಹಿಯ ವಿಶಾಲವಾದ ದನದ ಕೊಟ್ಟಿಗೆಯಲ್ಲಿ ವಸತಿ ಹೂಡಿದರೆ ಒಳಿತೆಂದು ಅರಿಕೆ ಮಾಡಿಕೊಂಡನು. ಶ್ರೀ ನಿತ್ಯಾನಂದನು ಈ ಅನಾದರಣೆಯ ಮಾತನ್ನು ಆಕ್ಷೇಪಿಸಿ ದುರ್ಗಾ ಮಂಡಪವನ್ನು ಬಿಟ್ಟು ನಡೆದನು. ರಾಮಚಂದ್ರನ ದುರ್ಗಾ ಮಂಡಪವು ತನ್ನಂಥ ವೈಷ್ಣವನಿಗೆ ಆತಿಥ್ಯ ನೀಡಲು ಯೋಗ್ಯವಾಗಿರದೆ ಗೋಹತ್ಯೆ ಮಾಡುವ ಮುಸ್ಲಿಮರಿಗೆ ಆತಿಥ್ಯ ನೀಡಲು ಯೋಗ್ಯವಾಗಿದೆಯೆಂದು ಶಾಪ ನೀಡಿದ. ಚೈತನ್ಯ ಚರಿತಾಮೃತದಲ್ಲಿ ಹೇಳಿರುವಂತೆಯೆ, ನಿತ್ಯಾನಂದನು ದುರ್ಗಾ ಮಂಡಪ ಬಿಟ್ಟ ಮೇಲೆ ಅದನ್ನು ಆಕಳ ಸಗಣಿ ಮತ್ತು ನೀರಿನಿಂದ ಶುಚಿಗೊಳಿಸಲಾಯಿತು. ಏಕೆಂದರೆ, ಪ್ರಾಯಶಃ ಅವನ ಪರಿವಾರದಲ್ಲಿ ಕೆಲವರು ಅಸ್ಪೃಶ್ಯ ಜಾತಿಯವರಿದ್ದರು. ಮಹಾಪ್ರಭು ನಿತ್ಯಾನಂದನ ಶಾಪದ ಪರಿಣಾಮವಾಗಿ ರಾಮಚಂದ್ರನನ್ನು ಸೆರೆಹಿಡಿಯಲು ಮುಸ್ಲಿಮ ಅಧಿಕಾರಿಗಳ ಆಗಮನ, ದುರ್ಗಾ ಮಂಡಪದಲ್ಲಿ ವಾಸ, ಅವರಿಂದ ಹಿಂದೂಗಳಿಗೆ ನಿಷಿದ್ಧವಾದ ಮಾಂಸದ ಅಡಿಗೆ ಸಿದ್ಧತೆ, ರಾಮಚಂದ್ರನ ಮನೆ ಮತ್ತು ಗ್ರಾಮದ ಲೂಟಿ ವೈಷ್ಣವ ಚರಿತಾಮೃತ ದಲ್ಲಿ ವರ್ಣಿತವಾಗಿವೆ.

ರಾಮಚಂದ್ರನನ್ನು ಇಟ್ಟಿದ್ದ ಕಾರಾಗೃಹದಲಿ ಅವನಿಗಿಂತ ಮುಂಚೆ ಕಂದಾಯ ಸಂದಾಯದಲ್ಲಿ ತಪ್ಪು ಮಾಡಿದ ಅಧಿಕಾರಿಗಳು ಮತ್ತು ವಸೂಲಿಗಾರರನ್ನು ಬಂದಿಯಾಗಿಸಲಾಗಿತ್ತು. ತನ್ನ ಕಾರಾಗೃಹ ಬಾಂಧವರನ್ನು ನೋಡಿ ರಾಮಚಂದ್ರನ ಕನಿಕರ ಉಕ್ಕಿತು. ಅವನನ್ನು ಸೆರೆಯಿಂದ ಬಿಡಿಸಿಕೊಳ್ಳಲೋಸುಗ ರಾಮಚಂದ್ರನ ಸಂಬಂಧಿಕರು ದುಡ್ಡು ಕೂಡಿಸಿಕೊಂಡು ಸರಕಾರಕ್ಕೆ ಕಟ್ಟಬೇಕಿದ್ದ ಬಾಕಿ ತೀರಿಸಲು ಬಂದಿದ್ದರು. ರಾಮಚಂದ್ರನು ಇತರ ಬಂಧಿತರ ಬಾಕಿ ತೀರಿಸಿ ಅವರನ್ನು ಮುಕ್ತಗೊಳಿಸಲು ಈ ದುಡ್ಡನ್ನು ಬಳಸಿದ. ತಾನು ಮಾತ್ರ ಸೆರೆವಾಸದಲ್ಲಿ ಮುಂದುವರೆದ. ರಾಯ ಮಹಾಶಯನ ವಂಶಾವಳಿ ಮತ್ತು ಶಕ್ತಿ ಪೂಜಕರ ಜನಪದ ಸಾಹಿತ್ಯದಲ್ಲಿ ಪ್ರಚಲಿತವಿದ್ದಂತೆ, ರಾಮಚಂದ್ರನಿಗೆ ಸೆರೆಮನೆಯಲ್ಲಿ ಕುಲದೈವ ಶ್ಯಾಮಾಕಾಲಿಕಾಳ ಸ್ವಪ್ನದರ್ಶನ ಮತ್ತು ಸಂಸರ್ಗ ಆಗುತ್ತಿತ್ತು.

ರಾಮಚಂದ್ರನ ಉಪಕಾರ ಬುದ್ಧಿಯ ಬಗ್ಗೆ ಕೇಳಿದ್ದ ಶೇರಶಹನು ಅವನನ್ನು ನೋಡಬಯಸಿದನೆಂದು ಹೇಳಲಾಗಿದೆ. ರಾಮಚಂದ್ರನನ್ನು ಕರೆಕಳಿಸಿ ಹೀಗೆ ಪ್ರಶ್ನಿಸಿದ: "ಕಂದಾಯ

ಬಾಕಿಗಾಗಿ ನಿನ್ನನ್ನು ಸೆರೆಮನೆಗೆ ತಳ್ಳಿದ್ದೆ. ದುಡ್ಡು ಕೊಡಿಸಿಯೂ ನೀನು ನನ್ನ ಕಾರಾಗೃಹದಲ್ಲಿ ಇನ್ನೂ ಏಕಿರುವಿ?" ರಾಮಚಂದ್ರ ಖಾನ ಉತ್ತರಿಸಿದ "ನನ್ನನ್ನು ಸೆರೆಯಲ್ಲಿಟ್ಟವನು ನೀನಲ್ಲ, ನನ್ನ ಸರ್ವಶಕ್ತ ದೇವತೆ. ಅವಳು ಇಚ್ಛಿಸಿದರೆ ನಾನಿವತ್ತೇ ಮುಕ್ತನಾದೇನು". ರಾಮಚಂದ್ರನು ತನಗಿಂತ ಹೆಚ್ಚಾಗಿ ತನ್ನ ದೇಶಬಾಂಧವರ ಮರ್ಯಾದೆ, ಕಲ್ಯಾಣ ಸುಖಗಳಿಗಾಗಿ ಹೊಂದಿದ್ದ ಕಳಕಳಿಯನ್ನು ಮತ್ತು ದೈವಕ್ಕೆ ಸಂಪೂರ್ಣ ಶರಣಾಗತಿಯನ್ನು ಈ ಉದಾತ್ತ ಆಡಳಿತಗಾರನು ಅರ್ಥ ಮಾಡಿಕೊಂಡಂತೆ ತೋರುತ್ತದೆ. ಶೇರಶಹನು ಈ ಉಪಕಾರಬುದ್ಧಿ ಮತ್ತು ಹೃದಯಶ್ರೀಮಂತಿಕೆಗೆ ಮನ್ನಣೆಯಿತ್ತು ಅವನನ್ನು ಆ ದಿನವೆ ಮುಕ್ತಗೊಳಿಸಿದ. ರಾಯ ಮಹಾಶಯ ಬಿರುದನ್ನಿತ್ತು ರಾಮಚಂದ್ರನನ್ನು ಗೌರವಿಸಿದನು. ಮತ್ತು ಅವನಿಗೆ ಬಂಗಾಲ ಮತ್ತು ಒಡಿಸಾ ಎರಡರದ್ದೂ ಸದರ ಕನುಂಗೊ ಹುದ್ದೆ ವಹಿಸಿಕೊಟ್ಟನು. ಇಂತು, ಅವನ ತಥಾಕಥಿತ ಶಾಪ ಅವನಿಗೆ ದೊಡ್ಡ ದುಡ್ಡು ತಂದುಕೊಟ್ಟಿದಲ್ಲದೆ ಅವನ ಬಂಧನವು ಉದ್ಧಾರದಲ್ಲಿ ಕೊನೆಗೊಂಡಿತು.

ರಾಯ ಮಹಾಶಯನ ವಂಶಾವಳಿ ಮತ್ತು ಐತಿಹ್ಯದ ಪ್ರಕಾರ, ಬಂಗಾಲ ಮತ್ತು ಒಡಿಸಾಗಳ ಕಂದಾಯ ವಸೂಲಿಗಾರನ ಎರಡು ಸನ್ನದುಗಳನ್ನು ಹಿಡಿದುಕೊಂಡು ರಾಮಚಂದ್ರ ಖಾನನು ಬಾಲಿಯಲ್ಲಿರುವ ತನ್ನ ಮನೆಗೆ ಹಿಂತಿರುಗುವಾಗ ಶಿವರಾಫುಲಿಯ ಬಳಿ ಸ್ನಾನ ಮಾಡಲು ಗಂಗಾತಟದ ಸ್ನಾನಘಟ್ಟಕ್ಕೆ ಹೋದ. ನದಿಯನ್ನು ಪ್ರವೇಶಿಸುವ ಮೊದಲು ಆವೆರಡು ಸನ್ನದುಗಳನ್ನು ಸ್ನಾನಘಟ್ಟದ ಮೇಲೆ ಇಟ್ಟನು. ಗಂಗಾನದಿಯಲ್ಲಿ ಮುಳುಗಿ ಏಳುವಾಗ ಹದ್ದು (ಶಂಖಚಿಲ) ಎರಗಿ ಪಶ್ಚಿಮ ಬಂಗಾಲದ ಹುದ್ದೆಯ ಸನ್ನದನ್ನು ಕಚ್ಚಿಕೊಂಡು ಹಾರಿಹೋಯಿತು. ರಾಮಚಂದ್ರ ಇದನ್ನು ನೋಡಿದ. ಆದರೆ, ಅವನು ಶಂಖಚಿಲವನ್ನು ಬೆನ್ನಟ್ಟಲಿಲ್ಲ. ಅದು ಸನ್ನದನ್ನು ಶಿವರಾಫುಲಿಯ ವ್ಯಕ್ತಿಯೊಬ್ಬನ ಮನೆಯಲ್ಲಿ ಬೀಳಿಸಿ ಹೋಯಿತೆಂದರೂ ಅದನ್ನು ಹಿಂಪಡೆಯಲು ಯತ್ನಿಸಲಿಲ್ಲ. ಹದ್ದು ಆಯ್ಕೆ ಮಾಡಿದವನಿಗೇ ಬಂಗಾಲದ ವಸೂಲಿಗಾರನ ಹುದ್ದೆಯನ್ನು ವಹಿಸಿಕೊಟ್ಟು, ತಾನು ಒಡಿಸಾದ ವಸೂಲಿಗಾರನ ಹುದ್ದೆಯಿಂದ ಮಾತ್ರ ತೃಪ್ತನಾದ. ಅದನ್ನು ಕೂಡ ಪೂರ್ತಿಯಾಗಿ ವಹಿಸಿಕೊಳ್ಳಲಾಗಿಲಿಲ್ಲ. ಏಕೆಂದರೆ, ಮುಘಲ ಸಾಮ್ರಾಟ ಮತ್ತು ಒಡಿಸಾದ ಪಠಾಣ ದೊರೆಗಳ ಮಧ್ಯೆ ಪ್ರಾದೇಶಿಕ ವ್ಯಾಜ್ಯಗಳಿಂದ ಅಸ್ಥಿರ ಪರಿಸ್ಥಿತಿ ನಿರ್ಮಾಣವಾಗಿತ್ತು. ಕಾಲಿಕಾದೇವತೆಯ ಆರಾಧಕರು ಮತ್ತು ಶಾಕ್ತರು ಸಾಮಾನ್ಯವಾಗಿ ಶ್ವೇತವಕ್ಷದ, ಕಂದು ಗರಿಗಳ ಶಂಖಚಿಲದ ಸಂಬಂಧವನ್ನು ದೇವತೆಯೊಂದಿಗೆ ಕಲ್ಪಿಸುವರು. ಪ್ರಾಯಶಃ ಈ ಕುಲದೇವತಾಪದ್ಧತಿ ದಕ್ಷಿಣಪೂರ್ವದ ಪೊಲಿನೇಶಿಯನ್ ದ್ವೀಪಗಳಿಂದ ಪ್ಯಾಸಿಫಿಕ್ ಮತ್ತು ಹಿಂದೂ ಮಹಾಸಾಗರಗಳ ಮೂಲಕ ಬಂಗಾಲ ಕೊಲ್ಲಿಯನ್ನು ತಲುಪಿತು. ನಾವು ಅದರ ಮೂಲ ಸಂಸ್ಥಾನದ ಸುಳಿವು ಹಿಡಿದು ಹೋದರೆ, ಇಂಡೋನೇಶಿಯಾವು ತಾರಾದೇವತೆಯ ನಾಡಾಗಿತ್ತೆಂದು ಗೊತ್ತಾಗುವುದು. ಗರುಡ ಇಂಡೋನೇಶಿಯಾದ ರಾಷ್ಟ್ರೀಯ ಲಾಂಛನ. ಹಾಗೆಯೇ ಅಮೆರಿಕ ಮತ್ತು ಮೆಕ್ಸಿಕೊದಂಥ ಲ್ಯಾಟಿನ್ ಅಮೆರಿಕನ್ ದೇಶಗಳದ್ದು ಕೂಡ. ಈ ದೇಶಗಳು ಹಿಂದೊಮ್ಮೆ ಭೂದೇವಿ ಪಾಪಾ ಅಥವಾ ಪಂಚಾಮಾಮಾ ಮತ್ತು ಅವಳ ಪತಿ ಆಕಾಶದೇವತೆಯನ್ನು ಆರಾಧಿಸುತ್ತಿದ್ದರು. ಆಕಾಶದೇವತೆಯು ಭೂದೇವಿಯನ್ನು ಬಿಗಿಯಾಗಿ ಅಪ್ಪಿಕೊಂಡಿದ್ದ. ಮನುಷ್ಯರು, ಸಸ್ಯಗಳು ಮತ್ತು ಪ್ರಾಣಿಗಳು ವಾಸಿಸಲು

ಅಧಿಕ ಸ್ಥಳಾವಕಾಶ ಮಾಡಿಕೊಡಲೋಸುಗ ದೇವ ಪುತ್ರರು ಆಕಾಶದೇವತೆಯನ್ನು ಮೇಲ್ಗಡೆ ಮುಗಿಲಿಗೆ ಕಳಿಸಿದರು. ಬಹುಶಃ ಆಕಾಶದಲ್ಲಿ ವಿಹರಿಸಿ ಭೂತಾಯಿಗೆ ಮರಳುವ ಗರುಡ ಆವಳಿಗೆ ಬಲು ಪ್ರೀತಿಯದೆಂದು ಭಾವಿಸಲಾಗಿದೆ. ಏಕೆಂದರೆ, ಅದು ಆಕಾಶದೇವತೆಯ ದೂತ. ನದಿಗಳು, ಸರೋವರಗಳು, ಸಮುದ್ರದಲ್ಲಿ ಮೀನುಗಳು ವಿಪುಲವಾಗಿ ದೊರೆಯುತ್ತಿದ್ದು ಹದ್ದುಗಳು, ಗರುಡಗಳು, ಮೀನು ತಿನ್ನಲು ಅಲ್ಲಿಗೆ ಹಿಂಡು ಹಿಂಡಾಗಿ ಬರುತ್ತಿದ್ದುದು ಸಹಜ. ಈ ಜಲಾಶಯಗಳ ತಟದಲ್ಲಿ ವಾಸಿಸುತ್ತಿದ್ದ ಜನರು ಗರುಡಪಕ್ಷಿಯನ್ನು ಮೂಲತಃ ದೇವಪಕ್ಷಿಯೆಂದು ಪರಿಗಣಿಸಿರಬಹುದು. ಈ ಜನರು ತಮ್ಮ ಮಹತ್ವದ ಧಾರ್ಮಿಕ ಸಂದರ್ಭಗಳಲ್ಲಿ ಹದ್ದುಗಳನ್ನು ಸೇರ್ಪಡಿಸುತ್ತಾರೆ. ಉದಾಹರಣೆಗೆ, ಪಶ್ಚಿಮಬಂಗಾಲದ ಕೆಲವು ದೇವಾಲಯಗಳಲ್ಲಿ ಮೇಲೆ ಆಕಾಶದಲ್ಲಿ ಗರುಡಪಕ್ಷಿ ಕಾಣಿಸಿಕೊಳ್ಳದ ಹೊರತು ದೇವತೆಗೆ ಪ್ರಾಣಿ ಬಲಿ ಜರುಗುವುದಿಲ್ಲ. ಏಕೆಂದರೆ, ನದಿತಟಗಳಲ್ಲಿ ಗರುಡಪಕ್ಷಿಯ ರೂಪದಲ್ಲಿ ದೇವತೆಯು ದೇವಾಲಯಕ್ಕೆ ಬರುವಳೆಂದು ಭಾವಿಸಲಾಗಿತ್ತು. ಚೆನ್ನೈನಲ್ಲಿನ ಪಕ್ಷಿತೀರ್ಥಮ್ ನಲ್ಲಿ ಇಂಥ ದೇವಪಕ್ಷಿಗೆ ನೈವೇದ್ಯ ಅರ್ಪಿಸಲಾಗುತ್ತದೆ. ಅದನ್ನು ನೋಡಲು ಸಾವಿರಾರು ಮೈಲು ದೂರದಿಂದ ಯಾತ್ರಿಗಳು ಬರುವರು. ನಿಜಕ್ಕೂ ಲ್ಯಾಟಿನ್ ಅಮೆರಿಕನ್ ದೇಶಗಳು ಕೂಡ ಇಂಥ ಪಕ್ಷಿಗಳ ಧಾಮಗಳಾಗಿ ಪ್ರಸಿದ್ಧವಿವೆ. ಬಂಗಾಲ ಕೊಲ್ಲಿಯಲ್ಲಿಯ ದೇಶಗಳು ಭೂದೇವಿ ಕಾಲಿಕಾ ಮತ್ತು ಸೂರ್ಯ ದೇವಾಲಯಗಳು ಚೆನ್ನೈ ಮತ್ತು ಬಂಗಾಲಗಳು ತಿರುಪತಿ ಮತ್ತು ವಿಷ್ಣು ದೇವಾಲಯಗಳಿಗೆ ಪ್ರಸಿದ್ಧವಿವೆ. ಅದೇ ರೀತಿ, ಲ್ಯಾಟಿನ್ ಅಮೆರಿಕನ್ ದೇಶಗಳು ಕೂಡ ಸೂರ್ಯದೇವನ ಮತ್ತು ಭೂದೇವಿ ಪಂಚಾಮಾಮಾಳ ದೇವಾಲಯಗಳಿಗೆ ಪ್ರಸಿದ್ಧವಿವೆ. ಚಕ್ರವನ್ನು ಆಯುಧವನ್ನಾಗಿ ಧರಿಸಿರುವುದು ತಿರುಪತಿ ಅಥವಾ ವಿಷ್ಣುವು ಸೂರ್ಯದೇವನೆಂಬುದನ್ನು ಸ್ಪಷ್ಟಪಡಿಸುವುದು. ಗರುಡಾರೂಢನಾಗಿರುವ ಸೂರ್ಯನು ಗರುಡನಂತೆಯೇ ಇಡಿ ಆಕಾಶವನ್ನು ವ್ಯಾಪಿಸುವನು. ಆದುದರಿಂದ ಅವನಿಗೆ ಆಕಾಶವಿಹಂಗ ಎಂಬ ಹೆಸರಿದೆ.

ಕಾಲ ಗತಿಸಿದಂತೆ, ಕಾಲಿಕಾ ಅಥವಾ ಪಂಚಾಮಾಮಾಳನ್ನು ಅವಳ ಭಯಾನಕ ಅಥವಾ ಸಮರ ರೂಪದಲ್ಲಿ ಪೂಜಿಸುತ್ತಿದ್ದ ಜನರು ವೈಷ್ಣವ ಧರ್ಮದಿಂದ ಪ್ರಭಾವಿತರಾದರು. ಕ್ರಮೇಣ ಅವಳು ಕಲ್ಯಾಣಕಾರಿ ಮತ್ತು ಶಾಂತಸ್ವರೂಪದ ಸೂರ್ಯದೇವ ಅಥವಾ ವಿಷ್ಣುವಿನ ಪತ್ನಿಯೆಂದು ಭಾವಿಸಲಾಯಿತು. ಮತ್ತೆ ಕೆಲವೆಡೆ ಜನರು ಒಂದೇ ದೇವಾಲಯ ಆವರಣದಲ್ಲಿ ಅವಳನ್ನು ವಿಷ್ಣುವಿನೊಂದಿಗೆ ಪೂಜಿಸಲಾರಂಭಿಸಿದರು.

ಕ್ರಿ.ಶ. ೧೫೭೮ರಲ್ಲಿ ರಾಮಚಂದ್ರಖಾನನು ತೀರಿಕೊಂಡ ಸುಮಾರು ಒಂದೂವರೆ ಶತಮಾನ ನಂತರದಲ್ಲಿ ಲಕ್ಷ್ಮೀನಾರಾಯಣರಾಯನ ಕಾಲದಲ್ಲಿ ಮಹಮ್ಮದ ತೋಕಿ ಮತ್ತು ಅವನ ಮುಸ್ಲಿಮ ದಳ ಕ್ರಿ.ಶ. ೧೭೨೧ರಲ್ಲಿ ಜಲೇಶ್ವರ ದೇವಾಲಯವನ್ನು ಅಪವಿತ್ರಗೊಳಿಸಿದರು. ಹಿಂದೂಗಳ ಮೇಲೆ ಘೋರ ಕೃತ್ಯವೆಸಗಲಾರಂಭಿಸಿದರು. ಜಲೇಶ್ವರಕ್ಕೆ ಸ್ವಲ್ಪ ದೂರದಲ್ಲಿರುವ ಲಕ್ಷ್ಮಣನಾಥಕ್ಕೆ ಲಕ್ಷ್ಮೀನಾರಾಯಣರಾಯನು ತನ್ನ ನಿವಾಸವನ್ನು ಸ್ಥಳಾಂತರಿಸಿದನು. ಬಹುಶಃ ಅವರು ಇವರೆನ್ನದೆ ಎಲ್ಲ ಹಿಂದೂಗಳ ಮೇಲೆ ಮುಸ್ಲಿಮರು ಮಾಡಿದ ದಾಳಿಯಿಂದಾಗಿ ಬೇರೆ ಬೇರೆ ಪಂಗಡಗಳು

ಹತ್ತಿರವಾದವು. ಹದಿನೆಂಟನೆಯ ಶತಮಾನದ ಮಧ್ಯಕಾಲಕ್ಕೆ ಲಕ್ಷ್ಮೀನಾರಾಯಣರಾಯನ ಮಗ ಜಯನಾರಾಯಣರಾಯನು ಈಗ ಶ್ಯಾಮಸುಂದರಿ ಎಂದು ಕರೆಯಲಾಗುತ್ತಿರುವ ತನ್ನ ಕುಲದೇವತೆ ಶ್ಯಾಮಾಕಾಲಿಕಾಳ ದೇವಾಲಯದಲ್ಲಿ ವೈಷ್ಣವದೇವತೆ ಶ್ಯಾಮಸುಂದರನ ಪೂಜೆಯನ್ನು ಪ್ರಾರಂಭಿಸಿದ. ಕ್ರಿ.ಶ. ೧೭೪೫ರಲ್ಲಿ ಮರಾಠಾ ಪೇಶ್ವೆಯಾಗಿದ್ದ ರಘುಜಿ ಭೋಸ್ಲೆಯು ಮಿದ್ನಾಪುರ ಮತ್ತು ಒಡಿಸಾಗಳನ್ನೂ ಆಕ್ರಮಿಸಿಕೊಂಡ. ಶ್ಯಾಮಸುಂದರ ಮತ್ತು ಶ್ಯಾಮಸುಂದರಿ ಎರಡೂ ದೇವತೆಗಳ ದೈನಂದಿನ ಪೂಜೆಗೆಂದು ಈ ಹಿಂದೂ ಪೇಶ್ವೆಯು ಜಯನಾರಾಯಣನಿಗೆ ೨೦೨೩ ಬಿಘಾ ಭೂಮಿಯನ್ನು ದತ್ತಿ ನೀಡಿದುದನ್ನು ಅವನ ತಾಮ್ರಪಟಗಳಲ್ಲೊಂದು ರುಜುವಾತುಪಡಿಸುತ್ತದೆ. ಹೀಗೆ, ಶಾಕ್ತ ಮತ್ತು ವೈಷ್ಣವ ಎರಡೂ ದೇವತೆಗಳ ಪೂಜೆಗೆ ಪೇಶ್ವೆಯ ಆಶ್ರಯವು ಕೂಡ ಒಂದೇ ದೇವಾಲಯದ ದ್ವಾರದೊಳಗೆ ಶಾಕ್ತ ಮತ್ತು ವೈಷ್ಣವ ದೇವತೆಗಳನ್ನು ಒಂದುಗೂಡಿಸಲು ಕಾರಣವಾಗಿರಬಹುದು. ಅಲ್ಲದೆ, ತಾಂತ್ರಿಕ ವಿಧಿಗಳಂತೆ ಶ್ಯಾಮಾಕಾಲಿಕಾ ದೇವತೆಗಳಿಗೆ ಪ್ರಾಣಿಬಲಿ ಮತ್ತು ಭಜನೆ, ಶ್ಯಾಮಸುಂದರನಿಗೆ ಕೀರ್ತನೆ ಮತ್ತು ಅಹಿಂಸಾತ್ಮಕ ಸಸ್ಯಾಹಾರ ನೈವೇದ್ಯ ಮುಂತಾದ ಭಿನ್ನ ಆರಾಧನಾ ವಿಧಾನಗಳನ್ನು ಒಂದುಗೂಡಿಸಿತು.

ಈ ವೈಷ್ಣವಯುಗದ ತರುವಾಯದ ಕಾಲದಲ್ಲಿ ಲಕ್ಷ್ಮಣನಾಥದಲ್ಲಿಯಂತೆಯೇ ಕಾಲಿಘಾಟದ ತಾಂತ್ರಿಕ ಹಾಗೂ ಭಯಾನಕ ಕಾಲಿಕಾದೇವತೆಯನ್ನು ಅವಳ ಮೂಗಿನ ಮೇಲೆ ವೈಷ್ಣವ ತಿಲಕವಿಟ್ಟು ಅಲಂಕರಿಸಲಾಯಿತು. ಇದು ವೈಷ್ಣವ ಪ್ರಭಾವದ ಪರಿಣಾಮ.

ನಮಗೆ ತಿಳಿದಿರುವಂತೆ, ಕಾಲಿಘಾಟದ ಕಾಲಿಕಾ ವಿಗ್ರಹ ನಿರ್ಮಿಸಲು ಶಿಲೆಯನ್ನು ಮೂಲತಃ ಒಡಿಸಾದ ನೀಲಗಿರಿಯಿಂದ ತರಲಾಗಿತ್ತು. ಅದರಲ್ಲಿ ವಿಗ್ರಹ ಕಡೆದವರು ಶಾಕ್ತ ಬ್ರಹ್ಮಾನಂದ ಗಿರಿ ಮತ್ತು ಉದಾಸಿ ಆತ್ಮಾರಾಮ. ಅವರು ಅವಳನ್ನು ಭಯಾನಕ ಹಾಗೂ ಯುದ್ಧ ಭಂಗಿಯಲ್ಲಿ ಕಲ್ಪಿಸಿಕೊಂಡರು. ಕಾಲಿಕಾ ಪುರಾಣಮ್ ವರ್ಣಿಸುವಂತೆ ವಿವಿಧ ಪಕ್ಷಿಗಳ, ಪ್ರಾಣಿಗಳ, ಸ್ವರಕ್ತ (ಸವಗಾತ್ರ ರುಧಿರಮ್) ಸೇರಿದಂತೆ ಮನುಷ್ಯರ ತಾಂತ್ರಿಕ ನೈವೇದ್ಯ ಅವಳನ್ನು ಆರಾಧಿಸುವ ವಿಧಾನವಾಗಿತ್ತು. ದೇವತೆಗೆ ನರಬಲಿ ಕೊಡುತ್ತಿದ್ದ ಕಾಪಾಲಿಕರು ಕಾಲಿಘಾಟದ ಸುತ್ತಮುತ್ತಲಿನ ಅಡವಿಗಳಲ್ಲಿದ್ದ ಗವಿಗಳಲ್ಲಿ ವಾಸಿಸುತ್ತಿದ್ದರು. ಬ್ರಹ್ಮಾನಂದ ಗಿರಿಯ ಮರಣಾನಂತರ ಆನಂದಗಿರಿಯು ಪೂಜೆ ಮತ್ತು ಬಲಿ ಏರ್ಪಡಿಸುವ ಜವಾಬ್ದಾರಿ ಹೊತ್ತನು. ತದನಂತರ ಅವನ ಉತ್ತರಾಧಿಕಾರಿಯು ಶಾಕ್ತ ಮತ್ತು ತಾಂತ್ರಿಕ ಆರಾಧನಾ ವಿಧಾನಗಳನ್ನು ಮುಂದುವರಿಸಿದ. ವೈಷ್ಣವ ಕಾಲಘಟ್ಟದ ತರುವಾಯ, ಭುವನೇಶ್ವರಿ ಗಿರಿಯ ಕಾಲದಲ್ಲಿ ಮನೆ ಬಿಟ್ಟು ನಡೆದಿದ್ದ ತನ್ನ ತಂದೆ ರತ್ನಗರ್ಭ ಚಟ್ಟೋಪಾಧ್ಯಾಯನನ್ನು ಹುಡುಕಿಕೊಂಡು ಬರ್ಧಮಾನ ಜಿಲ್ಲೆಯ ಖನ್ಯಾನದಿಂದ ಭವಾನಿದಾಸ ಚಟ್ಟೋಪಾಧ್ಯಾಯ ಎಂಬ ವೈಷ್ಣವ ಯುವಕ ಬಂದ. ಚಟ್ಟೋಪಾಧ್ಯಯ ಮನೆತನದ ಕುಲದೇವತೆ ಕೃಷ್ಣ-ವಾಸುದೇವ ಆಗಿತ್ತು. ಆದರೆ, ಇದು ಬುಬನೇಶ್ವರ ಗಿರಿಯ ಮಗಳು ಉಮಾಳೊಂದಿಗೆ ಭವಾನಿದಾಸನ ವಿವಾಹಕ್ಕೆ ಅಡ್ಡಬರಲಿಲ್ಲ. ಭವಾನಿದಾಸನ ಸಂತೋಷಕರ ನಡವಳಿ ಹಾಗೂ ಧಾರ್ಮಿಕ ನಿಷ್ಠೆಯಿಂದ ಸಂತುಷ್ಟನಾದ ಬುಬನೇಶ್ವರನು ದೇವತೆಯ ಸೇವಾಭಾರವನ್ನು ಅವನಿಗೆ ಒಪ್ಪಿಸಿದನು. ವೈಷ್ಣವ ಆಚಾರದಲ್ಲಿ ದೀಕ್ಷೆ ಪಡೆದಿದ್ದರೂ ಭವಾನಿದಾಸನು ಶಾಕ್ತ ಪದ್ಧತಿಯಂತೆ ಕಾಲಿಕಾದೇವತೆಯ

ಸೇವೆಗೈಯುತ್ತಾ ಕಾಲಿಘಾಟದಲ್ಲಿಯೇ ಇದ್ದನು. ಅದುವರೆಗೆ ಖನ್ಯಾನದ ತನ್ನ ಪೂರ್ವಜರ ಮನೆಯಲ್ಲಿದ್ದ ಅವನ ಹೆಂಡತಿ ಮತ್ತು ಇಬ್ಬರು ಮಕ್ಕಳು ಅವನನ್ನರಸಿ ಕಾಲಿಘಾಟಿಗೆ ಬಂದರು. ಅವರು ಅವನ ಪತ್ತೆಹಚ್ಚಿ ಅವನೊಂದಿಗೆ ಕಾಲಿಘಾಟದಲ್ಲಿಯೇ ಇರತೊಡಗಿದರು. ಖನ್ಯಾನದಲ್ಲಿದ್ದ ವಿಗ್ರಹವನ್ನು ಕಾಲಿಘಾಟಿಗೆ ತಂದು ಕಾಲಿಕಾದೇವತೆಯ ಗರ್ಭಗುಡಿಯ ಗೋಡೆಯಲ್ಲಿರುವ ಗೂಡೊಂದರಲ್ಲಿ ಇರಿಸಿದನು. ಬಡವರ (ದರಿದ್ರನಾರಾಯಣರ) ಸೇವೆಗೆ ಮೀಸಲಾಗಿದ್ದ ಸಸ್ಯಾಹಾರಿ ಆಹಾರವನ್ನು ಅವನು ಮೊದಲು ವಾಸುದೇವನಿಗೆ ನೈವೇದ್ಯ ಹಿಡಿದು ನಂತರ ಬಡವರಿಗೆ ಹಂಚುತ್ತಿದ್ದ. ಕಾಲಿಕಾ ದೇವತೆಗೆ ದಿನಾಲು ಹಿಡಿಯುತ್ತಿದ್ದ ಎಡೆಯ ಒಂದು ಪಾಲನ್ನು ನಾರಾಯಣ ವಾಸುದೇವನಿಗೂ ಅರ್ಪಿಸುತ್ತಿದ್ದ. ಹೀಗೆ, ಇಬ್ಬರೂ ದೇವತೆಗಳನ್ನು ಒಂದೇ ದೇವಾಲಯದಲ್ಲಿ ಇಡಲಾಗಿತ್ತು, ಮತ್ತು ಅವರ ನೈವೇದ್ಯಗಳು ಒಂದೇ ಮೂಲದಿಂದ ಬರುತ್ತಿದ್ದವು. ಕಾಲ ಕ್ರಮಿಸಿದಂತೆ ಶ್ಯಾಮಾ ಮತ್ತು ಶ್ಯಾಮ ಬೇರೆ ಬೇರೆಯಲ್ಲವೆಂದು ಭವಾನಿದಾಸನಿಗೆ ಗ್ರಹಿಕೆಯಾಗತೊಡಗಿತು. ತನಗರಿವಿಲ್ಲದಂತೆಯೇ ಭವಾನಿದಾಸನು ಗಂಧವನ್ನು ತೆಗೆದುಕೊಂಡು ಕಾಲಿಕಾದೇವತೆಯ ಮೂಗಿನ ಮೇಲೆ ತಿಲಕವನ್ನಿಟ್ಟು ವಾಸುದೇವನ ವಿಗ್ರಹಕ್ಕೆ ಶಾಕ್ತ ಅಲಂಕಾರದ ಸಂಕೇತವಾದ ಸಿಂಧೂರವನ್ನು ಬಳಿದ. ಇಂದು ಕೂಡ ಕಾಲಿಕಾ ದೇವತೆಯ ವಿಗ್ರಹದ ಮೇಲೆ ತಿಲಕವಿದೆ. ಧೈರ್ಯ ಮತ್ತು ಇತರ ವೀರಭಾವನೆಗಳನ್ನು ಜಾಗೃತಗೊಳಿಸುವ ಅವಳ ಭಯಂಕರ ಸ್ವರೂಪವನ್ನು ತಿಲಕವು ಮೃದುಗೊಳಿಸಿದೆ.

ಕಾಲಿಕಾದೇವತೆಯ ಪ್ರತಿಮಾಶಾಸ್ತ್ರ ಮತ್ತು ಆರಾಧನಾ ವಿಧಾನವನ್ನು ಹಿಮಾಚಲಪ್ರದೇಶಕ್ಕೆ ಸೇನ ಅರಸರು ಮತ್ತು ಅವರೊಂದಿಗೆ ಬಂದ ಬಂಗಾಲಿ ಪ್ರಜೆಗಳು ತಂದರೆಂದು ತೋರುತ್ತದೆ. ಮಾಂಡಿಯ ಅರಸ ಶ್ಯಾಮಸೇನನು ಕಾಲಿಕಾದೇವತೆಗೊಂದು ಗುಡಿ ಕಟ್ಟಿ, ಅದರಲ್ಲಿ ಅವಳ ವಿಗ್ರಹ ಪ್ರತಿಷ್ಠಾಪಿಸಿ, ಅವಳನ್ನು ಶ್ಯಾಮಾಕಾಲಿ ಎಂದು ಕರೆದ. ಅದೇ ರೀತಿ ಸಿದ್ಧಸೇನನು ಕಾಲಿದೇವಾಲಯ ಕಟ್ಟಿ ಅವಳನ್ನು ಸಿದ್ಧಕಾಲಿ ಎಂದು ಕರೆದ.

◈◈◈

## ಉಪಸಂಹಾರ

ಸೇನ ಅರಸರು ಕ್ಷತ್ರಿಯ ಕುಲದ ಚಂದ್ರವಂಶೀಯರು. ಕೆಳಕಂಡ ಹತ್ತೊಂಬತ್ತು ಅರಸರು ಆಳಿದರೆಂದು ಕಾಲಾನುಕ್ರಮಣಿಯಿಂದ ಕಂಡುಬರುವುದು. ಅವರೆಂದರೆ, ಬೀರಸೇನ, ಧೀರಸೇನ, ಬಿಕ್ರಮಸೇನ, ಲಕ್ಷ್ಮಣಸೇನ (ಇಮ್ಮಡಿ), ಧರಿತ್ರೀಸೇನ, ಚಂದರಸೇನ (ಚಂದ್ರಸೇನ), ಬಿಜೋಯ್‌ಸೇನ, ಸಾಧುಸೇನ, ರತ್ನಸೇನ, ಬಿಲಾಸಸೇನ, ಸಮುಂದರಸೇನ (ಸಮುದ್ರಸೇನ), ಹಬಂತಸೇನ, ಬಲವಂತಸೇನ, ಶ್ರೀಮಂತಸೇನ (ಸೆಬಂತಸೇನ) ಮತ್ತು ಇತರ ಐವರು ಅರಸರು. ನೋಡಿರಿ ಅನುಬಂಧ 'ಫ' ದಲ್ಲಿರುವ ವಂಶಾವಳಿ ಪಟ್ಟಿ ಮತ್ತು ಅವರ ಆಳ್ವಿಕಾವಧಿ.

ಈ ಪುಸ್ತಕದಲ್ಲಿ, ಹದಿಮೂರರಿಂದ ಹದಿನಾರನೆಯ ಶತಮಾನದವರೆಗಿನ ಸೇನ ಅರಸರ ಮೂನ್ನೂರು ವರ್ಷಗಳ ಇತಿಹಾಸ, ಸಾಮಾಜಿಕ ಹಾಗೂ ಧಾರ್ಮಿಕ ವಿಷಯಗಳ ಅವರ ಇತಿಹಾಸದ ಏಳುಬೀಳುಗಳು, ತಮ್ಮ ಅರಸನಿಗೆ ಪ್ರಜೆಗಳು ತೋರುತ್ತಿದ್ದ ನಿಷ್ಠೆ, ದಂಗೆ ಮತ್ತು ಅರಸರ ಆಯ್ಕೆಯನ್ನು ಕೂಡ ಚರ್ಚಿಸಲಾಗಿದೆ.

೧೯೪೭ರಲ್ಲಿ ಭಾರತದ ಸ್ವಾತಂತ್ರ್ಯ ನಂತರ, ಅರಸೊತ್ತಿಗೆ ಮುಂದುವರೆಯಲಿಲ್ಲ. ಲಲಿತ ಸೇನನಂಥ ಕೆಲವು ರಾಜರು ಚುನಾವಣೆಯಲ್ಲಿ ಗೆದ್ದು ರಾಜ್ಯದ ಪ್ರತಿನಿಧಿಗಳಾಗಿ ಸಂಸತ್ತಿಗೆ ಹೋದರೆ, ಅವನ ಮಗ ಹರಿಸೇನನು ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕತ್ವವನ್ನು ಆಯ್ದುಕೊಂಡಿರುವನು. ಇನ್ನು ಕೆಲವು ರಾಜರು ಬೇರೆಬೇರೆ ವಾಣಿಜ್ಯ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವರು.

**ರಾಜಾ ಅಶೋಕಪಾಲಸೇನ:**

ಪ್ರಸಕ್ತ ರಾಜಾ ಅಶೋಕಪಾಲಸೇನನು ಮಾಂಡಿಯಲ್ಲಿರುವ ತನ್ನ ಅರಮನೆಯ ಭಾಗವೊಂದನ್ನು ಉನ್ನತ ದರ್ಜೆಯ ಹೋಟೆಲಾಗಿ ಪರಿವರ್ತಿಸಿ, ಅದಕ್ಕೆ ಕೋಷಕಬನ ಎಂದು ಹೆಸರಿಟ್ಟಿರುವನು. ವೃತ್ತಿಪರ ಮ್ಯಾನೇಜರನಾಗಿ ಅವನು ಪ್ರತಿ ಮುಂಜಾನೆ ಹೋಟೆಲಿನ ಕಚೇರಿಗೆ ಬಂದು ಪ್ರವಾಸಿಗಳ ಯೋಗಕ್ಷೇಮ, ಆಡಳಿತ ಮತ್ತು ಲೆಕ್ಕಪತ್ರ ವಿಚಾರಿಸುವನು. ರಾಜ್ಯಲಕ್ಷ್ಮಿ (ರಾಜ್ಯದಿಂದ ಆದಾಯ) ಒಲಿದಿರದಿದ್ದರೂ ಸೇನವಂಶಜರಿಗೆ ವಾಂಗ್ಮಯಲಕ್ಷ್ಮಿಯ ಆಶೀರ್ವಾದವಿದೆ. ಸಂಪತ್‌ಲಕ್ಷ್ಮಿ ಅವರಿಗೆ ಒಲಿದು ಅವರು ಶ್ರೀಮಂತರಾಗಿರುವುದು ಹಳೆಯ ನಾಣ್ಣುಡಿಯನ್ನು ಸಾಬೀತುಪಡಿಸುತ್ತದೆ:

ವಾಣಿಜ್ಯೋ ವಸತಿ ಲಕ್ಷ್ಮಿ, ತದರ್ಧಮ್ ಕೃಷಿಕರ್ಮಣಿ
ತದರ್ಧಮ್ ರಾಜಸೇವಾಯಾಮ್, ಭಿಕ್ಷಾಯಾಮ್ ನೈವ ನೈವ ಚ ।

ಮಹಾರಾಜಾ ಲಕ್ಷ್ಮಣಸೇನನ ಇಂದಿನ ವಂಶಜನ ವಾಣಿಜ್ಯನಿಷ್ಠೆಯು ಬದಲಾಗುತ್ತಿರುವ ಕಾಲಕ್ಕನುಗುಣವಾಗಿಯೇ ಇದೆ. ದೊರೆತನದ ಸೌಮ್ಯ ಜೀವನಶೈಲಿಗೆ ಜಗತ್ತಿನಾದ್ಯಂತ ಆಗಿರುವ ಅವಸ್ಥಾಂತರವನ್ನು ಮತ್ತು ಭಾರತದ ಪ್ರಸಕ್ತ ಆರ್ಥಿಕ ಸ್ಥಿತಿಗತಿಯನ್ನು ಅನುಲಕ್ಷಿಸಿ, ಅರಸುಮಕ್ಕಳು ವಾಣಿಜ್ಯದಲ್ಲಿ ಮನಸ್ಸು ಹಾಕಿರುವುದು ಸ್ವಾವಲಂಬನೆಯ ದ್ಯೋತಕವಾಗಿದೆ. ಬ್ರಿಟಿಷ್ ವಸಾಹತುಶಾಹಿಗಳು ಹಿಂದೊಮ್ಮೆ ತಮ್ಮ ವ್ಯಾಪಾರಿ ತಕ್ಕಡಿಯನ್ನು ತೊರೆದು ಅಧಿಕಾರದಂಡವನ್ನು ಹಿಡಿದರು. ಅವರ ಆಳ್ವಿಕೆಯ ಕಾಲಾವಧಿಯಲ್ಲಿ ಗಂಗಾ ಗೋಬಿಂದ್ ಸಿಂಗ್, ಜಗತ ಸೇಠ, ದ್ವಾರಕಾನಾಥ ಠಾಕೂರ ಮೊದಲಾದ ಶ್ರೀಮಂತ ವ್ಯಾಪಾರಿಗಳು ಈ ಮೊದಲು ನಿರ್ಯಾತಗೊಳ್ಳುತ್ತಿದ್ದ ರೇಶ್ಮೆ ವ್ಯಾಪಾರ ಮತ್ತು ನೂಲಿನ ಬಟ್ಟೆಯ ಉದ್ದಿಮೆ, ಬಂಗಾರ ಬೆಳ್ಳಿಯ ಆಭರಣಗಳು, ಶಂಖಾಭರಣಗಳು ಮತ್ತಿತರ ಕರಕುಶಲ ಉದ್ದಿಮೆಗಳಲ್ಲಿ ಬಂಡವಲು ವಿನಿಯೋಗಿಸುವ ಬದಲು ಭೂಮಿಯಲ್ಲಿ ವಿನಿಯೋಗಿಸಿದರು.

ಕಂದಾಯ ವಸೂಲಿಗಾಗಿ ರಚಿಸಲಾದ 'ಸನ್‌ಸೆಟ್ ಆ್ಯಕ್ಟ್' ನಿಂದಾಗಿ ಭೂಮಿ ಖರೀದಿಸಿ ಭೂಒಡೆಯರಾಗಲು ರಾಜ್ಯದ ವ್ಯಾಪಾರಿಗಳಿಗೆ ಅವಕಾಶ ದೊರೆಯಿತು. ಹೀಗೆ, ಶ್ರೀಮಂತ ರೋಮ ಸಾಮ್ರಾಜ್ಯದ ಸುವರ್ಣ ಸಂಪನ್ಮೂಲಗಳನ್ನು ಒಂದಾನೊಮ್ಮೆ ಬರಿದು ಮಾಡಿದ್ದ ಭಾರತೀಯ ಕರಕುಶಲ ವಸ್ತುಗಳು ಮತ್ತು ಮಸಾಲೆ ಸಾಮಾನುಗಳು ಅಂತ್ಯ ಕಂಡವು. ಭೂಮಿಯಲ್ಲಿ ಹಣವಂತ ವ್ಯಾಪಾರಿಗಳ ಬಂಡವಲು ವಿನಿಯೋಗ ಮತ್ತು ಭೂ ಸಾಗುವಳಿಯಿಂದಾಗಿ ಭಾರತವು ಕೃಷಿದೇಶವಾಗಿ ಪರಿವರ್ತಿತವಾಯಿತು. ವಿದೇಶಿ ಆಧಿಪತ್ಯ ಕೊನೆಗೊಂಡು ಪ್ರಜಾಸತ್ತೆ ಪ್ರವೇಶಿಸಿದ ತರುವಾಯದಲ್ಲಿ

ಕೆಲವು ಭಾರತೀಯ ರಾಜರು ಹೊಟೆಲು ಮತ್ತು ಪ್ರವಾಸೋದ್ಯಮ ರಂಗದತ್ತ ಸರಿದಿರುವರು. ಬಂಗಾಲಿ ಮತ್ತು ಭಾರತೀಯ ಇತಿಹಾಸದಲ್ಲಿ ತೋರಿದ ಅವಸ್ಥಾಂತರದ ಕಾಲಾವಧಿ ಸ್ಪಷ್ಟಗೋಚರವಿದೆ.

### ತಿಕ್ಕಾ ಯುವರಾಜ ಒಮೇಶ್ವರ ಸಿಂಗ್:

"ಹಳೆತು ಹೋಗುವುದು ಹೊಸತು ಬರುವುದು...." ಮಾಂಡಿಯ ಇಂದಿನ ಯುವರಾಜನಾದ ತಿಕ್ಕಾ ಒಮೇಶ್ವರ ಸಿಂಗ್ ೨೧ನೆಯ ಶತಮಾನದ ವ್ಯಕ್ತಿ. ಪುರಾತನತೆ ಮತ್ತು ನವೀನತೆಗಳು ಅವನಲ್ಲಿ ಸಂಗಮಿಸಿವೆ. ಶೌರ್ಯ, ಧೈರ್ಯ ಮತ್ತು ದೂರದರ್ಶಿತ್ವ ಹೊಂದಿದ ಅವನು ಜೀವನದ ಯುದ್ಧವನ್ನು ಮಾಡಬೇಕಿದೆ. ಆದರೆ, ತನ್ನ ಪೂರ್ವಜರಂತಲ್ಲ. ಅದು ಈ ಪೂರ್ವದಲ್ಲಿ ರಾಜ್ಯಗಳನ್ನು ಗೆಲ್ಲಲೋಸುಗ ಮಾಡಿದ ಖಡ್ಗಗಳ ತಾಕಲಾಟವಾಗಿರದೆ ತನ್ನ ಭೂಮಿಕಾಣೆಗಳ ನಿರ್ವಹಣೆಗೆ ಸಹಾಯಕವಾದ ಇರಿಗತ್ತಿಯಂಥ ತೀಕ್ಷ್ಣ ಧಾರೆಯ ತಿಳುವಳಿಕೆ ಮತ್ತು ಬುದ್ಧಿಮತ್ತೆಯದಾಗಿತ್ತು. ಮನೆತನದ ವ್ಯಾಪಾರವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಅವನು ತನ್ನ ತಂದೆಯೊಡಗೂಡಿ ಹೊತ್ತಿರುವನು. ಯುವಕನಾಗಿದ್ದರೂ ಕೂಡ ಅವನ ಹೆಗಲುಗಳು ಅಧಿಕಾರದ ರಾಜಯೋಗ್ಯ ಹೊದಿಕೆ ಹೊದ್ದುಕೊಳ್ಳಲು ಸಿದ್ಧವಿದ್ದು, ಈ ಅವಸ್ಥಾಂತರಗೊಂಡ ಜಗತ್ತಿನಲ್ಲಿ ಅವನು ತನ್ನದೇ ಸ್ಥಾನವನ್ನು ರೂಪಿಸಿಕೊಂಡಿರುವನು.

ಪ್ರಸಕ್ತ ಯುವರಾಜನು ತನ್ನ ಪೂರ್ವಜರ ಪ್ರಪಂಚಕ್ಕಿಂತ ತೀರ ಭಿನ್ನವಾದ ಪ್ರಪಂಚದಲ್ಲಿ ಪುಣೆಯಲ್ಲಿ ಡಿಸೆಂಬರ ೨೧, ೧೯೭೪ ರಂದು ಜನಿಸಿದ. ಈ ಆಧುನಿಕ ಯುಗದಲ್ಲಿ ಯುದ್ಧಸನ್ನದ್ಧನಾಗಲು ಅವನು ಬೃಹನ್ ಮಹಾರಾಷ್ಟ್ರ ವಾಣಿಜ್ಯ ಕಾಲೇಜಿನಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾನೆ. ಆಮೇಲೆ ಕಾರ್ಯಾನುಭವ ಗಳಿಸಲೋಸುಗ ಕಟ್ಟಡ ನಿರ್ಮಾಣ ಕಂಪನಿಗಳಂಥ ಸಂಸ್ಥೆಗಳಲ್ಲಿ ಬುದ್ಧಿ, ಹೃದಯ, ಕೈಗಳನ್ನು ತೊಡಗಿಸಿ ದುಡಿದನು. ವಾಸ್ತು ವಿದ್ಯೆಯಲ್ಲಿ ಆಸಕ್ತಿ ಹೊಂದಿರುವನು. ಸ್ವಾಭಾವಿಕವಾಗಿಯೆ ಅವನು ನಿರ್ಭೀತ ವ್ಯಕ್ತಿಯಾಗಿದ್ದು ಕಾಲದೊಂದಿಗೆ ದಾಪುಗಾಲಿಡುತ್ತಿರುವನು. ರೈಕಿಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದು ಮಾಂಡಿಯಲ್ಲಿ ಪ್ರಾಕ್ಟಿಸ್ ಮಾಡಬಯಸಿರುವನು. ತನ್ನ ಬಾಲ್ಯದಿಂದಲೇ ಧರ್ಮಿಷ್ಠೆಯಾದ ರಾಣೀಮಾತೆಯಿಂದ ಗಾಢ ಆಧ್ಯಾತ್ಮಿಕ ದೃಷ್ಟಿ ಪಡೆದ. ತನ್ನ ರೈಕಿ ಗುರುಗಳಿಂದ ಬೌದ್ಧ ಧ್ಯಾನಮಾರ್ಗ ಝೆನ್‌ನಲ್ಲಿ ಮಾನಸಿಕ ತರಬೇತಿ ಪಡೆದ. ನೊಂದವರ ಹಿತಕ್ಕಾಗಿ ಅದನ್ನು ಪ್ರಾಕ್ಟಿಸ್ ಮಾಡುವ ಇಚ್ಛೆ ಹೊಂದಿರುವನು. ಸೇನವಂಶದ ಜೀವನೋತ್ಸಾಹವು ಅರಸ ಬಿಜೊಯ್‌ಸೇನ ಮತ್ತು ಬೀರಸೇನರನ್ನು ಬಲಶಾಲಿ ಸಾಮ್ರಾಜ್ಯ ನಿರ್ಮಾಪಕರನ್ನಾಗಿ ಮಾಡಿತು. ಅರಸ ಸಿಧಸೇನನನ್ನು ತಾಂತ್ರಿಕ ಆಧ್ಯಾತ್ಮಿಯಾಗಿಸಿತು. ರಾಜಾ ಜೋಗಿಂದರಸಿಂಗ್‌ನನ್ನು ತನ್ನ ರಾಜ್ಯದ ಸಮಾಜೋ - ಆರ್ಥಿಕ ಪುನರ್ನಿರ್ಮಾಣ ಮಾಡಲು ಉತ್ಸ್ಫೂರ್ತಿಸಿತು. ಅದೇ ಜೀವನೋತ್ಸಾಹ ತಿಕ್ಕಾ ಒಮೇಶ್ವರ ಸಿಂಗ್‌ನನ್ನು ೨೧ನೆಯ ಶತಮಾನದಲ್ಲಿ ನಿರ್ಮಾಪಕ ಮತ್ತು ವೈದ್ಯನನ್ನಾಗಿ ರೂಪಿಸಿದೆ.

## ಅನುಬಂಧ 'ಅ'

**ಕೆಲವು ಮದರಸಾಗಳು ಆಗೀಗ ಮುಸ್ಲಿಮ ರಹಸ್ಯಾಕ್ರಮಣಕಾರರನ್ನು ತರಬೇತುಗೊಳಿಸುವದು. ಕೆಲವು ಫಕೀರರ ಧಾರ್ಮಿಕ ನಿಲುವಂಗಿಗಳು ಭಾರತದಲ್ಲಿ ಮುಸ್ಲಿಮ ಆಧಿಪತ್ಯಕ್ಕೆ ದಾರಿ ಮಾಡಿಕೊಟ್ಟುದು.**

ಸುಲ್ತಾನ ಮಹಮೂದನ ದಾಳಿಯ ನಂತರ ಹಲವಾರು ಅಲೆಮಾರಿ ಫಕೀರರು ಮತ್ತು ದರಬೇಶಿಗಳು ಈ ರಾಜ್ಯಗಳನ್ನು ಮುಸ್ಲಿಮರು ವಶಪಡಿಸಿಕೊಳ್ಳುವ ಮೊದಲೇ ಭಾರತದ ಬೇರೆಬೇರೆ ಭಾಗಗಳಲ್ಲಿ ನುಸುಳುತ್ತಿದ್ದರು. ಅವರು ಕೆಲ ಹಿಂದೂಗಳನ್ನೂ ಇಸ್ಲಾಮಿಗೆ ಮತಾಂತರಿಸಿದರು. ಮುಸ್ಲಿಮರು ಬಂಗಾಲವನ್ನು ಮತ್ತು ವ್ಯಾಪಕ ಭಾರತವನ್ನು ಗೆಲ್ಲಲು ಇಂಥ ಫಕೀರರು ಮತ್ತು ಸ್ಥಳೀಯ ನವ ಮತಾಂತರಿಗಳು ದಾರಿ ಮಾಡಿಕೊಟ್ಟರು. ಈ ರಹಸ್ಯಾಕ್ರಮಣಕಾರರಿಗೆ ಆರಂಭದಲ್ಲಿ ಬಗದಾದಿನ ನಿಜಾಮಿಯಾ ಮದರಸಾದಲ್ಲಿ, ನಂತರ ಆಕ್ರಮಣಕಾರರು ವಶಪಡಿಸಿಕೊಂಡ ಪ್ರದೇಶದಲ್ಲಿ ಸ್ಥಾಪಿಸಲಾದ ಮದರಸಾಗಳಲ್ಲಿ ತರಬೇತಿ ನೀಡಲಾಗುತ್ತಿತ್ತು.

ಖಲೀಫ ಅಲ್ ಖಾದಿರನು ಸುಲ್ತಾನ ಮಹಮೂದನಿಗೆ ಇಸ್ಲಾಮ ಧರ್ಮ ಪಸರಿಸುವ ಕಾರ್ಯ ವಹಿಸಿಕೊಟ್ಟಿದ್ದನು. ಭಾರತದಲ್ಲಿಯ ಹಿಂದೂ

ದೇವಾಲಯಗಳನ್ನು ಧ್ವಂಸಮಾಡುವುದು ತನ್ನ ಕರ್ತವ್ಯದ ಅಂಗವೆಂದೇ ಅವನು ಭಾವಿಸಿದ್ದನು. ಮೇಲಾಗಿ, ಸುಖಪಾಲನಂಥ ಕ್ಷತ್ರಿಯನನ್ನು ಮತಾಂತರಗೊಳಿಸಿ ತನ್ನ ದಂಡನಾಯಕರಲ್ಲೊಬ್ಬನನ್ನಾಗಿ ನಿಯಮಿಸಿದನು. ನಂತರ, ಮುಲ್ತಾನದ ಅಧಿರಾಜನನ್ನಾಗಿ ಮಾಡಿದನು. ಆದರೆ, ಸುಲ್ತಾನ ಮಹಮೂದನು ಹಿಂತಿರುಗಿ ಬಂದಾಗ ಸುಖಪಾಲನು ಪ್ರಾಯಶ್ಚಿತ್ತ ವಿಧಿಗಳನ್ನು ಮಾಡಿ ತನ್ನ ಎಲ್ಲ ಮಂದಿಯೊಂದಿಗೆ ಹಿಂದೂ ಧರ್ಮದ ಮಡಿಲಿಗೆ ವಾಪಸು ಹೋಗಿದ್ದ. ಭಾರತವನ್ನು ಬಲವಂತವಾಗಿ ಮತಾಂತರಿಸಲು ಮತ್ತು ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ ಎಂದು ಮುಸ್ಲಿಮರಿಗೆ ಆಗ ಅರಿವಾಯಿತು.

ಇದನ್ನು ಮನಗಂಡು ಸುಲ್ತಾನ ಮಹಮೂದನ ಪ್ರಧಾನ ದಂಡನಾಯಕ ಮಸಾವ್ದ್ ಘಾಜಿ ತನ್ನ ಸೈನಿಕ ದಿರಿಸನ್ನು ತೆಗೆದಿಟ್ಟು ಫಕೀರನ ವೇಷತೊಟ್ಟು ಭಾರತಕ್ಕೆ ಮರಳಿದ. ಭಾರತದ ಬೇರೆಬೇರೆ ಭಾಗಗಳಲ್ಲಿ ಅವನ ಉಸ್ತುವಾರಿಯಲ್ಲಿ ಮಸೀದೆಗಳನ್ನು ಕಟ್ಟಲಾಯಿತು. ಕ್ರಿ.ಶ. ೧೨ನೆಯ ಶತಮಾನದ ಮಧ್ಯಕಾಲದಲ್ಲಿ ಈ ಮಸೀದೆಗಳ ಸುತ್ತಮುತ್ತ ಖಲೀಫನ ಸಮ್ಮತಿ ಮತ್ತು ಆರ್ಥಿಕ ಸಹಾಯದಿಂದ ಚಿಕ್ಕ ಚಿಕ್ಕ ಮುಸ್ಲಿಮ ಕೇರಿಗಳು ತಲೆಯೆತ್ತಿದವು. ಇಂಥ ಛಾಮೀ ರಹಸ್ಯಾಕ್ರಮಣಕಾರರನ್ನು ಇಸ್ಲಾಮ ಧರ್ಮದಲ್ಲಿ ಮತ್ತು ಮತಾಂತರೀಕರಣ ಕಲೆಯಲ್ಲಿ ತರಬೇತುಗೊಳಿಸಲು ಕ್ರಿ.ಶ. ೧೦೬೮ರಲ್ಲಿ ಬಗದಾದಿನಲ್ಲಿ ನಿಜಾಮಿಯಾ ಮದರಸಾವನ್ನು ಹುಟ್ಟುಹಾಕಲಾಯಿತು. ವಿವಿಧ ಹಿನ್ನೆಲೆಗಳ ಜನರು, ಸಾದೀಯಂತಹ ಕವಿಗಳು ಈ ಮದರಸಾದಲ್ಲಿ ಶಿಕ್ಷಣ ಪಡೆದರು. ಶೇಖ ಮೊಯಿನುದ್ದೀನ ಮಖಧುಮ ಶಾಹ ತಬ್ರಿಜಿ (ಲಕ್ಷ್ಮಣಸೇನನ ಸಮಕಾಲೀನ) ಯಂತಹ ಯೋಧರು ತರಬೇತಿ ಮತ್ತು ಶಿಕ್ಷಣಕ್ಕಾಗಿ ಇಲ್ಲಿಗೆ ಬಂದರು.

## ಶೇಖ ಮೊಯಿನುದ್ದೀನ ಚಿಸ್ತಿ :

ಮದರಸಾದಲ್ಲಿ ಶಿಕ್ಷಣ ಪೂರೈಸಿ ತನ್ನ ನಲವತ್ತು ಅನುಯಾಯಿಗಳೊಂದಿಗೆ ಶೇಖ ಮೊಯಿನುದ್ದೀನ ಚಿಸ್ತಿ ಇಸ್ಲಾಮ ಧರ್ಮ ಪ್ರಸಾರಾರ್ಥ ದಿಲ್ಲಿಗೆ ಬಂದನು. ಅಲ್ಲಿಂದ ಅವನು ಪೃಥ್ವೀರಾಜನ ರಾಜಧಾನಿ ಅಜಮೀರಿಗೆ ನಡೆದನು. ಇಸ್ಲಾಮ ಧರ್ಮ ಬೋಧಿಸಲು ಮತ್ತು ಜನರನ್ನು ಮತಾಂತರಿಸಲು ಅವನು ಆನಾಸಾಗರ ದಂಡೆಯಲ್ಲಿ ನೆಲೆಸಿದನು. ಮುಸ್ಲಿಮರ ಚಟುವಟಿಕೆಯನ್ನು ತಡೆಯಲು ಪೃಥ್ವೀರಾಜನಿಗೆ ಶಕ್ಯವಾಗಲಿಲ್ಲ. ಅದರ ಪರಿಣಾಮವಾಗಿ ಹಿಂದೂ ದೊರೆ ಅಜಯಪಾಲ ಮೊದಲಾದವರು ಸೇರಿದಂತೆ ಏಳುನೂರರಷ್ಟು ಜನರನ್ನು ಮತಾಂತರಗೊಳಿಸಲು ಶೇಖ ಚಿಸ್ತಿಗೆ ಸಾಧ್ಯವಾಯಿತು. ಇಸ್ಲಾಮ ಧರ್ಮ ಸ್ವೀಕರಿಸುವಂತೆ ಪೃಥ್ವೀರಾಜನಿಗೂ ಪ್ರಸ್ತಾವನೆ ಕಳಿಸಲಾಯಿತು. ಪೃಥ್ವೀರಾಜನಾದರೋ ಪ್ರಸ್ತಾವನೆಯನ್ನು ಕಡೆಗಣಿಸಿದ.

ಎರಡನೆಯ ತರೈನ ಯುದ್ಧ ಗೆದ್ದ ಕೂಡಲೇ ಮೊಹಮ್ಮದ ಘೋರಿ ಹೇಗೆ ಯುದ್ಧಭೂಮಿಯಿಂದ ಶೇಖ ಚಿಸ್ತಿಯ ದರ್ಶನ ಪಡೆಯಲು ನೇರವಾಗಿ ಅಜಮೀರಿಗೆ ಹೋದನೆಂಬುದನ್ನು ಮಿರ್ಜಾ ಬೇಗ್ ತನ್ನ ಬಯಾಗ್ರಫಿ ಆಫ್ ಖ್ವಾಜಾ ಮೊಯಿನುದ್ದೀನ್ ಚಿಸ್ತಿಯಲ್ಲಿ ವರ್ಣಿಸಿರುವನು.

## ಶೇಖ ಜಲಾಲುದ್ದೀನ ಮಖಧುಮ ಶಾಹ ತಬ್ರಿಜಿ:

ಮೊಯಿನುದ್ದೀನ ಚಿಸ್ತಿಯಂತೇಯೇ ನಿಜಾಮಿಯಾ ಮದರಸಾದ ವಿದ್ಯಾರ್ಥಿಯಾಗಿದ್ದ ಶೇಖ ಜಲಾಲುದ್ದೀನ ಮಖಧುಮ ಶಾಹ ತಬ್ರಿಜಿಯು ಲಕ್ಷ್ಮಣಸೇನನ ಆಳ್ವಿಕಾವಧಿಯಲ್ಲಿ ಗೌಡವನ್ನು ಪ್ರವೇಶಿಸಿದ. ಲಕ್ಷ್ಮಣಸೇನನು ಗಂಗಾತಟದಲ್ಲಿ ಶೇಖನನ್ನು ಪ್ರಥಮ ಬಾರಿ ಸಂಧಿಸಿದ. ಅವನ ಮಂತ್ರಿಗಳಲ್ಲೊಬ್ಬನಾದ ಹಲಾಯುಧನೂ ಅವನೊಂದಿಗೆ ಉಪವರ್ತಿಸಿದ್ದ. ನಂತರ ಹಲಾಯುಧನು ಶೇಖನನ್ನು ಕೊಂಡಾಡಿ ಶೇಖ ಶುಭೋದಯಾ ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದ. ಧಾರ್ಮಿಕ ಸೌಹಾರ್ದ ಮತ್ತು ಸಹಿಷ್ಣುತೆಯ ಕಾಲವಾಗಿದ್ದ ಲಕ್ಷ್ಮಣಸೇನನ ಆಳ್ವಿಕೆಯಲ್ಲಿ ಶೇಖ ಹೊಂದಿದ್ದ ಅಸಾಧಾರಣ ಶಕ್ತಿಯನ್ನು ಆ ಗ್ರಂಥದಲ್ಲಿ ವಿವರಿಸಲಾಗಿದೆ. ಒಳ್ಳೆಯ ತರಬೇತಿ ಪಡೆದಿದ್ದ ಶೇಖನು ತನ್ನ ಸಂಭಾಷಣಾ ಚಾತುರ್ಯ ಮತ್ತು ಮನವೊಲಿಸುವ ಶಕ್ತಿಯಿಂದ ಉದಾತ್ತ ಲಕ್ಷ್ಮಣಸೇನನ ಮೇಲೆ ಹೇಗೆ ಪ್ರಭಾವ ಬೀರಿದನೆಂಬುದು ಈ ಗ್ರಂಥದಿಂದ ಕಂಡುಬರುತ್ತದೆ. ಅರಸನು ಶೇಖನಿಗೆ ತನ್ನ ಓಲಗ ಸೇರಲು ಕೇಳಿಕೊಂಡ. ಮಸೀದೆ ಕಟ್ಟಿಸಿಕೊಳ್ಳಲು ಪಾಂಡುವಾದಲ್ಲಿ ಪೀರನಿಗೆ ನಿವೇಶನವನ್ನು ದಾನನೀಡಿದ. ಧರ್ಮಿಷ್ಠಳಾದ ಹಿರಿಯ ರಾಣಿ ಮತ್ತು ಪ್ರತಿಭಾವಂತ ಆಸ್ಥಾನ ಕವಿ ಹಲಾಯುಧರು ಶೇಖನ ಅಭಿಮಾನಿ ಮತ್ತು ಮಿತ್ರರಾದರು. ಪೀರನು ಬಗದಾದಿನ ಖಲೀಫನಿಂದ ಸಾಕಷ್ಟು ಸಂಪತ್ತು ಪಡೆಯುತ್ತಿದ್ದ. ಮತ್ತು ತನ್ನ ಪಕ್ಷಕ್ಕೆ ಬರುವಂತೆ ಮಾಡಲೋಸುಗ ಆಗಾಗ ಮಹತ್ವದ ಮಂದಿಗೆ ಅಮೂಲ್ಯ ಕಾಣಿಕೆಗಳನ್ನು ಹಂಚುತ್ತಿದ್ದ ಎಂಬುದನ್ನು ಶೇಖ ಶುಭೋದಯಾ ಸ್ಪಷ್ಟಪಡಿಸುತ್ತದೆ. ಲಕ್ಷ್ಮಣಸೇನನು ಸಂಶಯಪಡದಿದ್ದರೂ ಅವನ ಓಲಗದ ಸದಸ್ಯನಾದ ಉಮಾಪತಿಧರನು ಪೀರನ ಸದುದ್ದೇಶವನ್ನು ಸಂದೇಹಿಸಿದ. ಒಮ್ಮೆ ಅವನು ವಿಷವಿಟ್ಟು ಪೀರನನ್ನು ಅಂತ್ಯಗೊಳಿಸಲು ಪ್ರಯತ್ನಿಸಿದ. ಆದರೆ, ಶೇಖ ಬದುಕುಳಿದ. ಅದರ ಪರಿಣಾಮವಾಗಿ, ಉಮಾಪತಿಧರನು ಜನರ ನಿಂದನೆಗೊಳಗಾದನು. ಮತ್ತು ಶೇಖನು ಇನ್ನಷ್ಟು ಜನಪ್ರಿಯನಾದನು.

ಶೇಖನು ಆಗಮಿಸಿದ ಕೆಲ ವರ್ಷಾನಂತರ ಬಖ್ತಿಯಾರ ಖಿಲ್ಜಿಯು ನವದ್ವೀಪವನ್ನು ಸ್ವಾಧೀನಪಡಿಸಿಕೊಂಡ. ಶೇಖನ ಮತಾಂತರ ಕಾರ್ಯ ಮತ್ತು ತೆರೆಮರೆಯ ಪ್ರಚಾರದಿಂದಾಗಿ ಹಿಂದೂಗಳು ವಿದೇಶಿ ಪ್ರಭುತ್ವವನ್ನು ವಿರೋಧಿಸುವ ಬದಲು ತುರ್ಕಿ ಆಧಿಪತ್ಯವನ್ನು ಸ್ವೀಕರಿಸಿದರು. ತರುವಾಯದಲ್ಲಿ ಶೇಖನ ಆಜ್ಞೆಯಂತೆ ಪಾಂಡುವಾದಲ್ಲಿಯ ಎಲ್ಲ ಮಠಮಂದಿರಗಳನ್ನು ನಾಶಮಾಡಲಾಯಿತು.

## ೧೯೯೯ರಲ್ಲಿ ಕಾರ್ಗಿಲ್‌ನಲ್ಲಿ ರಹಸ್ಯಾಕ್ರಮಣಕಾರರು:

೧೯೪೭ರಲ್ಲಿ ಭಾರತದ ವಿಭಜನೆಯಾಗಿ ಪಾಕಿಸ್ತಾನವು ಮುಸ್ಲಿಮ ರಾಷ್ಟ್ರವಾಗಿ ನಿರ್ಮಾಣಗೊಂಡಿತು. ಕಾಶ್ಮೀರದ ಅರಸ ಮಹಾರಾಜಾ ಹರಿಸಿಂಗ್ ಭಾರತಕ್ಕೆ ಸೇರ್ಪಡೆಗೊಳ್ಳಲು ತನ್ನ ಆಯ್ಕೆಯನ್ನು ಚಲಾಯಿಸಿದಾಗ್ಯೂ ಹನಾದರರೆಂದು ಕರೆಯಲಾಗುವ ಕೆಲವು ಮುಸ್ಲಿಮ ಮತಾಂಧರು ಕಾಶ್ಮೀರದ ಕೆಲ ಭಾಗವನ್ನು ಆಕ್ರಮಿಸಿಕೊಂಡರು. ಅಂದಿನಿಂದ ಇಂದಿನವರೆಗೆ ಸುಮಾರು ೪೫೦೦೦ರಷ್ಟಿರುವ ಮದರಸಾಗಳು ಪಾಕಿಸ್ತಾನಿ ಯುವಕರಿಗೆ ಇಸ್ಲಾಮ ಧರ್ಮಗ್ರಂಥಗಳ ಬಗೆಗೆ

ಮತ್ತು ಇಸ್ಲಾಮ ಧರ್ಮಕ್ಕೆ ಮತಾಂತರಿಸಿಕೊಳ್ಳುವ ಬಗೆಗೆ ಜ್ಞಾನ ನೀಡುವುದು ಮಾತ್ರವಲ್ಲದೆ ಪ್ರಾಥಮಿಕ ಸೈನಿಕ ತರಬೇತಿಯನ್ನೂ ನೀಡುತ್ತ ಬಂದಿವೆ. ಪಾಕಿಸ್ತಾನದಲ್ಲಿ ಮತ್ತು ಪಾಕ ಆಕ್ರಮಿತ ಕಾಶ್ಮೀರದಲ್ಲಿರುವ ಶಿಬಿರಗಳಲ್ಲಿ ಆಳವಾದ ತರಬೇತಿ ಪಡೆಯುವಂತೆಯೂ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗುತ್ತದೆ. ಗಡಿಯಾಚೆ ತಮ್ಮ ಜಿಹಾದ್‌ಗಾಗಿ ಸೈನಿಕ ಬಲಸಂವರ್ಧನೆಯನ್ನೇ ಗುರಿಯಾಗಿರಿಸಿಕೊಂಡಿರುವ ಹಿಜಬುಲ್ ಮುಜಾಹಿದೀನ ಮತ್ತು ಜಮಾತೆ ಇಸ್ಲಾಮ ಮೊದಲಾದ ಭಯೋತ್ಪಾದಕ ತಂಡಗಳು ಈ ಮದರಸಾಗಳ ಸಿಬ್ಬಂದಿಯಾಗಿದ್ದು ಮದರಸಾಗಳಿಗೆ ಧನವನ್ನು ಅವುಗಳೇ ಒದಗಿಸುತ್ತವೆ. ಹೀಗಾಗಿ, ಭಾರತೀಯ ಕಾಫಿರರಿಂದ ಕಾಶ್ಮೀರವನ್ನು ದೋಚುವುದೇ ಗುರಿಯಾಗಿರುವ ಪಾಕಿಸ್ತಾನದ ರಹಸ್ಯಾಕ್ರಮಣಕಾರರು ಬಹಳ ಪ್ರಚೋದನೆಗೊಳಗಾದ ಜನರಾಗಿರುವರು.

ಅವರೊಡನೆ ಕಾದಾಡಿ ಅವರನ್ನು ಕಾರ್ಗಿಲ್‌ನಿಂದ ಹೊರಹಾಕಲು ನುಗ್ಗಿದ ಭಾರತೀಯ ಸೈನಿಕರಾದರೊ ಜಾತ್ಯಾತೀತತೆ, ಸಮಾಜವಾದ ಮತ್ತು ಪ್ರಜಾಸತ್ತೆಗಳು ರಾಷ್ಟ್ರೀಯ ವ ವೃತ್ತಿ ಜೀವನದಲ್ಲಿ ನೆಚ್ಚಿಕೊಳ್ಳುವ ಮೌಲ್ಯಗಳೆಂದು ನಂಬಿರುವ ಮತ್ತು ಅವನ್ನೇ ಕಲಿಸುವ ಭಾರತೀಯ ಉದಾರ ಶಿಕ್ಷಣಸಂಸ್ಥೆಗಳಿಂದ ಹೊರಬಿದ್ದವರು. ಭಾರತೀಯ ಸೈನಿಕರು ರಾಷ್ಟ್ರಾಭಿಮಾನಿಗಳು. ಆದರೆ, ಮತಾಂಧರಲ್ಲ. ಯುದ್ಧ ಕೈದಿಯನ್ನು ಊನಗೊಳಿಸಿ ನಂತರ ಕೊಲ್ಲುವ ಆಲೋಚನೆ ಕೂಡ ಅವರಿಗೆ ಬರಲಾರದು. ಪಾಕಿಸ್ತಾನಿ ರಹಸ್ಯಾಕ್ರಮಣಕಾರರು ತಮ್ಮ ಅಂಥ ದ್ವೇಷ ಮತ್ತು ಮತಾಂಧ ಉತ್ಸಾಹದಿಂದ ಭಾರತೀಯ ಯುದ್ಧ ಕೈದಿಗಳಿಗೆ ಹಾಗೆ ಮಾಡುತ್ತಿರುವರು. ಆದರೆ, ಭಾರತೀಯ ಯೋಧರು ಇಂಥ ಕ್ರೌರ್ಯ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಮಾಡಲಾರರು.

ಭಾರತದ ಕ್ಷತ್ರಿಯ ಯೋಧರು ವೈರಿಗೆ ಬೆನ್ನು ತೋರಿಸದಿರುವ ಮತ್ತು ಕಟ್ಟಕಡೆಯ ವ್ಯಕ್ತಿಯವರೆಗೂ ಕಾದಾಡುತ್ತ ಮರಣವನ್ನಪ್ಪುವ ಪ್ರತಿಜ್ಞೆಗೈಯ್ಯುತ್ತಿದ್ದರು. ವರ್ಣಧರ್ಮ ಪಾಲಿಸುತ್ತ ಅವರು ಉದಾತ್ತ ರೀತಿಯಲ್ಲಿ ಯುದ್ಧ ಮಾಡುತ್ತಿದ್ದರು. ಕಿಂಗ್ ಆರ್ಥರನ ಸರದಾರರೂ ಯುರೋಪಿನಲ್ಲಿ ಇದನ್ನೇ ಮಾಡುತ್ತಿದ್ದರು. ಮೊಘಲ ಕಾಲದವರೆಗೂ ರಾಜಪೂತರು ಇದೇ ಮಾದರಿ ಮತ್ತು ಆದರ್ಶವನ್ನು ಮುಂದುವರಿಸಿದರು. ಆದರೆ, ಯುದ್ಧತಂತ್ರ ಮತ್ತು ತತ್ವಗಳು ಸಾಕಷ್ಟು ಬದಲಾಗಿವೆ. ಅವಿತುಕೊಳ್ಳುವಿಕೆ ಮತ್ತು ಮರೆಮಾಚಿಕೊಳ್ಳುವಿಕೆ ಸಾಮಾನ್ಯ ಪರಿಪಾಠಗಳಾಗಿ ಸ್ವೀಕೃತಗೊಂಡಿವೆ. ಆಧುನಿಕ ಯುದ್ಧವನ್ನು ಅನೇಕ ವೇಳೆ ಎ.ಬಿ.ಸಿ (ಎಟಾಮಿಕ್, ಬ್ಯಾಕ್ಟೀರಿಯಲ್ ಆ್ಯಂಡ ಕೆಮಿಕಲ್ (ಅರ್ಥಾತ್ ಅಣು, ಜೀವಾಣು ಮತ್ತು ರಾಸಾಯನಿಕ) ಯುದ್ಧವೆಂದು ಬಣ್ಣಿಸಲಾಗುತ್ತಿತ್ತು. ಈಗ ಎಟಾಮಿಕ್ ಶಬ್ದದ ಬದಲು 'ನ್ಯೂಕ್ಲಿಯರ್' ಎಂಬ ಶಬ್ದವನ್ನು ಬಳಸುವ ಪ್ರವೃತ್ತಿ ಬೆಳೆದಿದೆ. ಏಕೆಂದರೆ, ಭಾರತ ಮತ್ತು ಪಾಕಿಸ್ತಾನ ಸೇರಿದಂತೆ ಅನೇಕ ದೇಶಗಳು ನ್ಯೂಕ್ಲಿಯರ್ ಶಕ್ತಿ ಹೊಂದಿವೆ. ಭಾರತವು ನ್ಯೂಕ್ಲಿಯರ್ ಮೊದಲ ಹೆಜ್ಜೆಯಲ್ಲಿ ನಂಬಿಕೆ ಹೊಂದಿರದ್ದರಿಂದ ಪಾಕಿಸ್ತಾನದ ಮದರಸಾಗಳಲ್ಲಿ ತರಬೇತಿ ಪಡೆದ ಮುಜಾಹಿದೀನರ ಧರ್ಮಾಂಧ ಉತ್ಸಾಹವನ್ನು ಸರಿಗಟ್ಟುವಂತೆ ಅದು ತನ್ನ ಸೈನಿಕರನ್ನು ಮರು ಪ್ರೇರೇಪಿಸಬೇಕೆ? ಹಾಗಿದ್ದರೆ, ಎಂತು?

ಲಕ್ಷ್ಮಣಸೇನನ ಕಾಲದಲ್ಲಿ ಜನರ ಪ್ರತಿರೋಧ ವಿದೇಶಿ ರಹಸ್ಯಾಕ್ರಮಣಕಾರರನ್ನು ವಿಫಲಗೊಳಿಸುತ್ತಿತ್ತು. ನಂತರದ ಯುದ್ಧಗಳು ಸೇನ ಅರಸರ ಸ್ವಂತ ವ್ಯವಹಾರವಾಗಿತ್ತು. ಸಾರ್ವಜನಿಕರಿಗೆ ಸಂಬಂಧಿಸಿದ್ದಾಗಿರಲಿಲ್ಲ. ಕಾಶ್ಮೀರದಲ್ಲಿಯ ರಹಸ್ಯಾಕ್ರಮಣಕಾರರನ್ನು ಹದ್ದುಬಸ್ತಿನಲ್ಲಿಡಲು ಉತ್ತರಪೂರ್ವ ವಿಭಾಗದಿಂದ ಕಾರ್ಗಿಲ್‌ಗೆ ಭಾರತೀಯ ಸೇನೆಯ ಚಲನೆಯನ್ನು ತಡೆಯಲು ಈಗಿನ ಕಾಲಡಲ್ಲಿ ಭಾರತದ ರೈಲುನಿಲ್ದಾಣಗಳಲ್ಲಿ ಬಾಂಬು ಇಕ್ಕುವ ಮೂಲಕ ರಹಸ್ಯಾಕ್ರಮಣಕಾರರಿಗೆ ಸಕ್ರಿಯ ಬೆಂಬಲ ನೀಡುವಂತೆ ಅಲ್ಫಾ (ULFA) ದಂಥ ಪ್ರತಿಕೂಲ ಯುವ ಸಂಘಟನೆಗಳ ಮನವೊಲಿಸುವ ಯತ್ನವನ್ನು ಪಾಕಿಸ್ತಾನಿ ಬೇಹುಗಾರ ಸಂಸ್ಥೆ ಮಾಡುತ್ತಿದೆಯೆಂದು ವರದಿಯಾಗಿದೆ. ಪಾಕಿಸ್ತಾನಿ ದಂಗೆಕೋರರು ಭಾರತೀಯ ಯುವಕರನ್ನು ಸೆಳೆದುಕೊಳ್ಳಲು ಎಷ್ಟೇ ಪ್ರಯತ್ನಮಾಡಿದರೂ ಭಾರತೀಯ ಯುವಕರು ತಮ್ಮ ಪೂರ್ವಜರು ತಮ್ಮ ದೇಶವನ್ನು ಹೇಗೆ ಪ್ರೀತಿಸುತ್ತಿದ್ದರು ಮತ್ತು ತಮ್ಮ ದೇಶಕ್ಕೋಸ್ಕರ ಹೇಗೆ ಪ್ರಾಣತ್ಯಾಗ ಮಾಡಿದರು ಎಂಬುದನ್ನು ಮರೆಯಲಾರರು. ಕಾಜೊಲ ಭೌಮಿಕ, ಉದ್ಧಬ ದಾಸ ಮತ್ತು ಕ್ಯಾಪ್ಟನ್ ಜೆಂಟು ಗೊಗೊಲ ಮುಂತಾದ ಸಮಕಾಲೀನರು ಕಾರ್ಗಿಲ್ ಡ್ರಾಸ್ ವಿಭಾಗದಲ್ಲಿ ಹೇಗೆ ವೀರೋಚಿತವಾಗಿ ಕಾದುತ್ತ ಪ್ರಾಣತ್ಯಾಗ ಮಾಡಿದರು ಎಂಬುದನ್ನು ಮರೆಯಲಾರರು. ೧೯ ವರ್ಷದ ದೊಡೊಜ ಅಂಗಮಿ ಪಾಕಿಸ್ತಾನಿ ಒಳನುಗ್ಗುವವರಿಂದ ತನ್ನ ದೇಶ ಹಾಗೂ ದೇಶಬಾಂಧವರನ್ನು ರಕ್ಷಿಸಲೋಸುಗ ಹೇಗೆ ತನ್ನೆರಡು ಕೈಕಾಲುಗಳನ್ನೂ ಕಳೆದುಕೊಂಡನೆಂಬುದನ್ನು ಮರೆಯಲಾರರು. ಇತ್ತೀಚೆಗೆ, ಅಲ್ಫಾದ ಸಕ್ರಿಯ ಸದಸ್ಯನಾಗಿದ್ದ ನಹರಕಟಿಯ ಊರಿನ ಸ್ವರವ ಕಕೊತಿ ಕಾರ್ಗಿಲ್‌ಗೆ ಹೋಗಿ ಪಾಕಿಸ್ತಾನಿ ರಹಸ್ಯಾಕ್ರಮಣಕಾರರಿಗೆ ಸಹಾಯ ಮಾಡುತ್ತಿದ್ದನ್ನು ನಿಲ್ಲಿಸಿದನು. ಮತ್ತು ೯ ಇತರರೊಂದಿಗೆ ಅಲ್ಫಾ ತೊರೆದು ರಾಷ್ಟ್ರೀಯ ಪ್ರಮುಖ ಜೀವನಧಾರೆಯಲ್ಲಿ ಸೇರಿಕೊಂಡನು. ನಮ್ಮ ಪಾಶ್ಚಾತೀತ ಶಿಕ್ಷಣವ್ಯವಸ್ಥೆಯ ಪ್ರಯೋಜನ ಪಡೆದು ಭಾರತದಲ್ಲಿಯೇ ಅವರು ನೀಡುತ್ತಿರುವ ಶಿಕ್ಷಣ ಹಾಗೂ ಶಿಕ್ಷಣಸಂಸ್ಥೆಗಳನ್ನು ಪತ್ತೆ ಹಚ್ಚಬೇಕು. ರಾಷ್ಟ್ರಾಭಿಮಾನ ಮತ್ತು ರಾಷ್ಟ್ರ ಬಾಂಧವರ ಬಗೆಗೆ ಪ್ರೀತಿ ಸೇರಿದಂತೆ ಎಲ್ಲ ಮಾನವೀಯ ಮೌಲ್ಯಗಳಿಗೆ ಮಸಿ ಬಳಿಯುವ, ತಮ್ಮ ಜನರ ಹಾಗೂ ದೇಶದ ಹಿತವನ್ನು ಪಾಕಿಸ್ತಾನಿ ದಂಗೆಕೋರರಿಗೆ ಮಾರುವ, ತನ್ಮೂಲಕ ತಮ್ಮ ತಾಯಿನಾಡನ್ನು ವಿದೇಶಿ ಆಕ್ರಮಣಕ್ಕೆ ತೆರೆದಿಡುವ ಮತ್ತು ವಿದೇಶಿ ರಹಸ್ಯಾಕ್ರಮಣಕಾರರಿಗೆ ತಮ್ಮ ಸ್ತ್ರೀಯರ ಮಾನಭಂಗ ಮಾಡಲು ಅನುವು ಮಾಡಿಕೊಡುವ ನಮ್ಮವರೇ ಅನೇಕರಿದ್ದಾರೆ. ಅವರಿಗೆ ಇಂಥ ತರಬೇತಿ ನೀಡುವ ಕೆಲವು ರಾಜಕೀಯ ಪಕ್ಷಗಳ ಎಡಪಂಥೀಯ ಶಾಲೆಗಳಿವೆ. ಅವನ್ನೆಲ್ಲ ಪತ್ತೆ ಹಚ್ಚಬೇಕು, ನಮ್ಮ ಪ್ರಸಕ್ತ ಶಿಕ್ಷಣಪದ್ಧತಿಯನ್ನು ಪುನಾರಚಿಸಿ ಇಲ್ಲವೆ ಬಲಗೊಳಿಸಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನದ ಗಟ್ಟಿ ಭಾವನೆ, ತಮ್ಮ ಜನರು ಹಾಗೂ ದೇಶದ ಬಗೆಗೆ ಕಾಳಜಿ, ತಮ್ಮ ಅಸ್ತಿತ್ವದ ಬಗೆಗೆ ಮತ್ತು ತಮ್ಮ ಜೀವನದ ಪರಮ ಪುರುಷಾರ್ಥದ ಬಗೆಗೆ ಶೋಧನಾಬುದ್ಧಿ ಬೆಳೆಸಿಕೊಳ್ಳುವ ಬಗೆಗೆ, ಮಾನವೀಯ ಮೌಲ್ಯಗಳ ಬಗೆಗೆ ಪ್ರಾಚೀನ ಭಾರತದ ಗುರುಕುಲಗಳಲ್ಲಿಯ ಕ್ಷತ್ರಿಯ ಶಿಷ್ಯರಂತೆ ತಮ್ಮ ತಮ್ಮ ವೃತ್ತಿಮೌಲ್ಯಗಳ ಬಗೆಗೆ ಕಾಳಜಿ ಕಲಿಸುವ ಅವಶ್ಯಕತೆಯಿದೆ.

◈ ◈ ◈

## ಅನುಬಂಧ 'ಬ'

**ಬಖ್ತಿಯಾರ ಖಿಲ್ಜಿಯ ಮೂಲ ಊರು, ಸಾಮಾಜಿಕ ಅಂತಸ್ತು ಮತ್ತು ವೃತ್ತಿ.**

ಖಿಲ್ಜಿಯು ಘೋರವಂಶದವನೆಂದು ೧೦ನೆಯ ಶತಮಾನದ ಲೇಖಕ ಇಸ್ತಕ್ರಿ ಹೇಳಿರುವನು. ತಮ್ಮ ದೈಹಿಕ ಚಹರೆ ಅಂದರೆ ಆಕಾರ, ಬಟ್ಟೆ, ರೀತಿರಿವಾಜು ಮತ್ತು ಭಾಷೆಗಳಲ್ಲಿ ಅವರು ತುರ್ಕರನ್ನು ಹೋಲುತ್ತಾರೆ. ಪಶುಪಾಲನೆ ಅವರ ಉದ್ಯೋಗವಾಗಿತ್ತು. ಇದು ಮತ್ತು ನಂತರದ ಲೇಖಕರ ಇತರ ಹೇಳಿಕೆಗಳು ಖಿಲ್ಜಿಗಳು ತುರ್ಕರಾಗಿದ್ದರೆಂದು ಆಧುನಿಕ ವಿದ್ವಾಂಸರನ್ನು ನಂಬಿಸಿದವು.

ಖಿಲ್ಜಿಗಳು ಮೂಲತಃ ಯೋಧರಾಗಿರದೆ ದನಗಾಹಿಗಳಾಗಿದ್ದರು. ಬಂಗಾಲದ ಐಯಾಜ್ ಖಿಲ್ಜಿಯ (೧೨೧೧ -೨೬) ಆತ್ಮಚರಿತ್ರೆಯಲ್ಲಿ ಬರುವ ಒಂದು ಸ್ವಾರಸ್ಯಕರ ಪ್ರಾರಾದಿಂದ ಈ ಮಾತು ಸ್ಪಷ್ಟಪಡುವುದು. ಐಜಾನನು ತನ್ನ ಕತ್ತೆಗಳ ಹಿಂಡಿನೊಂದಿಗೆ ತನ್ನ ಹಳ್ಳಿಗೆ ಹೋಗುವಾಗ ದಾರಿಯಲ್ಲಿ ಕೆಲವು ಫಕೀರರು (ಅಲೆಮಾರಿ ಭಿಕ್ಷುಗಳು) ಭೆಟ್ಟಿಯಾದರೆಂದು

ಅದರಲ್ಲಿ ಹೇಳಿದೆ. ಅವರ ಮಾತುಕತೆಯಿಂದ ಅವರು ಗರಮಶೇರ ಜಿಲ್ಲೆಯ ಘೋರ ಪ್ರದೇಶದವರೆಂಬುದು ಸ್ಪಷ್ಟವಿತ್ತು. ಬಖ್ತಿಯಾರ ಖಿಲ್ಜಿಯು ಘೋರ ಕುಲದವನೆಂದು ನಂಬಲಾಗುತ್ತಿದೆ. ಗರಮಶೇರ ಜಿಲ್ಲೆ ಬಹುಶಃ ಇಂದಿನ ಒರಜಗೋನ ಕೊಳ್ಳದಲ್ಲಿತ್ತು.

ಆದುದರಿಂದ ಬಂಗಾಲದ ಸಲ್ತನತ್ತನ್ನು ಸಂಸ್ಥಾಪಿಸಿದ ಬಖ್ತಿಯಾರ ಮತ್ತು ನಂತರದ ಐಯಾಜ ಖಿಲ್ಜಿ ಮತ್ತು ಸಂಪತ್ತನ್ನರಸಿ ಬಂದ ಇತರ ಮುಸ್ಲಿಮರು ಘೋರ ಪ್ರದೇಶದವರಾಗಿದ್ದರೆಂದು ಊಹಿಸಬಹುದು. ಬಖ್ತಿಯಾರನು ಸೈನ್ಯ ಸೇರಲು ಘಜನಿಗೆ ಬಂದನು. ಅಲ್ಲಿ ವಿಫಲಗೊಂಡು ದಿಲ್ಲಿಗೆ ಬರಬೇಕಾಯಿತು. ನೇಮಕಾಧಿಕಾರಿ ದರ್-ದಿವಾನ-ಇ-ಅರಜ ಅವನನ್ನು ಇಲ್ಲಿಯೂ ಆಯ್ಕೆಮಾಡಲಿಲ್ಲ. ಆಮೇಲೆ ಅವನು ಬದಾಯೂನ್‌ನ ಮುಫ್ತಿಯಲ್ಲಿ ಕೆಲಸಕ್ಕೆ ಸೇರಿದ. ಸೈನಿಕ ಕೆಲಸ ಕೊಟ್ಟು ಅವನ ಸಂಬಳ ನಿಗದಿಪಡಿಸಲಾಯಿತು. ತನ್ನ ಮಾಲಕನಿಂದ ಪಡೆದ ಕೆಲವು ಹರೆಯದ, ವೇಗದ ಕುದುರೆಗಳೊಂದಿಗೆ ಅವನು ಬದಾಯೂನ್‌ನಿಂದ ಅಯೋಧ್ಯೆಗೆ ಪಯಣಿಸಿದ. ತನ್ನ ಕಾರ್ಯಸಾಮರ್ಥ್ಯದಿಂದ ಇಕ್ತಾ ಗಳಿಸಲಾಗದಿದ್ದರೂ ಅವನು ಕೊನೆಗೆ ಎರಡು ಭೂಪ್ರದೇಶಗಳನ್ನು ಪಡೆದ. ಅವನ ಅದೃಷ್ಟದ ಸುದ್ದಿ ಹಿಂದುಸ್ತಾನದ ಇತರ ಖಿಲ್ಜಿಗಳಿಗೆ ಹಬ್ಬಿ ಅವರಲ್ಲಿ ಕೆಲವರು ಅವನ ಜೊತೆ ಸೇರಿದರು.

## ಅನುಬಂಧ 'ಕ'

ಕಾಲಿಕಾ ದೇವತೆಯ ಭಕ್ತನಾದ ಬಲ್ಲಾಳಸೇನನು ಕಾಲಿಘಾಟ ಮತ್ತು ಕಲಕತ್ತಾಗಳನ್ನು ಅಭಿವೃದ್ಧಿಪಡಿಸಿದನು.

ಪ್ರಾಗೈತಿಹಾಸಿಕ ಕಾಲದಲ್ಲಿ ದಾನವರು ವಂಗದೇಶದ ಕರಾವಳಿಗೆ ಬಂದಾಗಿನ ಪ್ರಾಚೀನ ಕಾಲದಿಂದಲೂ ಕಾಲಿಘಾಟವು ಕಾಲಿಕಾದೇವತೆಯ ಪ್ರಧಾನ ಪೀಠವೂ ಶಕ್ತಿಪೂಜೆಯ ಮಹಾಕೇಂದ್ರವೂ ಆಗಿತ್ತು. ಕ್ರಿ.ಶ. ೮ನೆಯ ಶತಮಾನದಲ್ಲಿ ಆದಿಶೂರನೂ ತನ್ನ ರಾಜ್ಯಕ್ಕೆ ಐವರು ಬ್ರಾಹ್ಮಣರನ್ನು ಕರೆತಂದನೆಂಬುದು ಕುಲ್ಜಿಗಳ ವೃತ್ತಾಂತದಿಂದ ಸ್ಪಷ್ಟಪಡುತ್ತದೆ. ಕ್ಷಿತಿಶ ದೇವಶರ್ಮನು ಅವರಲ್ಲೊಬ್ಬ. ಅವನಿಗೆ ರಾಜನು ಮಾನಭೂಮ ಜಿಲ್ಲೆಯ ಪಾಜ್ಞಕೋಟ ಗ್ರಾಮದಲ್ಲಿ ಭೂಮಿ ದಾನವಿತ್ತ. ಆದರೆ, ಅಲ್ಲಿ ಸಂಸ್ಕೃತ ಚತುಷ್ಪಾಠೀ ಇರದಿದ್ದುದರಿಂದ ಕಾಲಿಘಾಟವನ್ನು ಅವನ ಚತುಷ್ಪಾಠೀ ಹಾಗೂ ತೀರ್ಥಯಾತ್ರೆಯ ಪೀಠವೆಂದು ಗೊತ್ತುಪಡಿಸಲಾಯಿತು.

ಬಹುಶಃ ಮುಸ್ಲಿಮ-ಪೂರ್ವ ಕಾಲದಲ್ಲಿ ಹಿಂದೂಗಳು ಇಡಿ ಕೋಲ್ಕತಾವನ್ನು ಕಾಲಿಕಾಕ್ಷೇತ್ರ ಅಥವಾ ಕಾಲಿಖಾತಾ ಎಂದು ಕರೆಯುತ್ತಿದ್ದರು. ಮುಸ್ಲಿಮ ಭೂದಾಖಲೆಗರಿಗೆ ಹಿಂದೂ ದೇವತೆಯ ಹೆಸರನ್ನು ಪದೇ ಪದೇ ಬರೆಯುವುದು ಇಷ್ಟವಿರಲಿಲ್ಲದ್ದರಿಂದ

'ಕಾಲಿಖಾತಾ'ದಲ್ಲಿರುವ 'ಕಾಲಿ' ಯಲ್ಲಿರುವ 'ಆ' ವನ್ನು ಹ್ರಸ್ವಗೊಳಿಸಿದರು. ಹಿಂದೂ ಪಂಡಿತರಲ್ಲೂ ಆಸ್ಮಿಕ್ ಅಥವಾ ಮಂಗಲಾಯ್ಸ್ ಸ್ಥಳನಾಮಗಳನ್ನು ಸಂಸ್ಕೃತೀಕರಿಸುವ ಪ್ರವೃತ್ತಿ ಕಂಡುಬರುತ್ತದೆ. ಒಮ್ಮೆ ಮುಸ್ಲಿಮ ದಾಖಲೆಗಳಲ್ಲಿ ಮತ್ತು ಐನ್-ಇ-ಅಕಬರಿ ಯಂಥ ಮುಸ್ಲಿಮ ಇತಿಹಾಸ ಗ್ರಂಥಗಳಲ್ಲಿ ಹಾಗೂ ಕಾನೂನು ಗ್ರಂಥಗಳಲ್ಲಿ 'ಕಾಲಿಖಾತಾ' ಎಂದು ಸೇರ್ಪಡೆಯಾದ ಮೇಲೆ ಹಿಂದೂಗಳು ತಮ್ಮ ಆಸ್ತಿ ಹಸ್ತಾಂತರ ಮತ್ತು ಭೂಕಂದಾಯ ಸಂದಾಯ ಮುಂತಾದ ದಿನನಿತ್ಯದ ಆಡಳಿತ ಬಳಕೆಯಲ್ಲಿ ಹೊಸ ಕಾಗುಣಿತವನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು. ಕಲಕತ್ತಾ ಎಂಬ ಹೆಸರು ಮೇಲ್ಕಾಣಿಸಿದ ಎರಡು ಹೆಸರುಗಳಿಂದ ಬಂದಿರಬಹುದು. ಕುಲ್ಜಿಗಳ ಪ್ರಕಾರ, ಬಲ್ಲಾಳಸೇನನು ಸೆರಾನ ವಂಶಜರಿಗೆ ಈ ಭೂಭಾಗವನ್ನು ನೀಡಿದ್ದ. ಆದರೆ, ಈ ಸೆರಾ ಮತ್ತು ಅವನ ವಂಶಜರ ಬಗೆಗೆ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ. ಬಲ್ಲಾಳನ ಕುಲದೇವತೆಯಾದ ಸದಾಶಿವನೂ ಬಾನ್ ತಂತ್ರದ ಕುಂಟು ಝುಂಗ್ಪೊ ಇಬ್ಬರೂ ಒಂದೇ ಆಗಿರಬಹುದು. ಬಲ್ಲಾಳಸೇನನು ಮಾಂತ್ರಿಕ, ತಾಂತ್ರಿಕ ಆಚಾರಗಳನ್ನು ಬೌದ್ಧ ಭಿಕ್ಷುವಿನ ಚರಣ ಸನ್ನಿಧಿಯಲ್ಲಿ ಪ್ರಾರಂಭಿಸಿದನು.

ಬೌದ್ಧ ಭಿಕ್ಷುವು ಶವರ, ಡಾಮ ಮುಂತಾದ ಕೆಳಜಾತಿಯ ಪತ್ನಿಯೊಂದಿಗೆ ಮಂಡಲದ ಮೇಲೆ ಕುಳಿತುಕೊಂಡು ಎಡಗೈಯಿಂದ ಪೂಜಿಸುವ ವಿಧಾನವನ್ನು ಅನುಸರಿಸುತ್ತಿದ್ದ. ಮೇಲ್ಕಾಣಿಸಿದಂತೆ ಇಂಥ ವಿಧಿಯಲ್ಲಿ ದೀಕ್ಷೆ ಪಡೆದಿದ್ದ ಬಲ್ಲಾಳಸೇನನು ತಾಂತ್ರಿಕ ವಿಧಿಗಳನ್ನು ಪೂರೈಸಲೊಸುಗ ಡೊಮಿ ಕೆಳಜಾತಿಯ ಕನ್ಯೆಯನ್ನು ಜೊತೆಗಾರ್ತಿಯಾಗಿ ಸ್ವೀಕರಿಸಿದನು. ಬಲ್ಲಾಳಸೇನನ ಮೇಲೆ ತಾಂತ್ರಿಕ ಗುರುವಿನ ಪ್ರಭಾವ ಎಷ್ಟಿತ್ತೆಂದರೆ, ತಂದೆ ಬಿಜೊಯ್‌ಸೇನನ ಅಸಮ್ಮತಿ ಕೂಡ ಅದನ್ನು ತಡೆಯಲಾಗಲಿಲ್ಲ. ಇದು ಶೈವ ಬೌದ್ಧ ಉತ್ಸವಗಳ ಮಿಶ್ರ ಆರಾಧನಾ ಪದ್ಧತಿಯಾಯಿತು. ಅವುಗಳಲ್ಲಿ ಅತ್ಯುತ್ತಮವಾದುದೆಂದರೆ ನೀಲವ್ರತ (ನೀಲೇರಬ್ರತ) ಉತ್ಸವ. ದೇವತೆಯು ನೀಲ ಸರಸ್ವತಿಯಾಗಿ ಹೇಗೆ ಪರಿವರ್ತನೆಗೊಂಡಳೆಂದು ವರ್ಣಿಸುವ ವೃಹನ್ನೀಲ ತಂತ್ರಮ್ ಇದೆ. ಅದು ಆಕೆಯ ಪೂಜಾವಿಧಾನವನ್ನೂ ವಿಧಿಸುತ್ತದೆ. (ದ ವೃದನ್ನೀಲ ತಂತ್ರಮ್ - X1 ಪಾತಾಲ).

ಬಲ್ಲಾಳನು ಸಿಂಹಾಸನವೇರಿದ ತರುವಾಯ ಸಿಂಹಗಿರಿ ಎಂಬ ಶೈವತಂತ್ರಾಚಾರ್ಯನು ಓಲಗಕ್ಕೆ ಬಂದನು. ಅವನ ಶ್ರೇಷ್ಠ ತಾಂತ್ರಿಕ ಶಕ್ತಿಯಿಂದ ಸಂಪೂರ್ಣವಾಗಿ ಪ್ರಭಾವಿತನಾದ ಬಲ್ಲಾಳನು ಅವನ ಶಿಷ್ಯನಾಗಿ ಶಕ್ತಿಪಂಥದ ದೀಕ್ಷೆಪಡೆದನು.

ಅಶೋಕನು ಬೌದ್ಧ ಧರ್ಮವನ್ನು ರಾಜ್ಯದ ಧರ್ಮವನ್ನಾಗಿಸಿ ನಾಡಿನೊಳಗೆ ಅನುಷ್ಠಾನ ಮತ್ತು ನಾಡಿನಾಚೆ ಪ್ರಸಾರಕ್ಕಾಗಿ ವಿವಿಧ ಕಾರ್ಯಕರ್ತರನ್ನು ನೇಮಿಸಿದಂತೆಯೇ ಬಲ್ಲಾಳನೂ ಧರ್ಮಾಧ್ಯಕ್ಷ ಅಥವಾ ಪ್ರಧಾನ ಪುರೋಹಿತ, ಶಾಂತಿವಾರಿಕ ಅಥವಾ ಶಾಂತಿಗಾಗಿ ಜಲ ಸಿಂಪಡಿಗಾರ ಮುಂತಾದ ಹುದ್ದೆಗಳನ್ನು ಸೃಷ್ಟಿಸಿದ. ಮತ್ತು ಅರ್ಹ ಬ್ರಾಹ್ಮಣ ಪಂಡಿತರಿಗೆ ಈ ಹುದ್ದೆಗಳನ್ನು ನೀಡಲಾಗುತ್ತಿತ್ತು. ಅವನು ಇದನ್ನು ಮಾಡಿದ್ದು ತನ್ನ ರಾಜ್ಯದೊಳಗೆ ಧರ್ಮಾಚರಣೆಗೆ ಮಾತ್ರವಲ್ಲದೆ ನೆರೆ ರಾಜ್ಯಗಳಿಗೆ ತಾಂತ್ರಿಕ ಪಂಥವನ್ನು ಹಬ್ಬಿಸಲೂ ಕೂಡ. ಅವನು ಮೂವತ್ತು ಹಿಂದೂ ತಂತ್ರಾಚಾರ್ಯರನ್ನು ತಿಬೆಟಿಗೆ, ಅರವತ್ತನ್ನು ಮಾರಂಗಕ್ಕೆ (ಮೊಯಿರಂಗ), ಇಪ್ಪತ್ತೆರಡು ಆಚಾರ್ಯರನ್ನು ಉತ್ಕಲಕ್ಕೆ ಮತ್ತು ಇನ್ನು ಇಪ್ಪತ್ತೆರಡನ್ನು ರವಂಗಕ್ಕೆ ಕಳುಹಿದನು. ಆ ತಂತ್ರಾಚಾರ್ಯರು ಆಯಾ ರಾಜ್ಯಗಳಲ್ಲಿ ಅನೇಕರಿಗೆ ದೀಕ್ಷೆಕೊಟ್ಟರು. ಹೀಗಾಗಿ,

ಶಕ್ತಿಪಂಥಾನುಯಾಯಿಗಳ ಸಂಖ್ಯೆ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಬೆಳೆಯಿತು. ಆ ಬಂಗಾಲಿ ತಾಂತ್ರಿಕರ ಹೆಸರುಗಳು ಗುಜರಾತ, ಪಾವಗಡ ಮತ್ತು ಪಟನ್‌ಗಳ ಅರಸರ ಮತ್ತು ಅರಸು ಕುಟುಂಬದವರ ಹೆಸರುಗಳು ಆಗಮಪ್ರಕಾಶ (೧/೩)ದಲ್ಲಿ ಪಟ್ಟಿಗೊಂಡಿವೆ. ಸೇನರಾಜ್ಯದ ಪತನಾನಂತರವೂ ಬಂಗಾಲದ ತಾಂತ್ರಿಕ ಪ್ರಭಾವ ಶತಮಾನಗಳುದ್ದಕ್ಕೂ ಮುಂದುವರಿಯಿತು. ಕ್ರಿ.ಶ.೧೬ನೆಯ ಶತಮಾನದಲ್ಲಿ ಕೊಡಬೇಕಾದ ಅರಸ ನರನಾರಾಯಣನು ರಾಧಾ ದೇಶದಿಂದ (ಪಶ್ಚಿಮ ಬಂಗಾಲ) ಅನೇಕ ತಾಂತ್ರಿಕರನ್ನು ಕರೆದೊಯ್ದು ತನ್ನ ರಾಜ್ಯದಲ್ಲಿ ಅವರಿಗೆ ನೆಲೆ ಕಲ್ಪಿಸಿಕೊಟ್ಟನು.

ಕ್ರಿ.ಶ.೧೮ನೆಯ ಶತಮಾನದಲ್ಲಿ ಆಸಾಮಿನ ಅಹೋಮ ರಾಜನು ಕಾಮಾಖ್ಯಾದೇವಿಯ ದೇಖರೇಖಿಯನ್ನು ನದಿಯಾ ಊರಿನ ಗೋಸಾಯಿಗಳೆಂದು ಕರೆಯಲಾಗುವ ಆ ಬಂಗಾಲಿ ಬ್ರಾಹ್ಮಣನ ವಂಶಜರೇ ಆ ದೇವಾಲಯದ ನಿರ್ವಹಣೆ ಮತ್ತು ಪೂಜಾವ್ಯವಸ್ಥೆ ನೋಡಿಕೊಳ್ಳುತ್ತಿರುವರು. ಶಕ್ತಿಪೂಜೆ ಮತ್ತು ವಿಧಿಗಳಲ್ಲಿ ಇಡೀ ದೇಶವು ಬಂಗಾಲದ ಆಚಾರ್ಯರ ಹಿರಿತನವನ್ನು ಒಪ್ಪಿಕೊಂಡಿರುವುದು.

ಶಕ್ತಿಪೂಜೆಯನ್ನು ಜನಪ್ರಿಯಗೊಳಿಸಲು ಮತ್ತು ಪಸರಿಸಲೋಸುಗ ಬಲ್ಲಾಳಸೇನನು ಬೇರೆ ಬೇರೆ ರಾಜ್ಯಗಳಿಗೆ ಪ್ರಚಾರಕರನ್ನು ಕಳುಹಿದನಲ್ಲದೆ ತನ್ನ ರಾಜ್ಯದೊಳಗಡೆಯೂ ತಂತ್ರಾಚಾರ್ಯರನ್ನು ಹಲವು ರೀತಿಯಲ್ಲಿ ಪ್ರೇರೇಪಿಸಿದ. ಅವನ ಉಪದೇಶದಂತೆ ಶೈವ ಮತ್ತು ಬೌದ್ಧ ತಾಂತ್ರಿಕ ಬೋಧಕರು ತಮ್ಮ ಭಿನ್ನಾಭಿಪ್ರಾಯ, ವ್ಯಾಜ್ಯಗಳನ್ನು ತಾವೇ ಹೊಂದಾಣಿಕೆ ಮಾಡಿಕೊಂಡರು.

ಹಿಂದಿ ಪತ್ರಿಕೆ ಧರ್ಮಯುಗದಲ್ಲಿ (ಏಪ್ರಿಲ್ ೧೮, ೧೯೫೪) ಒಬ್ಬ ಅಂಕಣಕಾರ ಹೀಗೆ ಬರೆದ: ತಾಂತ್ರಿಕರು ತಮ್ಮ ತಮ್ಮ ಪೂಜಾ ಮತ್ತು ಧಾರ್ಮಿಕ ವಿಧಿಗಳನ್ನು ನಿರಾತಂಕವಾಗಿ ಆಚರಿಸಲು ಅನುಕೂಲವಾಗಲೆಂದು ಬಲ್ಲಾಳಸೇನನು ಉತ್ತರದ ದಕ್ಷಿಣೇಶ್ವರದಿಂದ ದಕ್ಷಿಣದ ಬಂಗಾಲ ಕೊಲ್ಲಿವರೆಗೆ ಚಾಚಿದ್ದ ತ್ರಿಕೋನಾಕೃತಿಯ ಭೂಭಾಗವನ್ನು ಸಂರಕ್ಷಿಸಿದ್ದನು. ಕಾಲಿಘಾಟ ಇಂಥ ಪೂಜೆ ಮತ್ತು ವಿಧಿಗಳ ಕೇಂದ್ರವಾಗಿತ್ತು.

## ಕೋಲ್ಕತಾ ಬರಿ ೩೦೦ ವರ್ಷ ಪ್ರಾಚೀನವೆ?:

ಬಂಗಾಲಿಗಳು ತಮ್ಮ ಭವ್ಯ ಇತಿಹಾಸವನ್ನು ಮರೆತಿರುವರು ಮತ್ತು ಅವರ ದೃಷ್ಟಿಯನ್ನು ಬ್ರಿಟಿಷ್ ಸಾಮರ್ಥ್ಯ ಮತ್ತು ವೈಭವ ಮಂಕಾಗಿಸಿದೆ. ೧೯೯೦ರಲ್ಲಿ ಜರುಗಿದ ಕೋಲ್ಕತಾದ ೩೦೦ನೆಯ ಸ್ಥಾಪನಾ ವರ್ಷೋತ್ಸವ ಇದಕ್ಕೊಂದು ಉದಾಹರಣೆ. ೧೬ನೆಯ ಶತಮಾನದ ಆದಿಯಲ್ಲಿ ತುರ್ಕಿ ಆಳ್ವಿಕೆ ಅಂತ್ಯಗೊಳ್ಳುತ್ತಿರುವಾಗ ರವಿಕಂಕಣ ಮುಕುಂದರಾಮ ಚಕ್ರವರ್ತಿ ತನ್ನ ಚಂಡೀಮಂಗಲ ರಚಿಸಿದ. ಚಂಡೀಮಂಗಲ ಪ್ರಕಟಗೊಂಡ ಕ್ಷಿಪ್ರ ತರುವಾಯದಲ್ಲಿ ಮುಘಲಯುಗ ಆರಂಭಗೊಂಡಿತು. ಆಗ ಬ್ರಿಟಿಷರಾಗಲಿ, ಪೋರ್ತುಗೀಜರಾಗಲಿ ಬಂಗಾಲ ತಲುಪಿದ್ದಿಲ್ಲ. ಚಂಡೀಮಂಗಲದಲ್ಲಿ ಕಾಲಿಕಾಕ್ಷೇತ್ರ ಮತ್ತು ಕಾಲಿಘಾಟದ ಗ್ರಾಮಗಳ ಸವಿವರ ವರ್ಣನೆ ಮತ್ತು ಅನುಗೊಡಬರುವ ನೆಲೆಗಳು ನೋಡಸಿಗುತ್ತವೆ. ಗೌಡ ಪ್ರಾಂತದ ಮಂಗಲಕೋಟದಲ್ಲಿರುವ ಉಜಾನಿ ಪಟ್ಟಣದಿಂದ ವರ್ತಕ ಧನಪತಿಯು ತನ್ನ ಮಗ ಶ್ರೀಮಂತನೊಂದಿಗೆ ಸಾಗರದಾಚೆ ವ್ಯಾಪಾರ ಪಯಣಕ್ಕೆ

ಹೊರಟುದನ್ನು ನೋಡುತ್ತೇವೆ. ಚಿತ್ಪೂರ ಮತ್ತು ಸ್ಕಾಲಿಯಾಗಳಲ್ಲಿ ನಿಲ್ಲದೆ ಅವರ ನಾವೆ ಭಾಗೀರಥೀ ಮೇಲೆ ವೇಗವಾಗಿ ಹಾಯ್ದು ಬಂಗಾಲ ಕೊಲ್ಲಿಯತ್ತ ಸಾಗಿತ್ತು. ದಿನ ಅಂತ್ಯವಾದಾಗ ಅವರು ಕಾಲಿಕಾತಾ ಎಂಬ ಗ್ರಾಮದಲ್ಲಿ ನಿಲ್ಲಲಿಲ್ಲ. ಆದರೆ, ಆ ವರ್ತಕನು ಬೇತಾಯಿ ಚಂಡೀ ದೇವತೆಗೆ ಬೇತಾಯಿಯಲ್ಲಿಯೇ ನೈವೇದ್ಯ ಅರ್ಪಿಸಿದ. ವರ್ತಕನು ಹಿಜ್ಲಿಯ ಬಳಸುದಾರಿಯನ್ನು ಬಿಟ್ಟು ನೇರವಾಗಿ ಸ್ವಲ್ಪ ದೂರಸಾಗಿ ಕಾಲಿಘಾಟ ತಲುಪಿದ.

ಅವರು ರಾತ್ರಿ ತಂಗಿದ್ದ ಸ್ಥಳ ಇದೇ. ಮರು ಮುಂಜಾನೆ ಮಾತಾ ಕಾಳಿಕಾಳನ್ನು ಪೂಜಿಸಿ ವರ್ತಕನು ಬಾಹ್ಯಸಮುದ್ರಕ್ಕೆ ತನ್ನ ಯಾನ ಬೆಳೆಸಿದ. ವರ್ತಕ ಧನಪತಿಯ ಯಾನವನ್ನು ವರ್ಣಿಸುವಾಗ ಮಂಗಲಕಾವ್ಯದ ಕವಿತೆಗಳು ಊರುಗಳನ್ನು ವರ್ಣಿಸುತ್ತ ಒಂದಾದ ಮೇಲೊಂದರಂತೆ ಅವುಗಳ ಹೆಸರುಗಳನ್ನು ವಿವರವಾಗಿ ಕೊಡುತ್ತವೆ. ಆ ಕಾಲಕ್ಕಾಗಲೇ ಮುಘಲ ಸರಕಾರದ ದಸ್ತೈವಜುಗಳಲ್ಲಿ ಕಾಲಿಕಾತಾ ಹೆಸರು ಉಲ್ಲೇಖಗೊಂಡಿದ್ದನ್ನು ಕಾಣುತ್ತೇವೆ.

ಅಕಬರನ ಭೂ ಮತ್ತು ಕಂದಾಯ ಸಲಹೆಗಾರನಾಗಿದ್ದ ತೋಡರಮಲ್ಲನು 'ಸರಕಾರ'ಗಳೆಂದು ಕರೆಯಲಾಗುವ ಕೆಲವು ಘಟಕಗಳಲ್ಲಿ ಬಂಗಾಲವನ್ನು ವಿಭಜಿಸಿದನು. ಸಪ್ತಗ್ರಾಮ ಅರ್ಥಾತ್ ಸರಕಾರ ಸತಗಾಂವ ಇಂಥದೊಂದು ವಿಭಾಗ. ಅದರಲ್ಲಿ ಮತ್ತೆ ಮೂರು ಮಹಾಲಗಳಿದ್ದವು. (೧). ಕಾಲಿಕಾತಾ (೨). ಮೆಚೂಮಾ ಮತ್ತು (೩). ಬರಕಾಪುರ (ಇಂದಿನ ಬರಕಪುರ). ಇವು ಮೂರು ಮಹಾಲಗಳು ಸಪ್ತಗ್ರಾಮದಲ್ಲಿದ್ದುದನ್ನು ಐನ್-ಇ- ಅಕಬರಿ (ಅರ್. ಕೆನವೇ ಅವರ ಭಾಷಾಂತರ, ಪು, ೪೭೨) ದಾಖಲಿಸಿದೆ. ಸಪ್ತಗ್ರಾಮವು ಗಂಗಾನದಿ ದಡದಲ್ಲೊಂದು ಮಹತ್ವದ ರೇವು ಆಗಿತ್ತು. ಮತ್ತು ಕಾಲಿಕಾತಾ, ಮೆಚುಮಾ ಮತ್ತು ಬರಕಾಪುರ ಮಹಾಲಗಳನ್ನು ಆಗಲೇ ರೇವುಗಳಾಗಿ ಅಭಿವೃದ್ಧಿಪಡಿಸಲಾಗಿದ್ದು ಅವು ಮುಘಲ ಸರಕಾರಕ್ಕೆ ಸಾಕಷ್ಟು ಆದಾಯ ನೀಡುತ್ತಿದ್ದವು. ಹಾಗಾಗಿ, ಐನ್-ಇ-ಅಕಬರಿಯಲ್ಲಿ ಉಲ್ಲೇಖ ಯೋಗ್ಯವಾಗಿ ಅವುಗಳನ್ನು ಮಹಾಲಗಳ ಕೇಂದ್ರಸ್ಥಾನವಾಗಿ ಮಾಡಲಾಯಿತು.

ಹಡಗುಗಳನ್ನು ದುರಸ್ತಿ ಮಾಡಲು ಲಭ್ಯವಿದ್ದ ಸೌಲಭ್ಯಗಳು, ರಸ್ತೆಗಳು, ನಾಗರಿಕ ಸೌಲಭ್ಯಗಳು, ಸಸ್ತಾ ಕೂಲಿ ಮುಂತಾದ ಅಧೋರಚನೆಗಳನ್ನು ಅನುಲಕ್ಷಿಸಿ ಪೋರ್ತುಗೀಜರು ಕ್ರಿ.ಶ. ೧೫೭೯ರಲ್ಲಿ ಸಪ್ತಗ್ರಾಮದ ಬಳಿಯ ಗಂಗಾನದಿ ದಡದಲ್ಲಿದ್ದ ಹೂಗ್ಲಿ ರೇವನ್ನು ತಮ್ಮ ವ್ಯಾಪಾರಿಕೇಂದ್ರಕ್ಕೆ ಅತಿ ಯೋಗ್ಯ ಸ್ಥಳವೆಂದು ಆಯ್ಕೆ ಮಾಡಿದರು. ೧೬೯೦ರಲ್ಲಿ ಜಾಬ್ ಚಾಮಕ್ ಬಂದಾಗ ಅಂತಹವೇ ಪ್ರಯೋಜನಗಳು ಮತ್ತು ಅಧೋರಚನೆಗಳನ್ನು ಅನುಲಕ್ಷಿಸಿ ಅವನು ಈಸ್ಟ್ ಇಂಡಿಯಾ ಕಂಪನಿಯ ಹೆಸರಿನಲ್ಲಿ ಬ್ರಿಟಿಶ್ ವ್ಯಾಪಾರಿ ಕಚೇರಿ ಆರಂಭಿಸಲು ಗಂಗಾನದಿ ದಂಡೆಯಲ್ಲಿದ್ದ ಅಂತಹದೇ ರೇವು ಆಗಿದ್ದ ಕೋಲಕತಾವನ್ನು ಆಯ್ಕೆ ಮಾಡಿದನು.

ಜಾಬ್ ಚಾಮಕ್‌ನನ್ನು ಕೋಲ್ಕತಾದ ಸಂಸ್ಥಾಪಕನೆಂದು ಕರೆಯಲಾಗುತ್ತಿರುವುದಾದರೂ ಅದು ತಪ್ಪು. ಕೋಲ್ಕತಾ ಕೇವಲ ೩೦೦ ವರ್ಷ ಪುರಾತನವೆಂದು ತಿಳಿಯುವುದು ಕೂಡ ಅಷ್ಟೇ ತಪ್ಪು. ಕಾಲಿಕಾಕ್ಷೇತ್ರ ಸೇರಿದಂತೆ ಇಡೀ ಕಾಲಿಘಾಟವನ್ನು ಅಭಿವೃದ್ಧಿಗೊಳಿಸಲು ಬಲ್ಲಾಳಸೇನನು ಕೈಗೊಂಡ ಮೊದಲ ಹೆಜ್ಜೆಗಳನ್ನು ನಾವು ಪರಿಗಣಿಸದೆ ಹೋದರೆ ಭವ್ಯ ಪ್ರಾಚೀನ ಬಂಗಾಲಿ ಪರಂಪರೆಯ ಬಗೆಗೆ ಭಾರಿ ಅಜ್ಞಾನಿಗಳಾಗುವೆವು. ಹಾಗೆಯೆ, ಚಂಡೀಮಂಗಲ ಮುಂತಾದ ಬಂಗಾಲಿ

ಸಾಹಿತ್ಯದಲ್ಲಿ, ಸಮಕಾಲೀನ ಶಾಸನಗಳಲ್ಲಿ, ಮುಘಲ ಸರಕಾರದ ದಸ್ತೈವಜುಗಳಲ್ಲಿ, ತಲೆತಲಾಂತರಗಳಿಂದ ಬಂದ ಕುಲ್ಜಿಗಳಲ್ಲಿ, ಜಾನಪದ ಸಾಹಿತ್ಯದಲ್ಲಿ, ಐತಿಹ್ಯಗಳಲ್ಲಿ ದೊರೆಯುವ ಪ್ರಮಾಣಗಳನ್ನು ಅಲಕ್ಷಿಸಿದಂತಾಗಿದೆ.

**ಪಶ್ಚಿಮ ಬಂಗಾಲ ರಾಜ್ಯ ಮತ್ತು ಕಲಕತ್ತಾ ನಗರದ ಪುನರ್ನಾಮಕರಣ :**

ಈ ಪುಸ್ತಕ ಅಚ್ಚಿಗೆ ಹೋಗುವ ಹೊತ್ತಿಗೆ ಪಶ್ಚಿಮ ಬಂಗಾಲ ರಾಜ್ಯವನ್ನು 'ಬಾಂಗ್ಲಾ' ಎಂದು ಕಲಕತ್ತಾ ನಗರವನ್ನು 'ಕೋಲ್ಕತಾ' ಎಂದು ಪುನರ್ನಾಮಕರಣ ಮಾಡಬೇಕೆ ಹೇಗೆ ಎಂಬ ರಾಷ್ಟ್ರವ್ಯಾಪಿ ಚರ್ಚೆ ನಡೆದಿತ್ತು. ಈ ಸಂಬಂಧದಲ್ಲಿ ಕೆಳಕಂಡ ಅಂಶಗಳನ್ನು ಪರಿಗಣಿಸುವ ಆಗತ್ಯವುಂಟು.

(ಅ) ಅದನ್ನು ಬೇರೆ ರಾಜ್ಯಗಳಿಂದ ಭಿನ್ನವಾಗಿಸಿ ಗುರುತಿಸಲು ಮತ್ತು ಅದರ ಕೆಲವು ವಿಶಿಷ್ಟ ಗುಣಲಕ್ಷಣಗಳನ್ನು ವ್ಯಕ್ತಮಾಡಲು ಯಾವುದೊಂದು ರಾಜ್ಯಕ್ಕೆ ಒಂದು ಹೆಸರು ಇಡುತ್ತೇವೆ. 'ಬಾಂಗ್ಲಾದೇಶ' ಎಂಬ ದೇಶ ಈಗಾಗಲೇ ಅಸ್ತಿತ್ವದಲ್ಲಿದ್ದುದರಿಂದ 'ಬಾಂಗ್ಲಾ' ಎಂಬ ಹೆಸರಿಟ್ಟರೆ ನಮ್ಮ ರಾಜ್ಯ ಅದರಿಂದ ಸಾಕಷ್ಟು ಭಿನ್ನವಾಗದು. ಆದುದರಿಂದ 'ಬಾಂಗ್ಲಾ' ಶಬ್ದ ವ್ಯುತ್ಪತ್ತಿ ಹೊಂದಿದ, ಆದರೆ, ಉಚ್ಚಾರಣಾನುರೂಪವಾಗಿ ಭಿನ್ನವಾಗಿರುವ 'ಬಂಗ'ವನ್ನು ನಮ್ಮ ರಾಜ್ಯದ ಹೆಸರೆಂದು ಸ್ವೀಕರಿಸಬಹುದೆಂದು ಸೂಚಿಸುವೆವು. 'ಬಂಗ' ಶಬ್ದವು ಆಸ್ಟ್ರೋನೇಶಿಯನ್ ಮೂಲದ್ದಾಗಿದ್ದು ಕೊಲ್ಲಿ ಅಥವಾ ಉಪಸಾಗರ ಎಂಬರ್ಥ ಹೊಂದಿದೆ. ಬಂಗ ಶಬ್ದದ ಆಸ್ಟ್ರೋನೇಶಿಯನ್ ಅರ್ಥ ಮರೆತುಹೋಗಿರುವುದರಿಂದ ಬಂಗಾಲಕೊಲ್ಲಿಗೆ ನಾವು 'ಬಂಗ' ಉಪಸಾಗರ ಎಂಬ ಹೆಸರು ಇಟ್ಟಿದ್ದೆವು. 'ಬಂಗ' ಶಬ್ದವು ಮರುನಾಮಕರಣದ ಎರಡು ಮಾನದಂಡಗಳನ್ನು ಈಡೇರಿಸುವುದು. ಉಚ್ಚಾರಣಾನುರೂಪವಾಗಿ ಅದು ಪಶ್ಚಿಮ ಬಂಗಾಲವನ್ನು ಬಾಂಗ್ಲಾದೇಶದಿಂದ ಭಿನ್ನವಾಗಿಸುತ್ತದೆ. ಅದೇ ವೇಳೆಗೆ, ಒಂದೇ ಕೊಲ್ಲಿಯ ಕರಾವಳಿಗುಂಟ ಇರುವ ಎರಡೂ ರಾಜ್ಯಗಳ ಸ್ಥಳನಿರ್ದೇಶಿಸುತ್ತದೆ. ಹಾಗಾಗಿಯೆ, ವಿಭಜನಪೂರ್ವದಲ್ಲಿ ಎರಡೂ ರಾಜ್ಯಗಳನ್ನು 'ಬಂಗ' ಎಂದೇ ಕರೆಯಲಾಗುತ್ತಿತ್ತು. 'ಬಂಗ' ಶಬ್ದದ ಮೂಲವನ್ನು ನನ್ನ ಪುಸ್ತಕ ಲಕ್ಷ್ಮಣಸೇನೇರ ಉತ್ತರಪುರುಷೇರ (ಪು.೬೨) ದಲ್ಲಿ ಚರ್ಚಿಸಿರುವೆ.


ಪಾಲಿನೇಶಿಯನ್ ದಾನವರು ಪ್ರಾಗೈತಿಹಾಸಿಕ ಕಾಲದಲ್ಲಿ ವಂಗದೇಶದ ಕರಾವಳಿಯನ್ನು ಸಂದರ್ಶಿಸಿದರು. ಮತ್ತು ನಾಲಗೆ ಹೊರಚಾಚಿದ ಭೂದೇವತೆ ಕಾಲಿಕಾದೇವಿಯನ್ನು ಬಂಗಾಲ ಕೊಲ್ಲಿಯಲ್ಲಿ ಸ್ಥಾಪಿಸಿದರು. ಅಂದಿನಿಂದಲೂ ಕಲಕತ್ತಾವು ಕಾಲಿಕಾದೇವಿಯ ಪ್ರಮುಖ ಪೀಠವಾಯಿತು ಮತ್ತು ಶಕ್ತಿಪೂಜೆಯ ಮಹಾಕೇಂದ್ರವಾಯಿತು. ಆ ಪರಂಪರೆಯನ್ನು 'ಕಾಲಿಕಾ ವಂಗದೇಶೇ ಚ' ಎಂದು ಆದ್ಯಾಸ್ತೋತ್ರ ದಾಖಲಿಸಿದೆ. ಕ್ರಿ.ಶ. ೮ನೆಯ ಶತಮಾನದಲ್ಲಿ ಅರಸ ಆದಿಸೂರನು ಬಂಗಾಲಕ್ಕೆ ಐದು ಬ್ರಾಹ್ಮಣರನ್ನು ಕರೆತಂದನು. ಅವರಲ್ಲೊಬ್ಬನಾದ ಕ್ಷಿತಿಷಃ ದೇವಶರ್ಮನಿಗೆ ಮಾನಭೂಮ ಜಿಲ್ಲೆಯ ಪಂಚಕೋಟ ಗ್ರಾಮದಲ್ಲಿ ಭೂಮಿ ಕೊಡಲಾಯಿತು. ಆದರೆ, ಅವನು ಸಂಸ್ಕೃತ ಶಿಕ್ಷಣಕ್ಕಾಗಿ

ಮತ್ತು ತೀರ್ಥಯಾತ್ರೆಗಾಗಿ ಕಾಳಿಕಾದೇವಿಯ ಪೀಠವಾಗಿದ್ದ ಕಲಕತ್ತೆಗೆ ಬರಬೇಕಿತ್ತು, ಇವೆಲ್ಲ ಅಂಶಗಳು ಕುಲ್ಜಿಗಳಿಂದ ಸ್ಪಷ್ಟಪಡುತ್ತವೆ. ಪ್ರಾಚೀನ ಕಾಲದಲ್ಲಿ ಹಿಂದೂಗಳು ಈ ಊರಿಗೆ 'ಕಾಲಿಕಾಕ್ಷೇತ್ರ' ಅಥವಾ 'ಕಾಲಿಖಾತಾ' ಎಂದು ಹೆಸರಿಟ್ಟರು. ಕೆಲವು ಶತಮಾನಗಳ ತರುವಾಯ ಬಲ್ಲಾಳಸೇನನು (ಕ್ರಿ.ಶ.೧೧೫೯-೧೧೭೯) ಕಾಲಿಕಾಪೀಠದ ಸುತ್ತಲಿನ ಭೂಮಿಯನ್ನು ಸೆರಾನ ವಂಶಜರಿಗೆ ವಹಿಸಿಕೊಟ್ಟ. ಆದರೆ, ಸೆರಾ ಮನೆತನದ ವಿವರಗಳನ್ನು ಇನ್ನಷ್ಟು ಸಂಶೋಧಿಸಬೇಕಿದೆ. ನಾಥಯೋಗಿಯಾಗಿದ್ದ ಚೌರಂಗೀನಾಥನು ತೀರ್ಥಯಾತ್ರಾರ್ಥಿಗಳಿಗಾಗಿ ಕಾಲಿಕಾ ಗುಡಿಗೆ ರಸ್ತೆಯನ್ನು ನಿರ್ಮಿಸಿದ. ಅದರ ಭಾಗವೊಂದು ಈಗ ಅಭಿವೃದ್ಧಿಗೊಂಡು ಕಾಲಕ್ರಮದಲ್ಲಿ ಚೌರಂಗೀ ರಸ್ತೆಯೆಂದೆ ಕರೆಯಲ್ಪಡುತ್ತದೆ. ಮುಸ್ಲಿಮಪೂರ್ವ ಕಾಲಾವಧಿಯಲ್ಲಿ ಕಲಕತ್ತೆಯನ್ನು 'ಕಾಲಿಕಾ ಕ್ಷೇತ್ರ' ಹಾಗೂ ತರುವಾಯದಲ್ಲಿ 'ಕಾಲಿಖಾತಾ' ಎಂದು ಕರೆಯಲಾಯಿತು. ಅಮೀನರು (ಮುಸ್ಲಿಮ ಭೂಸ್ವಾಮ್ಯ ನಿರ್ಣಾಯಕ ಸಿಬ್ಬಂದಿ) ಸ್ಥಳನಾಮಗಳನ್ನು ದಾಖಲಿಸುವಾಗ 'ಕಾಲಿಖಾತಾ'ವನ್ನು ಸ್ವಲ್ಪ ಬದಲಿಸಿ 'ಕಾಲಿಕಾತಾ' ಎಂದು ಬರೆದರು. ಏಕೆಂದರೆ, ಬಹುಶಃ ಹಿಂದೂ ದೇವಿಯ ಹೆಸರನ್ನು ಪುನಃ ಪುನಃ ಬರೆಯುವುದು ಅವರಿಗೆ ಇಷ್ಟವಿರಲಿಲ್ಲ. ಮುಸ್ಲಿಮ ದಾಖಲೆಗಳಲ್ಲಿ, ಮುಸ್ಲಿಮ ಇತಿಹಾಸದಲ್ಲಿ ಐನ್-ಇ- ಅಕಬರಿಯಂಥ ಕಾನೂನು ಗ್ರಂಥಗಳಲ್ಲಿ ಒಮ್ಮೆ 'ಕಾಲಿಖಾತಾ' ಬದಲು 'ಕಾಲಿಕಾತಾ' ಸೇರ್ಪಡೆಗೊಂಡ ನಂತರ ಹಿಂದೂಗಳು ತಮ್ಮ ಭೂಕಂದಾಯ ಸಂದಾಯ ಮತ್ತು ಆಸ್ತಿ ವಿಲೇವಾರಿಗಳ ನಿತ್ಯ ವ್ಯವಹಾರಗಳಲ್ಲಿ 'ಕಾಲಿಕಾತಾ'ವನ್ನು ಸ್ವೀಕರಿಸುವುದು ಅನಿವಾರ್ಯವಾಯಿತು. 'ಕಾಲಿಕಾತಾ' ಕಾಲಕ್ರಮೇಣ 'ಕೋಲ್ಕತಾ' ಆಯಿತು. 'ಕ್ಷೇತ್ರ' ಶಬ್ದದಿಂದ ವ್ಯುತ್ಪತ್ತಿಗೊಂಡಿರುವ 'ಕಾತಾ' ಎಂದರೆ, ಸ್ಥಳ, ಊರು. ಸ್ಥಳದ ಬಗ್ಗೆ ಮಾಹಿತಿಯನ್ನು 'ಕೋಲ್' ಎಂಬುದು ಸೂಚಿಸುತ್ತದೆ. ಕಲಕತ್ತಾದ ಸಂದರ್ಭದಲ್ಲಿ ಅದಕ್ಕೆ ಅರ್ಥವಿಲ್ಲ. ಏಕೆಂದರೆ, 'ಕೋಲ್' ಜನರು ಇಲ್ಲಿ ವಾಸಿಸುವುದಿಲ್ಲ. ಆದರೆ, ಶತಶತಮಾನಗಳಿಂದಲೂ ಅದು ಕಾಲಿಕಾಪೀಠವನ್ನು ಹೊಂದಿದೆ. ಆದುದರಿಂದ, ಕಲಕತ್ತೆಯನ್ನು 'ಕಾಲಿಖಾತಾ' ಎಂದು ಮರುನಾಮಕರಣ ಮಾಡಿದರೆ 'ಕೋಲ್ಕತಾ' ನಮ್ಮ ಸಂಭಾಷಣೆಯಲ್ಲಿ ಉಳಿಯಬಹುದಾದರೂ ಅದರ ಅಂತರಾರ್ಥವನ್ನು ತಿಳಿದುಕೊಂಡರೆ ಉಚ್ಚರಿಸಲು ಸುಲಭ.

## ಅನುಬಂಧ 'ಢ'

### ಬಂಗಾಲ ಮತ್ತು ನೇಪಾಳಗಳಲ್ಲಿ ಮಹಿಷಮರ್ದಿನಿ ದುರ್ಗೆಯ ಪೂಜೆಯ ಮೇಲೆ ಮೈಸೂರಿನ ಪ್ರಭಾವ

ಭಾರತದ ಎಲ್ಲೆಡೆಗಳಲ್ಲಿ ಭಕ್ತಿ ಪಡೆದಿದ್ದ ಶಿವನ ಪೂಜೆಗಿಂತ ತಡವಾಗಿ ದುರ್ಗಾದೇವತೆಯ ಪೂಜೆ ಆರಂಭಗೊಂಡಿತು. ಗೌಡ ಕಾಹಿನಿ ಗ್ರಂಥ ಕರ್ತೃ ಶೈಲೇಂದ್ರಕುಮಾರ ಘೋಷರ ಅಭಿಪ್ರಾಯದಲ್ಲಿ, ಕರ್ನಾಟಕದ ಬಾಗಲಕೋಟ ಜಿಲ್ಲೆಯಲ್ಲಿಯ ಐಹೊಳೆಯಲ್ಲಿ ದೊರೆತ ಒಂದೇ ಒಂದು ದುರ್ಗಾದೇವತೆಯ ದೇವಾಲಯವಿತ್ತು. ಸೇನ ಅರಸರು ಇಲ್ಲಿಂದ ಮಹಿಷಮರ್ದಿನಿ ಪೂಜಾಪರಂಪರೆಯನ್ನು ಬಂಗಾಲಕ್ಕೆ ತಂದಿದ್ದರು. ಅಲ್ಲಿ ವಿಗ್ರಹ ಮತ್ತು ದೇವಾಲಯ ಇಂದಿಗೂ ನಿಂತಿದೆ ಮತ್ತು ಹಿಂದೆ ಮಾಡುತ್ತಿದ್ದಂತೆಯೇ ಇಂದೂ ಕರ್ನಾಟಕದ ಮನೆಮನೆಯಲ್ಲಿ ಚಂಡಿಯನ್ನು ಪಠಿಸಲಾಗುತ್ತಿದೆ. ಸಾಂಪ್ರದಾಯಿಕ ದಸರಾ ಉತ್ಸವವನ್ನು ಪ್ರಾಚೀನ ಕಾಲದಿಂದ ಇಂದಿನವರೆಗೂ ಸಡಗರ ಸಂಭ್ರಮಗಳಿಂದ ಆಚರಿಸಲಾಗುತ್ತದೆ. ಕನ್ನಡ ಮಾರ್ಕಂಡೇಯ ಪುರಾಣ ವನ್ನು ಇವತ್ತಿಗೂ ಕರ್ನಾಟಕದ ಪ್ರತಿ



Kāmārupa
Mithilā
Mahānandā
Barandra
Kotivarsa
Odantapur
Gauḍa
Punarbhava
Pundravardhana
Nālandā
Gayā
Uttar Radh
Atrāi
Magadha
Mayurakṣi
Ajaya
Banga
Damodara
Nabadvipa
Dakshin Radh
Jangi
Apar Mandar
Rupanarayana
Bagri
Suvarnarekhā
Kamsavati
Tamralipta
Kasipuri
Kalinga
Pūrva Sāgara

ಮನೆಯಲ್ಲೂ ನಿತ್ಯ ಪಠಿಸುವರು. ಐಹೊಳೆಯಲ್ಲಿರುವ ಈ ದೇವಾಲಯವನ್ನು ಚಾಲುಕ್ಯ ಅರಸರು ಕ್ರಿ.ಶ.೭ನೆಯ ಶತಮಾನದಲ್ಲಿ ಕಟ್ಟಿಸಿದರು.

ಸೇನವಂಶದ ಅರಸರು ಕ್ರಿ.ಶ. ೧೧ನೆಯ ಶತಮಾನದಲ್ಲಿ ಕರ್ನಾಟಕದ ಪಶ್ಚಿಮ ಭಾಗವನ್ನು ಆಕ್ರಮಿಸಿಕೊಂಡರು. ಈ ಅವಧಿಯಲ್ಲಿ ಅಷ್ಟ ಹಸ್ತಗಳುಳ್ಳ ಕಲ್ಲಿನ ಮಹಿಷಮರ್ದಿನಿಯನ್ನು ಚಾಮುಂಡಿ ಬೆಟ್ಟದ ಮೇಲೆ ಪ್ರತಿಷ್ಠಾಪಿಸಿದರು. ಕರ್ನಾಟಕದ ಜನರು ಅವಳನ್ನು ತಮ್ಮ ಅಧಿದೇವತೆಯೆಂದು ಬಗೆಯುತ್ತಾರೆ. ಸ್ವತಃ ಅರಸನು ತನ್ನ ಕುಟುಂಬದವರೊಂದಿಗೆ ನವಮಿವರೆಗೆ ಪ್ರತಿ ದಿನ ನೈವೇದ್ಯಗಳೊಂದಿಗೆ ದೇವಾಲಯಕ್ಕೆ ಬರುತ್ತಾನೆ. ಶರತ್ಕಾಲದ ಶುಕ್ಲಪಕ್ಷದುದ್ದಕ್ಕೂ ಪೂಜೆ ಮುಂದುವರಿಯುತ್ತದೆ. ಆಗ ಹತ್ತನೆಯ ದಿನವಾದ ದಸರಾ ಬರುತ್ತದೆ. ಅಂದು ಕರ್ನಾಟಕದುದ್ದಕ್ಕೂ ತೋಪುಗಳ ಗರ್ಜನೆ, ಕುದುರೆಗಳ ಕೆನೆತ, ಆನೆಗಳ ಘೀಳಿಡುವಿಕೆಯ ಜೊತೆಗೆ ಉತ್ಸವದ ಸಂಭ್ರಮದಲ್ಲಿರುವ ಜನರ ಗದ್ದಲಗಳು ಪ್ರತಿಧ್ವನಿಸುತ್ತವೆ.

ಹಿಂದೂ ಶಕ್ತಿಪಂಥದ ಸಂಪ್ರದಾಯವನ್ನು ಸೇನ ಅರಸರು ಕರ್ನಾಟಕದಿಂದ ಗೌಡಕ್ಕೆ ತಂದರು. ಅದು ಬೌದ್ಧ ಶಕ್ತಿಪಂಥದೊಂದಿಗೆ ಮಿಳಿತಗೊಂಡು ಶಕ್ತಿದೇವತೆಯ ಹೊಸ ಆರಾಧನಾವಿಧಾನವೊಂದು ಹೊರಹೊಮ್ಮಿತು. ಕಾಲಿಕಾಪುರಾಣಮ್ ದಲ್ಲಿ ಕಂಡುಬರುವ ದುರ್ಗಾದೇವತೆಯ ಆರಾಧನಾ ವಿಧಾನವನ್ನು ಗೌಡ ತಾಂತ್ರಿಕನೊಬ್ಬ ಮಾರ್ಕಂಡೇಯ ಪುರಾಣವನ್ನಾಧರಿಸಿ ರಚಿಸಿದ. ಈ ಪುರಾಣದಲ್ಲಿ ಹೇಳಿರುವಂತೆ ಬ್ರಹ್ಮನಿಂದ ವರ ಪಡೆದು ಮಹಿಷಾಸುರನು ಅಜೇಯನಾಗಿದ್ದ. ಆಗ ಎಲ್ಲ ದೇವತೆಗಳು ಒಗ್ಗೂಡಿದರು. ಅವರ ದೇಹಗಳ ಓಜಸ್ಸು ಮತ್ತು ಶಕ್ತಿಯಿಂದ ಒಬ್ಬ ಸ್ತ್ರೀದೇವತೆ ಸೃಷ್ಟಿಗೊಂಡಳು. ಅವಳೇ ದುರ್ಗಾ. ಅವಳಿಗೆ ಕರ್ನಾಟಕದ ಮೈಸೂರಿನಲ್ಲಿ ಈ ಮೊದಲು ಮಹಿಷಮರ್ದಿನಿಯೆಂದು ಪೂಜೆ, ಭಕ್ತಿ ಸಲ್ಲುತ್ತಿತ್ತು. ಸ್ವತಃ ಸೇನ ಅರಸರು ಅವಳ ವಿಗ್ರಹಶಾಸ್ತ್ರ ಮತ್ತು ಆರಾಧನಾವಿಧಾನಗಳನ್ನು ತಮ್ಮೊಡನೆ ಬಂಗಾಲಕ್ಕೆ ತಂದರು. ಅದು ಬಂಗಾಲಿ ಸಮಾಜ ಈಗಾಗಲೇ ಅಂಗೀಕರಿಸಿದ್ದ ಸ್ಥಳೀಯ ಬೌದ್ಧ ಮತ್ತು ಶೈವ ಪದ್ಧತಿಗಳೊಂದಿಗೆ ಸಮನ್ವಯಗೊಂಡಿತು. ತಂತ್ರಗಳು ಮತ್ತು ಪುರಾಣಗಳಲ್ಲಿ ದೇವತೆಯ ಆಗಮನದ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ದೇವತೆಯನ್ನು ತಾಂತ್ರಿಕ ವಿಧಿಗಳನ್ವಯ ಪೂಜಿಸಬೇಕೆಂದು ಕಾಲಿಕಾ ಪುರಾಣಮ್‌ದಲ್ಲಿ ನಿರ್ದೇಶನವಿದೆ. ಆದರೆ, ಪೂಜೆಯಲ್ಲಿ ಬಳಸಲಾಗುವ ನೈವೇದ್ಯಗಳು ಗೌಡಪ್ರದೇಶದ ವಿಶೇಷ ಲಕ್ಷಣಗಳಾಗಿರುವಂತಿದೆ. ವಿವಿಧ ಫಲಗಳೊಂದಿಗೆ ಮಾನವ ರಕ್ತ, ಸ್ವಂತ ರಕ್ತ, ಆಮೆ ಮತ್ತು ರೋಹಿತ್ ಮತ್ಸ್ಯದಂಥ ಪ್ರಾಣಿಗಳ ರಕ್ತವನ್ನು ನೈವೇದ್ಯವಾಗಿ ಅರ್ಪಿಸಲು ಕಾಲಿಕಾ ಪುರಾಣಮ್ ಅವಕಾಶ ಕಲ್ಪಿಸಿಕೊಡುತ್ತದೆ. ಇಂಥ ಪೂಜಾವಿಧಾನಗಳು ಕರ್ನಾಟಕದಲ್ಲಿಲ್ಲ. ಶೋಲ್, ಶಾಲ್ ಮತ್ತು ಸೀಲ್ ಮೀನುಗಳ ನೈವೇದ್ಯಕ್ಕೆ ಮಹಾನಿರ್ವಾಣ ತಂತ್ರಮ್ ಅವಕಾಶ ಕಲ್ಪಿಸಿಕೊಡುತ್ತದೆ.

ಶೈವಪಂಥವು ಬೌದ್ಧಧರ್ಮದಿಂದ ಇಳಿದುಬಂದುದರಿಂದ ಮದ್ಯದ ನೈವೇದ್ಯ ಶಾಸ್ತ್ರ ಸಮ್ಮತವಾಗಿತ್ತು. ಪೂಜೆಗೆ ಇಂಥ ನೈವೇದ್ಯಗಳೆಲ್ಲ ಬಂಗಾಲದ ವಿಶೇಷ ಸೇರ್ಪಡೆಯಾಗಿವೆ. ಕರ್ನಾಟಕದಲ್ಲಿ ಇಂಥ ತಾಂತ್ರಿಕ ನೈವೇದ್ಯಗಳ ಪದ್ಧತಿಯಿರಲಿಲ್ಲ. ಮೇಲಾಗಿ, ಕರ್ನಾಟಕದಲ್ಲಿ

ವಿಗ್ರಹವನ್ನು ಶಿಲೆಯಲ್ಲಿ ಮಾಡಲಾಗುತ್ತದೆ. ಆದಕಾರಣ, ಅದು ಬದಲಾಗದ್ದು. ಶತಮಾನಗಳುದ್ದಕ್ಕೂ ತಲೆತಲಾಂತರಗಳಿಂದಲೂ ಅವಳು ಅದೇ ವಿಧಾನ ಮತ್ತು ಆಕಾರದಲ್ಲಿ ಉಳಿದಿರುವಳು. ಆದರೆ, ಬಂಗಾಲದ ಕಲೆಗಾರರು ಮಣ್ಣಿನಲ್ಲಿ ಅವಳ ಮೂರ್ತಿಯನ್ನು ಮಾಡುವಾಗ ಮಹಿಷಮರ್ದಿನಿಗೆ ಬೌದ್ಧದೇವತೆಯಾಗಿರುವ ಆರ್ಯಾ ತಾರಾಳ ಸುಂದರ ಮುಖವನ್ನು ಅಳವಡಿಸಿ ಅವಳ ದೇಹಕ್ಕೆ ಪರ್ಣಶಬರಿ ರೇಖೆಯಿಂದ ಬಣ್ಣಕೊಟ್ಟರು. ದೇವತೆಯನ್ನು ಆರನೆಯ ಮತ್ತು ಏಳನೆಯ ದಿನಗಳಂದು ಬಿಲ್ವಪತ್ರಿಯಿಂದ ಪೂಜಿಸಲಾಗುತ್ತದೆ. ಎಂಟನೆಯ ದಿನ ಭಕ್ತರು ವೈಯಕ್ತಿಕವಾಗಿ ಇಂಥ ಇತರ ನೈವೇದ್ಯಗಳನ್ನು ನೀಡಿ ಪೂಜಿಸುವರು. ಒಂಬತ್ತನೆಯ ದಿನ ಹಲವಾರು ಬಲಿ ಸಲ್ಲಿಸಲಾಗುತ್ತದೆ. ಹತ್ತನೆಯ ದಿನ ಶಾವರ ವಿಧಿಗಳನ್ನು ಆಚರಿಸಿದ ನಂತರ ಮೂರ್ತಿಯನ್ನು ವಿಸರ್ಜಿಸಲಾಗುತ್ತದೆ.

ಶಾವರ ವಿಧಿಗಳು ಮೂಲತಃ ತಾಂತ್ರಿಕ ಬೌದ್ಧ ವಿಧಿಗಳು. ಹಾಗೆ ನೋಡಿದರೆ, ದುರ್ಗಾಪೂಜೆ ಅರಸರ ಆಚರಣೆಯಾಗಿತ್ತು. ಕಾಲಿಕಾ ಪುರಾಣಮ್ ನಿರ್ದೇಶಿಸುವಂತೆ ಅರಸನು ಈ ಪೂಜೆಯನ್ನು ವರ್ಷಋತು ಮುಗಿದ ನಂತರ ಮಾಡಬೇಕು. ಯುದ್ಧದ ಮುನ್ನಾ ಸಂಜೆ ಅರಸರು ದುರ್ಗಾದೇವತೆಗೆ ಪೂಜೆ ಸಲ್ಲಿಸಿ ಯುದ್ಧದಲ್ಲಿ ಜಯ ದಯಪಾಲಿಸೆಂದು ಪ್ರಾರ್ಥಿಸುತ್ತಿದ್ದರು. ವೈರಿಗಳನ್ನು ಕೊಂದು ಜಯ ಮತ್ತು ಕೀರ್ತಿ ಅನುಗ್ರಹಿಸೆಂದು ದುರ್ಗಾಪೂಜೆಯ ಕಾಲಕ್ಕೆ ರೂಪಮ್ ದೇಹಿ ಜಯಮ್ ದೇಹಿ, ಯಶೋದೇಹಿ ದ್ವಿಸೋ ದೇಹಿ ಎಂಬ ಪ್ರಾರ್ಥನೆಯನ್ನು ಪುನಃಪುನಃ ಹೇಳಲಾಗುತ್ತದೆ. ಸೇನ ಆಳ್ವಿಕೆಯ ಆರಂಭ ಕಾಲದಲ್ಲಿ ಜಿಕನ ಮತ್ತು ಬಲಕ ಎಂಬಿಬ್ಬರು ತಾಂತ್ರಿಕರು ಶರದೃತುವಿನಲ್ಲಿ ಪೂಜೆ ಏರ್ಪಡಿಸುತ್ತಿದ್ದರು. ಅವರ ಹೆಸರುಗಳನ್ನು ಸಮಕಾಲೀನ ಸಾಹಿತ್ಯ ಉಲ್ಲೇಖಿಸಿದೆ. ಆದರೆ, ಅವರ ಬಗೆಗೆ ವಿವರಗಳು ದೊರೆತಿಲ್ಲ.

ಜೀಮೂತವಾಹನ ರಚಿಸಿದ ದುರ್ಗೋತ್ಸವ ನಿರ್ಣಯ, ಶೂಲಪಾಣಿ ರಚಿಸಿದ ದುರ್ಗೋತ್ಸವ ವಿವೇಕ, ವಾಸಂತಿ ವಿವೇಕ, ದುರ್ಗೋತ್ಸವ ಪ್ರಯೋಗ ಗ್ರಂಥಗಳನ್ನು ಇಂದಿಗೂ ಅನುಸರಿಸಲಾಗುತ್ತದೆ. ಜೀಮೂತವಾಹನನು ಬಿಜಯಸೇನನ ಪ್ರಧಾನ ಆಚಾರ್ಯ ಮತ್ತು ಶೂಲಪಾಣಿ ಪ್ರಾಯಶಃ ರಾಜಪುರೋಹಿತ ಆಗಿದ್ದರು. ರಘುನಂದನ ಭಟ್ಟಾಚಾರ್ಯನ ಸಂಸ್ಕೃತದಲ್ಲಿರುವ ಆದರೆ, ಬಂಗಾಲಿ ಲಿಪಿಯಲ್ಲಿ ಬರೆದಿರುವ ದುರ್ಗಾಪೂಜಾ ತಂತ್ರಮ್‌ದ ಹಸ್ತಪ್ರತಿ ಶ್ರೀ ಚಂದ್ರಮಣಿ ಕಶ್ಯಪರಿಗೆ ಸಿಕ್ಕಿದೆ. ಅವರು ಅದನ್ನು ಹಿಮಾಚಲಪ್ರದೇಶ ಲೋಕಸಂಸ್ಕೃತಿ ಸಂಸ್ಥಾನದ ವಸ್ತುಸಂಗ್ರಹಾಲಯದಲ್ಲಿ ಇಟ್ಟಿರುವರು. ದುರ್ಗಾಪೂಜೆ ಸಂಪ್ರದಾಯವನ್ನು ಹಿಮಾಚಲಪ್ರದೇಶಕ್ಕೆ ತರಲಾಯಿತೆಂದು ಇದರಿಂದ ಸಿದ್ಧಪಡುವುದು.

ರಾಜರನ್ನು ಅನುಕರಿಸಿ ಭೂಒಡೆಯರು ಮತ್ತು ವರ್ತಕರು ತಮ್ಮ ತಮ್ಮ ಮನೆಗಳಲ್ಲಿ ದುರ್ಗಾಪೂಜೆ ಆರಂಭಿಸಿದರು. ಪಾಲ ಯುಗದಲ್ಲಿ ಬಂಗಾಲಿ ಕುಮಾರರು ತಾರಾದೇವತೆಯ ಮೂರ್ತಿಗಳನ್ನು ಬೌದ್ಧಶೈಲಿಯಲ್ಲಿ ಮಾಡುತ್ತಿದ್ದರು. ಈಗ ಅವರು ಬೌದ್ಧ ದೇವತೆ ತಾರಾಳ ಸುಕುಮಾರ ಮಾದರಿಯಲ್ಲಿಯೇ ದುರ್ಗಾದೇವತೆಯ ಮೂರ್ತಿಗಳನ್ನು ಮಾಡತೊಡಗಿದರು. ಕ್ರಮೇಣ ದುರ್ಗಾಪೂಜೆಯು ಸೇನರಾಜ್ಯದ ಜನರೆಲ್ಲರನ್ನು ತನ್ನ ಮಡಿಲಿಗೆ ಹಾಕಿಕೊಂಡಿತು. ಗೌಡ, ಮಿಥಿಲಾ

ಮತ್ತು ನೇಪಾಳಗಳಲ್ಲಿ ದುರ್ಗಾಪೂಜೆ ಪ್ರಚಲಿತದಲ್ಲಿದೆ. ಮತ್ತು ಅಲ್ಲಿ ಗೌಡ ವಿಧಿಗಳನ್ನು, ಸಂಪ್ರದಾಯಗಳನ್ನು ಇಷ್ಟಪಡುತ್ತಾರೆ. ಇದಕ್ಕೆ ಕಾರಣ, ಮೈಸೂರು ರಾಜಮನೆತನದ ಪ್ರಭಾವ. ಹೇಮಂತಸೇನನು ರಾಢಾದಲ್ಲಿ ರಾಜ್ಯವನ್ನು ಸ್ಥಾಪಿಸಿ ಕಾಲೂರುತ್ತಿದ್ದಾಗ ಕರ್ನಾಟಕದ ಕಲಚೂರಿ ವಂಶದ ಅರಸನ ದಂಡನಾಯಕನಾಗಿದ್ದ ನಾನ್ಯದೇವನು ಮಿಥಿಲೆಯನ್ನು ಗೆದ್ದುಕೊಂಡು ಸ್ವತಂತ್ರ ರಾಜ್ಯ ಸ್ಥಾಪಿಸಿದ.

ನಾನ್ಯದೇವ ಮತ್ತು ಅವನ ಉತ್ತರಾಧಿಕಾರಿಗಳ ಕಾಲದಲ್ಲಿ ದುರ್ಗಾಪೂಜೆಯ ಕರ್ನಾಟಕಿ ವಿಧಿಗಳು ಮಿಥಿಲೆಯಿಂದ ನೇಪಾಳಕ್ಕೆ ಬಂದವು. ತಾಂತ್ರಿಕ ಬೌದ್ಧ ಧರ್ಮದ ಅವಶೇಷಗಳಿಂದ ಒಂದು ತಾಂತ್ರಿಕ ಶಕ್ತಿಪಂಥ ಎರಡೂ ರಾಜ್ಯಗಳಲ್ಲಿ ಉದಯಿಸುತ್ತಿದ್ದುದು ಕಾರಣವಾಗಿ ದುರ್ಗಾಪೂಜೆ ಜನಪ್ರಿಯವಾಯಿತು. ವಾಚಸ್ಪತಿ ಮಿಶ್ರ ಮತ್ತು ಶರ್ಬರು ಮಿಶ್ರ ಮಿಥಿಲೆಯ ಸಾಮಾನ್ಯ ಜನರಿಗೆ ತಾಂತ್ರಿಕ ಪೂಜೆಯ ದಾರಿ ತೋರಿದರು. ವಾಚಸ್ಪತಿ ಮಿಶ್ರನ ದುರ್ಗೋತ್ಸವ ಪ್ರಕರಣಮ್ ಮತ್ತು ಶರ್ಬರು ಮಿಶ್ರನ ಕ್ರಿಯಾ ಚಿಂತಾಮಣಿ ಪೂಜಾವಿಧಾನದ ಎರಡು ಅಧಿಕೃತ ಗ್ರಂಥಗಳು. ಅವುಗಳನ್ನು ದುರ್ಗಾಪೂಜೆಗಾಗಿ ಪುರೋಹಿತರು ಅನುಸರಿಸುತ್ತಾರೆ.

ಕೆಲವು ಶತಮಾನಾನಂತರ ವಿದ್ಯಾಪತಿಯು ದುರ್ಗಾಭಕ್ತಿ ತರಂಗಿಣಿ ಯನ್ನು ರಚಿಸಿ ದುರ್ಗಾಪೂಜಾ ವಿಧಿಗಳಲ್ಲಿ ಸಾಕಷ್ಟು ಸಮನ್ವಯ ತಂದ. ಮೇಲಾಗಿ ಜಗತ್‌ಪ್ರಕಾಶ ಮಲ್ಲ ಮತ್ತು ರಣಜಿತ ಮಲ್ಲರಂಥ ನೇಪಾಳಿ ಕವಿಗಳು ಮತ್ತು ಗೀತಕಾರರು ಮಹಾಶಕ್ತಿ ದೇವತೆಯನ್ನು ಸ್ತುತಿಸುವ ಕವಿತೆ ಮತ್ತು ಗೀತೆಗಳನ್ನು ರಚಿಸಿದರು. ಬಂಗಾಲದ ಭಾವನಾತ್ಮಕ ಪ್ರಾರ್ಥನಾಗೀತೆ (ಆಗಮಣಿ)ಯು ದುರ್ಗಾದೇವತೆಯನ್ನು ಉತ್ತುಂಗ ಸ್ವರ್ಗದಿಂದ ಅಂದರೆ, ಎತ್ತರದ ಹಿಮಾಲಯದಿಂದ ಬಂಗಾಲಿ ಭಕ್ತರ ಮನೆಗಳಿಗೆ ಮನೆಮಗಳಾಗಿ ತಂದಿತು. ವಿಜಯದಶಮಿ ದಿನದಂದು ವಿಸರ್ಜನೆಗೆ ಮುನ್ನ ಗರತಿಯರು ತಮ್ಮ ಮಗಳನ್ನು ಗಂಡನ ಮನೆಗೆ ಕಳಿಸಿಕೊಡುತ್ತಿರುವರೇನೊ ಎಂಬಂತೆ ಕಣ್ಣಲ್ಲಿ ನೀರು ತುಂಬಿಕೊಂಡು ಮೂರ್ತಿಗಳ ಹಣೆಗೆ ಕುಂಕುಮ ತಿಲಕವಿಡುತ್ತಾರೆ. ಬಂಗಾಲದ ಸುಪ್ರಸಿದ್ಧ ಕವಿ ಮೈಕಲ್ ಮಧುಸೂಧನ ದತ್ತನು ತನ್ನ ಹೃದಯದಲ್ಲಿ ದುಃಖ ತುಂಬಿಕೊಂಡು ವಿದಾಯವನ್ನು ವರ್ಣಿಸಲು ಈ ಘಟನೆಯ ಉಪಮಾನವನ್ನು ಬಳಸಿಕೊಂಡಿರುವನು- ವಿಸರ್ಜಿ ಪ್ರತಿಮಾ ಯೇನ ದಶಮೀಃ ದಿವಸೇ.

ದುರ್ಗಾದೇವತೆಯು ತನ್ನ ಪತಿಯ ಕೈಲಾಸನಿವಾಸದಿಂದ ಬಂಗಾಲದ ತನ್ನ ತವರುಮನೆಗೆ ಸಂಕ್ಷಿಪ್ತ ಭೇಟಿಗೆ ತನ್ನ ಪುತ್ರ ಪುತ್ರಿಯರೊಂದಿಗೆ ಬಂದು, ವಿಜಯ ದಶಮಿಯಂದು ನಾಲ್ಕು ದಿನ ಪೂಜೆ ಸ್ವೀಕರಿಸಿ ಪುನಃ ತನ್ನ ಪತಿಯ ನಿವಾಸಕ್ಕೆ ಮರಳುವುದನ್ನು ಬಣ್ಣಿಸುವ (ಆಗಮಣಿ) ಗೀತೆಗಳನ್ನು ಹಾಡಲಾಗುತ್ತದೆ.

◈ ◈ ◈

## ಅನುಬಂಧ 'ಇ'

### ಮಾಸ್ತಿ ಕಲ್ಲುಗಳು ಸೇನ ಇತಿಹಾಸದ ಆಕರಗಳು

ಸಿಮ್ಲಾ ಬಿಸಲಾಪೂರದಿಂದ ಲದಾಖದ ಕಡೆಗೆ ಉತ್ತರಕ್ಕೆ ಹೋಗುವ ವ್ಯಾಪಾರಿ ಮಾರ್ಗದಲ್ಲಿ ಮಾಂಡಿ ಪ್ರದೇಶದಲ್ಲಿರುವ ಸುಕೇತಿ ತೊರೆಯನ್ನು ದಾಟಿದ ಕೂಡಲೆ ನಮ್ಮ ಗಮನ ಸೆಳೆಯುವ ಮೊದಲ ಸ್ಮಾರಕವೆಂದರೆ, ನಾಗಾಚಲ ಗ್ರಾಮದಲ್ಲಿ ಬೀದಿಬದಿ ನಿಂತಿರುವ ಪಾಳುಬಿದ್ದ ದೇವಾಲಯ. ಅದನ್ನು ಸಾಮಾನ್ಯ ಶಿಖರಶೈಲಿಯಲ್ಲಿ ಕಟ್ಟಲಾಗಿದ್ದು ಅದರ ಮುಖಮಂಟಪದ ಮೇಲೆ ತ್ರಿಶೃಂಗ ಕಮಾನು ಇದೆ. ಅದು ಪುರಾತನ ಕಾಶ್ಮೀರಿ ದೇವಾಲಯಗಳ ಕಮಾನಿನಂತೆ ಭಿನ್ನವಾಗಿದೆ. ಆದರೆ, ಮಾಂಡಿಯಲ್ಲಿರುವ ಕಮಾನುಗಳನ್ನು ಹೋಲುತ್ತಿದೆ. ರಾಮನ ಸೈನ್ಯದ ವಾನರ ಸೇನಾನಿಯಾದ ಹನುಮಂತನ ವಿಗ್ರಹವನ್ನು ಬಂಡೆಗಲ್ಲಿನಲ್ಲಿ ಕಡೆಯಲಾಗಿದೆ.

ರಾಜಧಾನಿಯ ದೇವಾಲಯಗಳನ್ನು ಪ್ರವೇಶಿಸುತ್ತಿದ್ದಂತೆ ನಾವು ಕಾಣುವ ಸ್ಮಾರಸ್ಯಕರ ವಸ್ತುವೆಂದರೆ, ಕಣ್ಣಿಗೆ ಕಟ್ಟಿದಂತೆ ಎದ್ದುಕಾಣುವ ಮಾಸ್ತಿ ಕಲ್ಲುಗಳ ಸಮೂಹ. ಅವು ವ್ಯಾಪಾರಿ ರಸ್ತೆಯ ಕೆಳಗಡೆ ಸುಕೇತಿಯ ದಡದಲ್ಲಿವೆ. ಬರ್ಶೆಲ್ಲುಗಳೆಂದು ಸ್ಥಳೀಯವಾಗಿ ಕರೆಯುವ ಈ ಕಲ್ಲುಗಳು

ಅಥವಾ ಸ್ತಂಭಗಳನ್ನು ಮಾಂಡಿಯ ಮೃತ ರಾಜರ ಮತ್ತು ಅವರ ಕುಟುಂಬದವರ ಗೌರವಾರ್ಥ ನಿಲ್ಲಿಸಲಾಗಿದೆ. ಅವುಗಳಲ್ಲಿ ಕೆಲವು ಆರೇಳು ಅಡಿ ಎತ್ತರವಿವೆ. ಅವೆಲ್ಲವುಗಳನ್ನು ರಾಜರ ಮತ್ತು ಅವರ ಜೊತೆ ಹೂಳಲಾದ ಸ್ತ್ರೀಯರ ಪ್ರತಿಮೆಗಳೊಂದಿಗೆ ಕೆತ್ತಲಾಗಿದೆ.

## ಮಾಸ್ತಿ ಕಲ್ಲುಗಳ ವಿಷಯವಸ್ತು

ಸೇನರು ತಮ್ಮ ದಾಕ್ಷಿಣಾತ್ಯ ನೆಲೆಯಿಂದ ಪೂರ್ವಭಾರತಕ್ಕೆ ಮತ್ತು ಆಮೇಲೆ ಹಿಮಾಚಲಪ್ರದೇಶಕ್ಕೂ ತಮ್ಮ ಸುದೀರ್ಘ ವಲಸೆಯಲ್ಲಿ ರಾಜ ಮತ್ತು ರಾಣಿಯರ ಚಿಕ್ಕ ಪ್ರತಿಮೆಗಳುಳ್ಳ ಮಾಸ್ತಿಕಲ್ಲುಗಳನ್ನು ನಿಲ್ಲಿಸುವ ಪದ್ಧತಿಯನ್ನು ತಮ್ಮೊಂದಿಗೆ ತಂದರು. ಅವು ಕೋಟೆಯ ಆಳುವೇರಿಯಂತೆ ಕಾಣಿಸುತ್ತವೆ. ಇದು ಭಾರತದ ಬೇರೆ ಬೇರೆ ಭಾಗಗಳಲ್ಲಿರುವ ಇಂಡೊ -ಅಸ್ಕಲಾಯ್ಡರ ಇಂಥದೇ ಪುರಾತನ ಪದ್ಧತಿಯನ್ನು ನೆನಪಿಸುತ್ತದೆ. ಅವರು ತಮ್ಮ ಮೃತರ ಸ್ಮರಣಾರ್ಥ ಸಮಾಧಿ ಮತ್ತು ಅಖಂಡ ಶಿಲಾಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು.

ಕೆಳಗಡೆ ಕುಳಿತಿರುವ ರಾಣಿಯರ ಸಾಲಿನೊಂದಿಗೆ ರಾಜರನ್ನು ತೋರಿಸಲಾಗಿದೆ. ರಾಣಿಯರ ಕೆಳಗಡೆ ನಿಂತಂತೆ ಕೆತ್ತಲಾದ ಪ್ರತಿಮೆಗಳು ಉಪಪತ್ನಿಯರವು ಇಲ್ಲವೆ ದಾಸಿಯರವು. ಬಹುತೇಕ ಸ್ತಂಭಗಳು ತಂಕರಿ ಭಾಷೆಯಲ್ಲಿರುವ ಶಾಸನಗಳನ್ನು ಹೊಂದಿವೆ. ಶಾಸನಗಳು ರಾಜನ ಮರಣ ದಿನಾಂಕ ಮತ್ತು ಮರಣ ಕಾಲಕ್ಕೆ ಅವನ ಸೇವೆಗೈದ ಸತಿಯರ ಸಂಖ್ಯೆಯನ್ನು ಕೊಡುತ್ತವೆ. ಹತ್ತು ರಾಜರ ಸ್ತಂಭಗಳ ಮೇಲಿನ ದಿನಾಂಕಗಳನ್ನು ಶ್ರೀ ಶಕೆ ಅಥವಾ ಋಷಿ ಶಕೆ ಎಂದೂ ಕರೆಯಲಾಗಿರುವ ಶಾಸ್ತ್ರಿ ಶಕೆಯಲ್ಲಿ ಕೊಡಲಾಗಿದೆ.

ಮಾಂಡಿಯಲ್ಲಿ ವಾಸಿಸುತ್ತಿದ್ದಾಗ ವಿಗ್ನೆಯು ಒಬ್ಬ ವಿಧವೆಯ ದಹನವನ್ನು ನೋಡಿದ. ಅವಳನ್ನು ಹುಲ್ಲಿನಿಂದ ಸರಿಯಾಗಿ ಹೊಚ್ಚಲಾಗಿತ್ತೆಂದು ಅವನು ವರ್ಣಿಸಿರುವನು. ಬೆಂಕಿಯನ್ನು ಬೇರೆ ಬೇರೆ ಭಾಗಗಳಿಗೆ ಹಚ್ಚಲಾಯಿತು. ಅವನು ಹೇಳುವುದೇನೆಂದರೆ, ಅದು ಸತಿಯನ್ನು ಉರಿ ಮತ್ತು ಹೊಗೆಯ ಮಂಡಲವಾಗಿ ಎಷ್ಟು ಬೇಗ ಸುತ್ತುವರಿಯಿತೆಂದರೆ, ಅವಳು ತಕ್ಷಣ ಉಸಿರುಗಟ್ಟಿದ್ದರಿಂದ ಅವಳ ನೋವು ಅಲ್ಪ ಸಮಯದ್ದಾಗಿತ್ತು.

ಜನರಲ್ ಕನಿಂಗ್ಹಮ್ ತನ್ನ ವರದಿಯಲ್ಲಿ ಈ ಕೆಲವು ದಾಖಲೆಗಳ ಅನುವಾದವನ್ನು ನೀಡಿರುವನು.

(೧) ಸೂರಜಸೇನ:

"೪೦ನೆಯ (ಕ್ರಿ.ಶ. ೧೬೬೪) ವರ್ಷದಲ್ಲಿ ರಾಜಾ ಸೂರಜಸೇನನು ಫಾಲ್ಗುಣಸೂದಿಯ ೧೫ನೆಯ ದಿನ ೫ನೆಯ ತಿಥಿಯಂದು ಸ್ವರ್ಗಸೇರಿದ".

(೨) ಶ್ಯಾಮಸೇನ:

"೫೫ನೆಯ (ಕ್ರಿ.ಶ. ೧೬೭೯) ವರ್ಷದಲ್ಲಿ ಸೌಜ (ಆಶ್ವಿನ)ದ ೧೨ನೆಯ ದಿನದಂದು ರಾಜಾ ಶ್ಯಾಮಸೇನನು ಐವರು ರಾಣಿಯರು, ಇಬ್ಬರು ಉಪಪತ್ನಿಯರು ಮತ್ತು ಮೂವತ್ತೇಳು ದಾಸಿಯರೊಂದಿಗೆ ಸ್ವರ್ಗಸೇರಿದ".

(೩) ಸಿಧಸೇನ:

"ಮೂರನೆಯ (ಕ್ರಿ.ಶ. ೧೭೨೭) ವರ್ಷದಲ್ಲಿ ಕಾರ್ತಿಕದ ೮ನೆಯ ದಿನದಂದು ದಿವಾನಜಿ ಶ್ರೀ ಸಿಧಸೇನನು ಸ್ವರ್ಗ ಸೇರಿದ".

(೪) ಶಮಶೇರಸೇನ:

"೫೭ನೆಯ (ಕ್ರಿ.ಶ. ೧೭೮೧) ವರ್ಷದಲ್ಲಿ, ಚೈತ್ರದ ೨೦ನೆಯ ದಿನದಂದು ಮಹಾರಾಜಾ ಶಮಶೇರಸೇನನು ಸ್ವರ್ಗ ಸೇರಿದ".

(೫) ಸೂರಮಾಸೇನ:

"೭೪ನೆಯ (ಕ್ರಿ.ಶ. ೧೭೯೮) ವರ್ಷದಲ್ಲಿ ಫಾಲ್ಗುಣದ ೨ನೆಯ ದಿನದಂದು ಮಹಾರಾಜಾ ಶ್ರೀ ಸೂರಮಾಸೇನ ಸ್ವರ್ಗ ಸೇರಿದ".

(೬) ಈಶ್ವರೀಸೇನ:

"೨೭ ವರ್ಷ, ೨ ತಿಂಗಳು, ೫ ದಿನ ಆಳ್ವಿಕೆ ಮಾಡಿ ರಾಜಾ ಈಶ್ವರೀಸೇನ ಎರಡನೆಯ (ಕ್ರಿ.ಶ. ೧೮೨೬) ವರ್ಷದಲ್ಲಿ ವೈಶಾಖದ ೭ನೆಯ ದಿನದಂದು ಸ್ವರ್ಗ ಸೇರಿದ".

(೭) ಜಲಮಸೇನ:

"ಮಹಾರಾಜಾ ಜಲಮಸೇನ ೧೪ನೆಯ (ಕ್ರಿ.ಶ.೧೮೩೮) ವರ್ಷದಲ್ಲಿ ಪುಷ್ಯದ ೧೭ನೆಯ ದಿನದಂದು ಸ್ವರ್ಗ ಸೇರಿದ. ಆಗ ಇಬ್ಬರು ರಾಣಿಯರು, ಮೂವರು ಉಪಪತ್ನಿಯರು ಮತ್ತು ಹದಿನೇಳು ದಾಸಿಯರು ಮಾಂಡಿ ನಗರದಲ್ಲಿ ಸತಿ ಹೋದರು".

ಮಿಕ್ಕ ಸ್ತಂಭಗಳ ಮೇಲಿನ ಅಕ್ಷರಗಳು ಹೆಚ್ಚೂಕಡಿಮೆ ಮುಕ್ಕಾಗಿದ್ದು ಓದಲು ಬರುವಂತಿಲ್ಲ.

ಆಧಾರಗಳು:


A.S.R.Vol. XIV. p.123-4.

Vigne Travels, Vol. 1 pp. 796 and Genl.Cunningham,

A.S.R., Vol. XIV, plates XXIX and XXX.

## ಅನುಬಂಧ 'ಫ'

**ಸೇನವಂಶದ ದಿನಾಂಕಗಳು ಮತ್ತು ಕಾಲಾನುಕ್ರಮಣಿಯನ್ನು ನಿರ್ಧರಿಸುವಲ್ಲಿ ತಲೆದೋರುವ ಸಂದೇಹಗಳು ಮತ್ತು ಭಿನ್ನಾಭಿಪ್ರಾಯಗಳು.**

ಸೇನವಂಶದ ಸಂಸ್ಕೃತ ವಂಶಾವಳಿಯನ್ನು ಹಿಮಾಚಲ ಪ್ರದೇಶದ ಲೋಕಸಂಸ್ಕೃತಿ ಸಂಸ್ಥಾನದ ಗ್ರಂಥಾಲಯದಲ್ಲಿ ಸಂರಕ್ಷಿಸಿಡಲಾಗಿದೆ ಎಂದು ಹೇಳಲಾಗುತ್ತದೆ. ೧೯೯೮ ರ ಫೆಬ್ರುವರಿಯಲ್ಲಿ ಮಾಂಡಿಗೆ ಇತ್ತ ಕೆಲವು ಸಲದ ಭೆಟ್ಟಿ ಮತ್ತು ಕೋರಿಕೆಗಳ ನಂತರ ಶ್ರೀ ಚಂದ್ರಮಣಿ ಕಶ್ಯಪ ಪ್ರಸ್ತುತ ಲೇಖಕನಿಗೆ ಒಂದು ಪುಸ್ತಿಕೆಯ ಕೆಲ ಭಾಗಗಳ ಫೋಟೊಪ್ರತಿಯನ್ನು ಕೊಟ್ಟನು. ಅದು ಸೇನ ಅರಸರ ಹೆಸರುಗಳ ಕ್ರಮಾನುಗತಿಯನ್ನು ಕೊಡುತ್ತದೆ, ದಿನಾಂಕಗಳನ್ನಲ್ಲ. ಈ ಕಾಲಾನುಕ್ರಮಣಿಕೆಯಿಂದ ದಿನಾಂಕಗಳು ಮತ್ತು ವರ್ಷಗಳನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಅಧಿಕೃತ ಕಾಲಾನುಕ್ರಮಣಿಕೆಗಳು ಅಥವಾ ಇತರ ಪ್ರಮಾಣಗಳು ದೊರೆತರೆ ಈ ಲೋಪವನ್ನು ಸರಿಪಡಿಸಲಾಗುವುದು.

ರಾಜಕುವರ ಸಂತಸಿಂಗ್ ಮಾಂಡಿಯಾಲಿಯಿಂದ ಹಿಂದಿಗೆ ಅನುವಾದಿಸಿದ ವಂಶಾವಳಿಯನ್ನು ಪ್ರಸ್ತುತ ಗ್ರಂಥಕರ್ತನು ಮಾಂಡಿಯ ನಿವೃತ್ತ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಕುಂವರ ಕಾಶ್ಮೀರ ಸಿಂಗರಿಂದ ಪಡೆದನು. ಅದು ಸೇನ ಅರಸರ ಕ್ರಮಾನುಗತಿ ಮತ್ತು ದಿನಾಂಕಗಳನ್ನು ಒದಗಿಸುತ್ತದೆ. ಮಾಂಡಿಯಾಲಿ ವಂಶಾವಳಿ ಉಲ್ಲೇಖಿಸುವ ದಿನಾಂಕಗಳು ಮತ್ತು ರಾಜರ ಆಳ್ವಿಕಾವಧಿಗಳು ಸರಿಯಿಲ್ಲವಾಗಿದ್ದರೂ ಓದುಗರಿಗೆ ಕೊಂಚ ಸಹಾಯಕವಾಗುವವು. ಪ್ರಸ್ತುತ ಪುಸ್ತಕವು ಅರಸರ ತಪ್ಪು ದಿನಾಂಕಗಳನ್ನು ಕೊಡುವುದಾದರೂ ಅರಸು ಮನೆತನಗಳ ಮಹತ್ವದ ಘಟನೆಗಳನ್ನು ಮತ್ತು ಐತಿಹ್ಯಗಳನ್ನು ಕೊಡುತ್ತದೆ. ಆ ಪುಸ್ತಕ ಕುಂವರ ಕಾಶ್ಮೀರ ಸಿಂಗನಲ್ಲಿತ್ತು. ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಅವನನ್ನು ಮಾಂಡಿ ರಾಜ್ಯದ ಸೇವೆಯಲ್ಲಿ ನೇಮಿಸಲಾಗಿತ್ತು. ಅವನು ಸೇನ ವಂಶದ ರಾಜಕುವರನಾಗಿರುವನು. ಸ್ವಾಭಾವಿಕವಾಗಿಯೆ, ಅವನಲ್ಲಿ ಮಾಂಡಿ ರಾಜ್ಯ ಮತ್ತು ಅರಸು ಮನೆತನದ ಬಗೆಗೆ ಅಧಿಕೃತ ದಾಖಲೆಗಳುಂಟೆಂದು ಭಾವಿಸಲಾಗಿದೆ.

ಮೂಲತಃ ತಂಕರಿ ಭಾಷೆಯಲ್ಲಿ ಬರೆಯಲಾಗಿದ್ದ ಈ ಸೇನ ವಂಶಾವಳಿ ಗ್ರಂಥವನ್ನು ತಾನು ಸಂವತ್ ೨೦೦೩ರಲ್ಲಿ (ಕ್ರಿ.ಶ.೧೯೪೬) ದೇವನಾಗರಿಯಲ್ಲಿ ಬರೆದುದಾಗಿ ಸ್ವತಃ ಅರಸು ಮನೆತನದವನಾದ ಗ್ರಂಥಕರ್ತೃ ಶ್ರೀ ಸಂತಸಿಂಗ್ ಗ್ರಂಥದ ಪ್ರಾರಂಭದಲ್ಲಿಯೆ ಹೇಳಿಕೊಂಡಿರುವನು. ಸೇನರು ಚಂದ್ರವಂಶದವರೆಂದು ಅವನು ಬರೆದಿರುವನು. ಸೇನರ ವಂಶಪರಂಪರೆ ಚಂದ್ರದೇವನಿಂದ ಆರಂಭಗೊಂಡು ಕಾಲಾನುಕ್ರಮವಾಗಿ ಮಹಾಭಾರತ ಕಾಲದವರೆಗೂ ಹರಿದುಬಂತೆಂದು ಸಂತಸಿಂಗ್ ಹೇಳಿರುವನು. ಬಹುಶಃ ಖಚಿತ ಪುರಾವೆ ಸಿಗದಿದ್ದರಿಂದ ಪುರಾಣಪರಂಪರೆಯನ್ನು ಅನುಸರಿಸುವ ಕಾಲಾನುಕ್ರಮಣಿಯಲ್ಲಿ ಈ ಭಾಗವನ್ನು ಬರೆಯಲಾಗಿತ್ತು. ಇದಾದ ನಂತರ, ಸಂತಸಿಂಗ್‌ನು ಕ್ರಿ.ಶ. ೧೨೦೧ರಲ್ಲಿ ಭಖ್ತಿಯಾರ ಖಿಲ್ಜಿಯ ಆಕ್ರಮಣದ ನಂತರ ಬಂಗಾಲದ ಲಕ್ಷ್ಮಣಸೇನನು ನವದ್ವೀಪವನ್ನು ಬಿಡಬೇಕಾಗಿ ಬಂದಾಗಿನಕ್ಕಿಂತ ಪೂರ್ವದಲ್ಲಿ ಹಿಮಾಚಲಪ್ರದೇಶದಲ್ಲಿ ಸೇನವಂಶದ ಆಳ್ವಿಕೆ ಆರಂಭವಾಗಿರಲಿಲ್ಲ. ಈ ಘಟನೆಯ ನಂತರ ಅವನ ಮೊಮ್ಮಗ ಸೂರಸೇನನು ಪ್ರಯಾಗಕ್ಕೆ ವಲಸೆಹೊದ. ಬಹುಶಃ ಈ ದಿನಾಂಕದ ಅರ್ಥಾತ್ ಕ್ರಿ.ಶ. ೧೦೭೧ರ, ಎಣಿಕೆ ತಪ್ಪಾಗಿದೆ. ಏಕೆಂದರೆ, ಬಿಕ್ರಮಸೇನ ಸತ್ತಿದ್ದು ನಿಜವಾಗಿಯೂ ಕನಿಷ್ಠ ಎರಡುನೂರು ವರ್ಷ ತರುವಾಯದಲ್ಲಿ. ಅಂದರೆ, ಕ್ರಿ.ಶ. ೧೨೭೩ರ ಸುಮಾರು. ಇದಕ್ಕೆ ಬೇರೆ ವಂಶಾವಳಿ ಪುಸ್ತಕಗಳನ್ನು ಮತ್ತು ಪ್ರೊ.ಮನಮೋಹನರ ಲೆಕ್ಕಾಚಾರವನ್ನು ಆಧರಿಸಲಾಗಿದೆ. ಆದರೆ, ಸಂತಸಿಂಗ್‌ನ ಪುಸ್ತಕದಲ್ಲಿಯ ಇತರ ವಿವರಗಳು ಪ್ರೊ.ಮನಮೋಹನ ಮತ್ತು ಪಂಜಾಬ ಗ್ಯಾಜೆಟ್ ನೀಡುವ ಸೇನವಂಶದ ರಾಜರ ಕ್ರಮಾನುಗತಿಯನ್ನು ಪೂರ್ತಿಗೊಳಿಸಲು ಬಹಳ ಸಹಾಯಕವಾಗಿವೆ. ಶ್ರೀ ಸಂತಸಿಂಗ್ ಮತ್ತು ಪ್ರೊ.ಮನಮೋಹನರ ಕಾಲಾನುಕ್ರಮಣಿಕೆಯನ್ನು ಆಧರಿಸಿ ಸಾಹುಸೇನ (ಸಾಧುಸೇನ) ವರೆಗಿನ ಸೇನ ವಂಶದ ಕಾಲಾನುಕ್ರಮವನ್ನು ಲೆಕ್ಕ ಹಾಕುವಲ್ಲಿ ಉಂಟಾದ ಈ ೨೦೦ ವರ್ಷಗಳ ಅಂತರವನ್ನು ಸರಿಪಡಿಸಲಾಗಿದೆ. ಬಾಹುಸೇನನ ಅಕಾಲಿಕ ಮರಣ ಕಾರಣವಾಗಿ ಈ ವಂಶ ಕೊನೆಗೊಂಡಿತು. ಲಿಯಾನ್‌ಫಿಯಾನ್ ರಾಜನಾಗಲು ಅಯೋಗ್ಯನೆಂದು ಕಂಡುಬಂದಾಗ ಜನತೆ ಮಿಂಯಾ ಮದನನ್ನು ರಾಜನನ್ನಾಗಿ ಆಯ್ಕೆ ಮಾಡಿದರು. ಮಿಂಯಾ ಮದನನು ಸಿಂಹಾಸನವೇರಿದಾಗ ತನ್ನ ಹೆಸರನ್ನು

ಮದನಸೇನ ಎಂದು ಬದಲಿಸಿಕೊಂಡನು. ಸುಕೇತದ ಈ ಸೇನ ಅರಸರನ್ನು ಈ ಮಾಲಿಕೆಯ ಪ್ರಥಮ ಸಂಪುಟದಲ್ಲಿ ಚರ್ಚಿಸಲಾಗಿದೆ. ಬಾಹುಸೇನನ ಮಗ ನಿಮಿಸೇನನಿಂದ ಅಜಬರಸೇನನ ತನಕ ಹದಿನೇಳು ತಲೆಮಾರಿನ ವರೆಗೆ ಇಲ್ಲಿ ಎಣಿಕೆ ಹಾಕಲಾದ ಸರಿಸುಮಾರು ಆಳ್ವಿಕಾವಧಿ ಸೇನವಂಶದ ೩೦೦ ವರ್ಷಗಳ ಇತಿಹಾಸವಾಗಿರುವುದು. ಹೆಚ್ಚಿನ ವಿವರಗಳನ್ನು ಮುಂದಿನ ಸಂಪುಟದಲ್ಲಿ ಚರ್ಚಿಸಲಾಗುವುದು.

ಬೇರೆ ಬೇರೆ ವಿದ್ವಾಂಸರು ಲೆಕ್ಕ ಹಾಕಿದ ಸೇನ ಅರಸರ ಕಾಲಾನುಕ್ರಮದಲ್ಲಿ ಸಂದೇಹಗಳಿಲ್ಲದಿಲ್ಲ. ಕೆಲವು ವಿಜಯಗಳಮತ್ತು ಕೆಲವು ರಾಜರ ಸಿಂಹಾಸನಾರೋಹಣದ ದಿನಾಂಕಗಳ ಬಗೆಗೆ ಭಿನ್ನಾಭಿಪ್ರಾಯಗಳುಂಟು. ದಿನಾಂಕಗಳ ಈ ತಾಕಲಾಟವನ್ನು ಖಚಿತ ಪ್ರಮಾಣಗಳ ಆಧಾರದ ಮೇಲೆ ಸರಿಪಡಿಸಬೇಕು. ಇಂಥ ಅರೆಕೊರೆಗಳನ್ನು ತುಂಬಬೇಕಿದೆ. ರೂಪಸೇನನ ಮಗ ಬೀರಸೇನನು ತನ್ನ ತಂದೆ ಕ್ರಿ.ಶ. ೧೨೧೧ರಲ್ಲಿ ಯುದ್ಧದಲ್ಲಿ ಮಡಿದ ಮೇಲೆ ಕ್ರಿ.ಶ. ೧೨೧೧ರಲ್ಲಿ ಸುಕೇತಕ್ಕೆ ಸಾಗಿದನೆಂದು ಪ್ರೊ. ಮನಮೋಹನ, ಆಯ್.ಇ.ಎಸ್., ತಮ್ಮ **ಅ ಶಾರ್ಟ್ ಹಿಸ್ಟರಿ ಆಫ್ ಮಾಂಡಿ ಸ್ಟೇಟ್** (ಲಾಹೋರ, ೧೯೩೦) ದಲ್ಲಿ ಹೇಳಿರುವರು. ಬಿಶ್ವರೂಪಸೇನನ ಕ್ರಿ.ಶ. ೧೨೧೦ರ ಸಾಹಿತ್ಯ ಪರಿಷತ್ ತಾಮ್ರಪಟ ಶಾಸನದ ಪ್ರಕಾರ, ರಾಜಕುಮಾರ ಸೂರ್ಯಸೇನನು ಕ್ರಿ.ಶ. ೧೨೨೧ರ ಸುಮಾರಿಗೆ ಬಂಗಾಲದ ಸೋಮಗ್ರಾಮದಲ್ಲಿ ಕೆಲವು ಭೂದತ್ತಿಗಳನ್ನು ನೀಡಿದ. ಈ ದಿನಾಂಕವು ಪ್ರಾಕ್ತನ ಶಾಸನದ ದಾಖಲೆಯಾಗಿರುವುದರಿಂದ ಜಾನಪದ ಮತ್ತು ಜನಪದರ ನೆನಪುಗಳನ್ನಾಧರಿಸಿ ಬರೆಯಲಾದ ವಂಶಾವಳಿಗಿಂತ ಹೆಚ್ಚಿನ ಮಹತ್ವ ಹೊಂದಿದೆ. ಶಾಸನದಲ್ಲಿ ಉಲ್ಲೇಖಿತವಾಗಿರುವಂತೆ, ಸೂರ್ಯಸೇನನು ಮಾಡಿದ ಭೂದತ್ತಿಯ ದಿನಾಂಕವನ್ನು ಕ್ರಿ.ಶ. ೧೨೨೧ ಎಂದು ಸ್ವೀಕರಿಸಿದ್ದಾರೆ. ಪ್ರೊ. ಮನಮೋಹನ ಮತ್ತು ರಾಹುಲ ಸಾಂಕೃತ್ಯಾಯನ ಅಭಿಪ್ರಾಯಪಡುವಂತೆ ಸೂರ್ಯಸೇನನ ಮೊಮ್ಮಗ ಬೀರಸೇನನು ಕ್ರಿ.ಶ. ೧೨೧೦ರಲ್ಲಿ ಸುಕೇತಕ್ಕೆ ಸಾಗಿರಲಾರ. ಮೇಲಾಗಿ, ಸೂರ್ಯಸೇನನು ಭೂದತ್ತಿ ನೀಡಿದುದರ ಮತ್ತು ಬೀರಸೇನ ಸುಕೇತಕ್ಕೆ ಹೋದುದರ ಮಧ್ಯೆ ಸಂಭವಿಸಿದ ಹಲವಾರು ಘಟನೆಗಳ ಕಾರಣ ವಿವರಿಸಬೇಕಾಗುವುದು.

ರಾಜಾ ಬಿಶ್ವರೂಪಸೇನನ ಆಳ್ವಿಕೆಯ ೧೪ನೆಯ ವರ್ಷದಲ್ಲಿ ರಾಜಕುವರ ಸೂರ್ಯಸೇನನು ತನ್ನ ಜನ್ಮದಿನ ಸಂದರ್ಭದಲ್ಲಿ ಕ್ರಿ.ಶ. ೧೨೨೧ರ ಸುಮಾರಿಗೆ ಭೂದತ್ತಿ ನೀಡಿದ. ಆ ತಾಮ್ರಪಟ ಶಾಸನವು ಪೂರ್ವ ಬಂಗಾಲದಲ್ಲಿರುವ ಸೇನ ರಾಜಧಾನಿ ಬಿಕ್ರಮಪುರದ (ಜಯಸ್ಕಂಧಾವಾರ) ಸಮೀಪದ ಮಧ್ಯಂಪಾರಾ ಗ್ರಾಮದಲ್ಲಿ ದೊರೆತಿದೆ. ಕುಮಾರ ಸೂರ್ಯಸೇನನ ದತ್ತಿಯ ತರುವಾಯದ ಭೂದತ್ತಿಯನ್ನು ಕ್ರಿ.ಶ. ೧೨೨೫ರಲ್ಲಿ ಕೆತ್ತಿ ಪೂರ್ತಿಗೊಳಿಸಲಾಯಿತು. ಹೀಗಾಗಿ, ರಾಜಕುವರ ಸೂರ್ಯಸೇನನ ಆಗಮನ ಮತ್ತು ಅಲ್ಲಿ ಸ್ವತಂತ್ರ ನಗರ ಸ್ಥಾಪನೆಯ ನಂತರ ಅವನ ಮರಣದ ನಡುವಣ ಅವಧಿ ಸುಮಾರು ನಾಲ್ಕು ವರ್ಷಗಳಾಗಿರಬಹುದು. ಕ್ರಿ.ಶ. (೧೨೨೧ + ೪ = ೧೨೨೫). ಅವನ ಮಗ ರೂಪಸೇನನು ಪ್ರಯಾಗದಿಂದ ಪಂಜಾಬಿಗೆ ಸಾಗಿದ. ಆದರೆ ಅವನು ಕೂಡ ತನ್ನ ತಂದೆಯ ಮರಣದ ಕೂಡಲೆ ನಡೆದಿರಲಾರ. ಏಕೆಂದರೆ, ಪವಿತ್ರ ನದಿಗಳ ಸಂಗಮವಾಗಿರುವ ಪ್ರಯಾಗವು ಮೃತ ಪೂರ್ವಜರ ಶ್ರಾದ್ಧ ಸಮಾರಂಭ ಹಾಗೂ

ನೈವೇದ್ಯಗಳಿಗೆ ಶುಭತಾಣವೆಂದು ಭಾವಿಸಲಾಗಿತ್ತು. ಆದುದರಿಂದ, ತನ್ನ ತಂದೆಯ ವಾರ್ಷಿಕ ಶ್ರಾದ್ಧವನ್ನಾಚರಿಸಲು ತಂದೆಯ ಮರಣಾನಂತರ ರೂಪಸೇನನು ವರ್ಷವಿಡಿ ಅಲ್ಲಿ ಇದ್ದಿರಬಹುದು. ಹಾಗಾಗಿ, ಅವನು ಪಂಜಾಬಿಗೆ ತನ್ನ ತಂದೆಯ ಮರಣದ ಎರಡನೆಯ ವರ್ಷವಾದ ಕ್ರಿ.ಶ. ೧೨೭ರಲ್ಲಿ (೧೨೫ +೨) ಸಾಗಿ ರೋಪರವನ್ನು ತನ್ನ ರೂಪನಗರ ರಾಜ್ಯದ ತಾಣವಾಗಿ ಆಯ್ಕೆ ಮಾಡಿರಬಹುದು. ಹಾಗೆ ಮಾಡಿದ ಮೇಲೆ, ಸುಮಾರು ಐದು ವರ್ಷಗಳಲ್ಲಿ ರೂಪನಗರ ರಾಜ್ಯವನ್ನು ಯಾವ ರೀತಿ ಕಟ್ಟಿ ಬೆಳೆಸಿದನೆಂದರೆ ಮುಸ್ಲಿಮರು ಕಣ್ಣು ಹಾಯಿಸುವಂತಾಯಿತು. ರಾಜಾ ರೂಪಸೇನನು ತನ್ನ ರಾಜ್ಯವನ್ನು ಸಂರಕ್ಷಿಸಲೋಸುಗ ಯುದ್ಧಭೂಮಿಯಲ್ಲಿ ಕ್ರಿ.ಶ. ೧೨೩ರ ಸುಮಾರಿಗೆ ಮರಣಿಸಿದಾಗ ಮುಸ್ಲಿಮ ದಾಳಿ ಸಂಭವಿಸಿರಬಹುದು. ತದನಂತರ, ಅವನ ಮಕ್ಕಳಲ್ಲೊಬ್ಬನಾದ ಬೀರಸೇನನು ಹಿಮಾಚಲಪ್ರದೇಶದ ಸುಕೇತದಲ್ಲಿ ಕ್ರಿ.ಶ.ಸು. ೧೨೩ರಲ್ಲಿ ನೆಲೆಸಿ ಅಲ್ಲೊಂದು ಸಾಮ್ರಾಜ್ಯ ಕಟ್ಟಿದ.

ಕಾಲಾನುಕ್ರಮವಾಗಿ ಸಂಯೋಜಿಸಿ ನೋಡಿದರೆ ಆ ಘಟನೆಗಳು ಹಲವಾರು ವರ್ಷ ತೆಗೆದುಕೊಂಡಿರಬಹುದು. ಇವುಗಳನ್ನು ಪ್ರೊ. ಮನಮೋಹನ ಒದಗಿಸಿಲ್ಲ. ವಿಶ್ವರೂಪಸೇನನ ಸಾಹಿತ್ಯ ಪರಿಷತ್ ತಾಮ್ರಪಟದಲ್ಲಿ ದೊರೆತ ಸೂರ್ಯಸೇನನ ಭೂದತ್ತಿ ಕುರಿತ ಶಾಸನ ಹೀಗೆ ಹೇಳುತ್ತದೆ:

೫೩. ಸೋಮಗ್ರಾಸೇ ಸಮುತ್ಸರ್ಗಿತ ಭೂ ಸಂಬಂಧೇನ ಗುವಾಕ್ಕೊಲ್ಕ ಸಮೇತ ಸಾಂ ಹಿ
250 ತಥೈತದ್ಗ್ರಾಮ ವಾರಬೃಹ್ಮ ಅಮೃತಕಾಯೋ: ಅನೇನೈವ ಕೃತಪಟ್ಟೋ |

೫೪. ಲೀಸಂ ವರ್ಷವೃದ್ಧಾ ಕುಮಾರ ಸೂರ್ಯಸೇನ ಪ್ರದತ್ತ ನಾಲವ್ರೂ ಉ ಗುವಾಕ
ವಾಸ್ತುಭು ಉ 3 ದ್ವಾ ಸ ಬಿ ಭೂ ಉ 10 ಸಾಂ ಹಿ 25 ತಥಾ ತಥೈತದ್ಗ್ರಾ |

೫೫. ಮೇ ವಾರ್ಕಲೊ ಅಮೃತಕಾ >: ಅನೇನೈವ ಕೃತಪಟ್ಟೋಲಿಸಂ ಸಾಂಧಿವಿಗ್ರಹಿಕ
ನಾಜೀಸಿಂಹ ಪ್ರದತ್ತ ನಾಲಭು ಉ 3 ಗುವಾಕ ವಾಸ್ತು ಭು ಉ 4 ಸವಾಸ್ತು |

೫೬. ಭೂ ಉ > ಸಾಂ ಹಿ 25 ದ್ವಾ ಸಾಂ ಹಿ 50 ತಥಾ ಕ (?) ಂದ್ರ ದ್ವೀಪೇ
ಉರಾಚತುರಕೇ ಜಯ ಜಾಹದಾ ಪೂರ್ವ ಘಾಘರ ಕಾತ್ರಿ ಪಾತಕೇ ರಾಜಪಂ
ಮಹೇಶ್ವರಸ್ಯ ಅನೇನೈವಾ |

೫೭. ಲ್ಲಿ ಕಪಂ ಹಲಾಯುಧೇನ ಕೃತಶಾಸನಸಂ ಸ್ತವಾ ಸ್ತುಭು ಉದಾನ 12 |||
ಸಾಂ ಹಿ 50 ತಥಾ ಕ (?) ಂದ್ರದ್ವೀಪೇ ಪಾತಿಲಾ ದ್ವೀಕೇ
ಕುಮಾರ ಶ್ರೀ ಪುರುಷೋತ್ತಮ |

೫೮. ಸೇನ ಭುಜ್ಯಮಾನಾಯುಗ (?) ಅನೇನೈವ ಚತುರ್ದಶಾಬ್ದೀಯಾ
ಉತ್ಥಾನದ್ವಾದಶ್ಯಂ ಸಮುತ್ಸರ್ಗಿತ ಭೂಸಂಬಂಧೇನ ದತ್ತ
ಸವಾಸ್ತು ಭೂಮ್ಯುದಾನ 24 ಸಾಂ ಹಿ 50 ಮಿ |

೫೯. ಲಿತ್ವಾ (ಸಾರ್ಧ) ಷತ್ ತ್ರಿಂಶಾತ್ ಉನ್ಮಾನಾಧಿಕ ಶತತ್ರಯೋ

ದಾನಾತ್ಮಕೇ ಕಲಲ ಗುವಾಕ ಮೂಲ್ಯ ವರಜಾಯ ಸಮೇತ
ಸಾಂ ಚುರ್ಣಾ ಪಂಚಶತಕ ಭೂಮಿ: ಇತ್ಯಾದಿ |

ಶಕ ಸಂವತ್ಸರ ೧೪೪೨ ಮತ್ತು ಕ್ರಿ.ಶ. ೧೫೨೦ಕ್ಕೆ ಸರಿಹೊಂದುವ ಕಾಲ ಶಕೆ ೨೨೬೪ರಲ್ಲಿ ಅಜಬರಸೇನನ ಪತ್ನಿ ಸುಲ್ತಾನಾದೇವಿಯು ದೇವಾಲಯವನ್ನು ತ್ರಿಲೋಕನಾಥನಿಗೆ ಸಮರ್ಪಿಸಿದ ಸಂಗತಿಯನ್ನು ಪ್ರಾಕ್ತನ ಪ್ರಮಾಣ ತೋರ್ಪಡಿಸುತ್ತದೆ. ಅಜಬರಸೇನನ ಆಳ್ವಿಕೆಯನ್ನು ಈ ದಿನಾಂಕದ ಸುಮಾರಿಗೆ ಇಟ್ಟುಕೊಳ್ಳಬಹುದು. ಬೀರಸೇನನ ಸಿಂಹಾಸನಾರೋಹಣವನ್ನು ಕ್ರಿ.ಶ. ೧೨೨೨ ಎಂದು ನಾವು ಲೆಕ್ಕ ಹಾಕಿರುವೆವು. ಇದು ಇತ್ತೀಚೆಗೆ (೧೯೨೦) ಮರುಮುದ್ರಣಗೊಂಡ ಮಾಂಡಿ ರಾಜ್ಯದ ಗ್ಯಾಜೆಟಿಯರಿನಲ್ಲಿ ಉಲ್ಲೇಖಿತವಾಗಿರುವ ರೂಪಸೇನನ ಮರಣ ಕ್ರಿ.ಶ. ೧೨೧೦ರಲ್ಲಿ ಸಂಭವಿಸಿತೆಂಬುದನ್ನು ಅಲ್ಲಗಳೆಯುತ್ತದೆ. ರೂಪಸೇನನ ಮರಣಾನಂತರ ಅವನ ಮೂವರು ಪುತ್ರರು ಗುಡ್ಡಗಳಿಗೆ ಓಡಿ ಆಶ್ರಯ ಪಡೆದರು ಮತ್ತು ಕೆಲ ಕಾಲಾನಂತರ ತಮ್ಮ ತಮ್ಮ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡರು. ಬೀರಸೇನನು ಸುಕೇತದ, ಗಿರಿಸೇನನು ಕಿಯೊಂಥಲದ, ಹಮೀರಸೇನನು ಕಸ್ತವಾರದ ಅರಸರಾದರು. ಬೀರಸೇನನಿಂದ ಆಹುಸೇನನವರೆಗೆ ಒಂಬತ್ತು ಅರಸರು ಆಳಿದರು. ಅವರಲ್ಲಿ ಮೂವರು- ಧರ್ತರಿಸೇನ, ಚಂದರಸೇನ ಮತ್ತು ಖಿರಗಸೇನ-ಅತ್ಯಲ್ಪಾವಧಿ ಆಳಿದರು. ಶ್ರೀ ಎ. ಕನಿಂಗ್ಹಮ್ ಹೇಳುತ್ತಾರೆ: “ಮಾಂಡಿ ಮತ್ತು ಸುಕೇತಗಳ ಸ್ವೀಕೃತ ವಂಶಾವಳಿಗಳ ಪ್ರಕಾರ, ಸೇನ ಎಂಬ ಸರ್ವಸಮಾನ ಬಿರುದನ್ನು ಪ್ರಥಮವಾಗಿ ಧರಿಸಿದ ವೀರಸೇನನು ನಿಜವಾದ ಸಂಸ್ಥಾಪಕನೆಂದು ತೋರುತ್ತದೆ. ಈ ಕಾಲದಿಂದ ಸಾಹುಸೇನ ಮತ್ತು ಬಾಹುಸೇನ ಇಬ್ಬರೂ ಸಹೋದರರಡಿ ಮನೆತನಗಳು ಪ್ರತ್ಯೇಕಗೊಳ್ಳುವವರೆಗೆ ಹತ್ತು ತಲೆಮಾರುಗಳಾದವು...... ಸಮುದ್ರಸೇನನಿಂದ ಅಜಬರಸೇನನವರೆಗೆ,.......ದಿನಾಂಕವನ್ನು ೫೪೪ ಕ್ರಿ.ಶ. ೧೫೨೭ ಎಂದು ಮಾಂಡಿಯಲ್ಲಿರುವ ತಾಮ್ರಪಟ ಶಾಸನ ನಿಶ್ಚಿತಗೊಳಿಸುತ್ತದೆ. ಹನ್ನೊಂದು ಆಳ್ವಿಕೆಗಳಾದವು. ಅಜಬರಸೇನನು ಕ್ರಿ.ಶ. ೧೫೩೪ರಲ್ಲಿ ಮರಣಿಸಿದನೆಂದು ಹೇಳಲಾಗುವುದರಿಂದ ಅವನ ಸಿಂಹಾಸನಾರೋಹಣವನ್ನು ಕ್ರಿ.ಶ. ೧೫೦೦ರ ಸುಮಾರಿಗೆ ಇರಿಸಬಹುದು”.

ಸಂತಸಿಂಗನ ಕಾಲಾನುಕ್ರಮಣಿಕೆಯ ಪ್ರಕಾರ, ನಿಮಿಸೇನನಿಂದ ಆರಂಭಿಸಿ ೩೨೯ ವರ್ಷಗಳ ಕಾಲಾವಧಿಯಲ್ಲಿ ಹದಿನೆಂಟು ಅರಸರು ಆಳಿದರು. ಅಂದರೆ, ಪ್ರತಿಯೊಬ್ಬನೂ ಸರಾಸರಿ ಹದಿನೆಂಟು ಹತ್ತೊಂಬತ್ತು ವರ್ಷ ಆಳಿದನು. ಒಂದು ಸಂಸ್ಕೃತ ವಿರುಧ ದೊರೆತಿದೆ. ಅದು ಮಾಂಡಿಯನ್ನಾಳಿದ ಅರಸರ ಹೆಸರುಗಳನ್ನು ಅವರ ಸ್ತುತಿಯೊಂದಿಗೆ ಕೊಡುತ್ತದೆ. ಆದರಲ್ಲಿ ಅವರವರ ಸಿಂಹಾಸನಾರೋಹಣ ದಿನಾಂಕಗಳನ್ನು ಕೊಟ್ಟಿಲ್ಲ. ಆದರೆ, ರಾಜರ ಕ್ರಮಾನುಗತಿ ಮತ್ತು ಹೆಸರುಗಳಿವೆ.

ಅರಸ ಈಶ್ವರಸೇನನ ಮಾಂಡಿ ಸಿಂಹಾಸನಾರೋಹಣದ ನಂತರ ಅವನು ಭುಬನೇಶ್ವರ ಎಂಬ ಬ್ರಾಹ್ಮಣನನ್ನು ತನ್ನ ಪುರೋಹಿತನನ್ನಾಗಿ ನೇಮಿಸಿದನು ಮತ್ತು ಅವನನ್ನು ಮತ್ತವನ ರಕ್ತಸಂಬಂಧಿಕರನ್ನು ಬಿಯಾಸ (ಬಿಪಾಸಾ) ತೀರದಲ್ಲಿ ನೆಲೆಗೊಳಿಸಿದನು. ಈ ಪುರೋಹಿತ ಭುಬನೇಶ್ವರನು ಶ್ಲೋಕಗಳನ್ನು ರಚಿಸಿ ಅರಸನನ್ನು ಸ್ತುತಿಸಿದನು. ಅದನ್ನು ವಿರುಧ ಎಂದು

ಸಂಕಲಿಸಲಾಗಿದೆ. ಮೂಲ ವಂಶಾವಳಿಯನ್ನು ಸಂಸ್ಕೃತ ಗದ್ಯದಲ್ಲಿ ಬರೆಯಲಾಗಿತ್ತೆಂದು ಹೇಳಲಾಗುತ್ತಿದೆ. ಆದರೆ, ವಿರುಧವನ್ನು ಸಂಸ್ಕೃತ ಶ್ಲೋಕಗಳಲ್ಲಿ ಬರೆಯಲಾಗಿದೆ. ಉದಾಹರಣೆಗೆ, ಹಿಮಾಚಲ ಪ್ರದೇಶದ ಅರಸ ಇಮ್ಮಡಿ ಲಕ್ಷ್ಮಣಸೇನನ ಸ್ತುತಿಯನ್ನು ಕೆಳಗೆ ಕೊಡಲಾಗಿದೆ. ಅದು ಅವನನ್ನು ಮಹಾಪೂರ್ವಜ ಬಂಗಾಲದ ಲಕ್ಷ್ಮಣಸೇನನೊಂದಿಗೆ ಹೋಲಿಸುತ್ತದೆ. (ಪ್ರಾಚೀನ ಲಕ್ಷ್ಮಣ ಇವ ಅಮಲಾತುಲ್ಯಕೀರ್ತಿ:)

ತಸ್ಮಾದ್ಬಭೂಬ ಭೂಬಿ ಲಕ್ಷ್ಮಣಸೇನ ನಾಮ:
ಪ್ರಾಚೀನ ಲಕ್ಷ್ಮಣ ಇವ ಅಮಲಾತುಲ್ಯಕೀರ್ತಿ: |
ಪೂರ್ಣೀಕೃತಾ ಜಗತಿ ಯೇನ ಖಲು ದ್ವಿಜಾಸಾ:
ವ್ಯಾಶಾ ಸಿಸ್ತಾ ನೃಪತಯ: ಪರಿಪಾಲಿತಾಶಾ: ||

ಇದರಂತೆಯೆ, ಅವನ ಉತ್ತರಾಧಿಕಾರಿಗಳಾದ ಚಂದ್ರಸೇನ, ವಿಜಯಸೇನ, ಬಾಹುಸೇನ ಮತ್ತು ನಿಮ (ನಿಮಿ)ಸೇನರನ್ನು ವಿರುಧದಲ್ಲಿ ಕೆಳಕಂಡಂತೆ ಸ್ತುತಿಸಲಾಗಿದೆ:

ಜಾತಾಸ್ಮಾತ್ ಚಂದ್ರಸೇನೊ ನರೇಶ:
ವಿಖ್ಯಾತಾಮಾ ಸರ್ವಲೋಕೈಕ ಚಂದ್ರ: ||
ಚಂದ್ರಪ್ರಖ್ಯಾ ಕೀರ್ತಿರದ್ಯಾಪಿ ಯಸ್ಯ
ಪ್ರಾಜ್ಞೈರಿಯೋಕ್ಯೆ ಪ್ರತ್ಯಹಂ ಗೀಯತೆ ಚ ||

ರಿಪುಜನ್ಯೈಕ ಜಯಕ್ರತು ದೀಕ್ಷಿತಾ:
ಸ ಸುಮರಸೀಮ್ನಿ ಸದೈವ ಸುಶಿಕ್ಷಿತಾ:
ನೃಪಜನ ಪ್ರವರ ಭೂಬಿ
ತತ್‌ಸುತೋ ಬಿಜಯಸೇನ ಇತಿ ಪ್ರತೀತೋತ್ ಭವತ್ ||
ಸ್ವಬಾಹುಬಲ ದರ್ಪಿತ ವಿವಿಧ ಯುದ್ಧ ಕರ್ಮಾಂಕುರ
ಸ್ತುಲನೇಕ ನೃಪ ಜೇತ್ರ್ಪರೋ ನೃಪತಿಮಂಡಲೀ ಮಂಡನ: |
ತದಾತ್ಮಜ ಉದಾರಧಿ ರಿಪು ಗಜೇಂದ್ರ ಪಂಚಾನನೊ
ಬಭೂಬ ಭೂಬಿ ಸದಸ್ಯೋ ಸ ಖಲು ಬಹುಸೇನೋ ನೃಪ: ||
ಶ್ರೀ ನಿಮಸೇನ ಸ್ತದಾಪ್ತ್ಯರತ್ನಂ
ಪ್ರಯತ್ನ ಸಂಬಾಧಿತ ಶತ್ರುಸಂಘ:
ಸುಸತ್ಕೃತ ಯೇನ ದ್ವಿಜೇಂದ್ರ ಯೋಗಾತ್

ಸ್ವರಾಜ್ಯ ಲಕ್ಷ್ಮೀಂ ವಿದಿತಂ ಜಹಾತಿ ||

ಆದರೆ, ಆದು ಅರಸರ ದಿನಾಂಕಗಳನ್ನಾಗಲಿ ಅವರ ಆಳ್ವಿಕೆಗೆ ಸಂಬಂಧಪಟ್ಟ ಘಟನೆಗಳ ವಿವರಗಳನ್ನಾಗಲಿ ಕೊಡುವುದಿಲ್ಲ. ಒಂದು ಕಾಲಾವಧಿವರೆಗಿನ ಅರಸರ ಕ್ರಮಾನುಗತಿಯನ್ನು ಅವರ ಸ್ತುತಿಗಳೊಂದಿಗೆ ಕೊಡಲಾಗಿದೆ. ವಿರುಧದಲ್ಲಿ ಕೊಟ್ಟಿರುವ ಸೇನವಂಶದ ಅರಸರ ಆಳ್ವಿಕೆಯ ಅನುಕ್ರಮ ಇಂತಿದೆ.

| | |
|---|---|
| ೧. ಬಸುಸುತ | ೨. ಬತ್ಸರಾಜ |
| ೩. ಬಧ | ೪. ಮಹಾಬೋಧಿ |
| ೫. ಬರಬಾಹನ | ೬. ರಜಬಾಹನ |
| ೭. ಕಶಿಬಾಹನ | ೮. ಜೀಮೂತಬಾಹನ |
| ೯. ಶಾಲಿಬಾಹನ | ೧೦. ಬಿಜ್ಜಸೇನ |
| ೧೧. ಲಕ್ಷ್ಮಣಸೇನ | ೧೨. ಚಂದ್ರಸೇನ |
| ೧೩. ವಿಜಯಸೇನ | ೧೪. ಬಾಹುಸೇನ |
| ೧೫. ವೀಮಸೇನ | ೧೬. ತಪನತಸೇನ |
| ೧೭. ಕಪಬತಸೇನ | ೧೮. ಸಸ್ಕತಸೇನ |
| ೧೯. ಬೀರಸೇನ | ೨೦. ಸಮುದ್ರಸೇನ |
| ೨೧. ಕೇಶಬಸೇನ | ೨೨. ಮಲಯಸೇನ |
| ೨೩. ಜಯಸೇನ | ೨೪. ಕರಚ್ಛತಸೇನ |
| ೨೫. ಬೋನಸೇನ | ೨೬. ಕಲ್ಯಾಣಸೇನ |
| ೨೭. ಹೀರಸೇನ (ಹಿರಾಸೇನ) | ೨೮. ನರೇಂದ್ರಸೇನ |
| ೨೯. ಧರಿತ್ರಿಸೇನ | ೩೦. ದಿಲಬರಸೇನ |
| ೩೧. ಅಜರಾಮರಸೇನ | ೩೨. ಚತುರಸೇನ |
| ೩೩. ಸಾಹಿಬಸೇನ | ೩೪. ರಾಣಿ ಪ್ರಕಾಶ ದೇವಿ |
| ೩೫. ನಾರಾಯಣಸೇನ | ೩೬. ಕೇಶಬಸೇನ |
| ೩೭. ಹರಿಸೇನ | ೨೮. ಸೂರ್ಯಸೇನ |
| ೩೯. ಶ್ಯಾಮಸೇನ | ೪೦. ಗೌರಸೇನ |
| ೪೧. ಸಿದ್ಧಸೇನ | ೪೨. ಸಿಬಜಲಸೇನ |
| ೪೩. ಸಮಸೇರಸೇನ | ೪೪. ಸೂರ್ಮಾಸೇನ |

೪೫. ಈಶ್ವರೀಸೇನ ೪೬. ಚಾಲಿಮಸೇನ

೪೭. ಆತ್ಮಾಸೇನ ೪೮. ಬಲಬೀರಸೇನ

೪೯. ಬಿಜಯಸೇನ ೫೦. ಭವಾನಿಸೇನ

ಸೇನ ಅರಸರು ಬಂಗಾಲದಿಂದ ಬಂದವರೆಂದು ವಿರುಥದ ಕರ್ತೃ ತನ್ನ ಪುಸ್ತಕದ ಕೊನೆಯಲ್ಲಿ ವರ್ಣಿಸಿರುವನು. ಅವನು ಆದಿತ್ಯ (ಸಿಂಹ) ಸೇನನನ್ನು ಈ ಕೆಳಗಿನ ಶಬ್ದಗಳಲ್ಲಿ ವರ್ಣಿಸಿರುವನು.

**ಗೌಡವಂಶಾವತಂ ಶೋಯಂ ದಾನೇಕವೀರೋ**
**ವಿಜಯಯತು ನಿತರಾಂ ಆದಿತ್ಯಸಿಂಹ ||**

ಈ ಗ್ರಂಥದಲ್ಲಿ ಅವರ ವೃತ್ತಾಂತ ಪಟ್ಟಿಸಲಾದ ಅರಸರ ಹೆಸರುಗಳನ್ನು ಕೆಳಗೆ ಕೊಡಲಾಗಿದೆ

ಬೀರಸೇನ

ಧೀರಸೇನ

ವಿಕ್ರಮಸೇನ

ಧರಿತ್ರಿಸೇನ

ಚಂದರಸೇನ ಮತ್ತು ಖಡ್ಗಸೇನ

ಲಕ್ಷ್ಮಣಸೇನ (ಇಮ್ಮಡಿ)

ಬಿಜೋಯಸೇನ

ಆಹುಸೇನ

ಬೀರಸೇನನ ವಂಶ (ಆಹುಸೇನನ ನಂತರ)

ನಿಮಿಸೇನ

ಬಾಹುಸೇನನ ಪುತ್ರರು

ನರಬಾಹನಸೇನ

ಕಹಬತಸೇನ

ಸುಬಾಹುಸೇನ

ಬೀರಸೇನ (ಮುಮ್ಮಡಿ)

ಸಮುದ್ರಸೇನ

ಕೇಶಬಸೇನ

ನರವಾಹನಸೇನನ ಪುತ್ರರು

ಜಯಸೇನ

ಕಾಂಚನಸೇನ

ಚೋನಸೇನ

ಕಲ್ಯಾಣಸೇನ

ಹಿರಾಸೇನ

ಧರ್ತಾರಿಸೇನ

ನರಿಂದರಸೇನ

ಹರಜಯಸೇನ

ದಿಲಬರಸೇನ

ಆಜಬರ (ಆಜಮರ) ಸೇನ

# ಅನುಬಂಧ 'ಗ'

## ಗೋವರ್ಧನ ಆಚಾರ್ಯ ಮತ್ತು ವರ್ತಕನ ಪತ್ನಿಯ ಕತೆ

ಈ ಕತೆಯನ್ನು ಹಲಾಯುಧ ಮಿಶ್ರನ ಶೇಖ ಶುಭೋದಯ ಎಂಬ ಸಂಸ್ಕೃತ ಗ್ರಂಥದಿಂದ ತೆಗೆದುಕೊಳ್ಳಲಾಗಿದೆ. ಲಕ್ಷ್ಮಣಸೇನನ ಆಳ್ವಿಕಾವಧಿಯಲ್ಲಿ ಆಸ್ಥಾನ ಕವಿ ಮತ್ತು ಗುರು ಆಗಿದ್ದ ಗೋವರ್ಧನ ಆಚಾರ್ಯನ ಬಗೆಗಿನ ಘಟನೆಯೊಂದನ್ನು ಅದು ಕಥಿಸುತ್ತದೆ. ಅವನು ತನ್ನ ಸ್ವತಂತ್ರ ಮನೋಭಾವ, ನಿಷ್ಠೆ, ಋಜುತ್ವ ಮತ್ತು ಚಾರಿತ್ರ್ಯಗಳನ್ನು ಬೆಳಗಿಸುವ ನಿದರ್ಶನಗಳನ್ನು ತನ್ನ ಹಿಂದೆ ಬಿಟ್ಟುಹೋಗಿರುವನು. ಅದು ಅವನ ಖಡಾಖಂಡಿತ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ. ಇಂತು, ಈ ಘಟನೆ ಅವನ ಚಾರಿತ್ರ್ಯ ಬಲವನ್ನು ಉಜ್ವಲಗೊಳಿಸುತ್ತದೆ. ನಾಟಕೀಯ ರೂಪದಲ್ಲಿ ಕೊಟ್ಟಿರುವ ಕೆಳಕಂಡ ಕತೆಯಿಂದ ಅದನ್ನು ಗ್ರಹಿಸಬಹುದು.

### ದೃಶ್ಯ ೧

(ನದೀತೀರದ ಮೇಲೆ,ಅದೇ ತಾನೆ ಸ್ನಾನ ಮಾಡಿದ ಮಾಧವಿ ತನ್ನ ಹಸಿ ಕೇಶ ನಿರಿಗೆಗಳನ್ನು ಒಣಗಿಸಿಕೊಳ್ಳುತ್ತಿರುವಳು. ಇನ್ನೂ ಸ್ನಾನ

ಮಗ್ನರಾಗಿರುವ ತನ್ನ ಗೆಳತಿಯರಿಗಾಗಿ ಕಾಯುತ್ತಿರುವಳು. ಅದೇ ಕಾಲಕ್ಕೆ ಅರಸನ ಷಡ್ಡಕ ಕುಮಾರದತ್ತನು ತನ್ನ ನೀರಡಿಕೆ ಹಿಂಗಿಸಿಕೊಳ್ಳಲು ಅದೇ ನದೀತೀರಕ್ಕೆ ಬರುವನು.ತೊಯ್ದು ದೇಹಕ್ಕಂಟಿಕೊಂಡ ಕಪ್ಪು ಹೆರಳಿನ ಸುಂದರ ಸ್ತ್ರೀಯ ಕ್ಷಣದರ್ಶನ ಪಡೆದ ಅವನು ಮುಗುಳ್ನಗುವನು ಮತ್ತು ಅವಳ ಸೌಂದರ್ಯದಿಂದ ಮಂತ್ರಮುಗ್ಧನಾಗುವನು. ತಡಮಾಡದೆ ಅವಳನ್ನು ಸಂಬೋಧಿಸುವನು).

ಕುಮಾರದತ್ತ: (ಅವಳನ್ನುದ್ದೇಶಿಸಿ) ಎಲೈ ಸೌಂದರ್ಯವತಿಯೆ, ನಿನ್ನ ಚೆಲುವು ನನ್ನನ್ನು ಸೆಳೆದಿದೆ. ದಯವಿಟ್ಟು ನನ್ನನ್ನು ಈ ಸ್ಥಿತಿಯಿಂದ ಪಾರುಗಾಣಿಸು. ನಿನ್ನ ಅದ್ಭುತ ಕಂಗಳು ನನ್ನ ಮೇಲೆ ದೃಷ್ಟಿ ಹಾಯಿಸಲಿ ಮತ್ತು ನನ್ನ ನಮ್ರ ಕಾಣಿಕೆಗಳನ್ನು ಸ್ವೀಕರಿಸಲಿ. ನೀನು ನನ್ನ ಪ್ರಸ್ತಾಪವನ್ನು ಒಪ್ಪಿದರೆ ನಿನ್ನನ್ನು ಶ್ರೀಮಂತಳಾಗಿಸುವೆ ಮತ್ತು ರಾಜಭಂಡಾರದಲ್ಲಿರುವುದಕ್ಕಿಂತ ಹೆಚ್ಚು ಬಂಗಾರ ಕೊಡುವೆ. ನಿನ್ನ ಅಧರದಿಂದ ಹೊರಬೀಳುವ ಶಬ್ದಗಳು ನನಗೆ ಆಜ್ಞಾಸಮಾನ. ನಿನ್ನ ಯಃಕಶ್ಚಿತ ಬಯಕೆಯನ್ನು ಈಡೇರಿಸುವೆ. ನಿನ್ನ ಮೋಹಕತೆ ಮತ್ತು ಸೌಂದರ್ಯ ನನ್ನನ್ನು ಮರುಳುಗೊಳಿಸಿವೆ. ನಿನ್ನಾಸೆಗಳನ್ನು ಈಡೇರಿಸುವುದೆ ನನ್ನ ಜೀವನದ ಗುರಿ. ನೀನು ಒಂದು ಮಾತು ಹೇಳಿದರೆ ಇಲ್ಲವೆ ಸಂಜ್ಞೆ ಮಾಡಿದರೆ ಸಾಕು, ನಾನು ಓಡೋಡಿ ಈಡೇರಿಸುವೆ.

(ಕುಮಾರನು ತನ್ನ ಅಗಣಿತ ಸಂಪತ್ತಿನ ಆಮಿಷಗಳಿಂದ ಮತ್ತು ಎಂದೂ ಬತ್ತಿಹೋಗದ ಪ್ರೇಮದಿಂದ ಮಾಧವಿಯನ್ನು ಸೆಳೆಯುವಲ್ಲಿ ವಿಫಲನಾಗುವನು. ಅವಳ ಸ್ಥಿತಪ್ರಜ್ಞ ಮೌನ ಅವನನ್ನು ಕೆರಳಿಸುತ್ತದೆ).

ಸಿಟ್ಟಿಗೆದ್ದ ಕುಮಾರ ಘೋಷಿಸುತ್ತಾನೆ: ನನ್ನನ್ನು ಅಂಜಿಕೆ ಕುಗ್ಗಿಸದು. ರಾಜನ ರೋಷವೂ ಕಂಗೆಡಿಸದು. ಎಚ್ಚರಿಕೆ! ಓ ಸ್ತ್ರೀಯೇ, ನಾನು ಮನಬಂದಂತೆ ಮಾಡುವೆ.

(ಈ ತೀವ್ರ ಹೇಳಿಕೆ ಕೂಡ ವರ್ತಕನ ಪತ್ನಿ ಮಾಧವಿಯನ್ನು ವಿಚಲಿತಗೊಳಿಸಲಿಲ್ಲ).

ಕುಮಾರ: ನೀನು ಮಣಿಯದಿರಲು ನಿರ್ಧರಿಸುವುದರಿಂದ ಮತ್ತು ನನ್ನ ಕೋರಿಕೆಗಳನ್ನು ತಿರಸ್ಕರಿಸುತ್ತಿರುವುದರಿಂದ ನಾನು ನಿನ್ನನ್ನು ಬಲ ಪ್ರಯೋಗಿಸಿ ಅಪಹರಿಸುವೆ. ಯಾರೂ ನಿನ್ನ ಸಹಾಯಕ್ಕೆ ಬಾರರು.

(ಇದನ್ನು ಕೇಳಿ ಮಾಧವಿ ಸಿಟ್ಟಿನಿಂದ ಮಾರ್ನುಡಿದಳು).

ಮಾಧವಿ: ನೀನು ಅಹಂಕಾರಿಯಾಗಿರುವಿ, ಕಾಮಾಂಧನಾಗಿರುವಿ. ನೀನಾರೆಂಬುದನ್ನು ಮರೆತಿರುವಿ. ನಾನಾರೆಂಬುದನ್ನೂ ಮರೆತಿರುವಿ. ಇನ್ನೊಬ್ಬನ ಪತ್ನಿಯನ್ನು ಬಯಸುವುದರಿಂದ ಸಮಾಧಾನ ದೊರೆಯುವುದೆಂದು ಭಾವಿಸಿರುವೆಯಾ? ನಾನು ನಿಷ್ಠಳಾದ ಗರತಿ. ನನ್ನ ಪತಿಯೆ ನನ್ನ ಪರದೈವ ಮತ್ತು ನನ್ನ ಜೀವನದಲ್ಲಿ ಅವನೊಬ್ಬನೇ. ನೀನು ರಾಣಿಯ ಸಹೋದರನೆಂಬುದು ನೆನಪಿರಲಿ. ಇನ್ನೊಬ್ಬನ ಪತ್ನಿಯತ್ತ ನಿನ್ನ ಪಾಪಿಷ್ಟ ಪ್ರವೃತ್ತಿಗಳನ್ನು ನೋಡಿದಾಕ್ಷಣ ಜನರು ನಿನ್ನನ್ನು ದ್ವೇಷಿಸುವರು. ನಿನ್ನ ಮನೋಭಾವ ಅತ್ಯಂತ ನಿಂದನೀಯವಾದುದೆಂಬುದನ್ನು ನೀನು

ಕಾಣಲಾರೆಯಾ? ಸಾರ್ವಜನಿಕ ಜುಗುಪ್ಸೆ ಯಾರಿಗೂ ಒಳಿತಲ್ಲ. ಈ ರಾಜ್ಯ ಯಾರ ಹಿತಕಾರಿ ಆಳ್ವಿಕೆಯಲ್ಲಿ ಸಮೃದ್ಧಿ ಹೊಂದಿದೆಯೋ ಆ ವಿಜಯಸೇನನು ಇನ್ನೊಬ್ಬನ ಪತ್ನಿಯ ಶೀಲಭಂಗ ಮಾಡುವ ಅಪರಾಧಿಯನ್ನು ಸುಮ್ಮನೆ ಬಿಡಲಾರನೆಂಬ ಭಯವಿಲ್ಲವೆ ನಿನಗೆ? ಈ ಸುದ್ದಿ ಓಲಗವನ್ನು ತಲುಪಿದಾಕ್ಷಣ ಇಂಥ ಹೇಯ ಮತ್ತು ಅಪಮಾನಗಳ ಕೃತ್ಯಕ್ಕಾಗಿ ನಿನ್ನನ್ನು ಶಿಕ್ಷಿಸಲಾಗುವುದು.

ಅನಿರ್ಬಂಧಿತನಾಗಿ ಕುಮಾರ ಮುಂದುವರಿಸುವನು: ಎಲೈ ಸುಂದರ ಸ್ತ್ರೀಯೆ, ನಾನು ನಿನ್ನನ್ನು ರತ್ನಗಳು ಮತ್ತು ಸುವರ್ಣಾಭರಣಗಳಿಂದ ಮುಚ್ಚಿಬಿಡುವೆ. ಅವು ನಿನ್ನ ಉಜ್ವಲತೆಯನ್ನು ಶ್ರೀಮಂತಗೊಳಿಸುವವು. ನೀನು ರಾಣಿಯಾಗಿ ಮೆರೆಯುವಿ. ನಾನು ನೀನು ಕೇಳಿದ್ದನ್ನೆಲ್ಲ ಕೊಡುವೆ. ಎಷ್ಟೋ ಸ್ತ್ರೀಯರು ನಿನ್ನನ್ನು ನೋಡಿ ಅಸೂಯೆಪಡುವರೆಂಬುದನ್ನು ತಿಳಿದಿರು.

ಮಾಧವಿ: (ರೋಷದಿಂದ) ದುರುಳನೆ, ಹುಷಾರ್! ನನ್ನ ಪತಿ ನನ್ನ ಮೇಲೆ ಬೇಕಾದಷ್ಟು ಸುವರ್ಣಾಭರಣಗಳನ್ನು ಸುರಿದಿದ್ದಾನೆ. ನನಗೆ ಯಾವುದೆ ಸಂಪತ್ತು, ಶ್ರೀಮಂತಿಕೆ ಬೇಕಿಲ್ಲ. ನನ್ನ ಪತಿಯ ಜೊತೆ ನಾನು ಸುಖಿವಾಗಿರುವೆನು. (ಮಾಧವಿ ದೂರ ನಡೆಯುವಳು).

ಕೆಲವು ದಿನಗಳ ನಂತರ ಕುಮಾರದತ್ತನು ಮಾಧವಿಯ ಮನೆಗೆ ಬರುವನು. ಅವಳ ಪತಿಗೆ ಮತ್ತು ಮಾವನಿಗೆ ತರತರದ ಆಮಿಷಗಳನ್ನು ಒಡ್ಡುವನು. ತನ್ನ ಠಕ್ಕ ಮಾತುಗಳ ಜಾಲದಲ್ಲಿ ಅವರನ್ನು ಸಿಲುಕಿಸುವನು. ತನಗಾಗಿ ಸುವರ್ಣಾಭರಣಗಳನ್ನು ಮಾಡಿಕೊಡಲು ಅವರನ್ನು ಒಪ್ಪಿಸುವನು. ಮತ್ತು ಅದಕ್ಕೆ ಪ್ರತಿಯಾಗಿ ಆಭರಣಗಳು ಸಿದ್ಧಗೊಂಡಾಗ ಇಮ್ಮಡಿ ಹಣ ಸಂದಾಯ ಮಾಡುವುದಾಗಿ ಮಾತು ಕೊಡುವನು. ಮಾಧವಿಗೆ ಅದು ಬಲೆಯೆಂದು ತಿಳಿಯುತ್ತದೆ. ಅವಳಿಗೆ ಅದು ಹಂಚಿಕೆಯೆಂದು ಗೊತ್ತಾಗುತ್ತದೆ. ಅವನ ಪ್ರಸ್ತಾಪವನ್ನು ಅವರು ಒಪ್ಪಿಕೊಳ್ಳಬಾರದೆಂದು ಅವಳು ಮಾಡಿದ ಪ್ರಯತ್ನ ವಿಫಲಗೊಳ್ಳುತ್ತದೆ. ತರುವಾಯದಲ್ಲಿ ಆಭರಣಗಳನ್ನು ತೆಗೆದುಕೊಂಡು ಹೋಗಲು ಬಂದಾಗ ಕುಮಾರದತ್ತ ಅವುಗಳ ತೂಕ ನೋಡುತ್ತಾನೆ. ತಾನು ಕೊಟ್ಟ ಹಣಕ್ಕಿಂತ ಕಡಿಮೆ ಬಂಗಾರ ಬಳಸಿರುವರೆಂದು ಮಾಧವಿಯ ಪತಿ ಮತ್ತು ಮಾವರನ್ನು ಆಪಾದಿಸುತ್ತಾನೆ. ಈ ಕುಂಟು ನೆಪವೊಡ್ಡಿ ಮಾಧವಿಯ ಪತಿಯನ್ನು ಸೆರೆಮನೆಯಲ್ಲಿಡಿಸುತ್ತಾನೆ.

## ದೃಶ್ಯ ೨

(ಮಾಧವಿಯ ಮನೆ. ಅವಳೊಬ್ಬಳೇ ಇದ್ದಾಳೆ. ಕುಮಾರದತ್ತ ಬರುವನು).

ಕುಮಾರ: ಎಲವೋ ನನ್ನ ಸುಂದರಿಯೇ, ನಾನು ಹೇಳುವುದನ್ನೇಕೆ ಕೇಳುವುದಿಲ್ಲ? ನಾನು ನಿನ್ನ ಪತಿಯನ್ನು ಸರಳುಗಳ ಹಿಂದೆ ನಿರಾತಂಕವಾಗಿ ಇರಿಸಿರುವೆ. ಈಗಲಾದರೂ ನೀನು ನನಗಾಗಿ ಕೆಲ ಸಮಯ ನೀಡಬಹುದಲ್ಲ.

(ಇದನ್ನು ಕೇಳಿ ಕೆರಳಿದ ಮಾಧವಿ ಪೊರಕೆ ಹಿಡಿದು ಅವನನ್ನು ಬೆನ್ನಟ್ಟುವಳು).

ಕೆಲ ಸಮಯಾನಂತರ, ಮಾಧವಿಯ ಮಾವನ ದೃಷ್ಟಿಮಾಂದ್ಯದ ಪ್ರಯೋಜನ ಪಡೆದು ಕುಮಾರನು ಹಗಲಿನಲ್ಲಿಯೆ ಆವಳ ಕೋಣೆಗೆ ನುಗ್ಗುವನು. ಗಾಬರಿಗೊಂಡು ಮಾಧವಿ ಕೋಣೆಯಿಂದ ಹೊರಗೆ ಧಾವಿಸಲೆತ್ನಿಸುವಳು, ಆದರೆ, ಕುಮಾರನು ಅವಳನ್ನು ತಡೆಗಟ್ಟಿ ಅವಳ ಸೀರೆ ಸೆಳೆಯುತ್ತಾನೆ. ಆಗ ಜರುಗಿದ ಜಗ್ಗಾಟದಲ್ಲಿ ಸೀರೆ ಅವಳ ಭುಜದಿಂದ ಕೆಳಗೆ ಸರಿಯುತ್ತದೆ. ಅವಳು ತನ್ನ ಮಾವನನ್ನು ಸಹಾಯಕ್ಕಾಗಿ ಕೂಗುತ್ತಾಳೆ. ಅವಳ ಆರ್ತ ಮೊರೆ ಕೇಳಿ ಜನರು ನೆರೆಯುತ್ತಾರೆ. ಮತ್ತು ಕುಮಾರನನ್ನು ಬಂಧಿಸಿ ಮಂತ್ರಿ ಎದುರು ನಿಲ್ಲಿಸುತ್ತಾರೆ.

## ದೃಶ್ಯ ೩

## (ಮಂತ್ರಿಯ ಮನೆ)

ಕೋಪಾವಿಷ್ಟ ಮಾಧವಿ ಮತ್ತು ಅವಳ ನೆರೆಹೊರೆಯವರನ್ನು ಸಮಾಧಾನಪಡಿಸಲು ಮಂತ್ರಿ ಜಾಣ ನುಡಿಗಳನ್ನಾಡುವನು: ನಾನು ನಿಮಗೆ ಸಹಾಯ ಮಾಡಲು ಎಲ್ಲವನ್ನೂ ಮಾಡುವೆ. ಆದರೆ ನೆನಪಿಡಿರಿ. ಅವನು ರಾಜನ ಷಡ್ಡಕ ಮತ್ತು ರಾಣಿ ವಲ್ಲಭಾಳ ಸಹೋದರ. ನೀವು ಓಲಗಕ್ಕೆ ನಡೆಯಿರಿ, ನಾನು ನಂತರ ನಿಮ್ಮನ್ನು ಕೂಡಿಕೊಳ್ಳುವೆ.

ಸ್ವಗತ: ನಾನು ಹೇಗಾದರೂ ಮಾಡಿ ಇವರನ್ನು ಸಾಗಹಾಕಬೇಕು. ರಾಣಿಯ ಕ್ರೋಧಕ್ಕೆ ಗುರಿಯಾಗಿ ನನ್ನ ಚರ್ಮ ಸುಲಿಸಿಕೊಳ್ಳುವ ಅಪಾಯ ತಂದುಕೊಳ್ಳುವೆನೆಂದು ಭಾವಿಸುವಷ್ಟು ಮೂರ್ಖರೆ ಇವರು?

## ದೃಶ್ಯ ೪

## (ಓಲಗದಲ್ಲಿ)

ಮಾಧವಿಯೊಂದಿಗೆ ಜನರು ಉಪಸ್ಥಿತರಿದ್ದು ರಾಜನೆದುರು ತಮ್ಮ ವಾದ ಮಂಡಿಸಿದರು: ರಾಜನೆ, ನಿನ್ನ ಶಾಂತ ರಾಜ್ಯದಲ್ಲೂ ದುರ್ವರ್ತನೆ ಮತ್ತು ಅತ್ಯಾಚಾರ ಸರ್ವೇಸಾಮಾನ್ಯವಾಗಿವೆ. ನಮಗೆ ನ್ಯಾಯ ಬೇಕು. ನಿಮ್ಮ ತೀರ್ಪನ್ನು ಕೇಳಲು ನಾವು ಇಂದು ಓಲಗಕ್ಕೆ ಬಂದಿರುವೆವು.

ಇದನ್ನು ಕೇಳಿದ ಗೋವರ್ಧನ ಆಚಾರ್ಯ ಕೇಳಿದನು: ನೀವೆಲ್ಲ ಮಾತಾಡುತ್ತಿರುವುದೇನು?

ಮಾಧವಿ: (ರಾಜನಿಗೆ ಬಾಗಿ ನಮಸ್ಕರಿಸುತ್ತ) ನಾನು ಮಾಧವಿ. ವರ್ತಕನೊಬ್ಬನ ಪತ್ನಿ. ರಾಜನ ಷಡ್ಡಕ ಕುಮಾರದತ್ತನು ಬಲವಂತದಿಂದ ನನ್ನ ಮನೆ ಪ್ರವೇಶಿಸಿ ನನ್ನ ಮೇಲೆ ಅತ್ಯಾಚಾರ ಮಾಡಲೆತ್ನಿಸಿದ. ನಾನು ನನ್ನ ದೂರಿಗೆ ಪರಿಹಾರ ಕೋರಿ ನಿಮ್ಮೆದುರು ನಿಂತಿರುವೆ.

ರಾಣಿ ವಲ್ಲಭಾ: ನನ್ನ ಸಹೋದರ ಕುಮಾರದತ್ತ ಅಪರಾಧವೆಸಗಿದ್ದಾನೆಂದು ನಾನು

ನಂಬಲಾರೆ. (ಆಸ್ಥಾನ ಕವಿ ಉಮಾಪತಿಧರನೆಡೆ ಬೆರಳು ತೋರಿಸುತ್ತ ಅವಳು ಘೋಷಿಸಿದಳು). ಕವಿ ಉಮಾಪತಿಧರನೇ ಅಪರಾಧಿ.

(ರಾಣಿಯ ಬಾಯಿಯಿಂದ ಈ ಘೋಷಣೆ ಕೇಳಿ ಇಡಿ ಆಸ್ಥಾನದ ಮಂತ್ರಿಗಳು ಮತ್ತು ರಾಜನು ಕೂಡ ಮೌನ ತಾಳುವರು).

ರಾಣಿ ವಲ್ಲಭಾ: ಮಾಧವಿಯೆಡೆ ತಿರುಗಿ ಪಾಪಿ! ಬೇರೆ ಯಾರೋ ನಿನ್ನನ್ನು ಅಪಮಾನಗೊಳಿಸಿರುವಾಗ ನನ್ನ ಸಹೋದರ ಅಪರಾಧಿಯೆಂದು ಆಪಾದಿಸಲು ನಿನ್ನ ಧಾರ್ಷ್ಟ್ಯವೆಷ್ಟು?

(ಇದನ್ನು ಕೇಳಿ ಮಾಧವಿಯು ರಾಣಿಯ ಮುಂದೆ ಸಾಷ್ಟಾಂಗ ನಮಸ್ಕರಿಸಿ ಪ್ರಾರ್ಥಿಸುವಳು).

ರಾಣಿಯೆ, ಗೌಡವನ್ನು ಗೆದ್ದ ಮಹಾರಾಜಾಧಿರಾಜ ಲಕ್ಷ್ಮಣಸೇನನ ಪತ್ನಿ ನೀನು. ಈ ರಾಜ್ಯ ಇವತ್ತಿಗೂ ಕಾನೂನು ಮತ್ತು ಸುವ್ಯವಸ್ಥೆ ಪಾಲಿಸುತ್ತಿದೆ. ದೈಹಿಕ ಶೌರ್ಯ ಮತ್ತು ಬಲಗಳಿಂದ ಯಾರೂ ಏನು ಬೇಕಾದರೂ ಮಾಡುವಂತಿಲ್ಲ. ಆದರೆ, ಇಂಥದ್ದನ್ನು ನಿನ್ನ ತವರು ಮನೆಯಲ್ಲಿ ಮಾಡಬಹುದೆಂದು ಸಾಧಿಸಬಹುದಾದರೆ, ಬಲವು ತನ್ನಿಷ್ಟದಂತೆ ಮಾಡುವ ಸ್ವೇಚ್ಛೆ ನೀಡುವುದಾದರೆ ಹೇಳಿರಿ. ನಾನು ನಿಮ್ಮ ಸಹೋದರನನ್ನು ಉಪಪತಿಯಾಗಿ ಸ್ವೀಕರಿಸುವೆ.

ಈ ಮಾತುಗಳನ್ನು ಕೇಳಿ ರಾಣಿ ಸಿಟ್ಟಿಗೆದ್ದು ಮಾಧವಿಯ ಕೂದಲು ಹಿಡಿದು ಅವಳನ್ನು ನೆಲದ ಮೇಲೆ ಎಳೆದಾಡಿ ಅವಮಾನಿಸುತ್ತಾಳೆ. ಭಯಬೀತರಾದ ಆಸ್ಥಾನಿಕರು ಮಾಧವಿಯ ಸಹಾಯಕ್ಕೆ ಬರುವುದಿಲ್ಲ. ಮಾಧವಿಯು ಅಸ್ಥಾನವನ್ನು ಈ ರೀತಿ ಸಂಬೋಧಿಸುತ್ತಾಳೆ:

ಗೌರವಾರ್ಹ ವ್ಯಕ್ತಿಯಿರದ ಆಸ್ಥಾನವು ಆಸ್ಥಾನವಲ್ಲ. ಕಾನೂನು ಪರಿಪಾಲನೆಗೆ ಹೋರಾಡದ ಗೌರವಾನ್ವಿತನು ಗೌರವಾನ್ವಿತನಲ್ಲ. ಕಾನೂನು ಪಾಲನೆ ಅನಕೂಲಸಿಂಧುವಾಗಿರದೆ ಅದು ನ್ಯಾಯವನ್ನಾಧರಿಸಿರಬೇಕು.

ಗೋವರ್ಧನ ಆಚಾರ್ಯ (ಸ್ವಗತ): ನಾನು ಕರ್ತವ್ಯಚ್ಯುತನಾಗಲೆ? ನ್ಯಾಯಪರನಾಗಲೆ? ನಾನು ಈ ಅವಮಾನಕರ ದೃಶ್ಯವನ್ನು ಮೌನವಾಗಿ ವೀಕ್ಷಿಸುತ್ತ ಕುಳಿತಿರಲೆ? ಭೀಷ್ಮ ಪಿತಾಮಹ, ದ್ರೋಣರ ತರಹ? ಅಸಹಾಯಕ ದ್ರೌಪದಿಯ ಮೇಲೆ ಅತ್ಯಾಚಾರ ನಡೆಯುತ್ತಿರುವಾಗ ಅವರಿಗೆ ಪ್ರತಿಭಟಿಸುವ ಶಕ್ತಿಯಿರಲಿಲ್ಲ. ಅವರಂತೆಯೆ ಮಾಡಿ ನಾನೂ ತಲೆತಲಾಂತರಗಳವರೆಗೂ ಶಪಿತನಾಗುಳಿಯಲೆ? ನನ್ನ ಆತ್ಮಸಾಕ್ಷಿ ಛೀಮಾರಿ ಹಾಕುತ್ತಿದ್ದೆ. ನಾನು ಸುಮ್ಮನೆ ಕುಳಿತಿರಲಾರೆ. ಕ್ರಿಯಾಶೀಲನಾಗಬೇಕು. ಅಪಮಾನಕ್ಕಿಂತ ಮೃತ್ಯು ಲೇಸು. ಈ ಅನ್ಯಾಯದ ವಿರುದ್ಧ ಪ್ರತಿಭಟಿಸದಿರಬಾರದು.

ಗೋವರ್ಧನ ಆಚಾರ್ಯ (ರೊಚ್ಚಿಗೆದ್ದು): ರಾಜನೇ, ಎಚ್ಚರ! ನಿನ್ನ ರಾಜ್ಯ ಈಗಾಗಲೆ ವಿನಾಶದ ಹಾದಿ ಹಿಡಿದಿದೆ.

(ಹೀಗೆಂದವನೆ ಗುದ್ದಲಿ ಹಿಡಿದು ರಾಣಿಯತ್ತ ಧಾವಿಸಿದ)

ಗೋವರ್ಧನ ಆಚಾರ್ಯ (ರಾಜನನ್ನುದ್ದೇಶಿಸಿ): ಈ ದುರಹಂಕಾರಿ ಸ್ತ್ರೀ ಅಪರಾಧಕ್ಕೆ ಕುಮ್ಮಕ್ಕು ನೀಡಿರುವಳು. ಆದ್ದರಿಂದಲೆ, ಅವಳ ಸಹೋದರ ಒಬ್ಬ ಸಾಧ್ವಿಯ ಮಾನಭಂಗಕ್ಕೆ ಯತ್ನಿಸಿರುವನು. ಅವನನ್ನು ಕೂಡಲೆ ರಾಜ್ಯದಿಂದ ಗಡೀಪಾರು ಮಾಡು. ಇಲ್ಲದಿದ್ದರೆ, ರಾಜ್ಯ ವಿನಾಶ ಹೊಂದೀತು. ಪಾಲವಂಶದ ಹಿಂದಿನ ಅರಸರು ಸದ್ಗುಣಿಗಳಾಗಿದ್ದು ತಮ್ಮ ಪ್ರಜೆಗಳನ್ನು ಸತ್ಯಪಥ ಅನುಸರಿಸುವಂತೆ ಪ್ರೇರೇಪಿಸುತ್ತಿದ್ದರು. ಹಿಂದೊಮ್ಮೆ ಇಂತಹದೆ ಸನ್ನಿವೇಶದಲ್ಲಿ ರಾಜಾ ರಾಮಪಾಲನು ಮಾನಭಂಗದ ಆರೋಪಿಯಾಗಿದ್ದ ತನ್ನ ಏಕೈಕ ಮಗನನ್ನು ಭರ್ಚಿಯ ತುದಿಯ ಮೇಲೆ ಶೂಲಕ್ಕೇರಿಸಲು ಆಜ್ಞಾಪಿಸಿದ್ದ. ಈಗ ನಿನ್ನ ಆಸ್ಥಾನ ದುರ್ಗುಣ ಮತ್ತು ಪಾಪದ ಮುಷ್ಠಿಯಲ್ಲಿ ಸಿಲುಕಿದ್ದು ನಾನು ನಿನ್ನ ಆಸ್ಥಾನವನ್ನು ತೊರೆಯುವೆ. ಅವಮರ್ಯಾದೆಗಿಂತ ಮೃತ್ಯುವೆ ಲೇಸು ಮತ್ತು ಸತ್ಕಾರ್ಯಗಳನ್ನು ಮಾಡುವವರು ಮಾತ್ರವೆ ಆಧ್ಯಾತ್ಮಿಕ ಉನ್ನತಿ ಪಡೆಯಬಲ್ಲರು.

ಈ ಮಾತುಗಳನ್ನು ಹೇಳುತ್ತ ಗೋವರ್ಧನ ಆಚಾರ್ಯನು ತನ್ನ ದಂಡ ಕಮಂಡಲಗಳನ್ನು ಹಿಡಿದು ಹೊರಡಲುದ್ಯುಕ್ತನಾದನು. ಇಡಿ ಆಸ್ಥಾನ ಸ್ತಂಬೀಭೂತವಾಗಿ ಕುಳಿತಿತ್ತು. ಈ ಕೃತ್ಯವು ರಾಜನನ್ನು ಬಾಗೆರಿಸಿತು.

ರಾಜ (ಸ್ವಗತ): ನನ್ನ ಪ್ರಜೆಗಳಿಗೆ ಕರ್ತವ್ಯಚ್ಯುತನಾದ ನಾನೆಂಥ ರಾಜ! ನಾನು ನನ್ನ ಕುಲ ಮತ್ತು ಕುಟುಂಬದವರೊಂದಿಗೆ ಶಾಂತಿಯಿಂದ ಬಾಳಲಪೇಕ್ಷಿಸಿರುವುದೇನೊ ಸರಿ. ಆದರೆ, ಯಾವ ಬೆಲೆ ತೆತ್ತು? (ನಿಟ್ಟುಸಿರು ಬಿಡುವನು). ಅವರನ್ನು ಸಂತುಷ್ಟಗೊಳಿಸಲೋಸುಗ ನಾನು ನನ್ನ ಆಸ್ಥಾನದ ಎಲ್ಲ ರತ್ನಗಳಿಂದ, ಗೋವರ್ಧನ ಆಚಾರ್ಯನ ವಿದ್ವತ್ತು ಮತ್ತು ವಿವೇಕಗಳಿಂದ ವಂಚಿತನಾಗುತ್ತಿರುವೆ.

ತನ್ನ ವರ್ತನೆಗೆ ನಾಚಿಕೊಂಡು ರಾಜನು ಆಚಾರ್ಯನಲ್ಲಿ ಮೊರೆಯಿಟ್ಟು, ಅವನ ಮನವೊಲಿಸುವನು. ಆ ಮೇಲೆ ಖಡ್ಗವನ್ನು ಝಳಪಿಸುತ್ತ ಕೋಪಾವಿಷ್ಟನಾಗಿ ಕುಮಾರದತ್ತನ ತಲೆ ಕಡಿಯಲು ಧಾವಿಸುವನು. ಮಾಧವಿ ತಕ್ಷಣ ಸಂದರ್ಭಕ್ಕೆ ಸ್ಪಂದಿಸುತ್ತ ಶಾಂತನಾಗುವಂತೆ ರಾಜನನ್ನು ಪ್ರಾರ್ಥಿಸಿದಳು.

(ಭಕ್ತಿಯಿಂದ ಬಾಗಿ ರಾಜನಿಗೆ ಇಂತೆಂದಳು)

ಮಾಧವಿ: ಪ್ರಭುವೆ, ಅಪರಾಧವೆಸಗಿದವನ ವಿರುದ್ಧ ಶಸ್ತ್ರವೆತ್ತಿದ ನಿಮ್ಮ ಕೃತ್ಯ ನನ್ನ ಮಾನಭಂಗವನ್ನು ಅಳಿಸಿಹಾಕಿ ನನ್ನ ಮಾನವನ್ನು ಪುನರ್‌ಸ್ಥಾಪಿಸಿದೆ, ಕುಮಾರ ನನ್ನನ್ನು ಮುಟ್ಟಿದಾಗ ನನ್ನ ಜೀವ ಯಾ ಜಾತಿ ಕಳೆದುಹೋಗಲಿಲ್ಲ. ಆ ಘಟನೆ ನನ್ನ ಪೂರ್ವಜನ್ಮದ ಪಾಪಫಲವಾಗಿರಬೇಕು. ಈ ಮನುಷ್ಯನನ್ನು ಬಿಟ್ಟುಬಿಡಿರೆಂದು ನನ್ನ ಪ್ರಾರ್ಥನೆ. ಇನ್ನು ಮುಂದೆ ಎಲ್ಲರೂ ಶಾಂತಿಯಿಂದ ಬಾಳೋಣ.

(ಕಣ್ಣೀರಿಟ್ಟು ಮಾಧವಿ ಆಸ್ಥಾನವನ್ನು ಮತ್ತು ಗುರು ಗೋವರ್ಧನ ಆಚಾರ್ಯನನ್ನು ಸಂಬೋಧಿಸುವಳು)

ಮಾಧವಿ (ಆರ್ತ ಧ್ವನಿಯಲ್ಲಿ): ಆಲಿಸು, ಓ ರಾಜನೆ! ಓ ಮಹಾಗುರುವೆ ಹಾಗೂ ಆಸ್ಥಾನದಲ್ಲಿ ಉಪಸ್ಥಿತರಿರುವ ಎಲ್ಲ ಜನರೆ, ನಾನು ಅನುಚಿತ ಧಾರ್ಷ್ಟ್ಯ ತೋರಿದ್ದರೆ ಕ್ಷಮೆ ಯಾಚಿಸುವೆ.

ಎಲ್ಲ ಆಸ್ಥಾನಿಕರು (ಒಕ್ಕೊರಲಿನಿಂದ): ಭಲೆ! ಮಾಧವಿ ಭಲೆ!

◈◈◈

The Secretary
Asiatic Society
1, Park Street
Calcutta - 700010

24/2/10, Mandal Para Lane,
Calcutta-700050
21.9.93

Sir,

I had been to Mandi in July 1993 in search of the history of the kings of the Sen Dynasty after Lakshman Sen of Bengal. As you know, Rup Sen, Lakshman Sen's grandson moved to Punjab and established the town of Rupnagar which is now known as Ropar. When the Sultan of Delhi attacked Rupnagar, Rup Sen fell fighting in the battle field. His three sons withdrew to the Himalayas. One of them, Bir Sen, went to Mandi along with his courtiers, priests, astrologers and physicians who accompanied the Sen Kings from Bengal and in successive battles he defeated the local Ranas and chiefs and built a mighty state which he and his descendants ruled for centuries till the abolition of monarchy in India after achievement of independence.

Many manuscripts written in old Bengali script on Ayurved, Astrology and Durga Puja rituals etc., are being found in Mandi even today. The loyal Bengali scholars and professionals who accompanied the Sen Kings in their sojourn must have used these manuscripts. But since they married local wives who did not speak Bengali but local dialects of Hindi. Their children and successors gradually forgot and the present generation cannot read the old Bengali manuscripts at all. Hence, some of these manuscripts were recently found to have been thrown away by some families who might have considered these were of no use to anybody. Sir Chandramani Kashyap, a retired school teacher, has saved many such manuscripts from destruction and he is trying to preserve these old and worn out manuscripts of palm leaf as

# ಸೇನವರರು

ಸೇನವರರು, ಸೇನಾವರರು ಅಥವಾ ಸೇಣವಾರರೆಂದು ತಮ್ಮನ್ನು ಕರೆದುಕೊಂಡ ಈ ವಂಶದ ದೊರೆಗಳು ಇಂದಿನ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲೂಕು ಮತ್ತು ಶಿವಮೊಗ್ಗ ಜಿಲ್ಲೆಯ ಕೊಪ್ಪ ತಾಲೂಕಿನ ಪ್ರದೇಶಗಳಲ್ಲಿ ಕ್ರಿ.ಶ. ಏಳನೆಯ ಶತಮಾನದಿಂದ ಹನ್ನೊಂದನೆಯ ಶತಮಾನದ ನಡುವಣ ಅವಧಿಯಲ್ಲಿ ಆಳುತ್ತಿದ್ದರು. 'ವಿದ್ಯಾದರ ಲೋಕರಾಜ'ರೆಂದು ಖ್ಯಾತರಾದ ಇವರು ಶಿಲಾಹಾರ ವಂಶದ ಜೊತೆ ಸಂಬಂಧ ಉಳ್ಳವರಾಗಿರಬೇಕು. ಬಾಸವೂರ ೧೪೦ ಎಂಬ ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ೧೧ನೆಯ ಶತಮಾನದಲ್ಲಿ ಆಳುತ್ತಿದ್ದ ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದ 'ಖಚರ ವಂಶ'ದ 'ಪನ್ನಗ ಧ್ವಜ'ರಿಗೂ ಸೇನವರರಿಗೂ ಸಂಬಂಧವಿರಬೇಕೆಂದು ಡಾ. ಬಾರ್ನೆಟ್ ಅವರು ಊಹಿಸಿದ್ದಾರೆ. (ಕ್ರಿ.ಶ.೧೦೪೫ರಲ್ಲಿ ಆಳುತ್ತಿದ್ದ ಕಲಿಯಮ್ಮರಸ ಇತ್ಯಾದಿ: E.I., XIX. P. 180-190)

ಸೇನವರರನ್ನು ಕುರಿತು ಮೊದಲ ಉಲ್ಲೇಖ ಕ್ರಿ.ಶ. ೭ನೆಯ ಶತಮಾನದ ಕೊನೆಯ ಭಾಗದಲ್ಲಿ ಆಳುಪ ದೊರೆ ಚಿತ್ರವಾಹನನ ಕಿಗ್ಗ ಶಾಸನದಲ್ಲಿ ಕಾಣಬರುತ್ತದೆ. ಆಗ ಆಳುತ್ತಿದ್ದ ಸೇನವರ ದೊರೆಯ ಹೆಸರನ್ನು ಹೇಳಿದ ಈ ಶಾಸನವನ್ನು ಓದಿದಾಗ, ಬಾದಾಮಿಯ ಚಾಲುಕ್ಯರ ಬೀಗರೂ ವಿಶ್ವಾಸಪಾತ್ರ ಸೇನಾನಿಗಳೂ ಆದ ಆಳುಪರ ಅಧೀನರಾಗಿ ಸೇನವರರು ಕೊಪ್ಪದ ಸುತ್ತಲ ಪ್ರದೇಶದಲ್ಲಿ ಆಳುತ್ತಿರಬೇಕೆಂದು ಕಂಡುಬರುತ್ತದೆ.

ಖಚರ ವಂಶಜರೂ ಸಿಂಹಲಾಂಛನರೂ ಸರ್ಪಧ್ವಜರೂ ಆದ ಈ ದೊರೆಗಳು ತಮ್ಮನ್ನು 'ಹೇಮಕೂಟ ಪೂರಾಧಿನಾಥ'ರೆಂದೂ 'ಕೂಡಲೂರ ಪುರವರೇಶ್ವರ'ರೆಂದೂ ಕರೆದುಕೊಂಡಿದ್ದಾರೆ. ಈ ಹೆಸರಿನ ಅವರ ರಾಜಧಾನಿ (ಮೂಲಸ್ಥಾನ) ಯಾವುದೆಂದು ಊಹಿಸುವುದು ಕಷ್ಟ. (ರಾಜಧಾನಿಯು ವಸ್ತಾರೆ ಹೋಬಳಿಯ ತೂದಳ್ಳಿಯಾಗಿರಲೂಬಹುದು).

ಶಾಸನಗಳಲ್ಲಿ ಮೊದಲ ಬಾರಿ ಹೆಸರಿಸಲ್ಪಟ್ಟ ಸೇನವರ ದೊರೆ ಎಂದರೆ, 'ಪೃಥ್ವೀವಲ್ಲಭ ಸೇಣವಾರ' ಈತ ಚಾಲುಕ್ಯ ವಿಕ್ರಮಾದಿತ್ಯ ಸತ್ಯಾಶ್ರಯನ ಮಾಂಡಳಿಕನಾಗಿದ್ದ (E.C., VII, S.K. 278) ತಾರೀಕಿಲ್ಲದ ಈತನ ಶಾಸನ ಸುಮಾರು ಕ್ರಿ.ಶ. ೭೦೦ರದ್ದೆಂದು ರೈಸ್‌ರವರ ಅಭಿಪ್ರಾಯ. ರಾಷ್ಟ್ರಕೂಟರ ಕಾಲದಲ್ಲಿ ಇವರ ಶಾಸನಗಳೇ ಇಲ್ಲ. ಅನಂತರ ಆಳಿದ ಒಬ್ಬ ಸೇನವರ ದೊರೆಯು ೧೧ನೆಯ ಶತಮಾನದ ಆದಿ ಭಾಗದಲ್ಲಿ ಕಲ್ಯಾಣದ ಇಮ್ಮಡಿ ವಿಕ್ರಮಾದಿತ್ಯನ ಸಾಮಂತನಾಗಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಇವನು ಬನವಾಸಿ ೧,೨೦೦ನ್ನು ಆಳುತ್ತಿದ್ದನು (E.C., VIII, Sb. 381) ಈತನ ಹೆಸರು ಶಾಸನದಲ್ಲಿ ಅಳಿಸಿಹೋಗಿದೆ.

ಇದಾದ ನಂತರ ಕ್ರಿ.ಶ. ೧೧೨೦ರ ಸುಮಾರಿಗೆ ಜೀವಿತವಾರ (ಜೀವಿತೇಶ್ವರ)ನೆಂಬ ದೊರೆ ಆಳುತ್ತಿದ್ದನೆಂದೂ ಆತ ಜೀವಿತೇಶ್ವರನ ದೇವಾಲಯವನ್ನು ಕಟ್ಟಿದ್ದನೆಂದೂ ಕೊನೆಗೆ ಅವನ ಶತ್ರುಗಳಿಂದ ಯುದ್ಧದಲ್ಲಿ ಕೊಲ್ಲಲ್ಪಟ್ಟನೆಂದೂ ಅವನ ಮೊಮ್ಮಗನಾದ ಮಾರಸಿಂಘದೇವನ ಒಂದು ಶಾಸನದಿಂದ ತಿಳಿಯುತ್ತದೆ (E.C., VI, c.m. 91). ಜೀವಿತವಾರನ ಅನಂತರ ಆಳಿದ ಅವನ ಮಗನಾದ ಜೀಮೂತವಾಹನನು ಚಿತ್ತವಳ್ಳಿಯ ಮಾರ್ಕಂಡೇಶ್ವರ ದೇವಸ್ಥಾನವನ್ನು ಕಟ್ಟಿಸಿ, ಅದಕ್ಕೆ ಮೂರು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟನು. (E.C., VI, c.m. 95)

own. All these go to demonstrate that language, religion, customs and culture are extra - somatic. A man is not born with any language, religion or culture, but he acquires these from the family, society and the environment in which he is nourished after his birth or migration. These perishing manuscripts, are thus, invaluable for research scholars.

I request you to kindly extend a helping hand to the Himachal Lok Samskriti Samsthan. Their registration certificate and a letter from Sri Chandramani Kashyap dated 8.9.93 are enclosed for your perusal and further communication with them.

Thanking you,

Yours faithfully,

Dr. B. Chakravarti

Life Member, Asiatic Society,

Culcutta - 700 016

## The Sens of Himachal: their Pan-Indian Heritage

## Bibliography


1. Archaelogical Survey of India (Vol.-14), Govt. of Punjab, 1904.
2. Gazetteers Vol.- XII Suket State, Govt of Punjab, 1904.
3. Gazetteer for Simla Hill State, Lahore, 1910.
4. Gazetteer for Mandi State, 1920.
5. Gazetteer for Suket State, Lahore 1927.
6. Sant Singh: Vamsabali in Devnagari Script, translated from Tankri inscriptions, 1947(Unpublished).
7. Vikramkayastha: *Vamsabali in Tankri Inscription.*
8. Hutchison & J.Vogel: *History of the Punjab Hill States*, Vol-I&II, Lahore, 1933.
9. *History and Culture of Himalayan States*, Delhi, 1978
10. Upadhyay Nilmani (Dr.): *Temples of Mandi*, (Apama Publication, Mandi, 1986).
11. Punjab State Gazetteers Vol-12, Suket State, Govt of Punjab, 1904.
12. Roy Nihar Ranjan, *Bangaleer Itihas*, West Bengal Literacy Mission, Culcutta, 1980.
13. Nirmand Copper plate inscriptions, Parasuram Temple, Nirmand (circa 7th Century A.D.).
14. Bhattacharya Raghunandan *Durga Puja Tantra,* a Sanskrit book written in Bengali script (unpublished), Himachal Lok Sanskriti Samgathan Collection, Mandi, Himachal Pradesh, A printed edition of the same book was published by Sanskrita Sahitya Parisad, Culcutta in 1924.

ಆಮೇಲೆ ಆಳಿದ ಮಾರ ಅಥವಾ ಮಾರಸಿಂಘದೇವನೆಂಬ ದೊರೆ ಈ ವಂಶದಲ್ಲಿ ಅತ್ಯಂತ ಪ್ರಭಾವಿಯಾದ ವ್ಯಕ್ತಿ. ಈತನ ಐದು ಶಾಸನಗಳು ದೊರೆತಿವೆ. ವಿಳಂಬಿ ಸಂವತ್ಸರದ (ಕ್ರಿ.ಶ. ೧೦೫೮) ಇವನ ಶಾಸನವೊಂದು ಇವನನ್ನು ಮಾರಸಿಂಹನೆಂದು ಕರೆದಿದೆ (E.C., c.m. 62). ಇನ್ನೊಂದು ಶಾಸನದಿಂದ ಈತನು ಚಿತ್ತವಳ್ಳಿ, ಮಳ್ತವೂರು ಚಿಕ್ಕವಿಟ್ಟ ಮುಂತಾದ ಕಡೆಗಳಲ್ಲಿ ದೇವಾಲಯಗಳನ್ನು ಕಟ್ಟಿಸಿದನೆಂದು ತಿಳಿಯುತ್ತದೆ. (ಮೇಲಿನದೆ, ೬೧). ಮತ್ತೊಂದು ಶಾಸನದಲ್ಲಿ ಅವನು ಮಾನಾಡದೇಗುಲವನ್ನು ಕಟ್ಟಿಸಿದನೆಂದೂ 'ಚಿಕ್ಕಜೀಯಂಗೆ ಮಟದಪಳ್ಳಿಯ' ಬಿಟ್ಟನೆಂದೂ ಹೇಳಿದೆ. (ಮೇಲಿನದೆ, ೬೬). ಪಾಂಡ್ಯ ಹೋಬಳಿಯ ಕಡವಂತಿಯ ಶಾಸನದಲ್ಲಿ 'ಖಿಚರ ಕಂದರ್ಪಸೇನಮಾರ' ಎಂದು ಕರೆಯಲ್ಪಟ್ಟ ಈ ದೊರೆ ಜೈನ ದೇವಾಲಯವೊಂದಕ್ಕೆ ದಾನ ನೀಡಲು ಜೈನ ವ್ಯಕ್ತಿಯೊಬ್ಬನಿಗೆ ಭೂಮಿಯನ್ನು ಕೊಟ್ಟನೆಂದು ಹೇಳಿದೆ (ಮೇಲಿನದೆ, ೬೫). ಇನ್ನೊಂದು ಶಾಸನದಂತೆ ಅವನು ತನ್ನ ಅಜ್ಜನಾದ ಜೀವಿತವಾರನನ್ನು ಕೊಂದ ಶತ್ರುಗಳನ್ನು ಸೋಲಿಸಿ ಸೇಡು ತೀರಿಸಿದನೆಂದು ತಿಳಿಯುತ್ತದೆ (ಮೇಲಿನದೆ, ೮೪). 'ಪದ್ಮಾವತೀ ಚರಣಸರೋಜಭೃಂಗ', 'ರಣರಂಗರಾಘವ', 'ಕಲಿಮುಟ್ಟಿಗಂಡ', 'ಬಿರುದರಂಕುಸ' ಮುಂತಾದ ಬಿರುದನ್ನು ಧರಿಸಿದ್ದ. ಇವನ ಅನಂತರ ಸೇನವರರು ಈ ಭಾಗದಲ್ಲಿ ಆಳಿದ್ದಂತೆ ಶಾಸನಗಳಿಲ್ಲ.

ಸೇನವರರು ಜೈನರಾಗಿದ್ದರೆಂದು ಕೆಲ ಲೇಖಕರ ಅಭಿಪ್ರಾಯ. ಆದರೆ, ಈ ಹೇಳಿಕೆಗೆ ಆಧಾರ ಕಾಣಿಸದು. ಸೇನವರ ದೊರೆಗಳು ಕಟ್ಟಿಸಿದ ದೇವಾಲಯಗಳಲ್ಲಿ ಹೆಚ್ಚಿನವು ಶಿವಾಲಯಗಳೇ. ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನ ಸೇನೇಶ್ವರ ದೇವಾಲಯವನ್ನು ಈ ವಂಶದವರೆ ಕಟ್ಟಿಸಿರಬೇಕೆಂದು ಡಾ. ಪಿ. ಗುರುರಾಜ ಭಟ್ಟರ ಅಭಿಪ್ರಾಯ.

ಲೇಖಕರು: ಡಾ. ಸೂರ್ಯನಾಥ ಕಾಮತ್

◈◈◈

29. Jayadev, *Gitagovindam*, Sanskrit Pustak Bhandar, Calcutta, 1983.

30. Halayudh Misra, *Sekh Subhodaya*, (Edited by Sukumar Sen), Asiatic Society, Calcutta, 1963.

31. Dr. Suryanath.U.Kamath, *Senavaras*, in the *Karnataka Parampara* (Vol.-I), Published by Govt. of Karnataka, Bangalore, 1970.

32. Ghosh Sailyendra Kumar, *Goudakahini*, (D.M. Library, Calcutta, 1884 Sakabda).

33. Chakrabarti Rajanikanta: *Gauder Itihas*, S.P. Publishers, Maldaha, 1983.

◈ ◈ ◈

15. Prof. Manmohan. *A Short History of the Mandi State* (Govt of Punjab, Lahore, 1930).

16. Kaviraj Ananga, *Vaidya Kalpataru*, a Sanskrit book in Bengali Script (unpublished), Himachal Lok Sangathan Library. Mandi, Himachal Pradesh.

17. Chakravarti, Balaram (Dr.) *A Cultural History of Bhutan* (Vol-I), Self Employment Bureau Publications, Calcutta, 1992.

18. Nilmuni: *Nilamata Puranam*, Motilal Banarasidas, Lahore, 1924.

19. The *Mahabharata*, (Edited by V.S. Suktakar, Bhandarkar Oriental Research Institute, Pune, 1933-54.

20. Jimutbahan, *Dayabhag*, Howrah Sanskrit Sahitya Samaja, Howrah, 1978.

21. Jimutbahan, *Kalavivek*, Asiatic Society, Calcutta, 1905.

22. Bhatta Aniruddha, *Haralata*, Asiatic Society, Calcutta,1909.

23. Bhatta Aniruddha, *Pitridayita*, Sanskrit Sahitya Parisad, Calcutta.

24. Sen Ballal, *Danasagara*, (Edited by Bhabatosh Bhattacharya), Asiatic Society, Calcutta, 1953-55.

25. Sen Ballal, *Adbhuta Sagara*, (Edited by Gopendra Mukhopadhaya), Calcutta.

26. Halayudha, *Brahmana-Sarvasvam*, Sanskrit Sahiotya Parisad, Calcutta 1960.

27. Dhoyi, *Pavandutam*, Sanskrit Sahitya Parisad, Calcutta 1926.

28. Govardhanacarya, *Arya Saptasati*, Choukhamba Vidyabhavan, Varanasi, 1965.

29. Jayadev, *Gitagovindam*, Sanskrit Pustak Bhandar, Calcutta, 1983.

30. Halayudh Misra, *Sekh Subhodaya*, (Edited by Sukumar Sen), Asiatic Society, Calcutta, 1963.

31. Dr. Suryanath.U.Kamath, *Senavaras*, in the *Karnataka Parampara* (Vol.-I), Published by Govt. of Karnataka, Bangalore, 1970.

32. Ghosh Sailyendra Kumar, *Goudakahini*, (D.M. Library, Calcutta, 1884 Sakabda).

33. Chakrabarti Rajanikanta: *Gauder Itihas*, S.P. Publishers, Maldaha, 1983.